ಮಂಗಳವಾರ, ಜುಲೈ 11, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 191 | ಪುಟ 12

www.prajavani.net

prajavani.net prajavani prajavani prajavani

# ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಮಕ್ಕಳಿಗೂ ಹತ್ತು ಹಲವು ಆತಂಕಗಳಿರುತ್ತವೆ

ಆಳ-ಅಗಲ: ವೈಯಕ್ತಿಕ ಕಾನೂನುಗಳಿಗೆ ವಿಶೇಷ ವಿವಾಹ ಕಾಯ್ದೆ ಪರ್ಯಾಯವೇ...

ಮಣಿಪುರ: ಅರ್ಜಿದಾರರಿಗೆ 'ಸುಪ್ರೀಂ' ತಪರಾಕಿ 11

'ಹೊಸ ತಾಲ್ಲೂಕು ರಚನೆಗೆ ಮಾರ್ಗಸೂಚಿ' 6

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 65,344 ▲ | 19,356 ▲ | ₹60,580 (ಬೆಂಗಳೂರು) | ₹72,700 (ಬೆಂಗಳೂರು) | 82.59 ▲ |

ಕುಲ್ಲುವಿನ ಬಿಯಾಸ್ ನದಿಯಲ್ಲಿ ಪ್ರವಾಹ ಹೆಚ್ಚಿದ್ದರಿಂದ ಸ್ಥಳೀಯರು ಸೇತುವೆಯನ್ನು ಧಾವಂತದಲ್ಲಿ ದಾಟುತ್ತಿರುವುದು – ಪಿಟಿಐ ಚಿತ್ರಗಳು

# ಮಹಾಪೂರದ ಸುಳಿಯಲ್ಲಿ 'ಉತ್ತರ'

ವರುಣನ ರೌದ್ರನರ್ತನಕ್ಕೆ ಉತ್ತರ ಭಾರತದ ಹಲವು ರಾಜ್ಯಗಳು ನಲುಗಿ ಹೋಗಿವೆ. ಮನೆಗಳು, ಶಾಲಾ ಕಟ್ಟಡಗಳು ಕುಸಿದಿದ್ದರೆ ಧರೆಯೂ ಬಿರಿದಿದೆ. ಬೆಟ್ಟಗಳ ಕುಸಿತದಿಂದ ಮಣ್ಣನ್ನೂ ಸೆಳೆದು ನದಿಗಳು ಜಲದಿಗ್ಬಂಧನ ಹೇರಿವೆ. ಮಹಾಪೂರದ ಚಿತ್ರಗಳು ಎಲ್ಲೆಡೆಯೂ ಹರಿದಾಡುತ್ತಿವೆ. ಉತ್ತರ ಭಾರತದ ಹಲವು ನಗರಗಳ ಜನಜೀವನ ಸ್ತಬ್ಧವಾಗಿದೆ. ಜನರ ಸ್ಥಳಾಂತರ, ಪರಿಹಾರ ಕಾರ್ಯಗಳು ಸಮರೋಪಾದಿಯಲ್ಲಿ ಸಾಗಿವೆ.

ಜನರ ಸ್ಥಳಾಂತರ ಕಾರ್ಯ ಆರಂಭ

**29** ಮಂದಿ
ಈ ವರೆಗೂ ಮಳೆಯಿಂದಾಗಿ ಮೃತಪಟ್ಟವರು

**6** ಜಿಲ್ಲೆಗಳು ಅತಿ ಹೆಚ್ಚು ಹಾನಿಗೊಳಗಾಗಿವೆ (ಮೊಹಾಲಿ, ಪಟಿಯಾಲ, ರೂಪನಗರ್, ಫತೇಹಗಢ ಸಾಹಿಬ್, ಪಂಚಕುಲ ಮತ್ತು ಅಂಬಾಲಾ)

**3** ರಾಜ್ಯಗಳಲ್ಲಿ ಶಾಲೆಗೆ ರಜೆ ಘೋಷಣೆ (ದೆಹಲಿ, ಹರಿಯಾಣ, ಪಂಜಾಬ್)

**206** ಮೀ
ಯಮುನೆಯ ಹರಿವಿನ ಮಟ್ಟ, ದೆಹಲಿಯಲ್ಲಿ ಅಪಾಯಕಾರಿ ಮಟ್ಟ ತಲುಪಿದ ಹರಿವು

ನೆರೆಪೀಡಿತ ರಾಜ್ಯಗಳು




ಆಧಾರ: ಪಿಟಿಐ

## ನೆರವಿನ ಭರವಸೆ ನೀಡಿದ ಪ್ರಧಾನಿ



ಪ್ರಧಾನಿ ನರೇಂದ್ರ ಮೋದಿ ಅವರು ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡದ ಮುಖ್ಯಮಂತ್ರಿಗಳೊಂದಿಗೆ ಅತಿವೃಷ್ಟಿಯ ಬಗ್ಗೆ ಚರ್ಚೆ ನಡೆಸಿದ್ದು, ಕೇಂದ್ರ ಸರ್ಕಾರದಿಂದ ಸಾಧ್ಯವಾಗುವ ಎಲ್ಲ ನೆರವನ್ನೂ ಒದಗಿಸುವ ಭರವಸೆ ನೀಡಿದ್ದಾರೆ ಎಂದು ಅವರ ಕಚೇರಿ ತಿಳಿಸಿದೆ.

ಹಿರಿಯ ಸಚಿವರು ಮತ್ತು ಅಧಿಕಾರಿಗಳೊಂದಿಗೆ ಮಾತನಾಡಿದ್ದಾರೆ. ದೇಶದ ಕೆಲವು ಭಾಗಗಳಲ್ಲಿ ಅತಿಯಾದ ಮಳೆಯ ಹಿನ್ನೆಲೆಯಲ್ಲಿ ಪರಿಸ್ಥಿತಿಯನ್ನು ಅವಲೋಕಿಸಿದ್ದಾರೆ ಎಂದು ತಿಳಿಸಲಾಗಿದೆ. ಸ್ಥಳೀಯ ಆಡಳಿತಗಳು, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್)ಗಳು ಸಂತ್ರಸ್ತರ ರಕ್ಷಣೆಗಾಗಿ ಕಾರ್ಯನಿರತವಾಗಿವೆ ಎಂದು ಪ್ರಧಾನ ಮಂತ್ರಿ ಕಚೇರಿ ತಿಳಿಸಿದೆ.

ಹಿಮಾಚಲ ಪ್ರದೇಶದ ಮುಖ್ಯಮಂತ್ರಿಯೊಂದಿಗೆ ಮಾತನಾಡಿದ್ದೇನೆ. ಪರಿಹಾರ ಕಾರ್ಯಗಳು ಚುರುಕುಗೊಂಡಿವೆ ಮತ್ತು ಪ್ರತಿಕೂಲ ಹವಾಮಾನದ ಹೊರತಾಗಿಯೂ ಸಂತ್ರಸ್ತರಿಗೆ ನೆರವು ಒದಗಿಸುವ, ಸುರಕ್ಷಿತ ಜಾಗಗಳಿಗೆ ಸ್ಥಳಾಂತರಿಸುವ ಕಾರ್ಯ ನಡೆಯುತ್ತಿದೆ
**ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

ಹಿಮಾಚಲ ಪ್ರದೇಶದ ಮಂಡಿ ಜಿಲ್ಲೆಯ ಥುನಾಗ್‌ನಲ್ಲಿ ಪ್ರವಾಹಕ್ಕೆ ಮರದ ದಿಣ್ಣೆಗಳು ಕೊಚ್ಚಿಬಂದ ಪರಿ

# ನಿಗಮದ 'ಮುಕ್ತ' ಅಕ್ಕಿಗಿಲ್ಲ ಬೇಡಿಕೆ!

ಪ್ರಜಾವಾಣಿ ವಾರ್ತೆ

**ನವದೆಹಲಿ:** ಭಾರತೀಯ ಆಹಾರ ನಿಗಮವು (ಎಫ್‌ಸಿಐ) ಕರ್ನಾಟಕ ಸರ್ಕಾರದ 'ಅನ್ನ ಭಾಗ್ಯ ಯೋಜನೆ'ಗಾಗಿ ಅಕ್ಕಿ ಮಾರಾಟ ಮಾಡಲು ನಿರಾಕರಿಸಿದ ಬೆನ್ನಲ್ಲೇ ನಡೆಸಿರುವ ಇ–ಹರಾಜು ಪ್ರಕ್ರಿಯೆಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. ನಿಗಮವು ಒಟ್ಟು 3.86 ಲಕ್ಷ ಟನ್ ಅಕ್ಕಿ ಮಾರಾಟಕ್ಕಾಗಿ ಹರಾಜು ಪ್ರಕ್ರಿಯೆ ನಡೆಸಿದರೂ ಬಿಡ್ಡಿಂಗ್ ಸ್ವೀಕರಿಸಿರುವುದು 170 ಟನ್ ಅಕ್ಕಿಗೆ ಮಾತ್ರ.

ಬಿಪಿಎಲ್ ಹಾಗೂ ಅಂತ್ಯೋದಯ ಕುಟುಂಬಗಳ ಪ್ರತಿ ಸದಸ್ಯರಿಗೆ ತಲಾ 10 ಕೆ.ಜಿ. ಅಕ್ಕಿ ನೀಡಲು ತಿಂಗಳಿಗೆ 2.28 ಲಕ್ಷ ಟನ್ ಅಕ್ಕಿ ಪೂರೈಕೆ ಮಾಡುವಂತೆ ಕರ್ನಾಟಕ ಸರ್ಕಾರವು ನಿಗಮಕ್ಕೆ ಮನವಿ ಮಾಡಿತ್ತು. ಆರಂಭದಲ್ಲಿ ಅಕ್ಕಿ ನೀಡಲು ಒಪ್ಪಿದ್ದ ನಿಗಮವು, ಬಳಿಕ ನಿರಾಕರಿಸಿತ್ತು. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಅಕ್ಕಿ ಒದಗಿಸುವಂತೆ ಮನವಿ ಮಾಡಿದ್ದರು. ಕೇಂದ್ರ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಪೀಯೂಷ್ ಗೋಯಲ್ ಅವರನ್ನು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಎರಡು ಸಲ ಭೇಟಿ ಮಾಡಿ ಯೋಜನೆಗೆ ಸಹಕಾರ ನೀಡುವಂತೆ ಕೋರಿದ್ದರು. ರಾಜ್ಯದ ಒತ್ತಡಕ್ಕೆ ಉಭಯ ಸಚಿವರು ಮಣಿದಿರಲಿಲ್ಲ. ಮುಕ್ತ ಮಾರುಕಟ್ಟೆಯಲ್ಲಿ ಅಕ್ಕಿ ಖರೀದಿ ಮಾಡುವಂತೆ ಸಲಹೆ ನೀಡಿ 'ಕೈ' ತೊಳೆದುಕೊಂಡಿದ್ದರು.

6ನೇ ಪುಟ ನೋಡಿ

## ₹ 170 'ಧನ ಭಾಗ್ಯ'ಕ್ಕೆ ಚಾಲನೆ

**ಬೆಂಗಳೂರು:** ಚುನಾವಣೆ ಸಂದರ್ಭದಲ್ಲಿ ಘೋಷಿಸಿದ್ದ 'ಗ್ಯಾರಂಟಿ', 'ಅನ್ನ ಭಾಗ್ಯ' ಯೋಜನೆಯಡಿ ಹೆಚ್ಚುವರಿಯಾಗಿ ತಲಾ 5 ಕೆ.ಜಿ ಅಕ್ಕಿ ವಿತರಿಸುವ ಯೋಜನೆಗೆ ಅಕ್ಕಿ ಸಿಗದ ಕಾರಣ, ಕೆ.ಜಿಗೆ ₹34ರಂತೆ ₹170 ಅನ್ನು ಫಲಾನುಭವಿಯ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆಗೆ (ಡಿಬಿಟಿ) ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಚಾಲನೆ ನೀಡಿದರು ಆಹಾರ ಇಲಾಖೆ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಮೈಸೂರು ಮತ್ತು ಕೋಲಾರ ಜಿಲ್ಲೆಗಳ ಫಲಾನುಭವಿಗಳಿಗೆ ಮೊದಲಿಗೆ ಹಣ ವರ್ಗಾವಣೆ ಮಾಡಲಾಯಿತು. ಮಂಗಳವಾರದಿಂದ ಪ್ರತಿದಿನ ಹಂತ ಹಂತವಾಗಿ ಎಲ್ಲ ಫಲಾನುಭವಿಗಳ ಖಾತೆಗೆ ಹಣ ವರ್ಗಾವಣೆ ಆಗಲಿದೆ.

6ನೇ ಪುಟ ನೋಡಿ

# ಜೈನ ಮುನಿ ಹತ್ಯೆ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ಹುಬ್ಬಳ್ಳಿ:** ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಹಿರೇಕೋಡಿ ನಂದಿ ಪರ್ವತ ಆಶ್ರಮದ ಜೈನ ಮುನಿ ಕಾಮಕುಮಾರ ನಂದಿ ಮಹಾರಾಜರ ಬರ್ಬರ ಹತ್ಯೆಗೆ ತೀವ್ರ ಖಂಡನೆ ವ್ಯಕ್ತವಾಗಿದ್ದು ಚಿಕ್ಕೋಡಿ, ಮಂಗಳೂರು, ಬೆಳ್ತಂಗಡಿ, ಮೈಸೂರು, ದಾವಣಗೆರೆ, ಧಾರವಾಡ, ಹಾವೇರಿ, ಕೊಪ್ಪಳ ಸೇರಿದಂತೆ ರಾಜ್ಯದ ವಿವಿಧೆಡೆ ಸೋಮವಾರ ಮೌನ ಪ್ರತಿಭಟನೆ ನಡೆಯಿತು. ಜೈನ ಧರ್ಮೀಯರೊಂದಿಗೆ ಇತರ ಸಮಾಜದ ಜನರೂ ಅವರ ನೋವಿನಲ್ಲಿ ಭಾಗಿಯಾದರು.

'ಜೈನ ಮುನಿಗಳಿಗೆ ರಕ್ಷಣೆ ಒದಗಿಸಬೇಕು, ಹೇಯ ಕೃತ್ಯ ಎಸಗಿದವರಿಗೆ ಕಠಿಣ ಶಿಕ್ಷೆ ಕೊಡಬೇಕು' ಎಂಬ ಒತ್ತಾಯ ಎಲ್ಲೆಡೆಯಿಂದ ಕೇಳಿಬಂದವು.

ಚಿಕ್ಕೋಡಿಯಲ್ಲಿ ನಡೆದ ಬೃಹತ್ ಮೌನ ಮೆರವಣಿಗೆಯಲ್ಲಿ ನಿಪ್ಪಾಣಿ, ರಾಯಬಾಗ, ಅಥಣಿ, ಕಾಗವಾಡ, ಹುಕ್ಕೇರಿ ತಾಲ್ಲೂಕು ಮತ್ತು ನೆರೆಯ ಮಹಾರಾಷ್ಟ್ರದ ನಾಗರಿಕರು ಸೇರಿದ್ದರು. ವರೂರ ಧರ್ಮಸೇನ ಭಟ್ಟಾರಕ ಸ್ವಾಮೀಜಿ ಮಾತನಾಡಿ, 'ಜೈನ ಮುನಿ ಹತ್ಯೆ ಹೇಯ ಕೃತ್ಯ. ಯಾವುದೇ ಸಮಾಜದ ಸ್ವಾಮೀಜಿಗಳಿಗೆ ಇಂಥ ಸ್ಥಿತಿ ಬರಬಾರದು. ಈ ಘಟನೆಯನ್ನು ತೀವ್ರವಾಗಿ ಖಂಡಿಸುತ್ತೇವೆ' ಎಂದರು.

ಮಹಾರಾಷ್ಟ್ರದ ನಾಂದಣಿಯ ಜೀನಸೇನ ಭಟ್ಟಾಚಾರ್ಯ ಸ್ವಾಮೀಜಿ, ಕೊಲ್ಹಾಪುರದ ಲಕ್ಷ್ಮೀಸೇನ ಭಟ್ಟಾಚಾರ್ಯ ಸ್ವಾಮೀಜಿ, ಶಾಸಕ ಗಣೇಶ ಹುಕ್ಕೇರಿ, ವಿಧಾನ ಪರಿಷತ್ ಮಾಜಿ ಸದಸ್ಯರಾದ ಮಹಾಂತೇಶ ಕವಟಗಿಮಠ ಸೇರಿದಂತೆ ಹಲವು ಮುಖಂಡರು ಪಾಲ್ಗೊಂಡಿದ್ದರು.

5ನೇ ಪುಟ ನೋಡಿ

ಜೈನ ಮುನಿ ಕಾಮಕುಮಾರ ನಂದಿ ಮಹಾರಾಜರ ಹತ್ಯೆ ಖಂಡಿಸಿ ಚಿಕ್ಕೋಡಿಯಲ್ಲಿ ಸೋಮವಾರ ಬೃಹತ್ ಮೌನ ಪ್ರತಿಭಟನೆ ನಡೆಯಿತು –ಪ್ರಜಾವಾಣಿ ಚಿತ್ರ

## 'ವಿಹಾರ ವೇಳೆ ಭದ್ರತೆ: ಶೀಘ್ರ ಸುತ್ತೋಲೆ'

**ಹುಬ್ಬಳ್ಳಿ:** 'ಜೈನ ಮುನಿಗಳು ಧರ್ಮ ಪ್ರಚಾರಕ್ಕಾಗಿ ವಿಹಾರ ನಡೆಸುವ ಸಂದರ್ಭದಲ್ಲಿ ಪೊಲೀಸ್ ಭದ್ರತೆ ಒದಗಿಸಲು ಸರ್ಕಾರ ಸಿದ್ಧವಿದ್ದು, ಪೊಲೀಸ್ ಇಲಾಖೆಯಿಂದ ಎಲ್ಲಾ ಠಾಣೆಗಳಿಗೆ ಶೀಘ್ರ ಸುತ್ತೋಲೆ ಹೊರಡಿಸಲಾಗುವುದು' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

5ನೇ ಪುಟ ನೋಡಿ

## ಒಳ ಪುಟಗಳು

ಉಕ್ಕಿ ಹರಿದ ನದಿಗಳು, ರಸ್ತೆಗಳೇ ಮಾಯ 11

ಗಿನ್ನೆಸ್ ದಾಖಲೆ ಸೇರಿದ ಕಸೂತಿ ಕಲೆ ಪ್ರದರ್ಶನ 6

## ಚಿನಕುರಳಿ

ಪ್ರಕಾಶ್ ಶೆಟ್ಟಿ

## ಲಕ್ಷ್ಯ ಸೇನ್ ಮುಡಿಗೆ ಕೆನಡಾ ಓಪನ್ ಗರಿ

**ಕ್ಯಾಲ್ಗರಿ, ಕೆನಡಾ (ಪಿಟಿಐ):** ಭಾರತದ ಲಕ್ಷ್ಯ ಸೇನ್ ಕೆನಡಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಪ್ರಶಸ್ತಿ ಜಯಿಸಿದರು.

ಲಕ್ಷ್ಯ ಭಾನುವಾರ ತಡರಾತ್ರಿ ನಡೆದ ರೋಚಕ ಫೈನಲ್ ಪಂದ್ಯದಲ್ಲಿ 21–18, 22–20ರಿಂದ ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್, ಚೀನಾದ ಲೀ ಶೀ ಫೆಂಗ್ ವಿರುದ್ಧ ಗೆದ್ದರು.

'ಒಲಿಂಪಿಕ್ ಕೂಟಕ್ಕೆ ಅರ್ಹತೆ ಪಡೆಯುವ ವರ್ಷ ಇದಾಗಿರುವುದರಿಂದ ಯಾವುದೇ ಪ್ರತಿಸ್ಪರ್ಧಿಯೂ ಕಠಿಣ ಪೈಪೋಟಿಯೊಡ್ಡುತ್ತಾರೆ. ಆದ್ದರಿಂದ ಸಣ್ಣ ಸಣ್ಣ ಗೆಲುವು ಕೂಡ ಮಹತ್ವದ್ದಾಗುತ್ತದೆ. ಈ ಪ್ರಶಸ್ತಿ ಜಯಿಸಿದ್ದು ನನ್ನ ಆತ್ಮವಿಶ್ವಾಸವನ್ನು ಇಮ್ಮಡಿಸಿದೆ' ಎಂದು ಉತ್ತರಾಖಂಡ ಮೂಲದ ಲಕ್ಷ್ಯ ಸಂತಸ ಹಂಚಿಕೊಂಡರು.

ಹೋದ ವರ್ಷ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನ ಗೆದ್ದಿದ್ದ ಲಕ್ಷ್ಯ ನಂತರದ ಟೂರ್ನಿಗಳಲ್ಲಿ ಮುಗ್ಗರಿಸಿದ್ದರು. ಈ ಜಯದ ಮೂಲಕ ಮತ್ತೆ ಲಯಕ್ಕೆ ಮರಳಿದ್ದಾರೆ.

12

# ಸೆಮಿಕಂಡಕ್ಟರ್ ತಯಾರಿಕೆ ಮುರಿದುಬಿದ್ದ ಪಾಲುದಾರಿಕೆ

**ನವದೆಹಲಿ (ಪಿಟಿಐ):** ಸೆಮಿಕಂಡಕ್ಟರ್‌ಗಳ ತಯಾರಿಕೆಗೆ ವೇದಾಂತ ಕಂಪನಿಯ ಜೊತೆ ಮಾಡಿಕೊಂಡಿದ್ದ ಪಾಲುದಾರಿಕೆ ಒಪ್ಪಂದದಿಂದ ಹೊರನಡೆಯುತ್ತಿರುವುದಾಗಿ ಫಾಕ್ಸ್‌ಕಾನ್ ಕಂಪನಿ ಸೋಮವಾರ ಹೇಳಿದೆ.

ವಿವಿಧ ಎಲೆಕ್ಟ್ರಾನಿಕ್ಸ್ ಉಪಕರಣಗಳಲ್ಲಿ ಬಳಕೆಯಾಗುವ ಸೆಮಿಕಂಡಕ್ಟರ್‌ಗಳ ತಯಾರಿಕೆಗೆ ತಂತ್ರಜ್ಞಾನ ಪಾಲುದಾರರನ್ನು ಹೊಂದಲು ಈ ಪಾಲುದಾರಿಕೆ ಯೋಜನೆಗೆ ಸಾಧ್ಯವಾಗಿರಲಿಲ್ಲ.

ಫಾಕ್ಸ್‌ಕಾನ್ ಮತ್ತು ವೇದಾಂತ ಕಂಪನಿಗಳು, ಸೆಮಿಕಂಡಕ್ಟರ್ ಹಾಗೂ ಡಿಸ್‌ಪ್ಲೇ ಉತ್ಪಾದನಾ ಘಟಕ ಆರಂಭಿಸಲು ಕಳೆದ ವರ್ಷ ಒಪ್ಪಂದ ಮಾಡಿಕೊಂಡಿದ್ದವು. ಈ ಘಟಕವು ಗುಜರಾತ್‌ನಲ್ಲಿ ಆರಂಭವಾಗಬೇಕಿತ್ತು. ಇದು ₹1.5 ಲಕ್ಷ ಕೋಟಿ ಹೂಡಿಕೆಯ ಯೋಜನೆ.

'ಇನ್ನಷ್ಟು ವಿಸ್ತಾರವಾಗಿರುವ ಬೆಳವಣಿಗೆ ಅವಕಾಶಗಳನ್ನು ಬಳಸಿಕೊಳ್ಳುವ ಉದ್ದೇಶದಿಂದ ಜಂಟಿ ಪಾಲುದಾರಿಕೆಯಲ್ಲಿ ಮುಂದುವರಿಯದೆ ಇರಲು ನಿರ್ಧರಿಸಲಾಗಿದೆ' ಎಂದು ಫಾಕ್ಸ್‌ಕಾನ್ ಕಂಪನಿಯು ಸೋಮವಾರ ಪ್ರಕಟಣೆಯಲ್ಲಿ ಹೇಳಿದೆ.

ಫಾಕ್ಸ್‌ಕಾನ್ ತೀರ್ಮಾನಕ್ಕೆ ಪ್ರತಿಕ್ರಿಯೆ ನೀಡಿರುವ ವೇದಾಂತ, ಸೆಮಿಕಂಡಕ್ಟರ್ ಯೋಜನೆಗೆ ಬದ್ಧವಾಗಿರುವುದಾಗಿ ಹೇಳಿದೆ. ಬೇರೆ ಪಾಲುದಾರರು ತನಗಿದ್ದಾರೆ ಎಂದು ತಿಳಿಸಿದೆ. ಆದರೆ ಹೊಸ ಪಾಲುದಾರರು ಯಾರು ಎಂಬುದನ್ನು ತಿಳಿಸಿಲ್ಲ.

'ಕೇಂದ್ರ ಸರ್ಕಾರದ 'ಭಾರತದಲ್ಲಿಯೇ ತಯಾರಿಸಿ' ಯೋಜನೆಯನ್ನು ನಾವು ಬೆಂಬಲಿಸುವುದನ್ನು ಮುಂದುವರಿಸುತ್ತೇವೆ. ದೇಶದಲ್ಲಿ ಸ್ಥಳೀಯವಾಗಿ ಹೆಚ್ಚೆಚ್ಚು ಕಂಪನಿಗಳ ಜೊತೆ ಪಾಲುದಾರಿಕೆ ಹೊಂದುತ್ತೇವೆ' ಎಂದು ಕೂಡ ಫಾಕ್ಸ್‌ಕಾನ್ ಹೇಳಿದೆ.

10ನೇ ಪುಟ ನೋಡಿ

## 'ಪರಿಣಾಮ ಆಗದು'

ಫಾಕ್ಸ್‌ಕಾನ್ ಕಂಪನಿಯು ತೀರ್ಮಾನವು ಸೆಮಿಕಂಡಕ್ಟರ್ ಗಳನ್ನು ಭಾರತದಲ್ಲಿಯೇ ತಯಾರಿಸಬೇಕು ಎಂಬ ಗುರಿಯ ಮೇಲೆ ಕೆಟ್ಟ ಪರಿಣಾಮ ಉಂಟುಮಾಡುವುದಿಲ್ಲ ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ. ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಹೇಳಿದ್ದಾರೆ.

'ಎರಡು ಖಾಸಗಿ ಕಂಪನಿಗಳು ಪಾಲುದಾರಿಕೆಗೆ ಮುಂದಾಗುವುದು, ಮುಂದಾಗದೆ ಇರುವುದು ಹೇಗೆ ಅಥವಾ ಏಕೆ ಎಂಬುದನ್ನು ಪರಿಶೀಲಿಸುವುದು ಸರ್ಕಾರದ ಕೆಲಸವಲ್ಲ. ಆದರೆ, ಸರಳವಾಗಿ ಹೇಳಬೇಕು ಎಂದರೆ ಎರಡೂ ಕಂಪನಿಗಳು ಈಗ ತಮ್ಮ ಕಾರ್ಯತಂತ್ರಗಳನ್ನು ಸ್ವತಂತ್ರವಾಗಿ ಜಾರಿಗೆ ತರುತ್ತವೆ' ಎಂದು ರಾಜೀವ್ ಅವರು ಹೇಳಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಸಚಿವ ಮಧು ಬಂಗಾರಪ್ಪ ಹೇಳಿಕೆ

# ಶಿಕ್ಷಕರಿಗೂ ವಸ್ತ್ರಸಂಹಿತೆ; ಚರ್ಚಿಸಿ ನಿರ್ಧಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಶಾಲಾ ಶಿಕ್ಷಕರಿಗೆ ವಸ್ತ್ರಸಂಹಿತೆ ಜಾರಿಗೊಳಿಸುವ ಕುರಿತು ವಿಸ್ತೃತ ಚರ್ಚೆ ನಡೆಸಲಾಗುವುದು. ಆ ಬಳಿಕ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಸೋಮವಾರ, ಕಾಂಗ್ರೆಸ್‌ನ ಮಂಜುನಾಥ ಭಂಡಾರಿ ಪ್ರಶ್ನೆಗೆ ಉತ್ತರಿಸಿದ ಅವರು, ಶಾಲಾ ಶಿಕ್ಷಕರ ವಸ್ತ್ರ ಸಂಹಿತೆಗೆ ನಿಯಮಗಳಿಲ್ಲ. ಅಂತಹ ಪ್ರಸ್ತಾವನೆಯೂ ಸರ್ಕಾರದ ಮುಂದಿಲ್ಲ. ವಸ್ತ್ರಸಂಹಿತೆ ಒಳಿತು ಎನ್ನುವುದಾದರೆ ಎಲ್ಲರ ಜತೆ ಚರ್ಚಿಸಿದ ನಂತರವೇ ನಿರ್ಧಾರ ತೆಗೆದುಕೊಳ್ಳಲಾಗುವುದು. ಆತುರದ ನಿರ್ಧಾರ ತೆಗೆದುಕೊಳ್ಳುವುದಿಲ್ಲ ಎಂದರು.

ರಾಜ್ಯದಲ್ಲಿ ಶಿಕ್ಷಕರ ಕೊರತೆ ನೀಗಿಸಲು ಸರ್ಕಾರ ಬದ್ಧವಾಗಿದೆ. ಕೋರ್ಟ್ ತಡೆ ಇರುವ ಕಾರಣ 13,500 ಸಾವಿರ ಶಿಕ್ಷಕರಿಗೆ ನೇಮಕಾತಿ ಆದೇಶ ನೀಡಲು ಸಾಧ್ಯವಾಗಿಲ್ಲ. ಕಾನೂನು ತಜ್ಞರ ಜತೆ ಚರ್ಚಿಸಲಾಗಿದೆ. ಶೀಘ್ರ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು. 900ಕ್ಕೂ ಹೆಚ್ಚು ವಿಶೇಷ ಶಿಕ್ಷಕರ ನೇಮಕಾತಿಗೂ ಕ್ರಮ ಕೈಗೊಳ್ಳಲಾಗುವುದು. ರಾಜ್ಯದ 306 ಸರ್ಕಾರಿ ಪ್ರೌಢಶಾಲೆಗಳನ್ನು ಮೇಲ್ದರ್ಜೆಗೇರಿಸಿ, ಪದವಿ ಪೂರ್ವ ಶಿಕ್ಷಣಕ್ಕೆ ಅವಕಾಶ ನೀಡಲಾಗುವುದು. ಈಗಾಗಲೇ 113 ಪ್ರಾಥಮಿಕ ಶಾಲೆಗಳಲ್ಲಿ ಪ್ರೌಢಶಿಕ್ಷಣಕ್ಕೆ ಅವಕಾಶ ನೀಡಲಾಗಿದೆ ಎಂದರು.

ಅನುದಾನಿತ ಪ್ರೌಢಶಾಲೆಗಳಲ್ಲಿ ಖಾಲಿ ಇರುವ 3,794 ಹುದ್ದೆಗಳ ಭರ್ತಿಗೆ ಅನುಮತಿ ನೀಡಲಾಗಿದೆ. ಪ್ರಸ್ತುತ 4,783 ಹುದ್ದೆಗಳು ಖಾಲಿ ಇವೆ. ಆರ್ಥಿಕ ಇಲಾಖೆ 2015ಕ್ಕಿಂತ ಹಿಂದಿನ ಹುದ್ದೆಗಳ ಭರ್ತಿಗೆ ಅನುಮೋದನೆ ನೀಡಿದೆ. ಪ್ರೌಢಶಾಲೆಗಳಿಗೆ ಮಾತ್ರ ಬೋಧಕೇತರ ಸಿಬ್ಬಂದಿ ಇದ್ದು, ಪ್ರಾಥಮಿಕ ಶಾಲೆಗಳಿಗೆ ಅಂತಹ ಸೌಲಭ್ಯ ಇಲ್ಲ ಎಂದು ಪ್ರತಿಕ್ರಿಯಿಸಿದರು.

ದೀರ್ಘಕಾಲದ ಕೀಲು ನೋವು, ಮಂಡಿ ನೋವು, ಸೊಂಟ ನೋವು, ಬೆನ್ನು ನೋವಿಗೆ ಆಯುರ್ವೇದದ ದಿವ್ಯೌಷಧ.

AMRITH NONI

ಅಮೃತ್‌ನೋನಿ ಆರ್ಥೋಪ್ಲಸ್

ವಯಸ್ಸಾದಂತೆ ಕೀಲುಗಳಲ್ಲಿ cartilage ನ ಕೊರತೆಯಿಂದ ಮೂಳೆಗಳ ಸವೆತ ಉಂಟಾಗಿ, ಕೀಲುನೋವು, ಮಂಡಿನೋವು, ಬೆನ್ನುನೋವು ಹಾಗೂ ಸ್ನಾಯುಗಳಲ್ಲಿ ಸೆಳೆತ ಉಂಟಾಗುತ್ತದೆ. ಇಂತಹ ದೀರ್ಘಕಾಲದ ಸಮಸ್ಯೆಗಳಿಗೆ ಆಯುರ್ವೇದದಲ್ಲಿ ಉಲ್ಲೇಖವಿರುವ ನೋನಿ ಹಣ್ಣಿನ ಸಾರ, ಗುಗ್ಗುಲು, ರಸ್ನ, ಶಲಾಕಿ, ಎರಂಡಮೂಲ, ನಿರ್ಗುಂಡಿ, ಗೊಕ್ಷುರಾ, ದಶಮೂಲ ಮುಂತಾದ ಔಷಧೀಯ ಗಿಡಮೂಲಿಕೆಗಳಿಂದ ಅಮೃತ್‌ನೋನಿ ಆರ್ಥೋಪ್ಲಸ್ ಸಮೃದ್ಧವಾಗಿದ್ದು, ನುರಿತ ಆಯುರ್ವೇದ ಪಂಡಿತರು ಹಾಗೂ ವಿಜ್ಞಾನಿಗಳ ಸಂಶೋಧನೆಯಿಂದ ಹೊರತರಲಾಗಿದೆ.

ನೋನಿ : ನೋನಿ ಹಣ್ಣು 164 ಕ್ಕೂ ಹೆಚ್ಚು ಅಗತ್ಯ ಪೋಷಕಾಂಶಗಳನ್ನು ಮತ್ತು 700 ಕ್ಕೂ ಹೆಚ್ಚು ಫೈಟೋಕೆಮಿಕಲ್‌ಗಳನ್ನು ಒಳಗೊಂಡಿದೆ. ಮತ್ತು ಕೀಲು ನೋವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ.

ಶಲಾಕಿ : ಶಲಾಕಿಯಲ್ಲಿ ಉರಿ ಊತ ಮತ್ತು ಸಂಧಿವಾತದ ನಿರ್ವಹಣೆಯ ಗುಣ ಇರುತ್ತದೆ.

ಎರಂಡಮೂಲ : ಆರೋಗ್ಯಕರ ಸ್ನಾಯುಗಳು ಮತ್ತು ಕೀಲುಗಳನ್ನು ಕಾಪಾಡಿಕೊಳ್ಳಲು ಮತ್ತು ವಾತ ದೋಷವನ್ನು ಸಮತೋಲನಗೊಳಿಸಲು ಸಹಾಯಕವಾಗಿದೆ.

ನಿರ್ಗುಂಡಿ : ಇದು ಕೀಲು ನೋವು ಮತ್ತು ಸ್ನಾಯು ಸೆಳೆತವನ್ನು ಹೊಂದಿರುವವರಿಗೆ ಸಂಧಿವಾತ ತಗ್ಗಿಸಲು ಸಹಾಯ ಮಾಡುತ್ತದೆ.

ಗೊಕ್ಷುರಾ : ಗೊಕ್ಷುರಾ ನೋವು ಮತ್ತು ಉರಿಯೂತವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

ನಿಮ್ಮ ಆರೋಗ್ಯ ಸಂಬಂಧಿ ಸಮಸ್ಯೆಗಳಿಗೆ ನುರಿತ ವೈದ್ಯರಿಂದ ಉಚಿತ ಸಲಹೆ ಹಾಗೂ ಸಮಾಲೋಚನೆಗಾಗಿ ಸಂಪರ್ಕಿಸಿ.
+91 95136 13362

ಎಲ್ಲಾ ಆಯುರ್ವೇದಿಕ್ ಹಾಗೂ ಮೆಡಿಕಲ್ ಸ್ಟೋರ್‌ಗಳಲ್ಲಿ ಲಭ್ಯ.

To order online : www.amrithnoni.com

## ₹289 ಕೋಟಿ ವಂಚನೆ: ತಿರುಪತಿ ಇನ್ಫ್ರಾ ಪ್ರಾಜೆಕ್ಟ್ಸ್ ಎಂ.ಡಿ ಬಂಧನ

ನವದೆಹಲಿ (ಪಿಟಿಐ): ₹ 289.15 ಕೋಟಿ ಬ್ಯಾಂಕ್ ವಂಚನೆ ಪ್ರಕರಣದಲ್ಲಿ ತಿರುಪತಿ ಇನ್ಫ್ರಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಜಗಮೋಹನ್ ಗಾರ್ಗ್ ಅವರನ್ನು ಸಿಬಿಐ ಬಂಧಿಸಿದೆ ಎಂದು ಸೋಮವಾರ ಅಧಿಕಾರಿಗಳು ತಿಳಿಸಿದ್ದಾರೆ.

ಪಶ್ಚಿಮ ದೆಹಲಿಯಲ್ಲಿ ಹೈ ಎಂಡ್ ಹೋಟೆಲ್ ಯೋಜನೆಗಾಗಿ ತೆಗೆದುಕೊಂಡ ಸಾಲದ ಹಣವನ್ನು ಕಂಪನಿಯು ಅಕ್ರಮವಾಗಿ ಬೇರೆಡೆಗೆ ವರ್ಗಾಯಿಸಿದೆ ಎಂದು ಆರೋಪಿಸಲಾಗಿದೆ.

ಸಾಲದ ಹಣವನ್ನು ಅಕ್ರಮವಾಗಿ ಬೇರೆಡೆಗೆ ವರ್ಗಾಯಿಸುವ ಮೂಲಕ ಬ್ಯಾಂಕ್ ಆಫ್ ಇಂಡಿಯಾ ನೇತೃತ್ವದ ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಒಕ್ಕೂಟಕ್ಕೆ ₹289.15 ಕೋಟಿ ನಷ್ಟ ಉಂಟು ಮಾಡಿದ ಆರೋಪದ ಮೇಲೆ ಕೇಂದ್ರ ತನಿಖಾ ದಳ (ಸಿಬಿಐ) 2022ರ ಮೇ 25ರಂದು ಕಂಪನಿ ವಿರುದ್ಧ ಎಫ್‌ಐಆರ್ ದಾಖಲಿಸಿದೆ. ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಮಾದಕ ವಸ್ತು ಮಾರಾಟ: ವಿದೇಶಿ ಪ್ರಜೆ ಸೆರೆ

ಬೆಂಗಳೂರು: ಮಾದಕ ವಸ್ತು ಮಾರಾಟ ಮಾಡುತ್ತಿದ್ದ ವಿದೇಶಿ ಪ್ರಜೆಯನ್ನು ಬಂಧಿಸಿರುವ ಸಂಪಿಗೆಹಳ್ಳಿ ಪೊಲೀಸರು, ಆರೋಪಿಯಿಂದ ₹ 75 ಸಾವಿರ ಮೌಲ್ಯದ ಗಾಂಜಾ ಜಪ್ತಿ ಮಾಡಿಕೊಂಡಿದ್ದಾರೆ.

1.4 ಕೆ.ಜಿ ತೂಕದ ಗಾಂಜಾ, ಒಂದು ತೂಕದ ಯಂತ್ರ ಜಪ್ತಿ ಮಾಡಿಕೊಳ್ಳಲಾಗಿದೆ. ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ವೀಸಾದ ಅವಧಿ ಮುಕ್ತಾಯವಾಗಿದ್ದರೂ ಅನಧಿಕೃತವಾಗಿ ದೇಶದಲ್ಲಿ ನೆಲೆಸಿರುವುದು ಗೊತ್ತಾಗಿದೆ. ಬಂಧಿತನ ವಿರುದ್ಧ ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

## ವ್ಯಾಸೆಕ್ಟಮಿ: ಪುರುಷರಿಗೆ ಪ್ರೋತ್ಸಾಹಧನ ಹೆಚ್ಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಯನ್ನು (ವ್ಯಾಸೆಕ್ಟಮಿ) ಮಾಡಿಸಿಕೊಳ್ಳುವ ಪುರುಷರಿಗೆ ಮಹಿಳೆಯರಿಗಿಂತ ಹೆಚ್ಚು ಪ್ರೋತ್ಸಾಹಧನವನ್ನು ಸರ್ಕಾರ ನೀಡಲಿದೆ ಎಂದು ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ.

ಜನಸಂಖ್ಯೆ ದಿನವನ್ನು ಜುಲೈ 11ರಂದು ಆಚರಿಸಲಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಕುಟುಂಬ ಕಲ್ಯಾಣ ಯೋಜನೆಗಳ ಮಾಹಿತಿಯನ್ನು ಆರೋಗ್ಯ ಇಲಾಖೆ ನೀಡಿದೆ.

ಮಹಿಳೆಯರು ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರೆ ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ₹ 650, ಎಪಿಎಲ್ ಕಾರ್ಡ್‌ನವರಿಗೆ ₹ 250, ಪಿಪಿಐ ಯುಸಿಡಿ/ ಪಿಎಐ ಯುಸಿಡಿಗೆ ₹ 300 ಪ್ರೋತ್ಸಾಹಧನ ನೀಡಲಾಗುವುದು. ಪುರುಷರಿಗೆ ಎಪಿಎಲ್, ಬಿಪಿಎಲ್ ಎನ್ನದೇ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವವರಿಗೆ ₹ 1,100 ನೀಡಲಾಗುತ್ತದೆ.

ಶಸ್ತ್ರಚಿಕಿತ್ಸೆ ವಿಫಲವಾದರೆ ₹ 60,000, ಫಲಾನುಭವಿಗಳಿಗೆ ತೊಂದರೆಯಾದರೆ ಗರಿಷ್ಠ ₹ 50,000, ಮರಣ ಹೊಂದಿದರೆ ₹ 4 ಲಕ್ಷ ಪರಿಹಾರ ದೊರೆಯಲಿದೆ.


ಯಶಸ್ವಿ 29ನೇ ವರ್ಷದಲ್ಲಿ

ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದಿಂದ 'ಅನುಭವಿ ಸೇವಾ ಪೂರೈಕೆದಾರ' ಮಾನ್ಯತೆ &
ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ

ಅಡಿಗಾಸ್ ಯಾತ್ರಾ ®

• NO COMPROMISE ON QUALITY !!! • VALUE FOR MONEY !!! • NO DISCOUNTS !!!
• NO FALSE PROMISES !!! • BEST QUALITY ASSURANCE !!! • NO SALES GIMMICKS !!!

ಬಸವನಗುಡಿ : 080-26616678 ಮಲ್ಲೇಶ್ವರಂ: 080-23346678 ಹುಬ್ಬಳ್ಳಿ: 0836-2256678

9845631379 7483366378 9449478944

email: care@adigasyatra.com website: www.adigasyatra.com

INTERNATIONAL TOURS

AIR TICKETS, VISA, DELUXE / LUXURY HOTELS, MEALS, ENTRY TICKETS*, BOATING, CABLE CAR, TRAIN, GUIDANCE

SRILANKA RAMAYANA TRAILS- 7 DAYS

7022259008

Ramayana Temples, Manavari Temple, Muneshwaram Temple, Trincomalee, Spice Garden, Matale, Sigirya Rock Photoshop, Kandy, Tooth Relic, Ramboda Hanuman, Tea Factory, Nuwara Eliya, Ashoka Vatika, Sita Agnipariksha, Turtle Hatchery, Bentota Beach, Madu River Safari, Vibhishana Temple, Colombo City Tour

Dep Date 2023: AUG 21, SEP 11, 25, OCT 9, 23, Nov 6, 20, Dec 4, 18

AMAZING THAILAND - 5/9 DAYS

Pattaya, Coral island, Gems Gallery, Alcazar Show, NangNooch Village, Cultural Show, Elephant Show, Bangkok Temple & City Tour, Safari World, Marine Park, Dolphin & Sea Lion Show, Orangutan Show, Bird Show, Phuket, Phi Phi Island, Krabi, 4 Islands Tour

Dep Date 2023: AUG 27, SEP 17, OCT 1, 15, 29, Nov 12, 26, Dec 10, 24

UNBELIEVABLE OFFER
Additional Just Rs. 30,000/- Limited Period Only
Air Ticket, 4 Nights Stay, Meals, Phuket, Phi Phi Island, Krabi, 4 Islands tour

SINGAPORE - MALAYSIA - THAILAND 4/5/7/11/15 DAYS

Grand Dep Dates 2023: AUG 7, 21, SEP 11, 25, OCT 9,23,

EUROPE 9/13 DAYS

Germany, Switzerland, Liechtenstein, France, Belgium, The Netherlands, Austria, Italy, Venice, Rome, Vatican City, Luxembourg Dep. Date : Sep 22, Oct 13, 27, Nov 17,

UNITED KINGDOM & EUROPE 16/21 DAYS

98456 31379

Dep Date 2023: Oct 3, 17, Nov 6

BALI-7 DAYS | BHUTAN - 8 DAYS

Kintamani Volcano, Ubud Palace, Taman Ayun Royal Temple, Bedugul, Tanah Lot, Pura Ulun Danu, Beraton Lake, Benoa Beach, Garuda Wishnu, Denpasar

Thimphu City, Phuentsholing, Paro Dzong Punakha, Dzong Taktsang

Dep. Date : 2023: AUG 21, SEP 11, 25

Dep Date 2023: AUG 16, 30, SEP 6, 20, 27, OCT 4, 11, 25, NOV 1, 8, 15, 22

NEPAL-MUKTHINATH - 5/9 DAYS

7022259003

Kathmandu, Bhakthapur, Doleshwar Mahadev, Pokhara, Phewa Lake, Mukthinath Darshan, Manakamana Cable Car.

DEP DATES: 2023: AUG 16, 30, SEP 6, 20, 27, OCT 4, 11, 25, NOV 1, 8, 15, 22

CAMBODIA - VIETNAM 6/7/12 DAYS

CAMBODIA: Phnom Penh, Seim Rep, Thousan River, Tonle Sap, Angkor Wat World, Largest Hindu Temple

VIETNAM: Hanoi, Ninh Binh, Tam coc, Halong Bay, Ho Chi Minh City, Cu Chi Tunnels, Mekong Delta

Dep Date 2023: SEP 11, 25, OCT 9, 23, Nov 6, 20, Dec 4, 18


### ಬೇಕಾಗಿದ್ದಾರೆ

ದಿ ಅಮರಜ್ಯೋತಿ ಹೌಸ್ ಬಿಲ್ಡಿಂಗ್ ಕೋ ಆಪರೇಟಿವ್ ಸೊಸೈಟಿ ಲಿ., ನಂ.40, 3ನೇ ಮಹಡಿ, ಲಕ್ಷ್ಮೀ ಕಾಂಪ್ಲೆಕ್ಸ್, ವಾಣಿವಿಲಾಸ ಆಸ್ಪತ್ರೆ ಎದುರು, ಬೆಂಗಳೂರು 560002 ಇಲ್ಲಿ ಖಾಲಿ ಇರುವ **ಕಾರ್ಯದರ್ಶಿ** ಹುದ್ದೆಗೆ ಬಿ.ಕಾಂ. ಪದವಿ ಪಡೆದಿರುವ ಅಭ್ಯರ್ಥಿ ಬೇಕಾಗಿದ್ದು, ವೇತನ ರೂ.30,000/– ನೀಡಲಾಗುವುದು. ವಯೋಮಿತಿ 30 ರಿಂದ 38 ವರ್ಷಗಳು. ಆಸಕ್ತಿ ಇರುವ ಅಭ್ಯರ್ಥಿಗಳು 7 ದಿನಗಳ ಒಳಗಾಗಿ ಸ್ವ ವಿವರ (Bio -Data) ದೊಂದಿಗೆ ಈ ಮೇಲಿರುವ ವಿಳಾಸಕ್ಕೆ ಸಲ್ಲಿಸಲು ಸೂಚಿಸಲಾಗಿದೆ. ಮೊಬೈಲ್ ಸಂಖ್ಯೆ : 8660729920.

ಸಹಿ/–
ಅಧ್ಯಕ್ಷರು

### ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 16/2023 ದಿನಾಂಕ : 07–07–2023

ಭಾರತದ ರಾಷ್ಟ್ರಪತಿಗಳ ಪರವಾಗಿ, ಕೆಳಸಹಿದಾರರು, ಕೆಳಗಿನ ಐಟಂಗಳ ಸರಬರಾಜಿಗಾಗಿ ಐಆರ್‌ಇಪಿಎಸ್ ಮೂಲಕ ಮಾತ್ರ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. **ಟೆಂಡರ್ ಮುಕ್ತಾಯದ ಸಮಯ : 10.30 ಗಂಟೆಗಳು**

| ಕ್ರ. | ಟೆಂಡರ್ ಸಂಖ್ಯೆ | ಸಂಕ್ಷಿಪ್ತ ವಿವರಣೆ | ಪ್ರಮಾಣ | ಟೆಂಡರ್ ಮುಕ್ತಾಯದ ದಿನಾಂಕ |
|---|---|---|---|---|
| 1 | 60232081 | 60 ಕೆಜಿ ಸಿ ಕ್ಲಾಂಪ್‌ಗಳೊಂದಿಗೆ ಜಾಗಲ್ಡ್ ಫಿಶ್ ಪ್ಲೇಟ್‌ಗಳು | 11820 ಸೆಟ್‌ಗಳು | 14.07.2023 |
| 2 | 17231076 | 8 ಐಟಂಗಳು ಇರುವ ಗೇರ್ ಕೇಸ್ ಅಸೆಂಬ್ಲಿ ಕಿಟ್ | 84 ಸೆಟ್‌ಗಳು | 21.07.2023 |
| 3 | 30231250 | ಬ್ರೇಕ್ ಸಿಲಿಂಡರ್‌ಗಾಗಿ ಬ್ರೇಕ್ ಗೇರ್ ಬುಷ್‌ಗಳ ಕಿಟ್ | 567 ಸೆಟ್‌ಗಳು | 12.07.2023 |
| 4 | 29222042ಎ | 3 ಫೇಸ್ ಲೋಕೊಮೋಟಿವ್‌ಗಾಗಿ ಬ್ಯಾಟರಿ (ಎನ್ಐ)ಸಿಡಿ) | 09 ಸೆಟ್‌ಗಳು | 25.07.2023 |
| 5 | ಎಲ್3235383 | ಐಜಿಬಿಟಿ ಇನ್ವರ್ಟರ್ ಆಧಾರಿತ ಪೋರ್ಟಬಲ್ ಪ್ಲಾಸ್ಮಾ ಸಿಸ್ಟಮ್ | 05 ಸಂಖ್ಯೆಗಳು | 13.07.2023 |
| 6 | ಎಲ್3235385 | ಎಲ್‌ಹೆಚ್‌ಬಿ ಗಾಗಿ ಶಾಕ್ ಅಬ್ಸಾರ್ಬರ್ ಟೆಸ್ಟಿಂಗ್ ಮೆಶೀನ್ | 01 ಸಂಖ್ಯೆ | 13.07.2023 |
| 7 | 60232015 | ಡಿರೈಲಿಂಗ್ ಸ್ವಿಚ್‌ಗಳು 8.5 ರಲ್ಲಿ 1 – 52 ಕೆಜಿ | 131 ಸೆಟ್‌ಗಳು | 21.07.2023 |
| 8 | 60232074 | 12 ರಲ್ಲಿ 1 ಗಾಗಿ ಪಿಎಸ್‌ಸಿ ಸ್ಲೀಪರ್ ಸೆಟ್ – 60 ಕೆಜಿ | 81 ಸೆಟ್‌ಗಳು | 31.07.2023 |
| 9 | 60232052 | 10 ಎಂಎಂ ಥಿಕ್ ಕಾಂಪೊಸಿಟ್ ಜಿಆರ್‌ಎಸ್‌ಪಿ | 1896245 ಸಂಖ್ಯೆಗಳು | 17.07.2023 |
| 10 | 60236594 | ಕಾಂಬಿನೇಶನ್ ಫಿಶ್ ಪ್ಲೇಟ್‌ಗಳು 60 ಕೆಜಿ 52 ಕೆಜಿ ರೈಲ್‌ಗಳು | 2000 ಸೆಟ್‌ಗಳು | 14.07.2023 |
| 11 | 60232017 | 10125 ಎಂಎಂ ಥಿಕ್ ವೆಬ್ ಕರ್ವ್ಡ್ ಸ್ವಿಚ್‌ಗಳು | 590 ಸೆಟ್‌ಗಳು | 14.07.2023 |
| 12 | 60235073ಎ | ಕಾಂಬಿನೇಶನ್ ಎಸ್‌ಎಫ್‌ಜೆ 60 ಕೆಜಿ 52 ಕೆಜಿ | 121 ಸೆಟ್‌ಗಳು | 24.07.2023 |
| 13 | 38231398ಎ | ಸ್ಲ್ಯಾಕ್ ಅಡ್ಜಸ್ಟರ್ ಕಂಪ್ಲೀಟ್ ಐಆರ್‌ಎಸ್‌ಎ 600 | 404 ಸಂಖ್ಯೆಗಳು | 31.07.2023 |
| 14 | 38231327 | ನ್ಯಾರೋ ಮತ್ತು ವೈಡ್ ಜಾ ಗಾಗಿ ಸೈಡ್ ಫ್ರೇಮ್ ಕೀ | 26081 ಸಂಖ್ಯೆಗಳು | 26.07.2023 |
| 15 | 60232055 | 8.5 ರಲ್ಲಿ 1 ಗಾಗಿ ಪಿಎಸ್‌ಸಿ ಸ್ಲೀಪರ್ ಸೆಟ್ – 60 ಕೆಜಿ | 73 ಸೆಟ್‌ಗಳು | 02.08.2023 |
| 16 | 30231422 | ಡೈರೆಕ್ಟ್ ಮೌಂಟೆಡ್ ಡಬಲ್ ರೋ ಸ್ಪೆರಿಕಲ್ ರೋಲರ್ ಬೇರಿಂಗ್ | 300 ಸಂಖ್ಯೆಗಳು | 31.07.2023 |
| 17 | 17231039 | ಜರ್ನಲ್ ಬೇರಿಂಗ್ ಅಸೆಂಬ್ಲಿ ಸಿಟಿಆರ್‌ಬಿ | 107 ಸಂಖ್ಯೆಗಳು | 02.08.2023 |
| 18 | 17231577 | ಕೆಬಿಐ ಪಾರ್ಟ್ ಸಂ. 772831 ಗೆ ಕೇಬಲ್‌ನೊಂದಿಗೆ ಪೊಟೆನ್ಷಿಯೋಮೀಟರ್ | 155 ಸಂಖ್ಯೆಗಳು | 04.08.2023 |
| 19 | 38235003 | 256 ವ್ಯಾಗನ್‌ಗಳ ಕನ್ವರ್ಶನ್‌ಗಾಗಿ ಐಟಂಗಳ ಒಂದು ಸೆಟ್ | 1 ಸೆಟ್ | 04.08.2023 |
| 20 | 33235027 | ಎಲೆಕ್ಟ್ರೋ ನ್ಯುಮ್ಯಾಟಿಕ್ ಪ್ರೆಶರೈಸ್ಡ್ ಫ್ಲಶಿಂಗ್ ಸಿಸ್ಟಮ್ | 260 ಸಂಖ್ಯೆಗಳು | 04.08.2023 |
| 21 | 60234149 | ಎಸ್‌ಇಜೆ 52ಕೆಜಿ/60 ಕೆಜಿ ಗಾಗಿ ಪಿಎಸ್‌ಸಿ ಸ್ಲೀಪರ್ ಸೆಟ್ | 868 ಸೆಟ್‌ಗಳು | 08.08.2023 |
| 22 | 60235115 | 05 ವಿಧಗಳ ಹೈಡ್ರಾಲಿಕ್ ಆಯಿಲ್‌ಗಳು (ತಯಾರಿಕೆ : ಶೆಲ್) | 7814 ಲೀಟರ್‌ಗಳು | 27.07.2023 |
| 23 | 25231001 | ಪ್ಯಾಂಟೋಗ್ರಾಫ್‌ಗಾಗಿ ಮೆಟಲೈಸ್ಡ್ ಕಾರ್ಬನ್ ಸ್ಟ್ರಿಪ್‌ಗಳು | 434 ಸೆಟ್‌ಗಳು | 04.08.2023 |
| 24 | 42235001 | ರೂಫ್ ಮೌಂಟೆಡ್ ಪ್ಯಾಕೇಜ್ ಯೂನಿಟ್ ಕಂಪ್ಲೀಟ್ | 6 ಸಂಖ್ಯೆಗಳು | 01.08.2023 |

ಪ್ರಕಟಣೆ ಸಂ. 15/2023 ರ ಟೆಂಡರ್ ಸಂ. 17231389 ಗಾಗಿ ಮುಕ್ತಾಯದ ದಿನಾಂಕವನ್ನು 03–07–2023 ರಿಂದ 14–07–2023 ಗೆ ಬದಲಿಸಲಾಗಿದೆ.

ಹೆಚ್ಚಿನ ವಿವರಗಳಿಗೆ www.ireps.gov.in ಗೆ ಲಾಗ್‌ಆನ್ ಮಾಡಿ.

ಪಿಯುಬಿ/234/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023–24 ಪ್ರಧಾನ ಮುಖ್ಯ ಸಾಮಗ್ರಿಗಳ ವ್ಯವಸ್ಥಾಪಕರು, ಹುಬ್ಬಳ್ಳಿ

S.W.Railways sw_rly SWRRLY southwesternrailway SWRRLY

### ಸುಧಾ ಓದಿರಿ

### ನೈಋತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ. ಸಿಪಿಎಂಜಿಎಸ್‌ಯುಎಂವೈಎಸ್‌ಇಪಿಸಿ–01
ದಿನಾಂಕ : 24–04–2023

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

| ಕೆಲಸದ ಹೆಸರು | ಅಂದಾಜು ಮೌಲ್ಯ |
|---|---|
| ಸಿವಿಲ್, ವಿದ್ಯುತ್, ಸಿಗ್ನಲ್ ಮತ್ತು ಟೆಲಿಕಾಂ ಕಾಮಗಾರಿಗಳನ್ನು ಒಳಗೊಂಡಂತೆ ಮೈಸೂರು ರೈಲ್ವೆ ನಿಲ್ದಾಣದ ಅಭಿವೃದ್ಧಿಯ ಕಾಮಗಾರಿಗಾಗಿ ಪ್ರಸ್ತಾವನೆಗಾಗಿ ವಿನಂತಿ. | ರೂ. 346,64,00,000/– |

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 23–08–2023 ರಂದು 16:00 ಗಂಟೆಯವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ಯೋಜನಾ ವ್ಯವಸ್ಥಾಪಕರು / ಇಎನ್‌ಜಿಜಿ / ಜಿಎಸ್ ಮೈಸೂರು

ಪಿಯುಬಿ/231/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023–24

S.W.Railways SWRRLY SWRRLY

### IN THE COURT OF CITY CIVIL & SESSSIONS JUDGE COMMERCIAL DISPUTES, BENGALURU, CCH NO.83

**COM. O.S. NO. 91/2023**

**BETWEEN: M/s. BENGAL IRON CORPORATION** 149, R.V. ROAD, V.V.PURAM, BENGALURU 560 004, BY GPA MR. ASHOK SHARMA, ...PLAINTIFF

**AND: SRI CHIKKANNA JAYAPRAKASH, PROPRIETOR, SRI MANJUNATHA ENTERPRISES,** 1.594, FIRST BLOCK, D GROUP LAYOUT, ANDHRAHALLI MAIN ROAD, BENGALURU 560 091 2.RESIDENT OF NO.8, DODDANNA LAYOUT, RANGANATHA SWAMY NILAYA, II FLOOR, 40 FT ROAD, FIRST A BLOCK, D GROUP, ANDHRAHALLI MAIN ROAD, BENGALURU 560 091, .DEFENDANT.

**NOTICE TO THE DEFENDANT**

Whereas, Plaintiff instituted this suit for recovery of a sum of Rs.7,76,159 (Rupees seven lakhs seventy six thousand & one hundred fifty nine only), amongst other reliefs, against Defendant named above. Therefore, the Defendant is hereby directed to take notice to appear in person or through an attorney, duly instructed and able to answer all material questions in relation to the aforesaid case on **22/08/2023, at 11 A.M** before the Hon'ble Court, failing which the aforesaid case shall be heard and disposed off, in the absence of the said Defendant.

Given under my hand and seal of the Court on this 5/07/2023, at Bengaluru.

By Order of the Court,
Sd/-Sheristedar
City Civil Court, Bengaluru.

**Advocate for Plaintiff:**
**HARISH V R, Advocate**
No.1129, 11 Cross Road, WOC, Mahalaxmipuram Bengaluru -560 086, Mob: 9448084133
Email: harishavear@gmail.com

### ನೈಋತ್ಯ ರೈಲ್ವೆ

ಆಸಕ್ತಿ ವ್ಯಕ್ತಪಡಿಸುವಿಕೆ ಪ್ರಕಟಣೆ ಸಂ. ಬಿ/ಸಿ.14/ಪಿಎ/ಇಎಂಆರ್/ಟಿಕೆ/2023
ದಿನಾಂಕ : 04–07–2023

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಗಿನ ವಿವರಣೆಗೆ ಅನುಸಾರವಾಗಿ ಇಎಂಆರ್ ಗಾಗಿ ಮೊಹರಾದ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಆಹ್ವಾನಿಸಿದ್ದಾರೆ.

**ವಿವರಣೆ** : ನೈಋತ್ಯ ರೈಲ್ವೆ ಬೆಂಗಳೂರು ವಿಭಾಗದ ತುಮಕೂರು ರೈಲ್ವೆ ನಿಲ್ದಾಣದಲ್ಲಿ ಸಿಎಸ್‌ಆರ್ ಚಟುವಟಿಕೆಗಳ ಅಡಿಯಲ್ಲಿ 5 ವರ್ಷಗಳ ಅವಧಿಗಾಗಿ ಉಚಿತ ತುರ್ತು ವೈದ್ಯಕೀಯ ಸೌಲಭ್ಯ ಕೇಂದ್ರವನ್ನು ಸ್ಥಾಪಿಸಲು, ಕಾರ್ಯಾಚರಣೆ ನಡೆಸಲು ಮತ್ತು ನಿರ್ವಹಿಸುವುದಕ್ಕಾಗಿ ಹೆಸರಾಂತ ಆಸ್ಪತ್ರೆಗಳಿಂದ ಆಸಕ್ತಿ ವ್ಯಕ್ತಪಡಿಸುವಿಕೆ.

ಮೊಹರಾದ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಸ್ವೀಕರಿಸುವ ದಿನಾಂಕ : 09–08–2023 ರಂದು 12:00 ಗಂಟೆಗಳವರೆಗೆ.

ಹೆಚ್ಚಿನ ವಿವರಗಳಿಗಾಗಿ https://swr.indianrailways.gov.in ಗೆ ಲಾಗ್‌ಆನ್ ಮಾಡಿ.

ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು
ಪಿಯುಬಿ/228/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023–24 ಬೆಂಗಳೂರು

S.W.Railways SWRRLY SWRRLY

## ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

### PUBLIC NOTICE

**KARNATAKA REDDYJANA SANGHA**
No.1, Mahayogi Vemana Road, 3rd Block, Koramangala, Bangalore-34.

**TENDER NOTICE**

Quotation are invited from reputed Civil & Electrical Contractors/ Suppliers for following works.

1.Purchase of 40 KVA UPS 3 PH in/3PH out with 30 No.s of Exide 100 AH EL series with suitable metal battery stand at Vemana Institute of Technology.- approx..cost 5 lakhs.

2.Purchase of Lab Furnitures for new Computer labs in VIT.

3.Regarding renovation and partition works at RJS Institute of Management studies – approx.cost Rs.14.4 lakhs.

Last date for submitting sealed quotations: 17/07/2023 @ at 3.00pm.

For more details, Visit our website **www.reddyjanasangha.org**
**Contact: 080-25534194**
**97319 03000 / 99455 00943**
President General Secretary

### JOB OPPORTUNITIES

**General**

**US BASED** Company Agile 367 bring Work from home opportunity upto to Rs.40,000 per month For Junior Tester /dev no experience Training provided Email: sales@agile367.com ,Cont No: 9901204433

### REAL ESTATE SELLING

**Sites**

**Banashankari**

**SALE 30X40** East Facing at Hrishikesh Nagar, Hosakerehalli, Demolish Building or Rent 25000 Call: 6364115555

### PERSONAL

**Change of Name**

**I, ESHWAR.** C.R., Residing at #81, 2nd cross, G.Hosahalli, Vishwaneedam Post, Bengaluru-91 have changed my name as ESHWARAPPA, vide affidavit dated 8/7/2023 before Notary V.Anjanappa, Bengaluru

**CAUTION NOTICE**
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

### CONNECT ಕ್ಲಾಸಿಫೈಡ್ಸ್


Entry Free!

Grand Flea Market Presents

ಬೆಂಗಳೂರು ಆರ್ಟ್ಸ್ ಅಂಡ್ ಕ್ರಾಫ್ಟ್ಸ್ ಮೇಳ
Bangalore Arts and Crafts Mela
Enrich your Shopping Excellence
Art, Craft & Handlooms Exhibition
7th July to 16th July 2023
Timings: 11 AM - 7 PM | 10 Days Exhibition
100+ Shopping Stalls | Live Performance & More
HANDLOOMS | HOME DECOR | HANDICRAFTS | CLOTHING | JEWELLERY

Organized By
Grand Flea Market

For Details Contact
9036658774 / 6364685716
Karnataka Chitrakala Parishath,
Kumara Krupa Road, Near Shivananda Circle
Bengaluru -560 001.
/GrandFleaMarket /GrandFleaMarket.events


**CHANGE OF NAME**

I, **NIROOP PURSHATHAMA PRAVEEN** R/at. No.220, Sai Kanaka, 9th A main, HRBR Layout, 1st Block, Kalyan Nagar, Blr-43 have changed my name to **NIROOP PURUSHOTHAMA PRAVEEN** vide affidavit dated 10/07/2023 before notary Y.R. Chandrasekar., Bangalore

**I, PRATAP.P** resident at 164, BG Road, Near Bayalu Basavanna Temple, Hommadevanahalli, Bangalore-560083 have changed my name to PRATHAP PRABAKAR vide affidavit dated 10/07/2023 sworn before notary B.Chitra, Bangalore

**Lost**

**DOCUMENT LOST**

**I, Shilpa. K,** R/a No. 663, 14th 'B' Main, Gokula 1st Stage, 1st Phase, Mathikere, Bangalore-560 054 have lost document Sale Deed, Hosur Sub-Registrar office 1st Book, Volume No.1024 Page No. 273-274 Document No. 3702. Registration year 1979. **Finders please contact: 99808 52255 or inform near by Police Station**


2nd PU Failed?
Don't be left behind!
A golden opportunity to study degree under any University this academic year and save one precious year of your life.
BE, MBBS, BSc, BBA, BCA
and other degrees
Limited seats. For admissions call:
2ನೇ ಪಿಯುಸಿ ಅನುತ್ತೀರ್ಣವಾದ ವಿದ್ಯಾರ್ಥಿಗಳಿಗೆ ಒಂದು ಸುವರ್ಣ ಅವಕಾಶ. ಸಂಪರ್ಕಿಸಿ:
7846000222

# ಹಲವೆಡೆ ಅಬ್ಬರಿಸಿದ ವರುಣ

ಪ್ರಜಾವಾಣಿ ವಾರ್ತೆ

ಬೆಂಗಳೂರಿನಲ್ಲಿ ಸೋಮವಾರ ಸುರಿದ ಮಳೆಯಲ್ಲಿ ಕೊಡೆಯೊಂದಿಗೆ ಸಾಗಿದ ಯುವತಿಯರು – ಪ್ರಜಾವಾಣಿ ಚಿತ್ರ

**ಬೆಂಗಳೂರು:** ನಗರದ ಹಲವು ಪ್ರದೇಶಗಳಲ್ಲಿ ಸೋಮವಾರ ಧಾರಾಕಾರ ಮಳೆಯಾಗಿದೆ.

ಜೋರು ಮಳೆಯಿಂದ ಹಲವು ಕಡೆ ಚರಂಡಿಗಳಲ್ಲಿ ಮಳೆಯ ನೀರು ಉಕ್ಕಿ ರಸ್ತೆಯ ಮೇಲೆ ಹರಿಯಿತು. ಕೆಲವು ಕಡೆ ಕೆಳಸೇತುವೆಗಳಲ್ಲಿ ನೀರು ಸಂಗ್ರಹಗೊಂಡು, ವಾಹನ ಸಂಚಾರಕ್ಕೆ ಅಡ್ಡಿ ಉಂಟಾಯಿತು.

ಕೆಲವು ದಿನಗಳಿಂದ ಮೋಡ ಕವಿದ ವಾತಾವರಣ ಇದ್ದರೂ ಜೋರು ಮಳೆಯಾಗುತ್ತಿರಲಿಲ್ಲ. ಸೋಮವಾರ ಹಲವೆಡೆ ಮಳೆ ಅಬ್ಬರಿಸಿದೆ. ಸೋಮವಾರವೂ ಬೆಳಿಗ್ಗೆಯಿಂದ ಬಿಸಿಲ ವಾತಾವರಣವೇ ಇತ್ತು. ಮಧ್ಯಾಹ್ನ 3 ಗಂಟೆ ಸುಮಾರಿಗೆ ಜೋರು ಮಳೆಯಾಗಿದೆ. ಸಂಜೆಯವರೆಗೂ ಕೆಲವೆಡೆ ಜಿಟಿ ಜಿಟಿ ಮಳೆಯಾಗುತ್ತಲೇ ಇತ್ತು. ರಾತ್ರಿಯೂ ಅಲ್ಲಲ್ಲಿ ಮಳೆಯಾಯಿತು.

ರಾಜಾಜಿನಗರ, ಯಶವಂತಪುರ, ಮಲ್ಲೇಶ್ವರ, ರಾಜರಾಜೇಶ್ವರಿನಗರ, ನಾಯಂಡನಹಳ್ಳಿ, ಹೊಸಕೆರೆಹಳ್ಳಿ, ಗಿರಿನಗರ, ದೀಪಾಂಜಲಿನಗರ, ವಿಜಯನಗರ, ಪೀಣ್ಯ, ದಾಸರಹಳ್ಳಿ, ಜಾಲಹಳ್ಳಿ, ನಾಗಸಂದ್ರ, 8ನೇ ಮೈಲಿ, ವಿದ್ಯಾರಣ್ಯಪುರ, ದೊಡ್ಡ ಬೊಮ್ಮಸಂದ್ರ, ಹೆಬ್ಬಾಳ, ಆರ್.ಟಿ. ನಗರ, ವಸಂತನಗರ, ನಾಗಾವರ, ಹೆಣ್ಣೂರು, ಬಾಣಸವಾಡಿ ಸುತ್ತಮುತ್ತ ಸ್ಥಳಗಳಲ್ಲಿ ಉತ್ತಮ ಮಳೆಯಾಗಿದೆ.

ಜಯನಗರ, ಜೆ.ಪಿ.ನಗರ, ಬನಶಂಕರಿ, ಹನುಮಂತನಗರ, ಬಸವನಗುಡಿ, ಚಾಮರಾಜಪೇಟೆ, ಮೆಜೆಸ್ಟಿಕ್, ಶಿವಾಜಿನಗರ, ಎಂ.ಜಿ. ರಸ್ತೆ, ಅಶೋಕನಗರ, ಕೋರಮಂಗಲ, ಮಡಿವಾಳ, ಗಾಂಧಿನಗರ ಸುತ್ತಮುತ್ತಲೂ ಮಳೆಯಾಯಿತು. ಮಳೆಯಲ್ಲೇ ದ್ವಿಚಕ್ರ ವಾಹನ ಸವಾರರು ಸಾಗಿದರು. ಪಾದಚಾರಿಗಳು ಮಳೆಯಿಂದ ರಕ್ಷಣೆ ಪಡೆಯಲು ಕೊಡೆಯ ಮೊರೆ ಹೋಗಿದ್ದರು.

ಒಕಳಿಪುರ ರೈಲ್ವೆ ಕೆಳ ಸೇತುವೆ, ಶಿವಾನಂದ ವೃತ್ತ, ಶೇಷಾದ್ರಿಪುರ ಕೆಳಸೇತುವೆಯಲ್ಲಿ ಅಲ್ಪಪ್ರಮಾಣದ ನೀರು ಸಂಗ್ರಹಗೊಂಡಿತ್ತು. ರಾತ್ರಿ ವೇಳೆಗೆ ಮಳೆ ನಿಂತಿದ್ದರಿಂದ ಸಂಚಾರಕ್ಕೆ ಅಡ್ಡಿಯಾಗಲಿಲ್ಲ.

ರಾಜ್ಯ ತೊಗಟವೀರ ಕ್ಷತ್ರಿಯ ಸಂಘದ ಮಹಾಸಭೆಯನ್ನು ಸಂಘದ ಅಧ್ಯಕ್ಷ ಬಿ.ಎಸ್. ಸೋಮಶೇಖರ್ ಉದ್ಘಾಟಿಸಿದರು

# ‘ಕಷ್ಟವಾಗುತ್ತಿರುವ ನೇಕಾರಿಕೆ ವೃತ್ತಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ತೊಗಟವೀರ ಸಮಾಜ ಬಹಳ ಹಿಂದೆ ಉಳಿದಿದ್ದು, ನೇಕಾರಿಕೆ ವೃತ್ತಿ ಕಷ್ಟ ಆಗುತ್ತಿದೆ ಎಂದು ತೊಗಟವೀರ ಕ್ಷತ್ರಿಯ ಸಂಘದ ಅಧ್ಯಕ್ಷ ಬಿ.ಎಸ್. ಸೋಮಶೇಖರ್ ತಿಳಿಸಿದರು.

ಭಾನುವಾರ ನಡೆದ ರಾಜ್ಯ ತೊಗಟವೀರ ಕ್ಷತ್ರಿಯ ಸಂಘದ 2021-22 ಮತ್ತು 2022-23 ಸಾಲಿನ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

‘ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ಸಂಘ ರಚನೆಯಾಗಿದೆ. ಕುಲ ಕಸುಬು ನೇಕಾರಿಕೆ ವೃತ್ತಿ ಮಾಡಿಕೊಂಡು ಜೀವನ ನಡೆಸಿಕೊಂಡು ಬರುತ್ತಿದ್ದೇವೆ. ಇದರಲ್ಲಿ ಉಳಿದ ಹಣದಲ್ಲಿ ಸಮಾಜದ ಬಂಧುಗಳು, ವಿದ್ಯಾರ್ಥಿ ನಿಲಯದ ಜೀರ್ಣೋದ್ಧಾರಕ್ಕೆ ಸಹಾಯ ಮಾಡಿ ಸಮಾಜ ಕಟ್ಟುವ ಕೆಲಸ ಮಾಡಲಾಗುತ್ತಿದೆ’ ಎಂದು ಹೇಳಿದರು.

‘ಸಂಘದ ವತಿಯಿಂದ ಪುರುಷ ಮತ್ತು ಮಹಿಳಾ ವಿದ್ಯಾರ್ಥಿ ನಿಲಯ ನಡೆಸಿಕೊಂಡು ಬರುತ್ತಿದ್ದೇವೆ. ಶೇಷಾದ್ರಿಪುರದಲ್ಲಿ ₹1.49 ಕೋಟಿ ವ್ಯಚ್ಚದಲ್ಲಿ ಪುರುಷ ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣ ಕಾಮಗಾರಿ ನಡೆಯುತ್ತಿದೆ’ ಎಂದು ವಿವರಿಸಿದರು.

ಸಂಘದ ಲೆಕ್ಕ ಪತ್ರವನ್ನು ಪ್ರಧಾನ ಕಾರ್ಯದರ್ಶಿ ಜಿ.ವಿಜಯಕುಮಾರ್ ಮಂಡಿಸಿದರು. ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ರಾಜ್ಯದ 130 ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ರಾಜ್ಯ ತೊಗಟವೀರ ಸಮಾಜದ ಗೌರವಾಧ್ಯಕ್ಷ ಚಿಕ್ಕರಾಮಪ್ಪ, ಉಪಾಧ್ಯಕ್ಷ ಸಿದ್ದಪ್ಪ, ಬಿ.ಎಂ. ನಾರಾಯಣಸ್ವಾಮಿ, ಎಂ.ಸಿ. ರಾಮದಾಸ್, ಪ್ರಕಾಶ್, ಕಾಂತ ರಾಜು, ಗೋಪಾಲಕೃಷ್ಣ ಶೆಟ್ಟಿ, ಗಣೇಶ್, ಹೇಮಾವತಿ, ಬಿ.ಎಸ್. ಉಮಾದೇವಿ, ಕೆ.ಪಿ. ಅಭಿನೇತ್ರಿ, ಲೋಕೇಶ್, ಬಿ.ಜಿ. ಸತ್ಯನಾರಾಯಣ ಇದ್ದರು.

# ಚಕ್ರವರ್ತಿ ಸೂಲಿಬೆಲೆಗೆ ಸಮನ್ಸ್: ತಡೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಬಿಜೆಪಿ ಯುವ ಮೋರ್ಚಾ ಮಂಗಳೂರು ಜಿಲ್ಲಾ ಘಟಕದ ಕಾರ್ಯಕಾರಿಣಿ ಸದಸ್ಯ ಪ್ರವೀಣ್ ನೆಟ್ಟಾರು ಹತ್ಯೆ ಖಂಡಿಸಿ ಟೌನ್ ಹಾಲ್ ಮುಂದೆ ನಡೆಸಲಾಗಿದ್ದ ಪ್ರತಿಭಟನೆಯ ವೇಳೆ ಶಾಂತಿ ಭಂಗ ಮಾಡಲಾಗಿದೆ’ ಎಂಬ ಆರೋಪದಡಿ ದಾಖಲಿಸಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಯುವ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ಅವರಿಗೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಜಾರಿ ಮಾಡಿದ್ದ ಸಮನ್ಸ್‌ಗೆ ಹೈಕೋರ್ಟ್ ತಡೆ ನೀಡಿದೆ.

ತಮ್ಮ ವಿರುದ್ಧ ನಗರದ 6ನೇ ಎಸಿಎಂಎಂ ನ್ಯಾಯಾಲಯದಲ್ಲಿ ದಾಖಲಿಸಿರುವ ಖಾಸಗಿ ದೂರು ಮತ್ತು ನ್ಯಾಯಾಲಯ ಹೊರಡಿಸಿರುವ ಸಮನ್ಸ್ ರದ್ದುಪಡಿಸುವಂತೆ ಕೋರಿ ಚಕ್ರವರ್ತಿ ಸೂಲಿಬೆಲೆ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಮಧ್ಯಂತರ ಆದೇಶ ನೀಡಿದೆ.

ವಿಚಾರಣೆ ವೇಳೆ ಚಕ್ರವರ್ತಿ ಸೂಲಿಬೆಲೆ ಪರ ವಕೀಲ ಅರುಣ್ ಶ್ಯಾಮ್, ’ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಅರ್ಜಿದಾರರಿಗೆ ಸಮನ್ಸ್ ಜಾರಿ ಮಾಡಿರುವುದು ಕಾನೂನು ಬಾಹಿರ. ಆದ್ದರಿಂದ, ಅರ್ಜಿದಾರರ ವಿರುದ್ಧದ ಪ್ರಕರಣ ರದ್ದುಪಡಿಸಬೇಕು‘ ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ತಡೆ ನೀಡಿ ಆದೇಶಿಸಿತು.

**ಪ್ರಕರಣವೇನು?:** ‘ಬೆಂಗಳೂರು ನಗರದಲ್ಲಿ ಫ್ರೀಡಂ ಪಾರ್ಕ್ ಹೊರತುಪಡಿಸಿ ಬೇರೆ ಯಾವುದೇ ಸ್ಥಳಗಳಲ್ಲಿ ಪ್ರತಿಭಟನೆ ಮಾಡಬಾರದೆಂದು ಸರ್ಕಾರ ಆದೇಶಿಸಿದೆ. ನಿಯಮ ಉಲ್ಲಂಘಿಸಿ ಮತ್ತು ಸರ್ಕಾರದಿಂದಾಗಲಿ ಅಥವಾ ಸಂಬಂಧಟ್ಟ ಪ್ರಾಧಿಕಾರದಿಂದ ಯಾವುದೇ ಪೂರ್ವಾನುಮತಿ ಪಡೆಯದೆ ಆರೋಪಿಗಳು ಟೌನ್‌ಹಾಲ್ ಮುಂದೆ ಪ್ರತಿಭಟನೆ ನಡೆಸಿ ಸಾರ್ವಜನಿಕ ನೆಮ್ಮದಿಗೆ ಭಂಗ ಉಂಟು ಮಾಡಿದ್ದಾರೆ ಮತ್ತು ಕಾನೂನು ಸುವ್ಯವಸ್ಥೆಗೆ ಅಡ್ಡಿಪಡಿಸಿದ್ದಾರೆ‘ ಎಂದು ಆರೋಪಿಸಿ ಎಸ್.ಜೆ. ಪಾರ್ಕ್ ಠಾಣೆ ಪೊಲೀಸರು ಖಾಸಗಿ ದೂರು ದಾಖಲಿಸಿದ್ದರು.

ಪ್ರತಿಭಟನೆಗೆ ನಡೆಸಿದ್ದ ಶಾಸಕ ರವಿಸುಬ್ರಹ್ಮಣ್ಯ, ಮಾಜಿ ಮೇಯರ್‌ಗಳಾದ ಕಟ್ಟೆ ಸತ್ಯನಾರಾಯಣ, ಉಮೇಶ್ ಶೆಟ್ಟಿ ಮತ್ತು ಚಕ್ರವರ್ತಿ ಸೂಲಿಬೆಲೆ ಸೇರಿದಂತೆ ಒಟ್ಟು 11 ಜನರನ್ನು ದೂರಿನಲ್ಲಿ ಆರೋಪಿಗಳನ್ನಾಗಿ ಹೆಸರಿಸಲಾಗಿದೆ.

ಪ್ರವೀಣ್ ನೆಟ್ಟಾರು ಹತ್ಯೆ ಖಂಡಿಸಿ 2022ರ ಜುಲೈ 28ರಂದು ಜೆ.ಸಿ.ರಸ್ತೆಯ ಟೌನ್‌ಹಾಲ್ ಮುಂಭಾಗ ಮಧ್ಯಾಹ್ನ 3 ಗಂಟೆಯಿಂದ ಸಂಜೆ 6.30ರವರೆಗೆ ಹಿಂದೂ ಹಿತರಕ್ಷಣಾ ಸಮಿತಿ ಮತ್ತು ಹಲವು ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದರು. ಈ ವೇಳೆ, ‘ಜಿಹಾದಿಗಳಿಗೆ ಧಿಕ್ಕಾರ, ಪಿಎಫ್‌ಐ ಮತ್ತು ಎಸ್‌ಡಿಪಿಐ ಸಂಘಟನೆಗಳನ್ನು ನಿಷೇಧಿಸಬೇಕು. ಪ್ರವೀಣ್ ನೆಟ್ಟಾರ್ ಹಂತಕರನ್ನು ಸಾರ್ವಜನಿಕವಾಗಿ ಎನ್‌ಕೌಂಟರ್ ಮಾಡಬೇಕು ಎಂದು ಘೋಷಣೆ ಕೂಗಲಾಗಿದೆ‘ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

## ಶ್ರಮಿಕರ ಹಕ್ಕೊತ್ತಾಯ ಸಮಾವೇಶ

# ದುಡಿಮೆ ಅವಧಿ 8 ಗಂಟೆಗೆ ಇಳಿಸಿ

ಪ್ರಜಾವಾಣಿ ವಾರ್ತೆ

ಲೋಡಿಂಗ್ ಕಾರ್ಮಿಕರ ದಶಮಾನೋತ್ಸವ ಹಾಗೂ ಶ್ರಮಿಕರ ಹಕ್ಕೊತ್ತಾಯ ಸಮಾವೇಶದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ಅವರಿಗೆ ವರದರಾಜೇಂದ್ರ, ಡಾ. ವಾಸು ಎಚ್‌ವಿ., ವೀರಸಂಗಯ್ಯ ಮನವಿ ಪತ್ರ ಸಲ್ಲಿಸಿದರು. –ಪ್ರಜಾವಾಣಿ ಚಿತ್ರ

**ಬೆಂಗಳೂರು:** ಅನ್ನಭಾಗ್ಯದ ಯಶಸ್ವಿಗಾಗಿ ದುಡಿಯುತ್ತಿರುವ ಹಮಾಲಿ ಕಾರ್ಮಿಕರಿಗೆ ವೇತನ ಹೆಚ್ಚಿಸಲು ನಿಯಮ ರೂಪಿಸಬೇಕು, ದುಡಿಮೆಯ ಅವಧಿಯನ್ನು 12ರಿಂದ 8 ಗಂಟೆಗೆ ಇಳಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ಲೋಡಿಂಗ್, ಅನ್ ಲೋಡಿಂಗ್ ಕಾರ್ಮಿಕರ ಒಕ್ಕೂಟವು ಸೋಮವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಶ್ರಮಿಕರ ಹಕ್ಕೊತ್ತಾಯ ಸಮಾವೇಶ ನಡೆಸಿತು.

ಸರ್ಕಾರ ನಿಗದಿ ಮಾಡಿದ ವೇತನ, ಇಎಸ್‌ಐ, ಪಿಎಫ್‌ಗಳನ್ನು ಗುತ್ತಿಗೆದಾರ ಸಂಸ್ಥೆಗಳು ನೀಡುತ್ತಿಲ್ಲ. ಹಾಗಾಗಿ ಗುತ್ತಿಗೆ ಪದ್ಧತಿ ರದ್ದು ಮಾಡಬೇಕು. ನೇರ ವೇತನ ಪಾವತಿ ಮಾಡಬೇಕು. ಕನಿಷ್ಠ 30,000 ವೇತನ ನೀಡಬೇಕು. ನಿವೃತ್ತಿಯ ವಯಸ್ಸಿನವರೆಗೆ ಕೆಲಸದಿಂದ ತೆಗೆಯಬಾರದು. ಹಮಾಲಿ ಕಾರ್ಮಿಕರ ಕಲ್ಯಾಣ ಮಂಡಳಿ ಸ್ಥಾಪನೆ ಮಾಡಬೇಕು ಎಂದು ಹಕ್ಕೊತ್ತಾಯ ಮಂಡಿಸಲಾಯಿತು.

ಅನ್ನಭಾಗ್ಯ ಯೋಜನೆಯಡಿ ಹೆಚ್ಚುವರಿ 5 ಕೆ.ಜಿ. ಅಕ್ಕಿ ಬದಲಿಗೆ ನಗದು ಹಣ ನೀಡುವುದನ್ನು ನಿಲ್ಲಿಸಬೇಕು. ರಾಜ್ಯದಲ್ಲಿ ಆಹಾರ ಧಾನ್ಯಗಳನ್ನು ಸಂಗ್ರಹಿಸಿ ನೀಡುವಂತೆ ಒತ್ತಾಯಿಸಲಾಯಿತು.

ಸಮಾವೇಶ ಉದ್ಘಾಟಿಸಿದ ಹೈಕೋರ್ಟ್ ವಕೀಲ ಬಾಲನ್ ಮಾತನಾಡಿ, ‘2000ನೇ ಇಸವಿಯಲ್ಲಿ ಗುತ್ತಿಗೆ ಪದ್ಧತಿಯನ್ನು ಕೇಂದ್ರ ಸರ್ಕಾರ ಜಾರಿ ಮಾಡಿ ಕಾರ್ಮಿಕರ ಬಾಯಿಗೆ ಮಣ್ಣು ಹಾಕಿತು. ಈಗಿನ ಕೇಂದ್ರ ಸರ್ಕಾರ ನಾಲ್ಕು ಕೋಡ್‌ಗಳನ್ನು ತಂದು ಕಾರ್ಮಿಕರ ಹಕ್ಕುಗಳನ್ನು ಕಿತ್ತುಕೊಂಡಿದೆ’ ಎಂದು ಆಕ್ರೋಶ ವಕ್ತಪಡಿಸಿದರು.

ಸಾಮಾಜಿಕ ಹೋರಾಟಗಾರ ಡಾ.ವಾಸು ಎಚ್.ವಿ. ಮಾತನಾಡಿ, ‘ಬಡವರ ಮತಗಳನ್ನೇ ಅಧಿಕ ಪಡೆದು ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿದೆ. ಬಡವರ ಪರವಾಗಿ ಕೆಲಸ ಮಾಡಿದರೆ ಇದನ್ನು ಜನಪರ ಇರುವ ಜನಪ್ರತಿನಿಧಿಗಳು ಎಂದು ಕರೆಯಬಹುದು. ಈ ಸರ್ಕಾರವೂ ಬಡವರ ಪರ ನಿಲ್ಲದೇ 12 ಗಂಟೆಯ ಕೆಲಸದ ಅವಧಿಯನ್ನು ಮುಂದುವರಿಸಿದರೆ, ಗುತ್ತಿಗೆ ಪದ್ಧತಿಯನ್ನು ಮುಂದುವರಿಸಿದರೆ ಇವರು ಜನಪ್ರತಿನಿಧಿಗಳಲ್ಲ ಗುತ್ತಿಗೆದಾರರು ಎಂಬುದು ಸಾಬೀತಾಗಲಿದೆ’ ಎಂದು ಎಚ್ಚರಿಸಿದರು.

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಚಿವ ಕೆ.ಎಚ್. ಮುನಿಯಪ್ಪ ಬಂದು ಕಾರ್ಮಿಕರ ಅಹವಾಲುಗಳನ್ನು ಆಲಿಸಿದರು. ಬೇಡಿಕೆಗಳಿಗೆ ಸ್ಪಂದಿಸುವುದಾಗಿ ಭರವಸೆ ನೀಡಿದರು.

ಎಂಎಎಸ್‌ಎ ಸಂಯೋಜಕಿ ಸುಷ್ಮಾ ವರ್ಮಾ, ಜೆಸಿಟಿಯು ರಾಜ್ಯ ಸಂಚಾಲಕ ಕೆ.ವಿ. ಭಟ್, ರಾಜ್ಯ ರೈತ ಸಂಘದ ಉಪಾಧ್ಯಕ್ಷ ವೀರಸಂಗಯ್ಯ, ಕರ್ನಾಟಕ ಜನಶಕ್ತಿ ಗೌರವಾಧ್ಯಕ್ಷೆ ಗೌರಿ, ಕರ್ನಾಟಕ ಶ್ರಮಿಕ ಶಕ್ತಿ ಅಧ್ಯಕ್ಷ ವರದರಾಜೇಂದ್ರ, ಮಹಿಳಾ ಮುನ್ನಡೆ ರಾಜ್ಯ ಸಂಚಾಲಕಿ ಪೂರ್ಣಿಮಾ ಮಾತನಾಡಿದರು.

## ಸ್ಥಿರತೆ ಕಾಯ್ದುಕೊಂಡ ಟೊಮೆಟೊ, ತುಟ್ಟಿಯಾದ ಮೆಣಸಿನಕಾಯಿ

# ಕೆ.ಜಿ ಶುಂಠಿ ₹280, ಬಟಾಣಿ ₹180

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಳೆ ಕೊರತೆಯಿಂದ ಇಳುವರಿ ಕುಂಠಿತವಾಗಿ ತರಕಾರಿ ಮತ್ತು ಸೊಪ್ಪಿನ ದರಗಳು ದುಪ್ಪಟ್ಟಾಗಿದ್ದು, ಪ್ರತಿ ಕೆ.ಜಿ ಶುಂಠಿ ₹280, ಬಟಾಣಿ ₹180, ಟೊಮೊಟೊ ₹80-100ರಂತೆ ಮಾರಾಟವಾಗುತ್ತಿದೆ.

ಗಗನಕ್ಕೇರಿರುವ ಶುಂಠಿಯ ದರ ಇನ್ನೂ ಇಳಿಕೆಯಾಗಿಲ್ಲ. ಕೆ.ಜಿಗೆ ₹250 ರಿಂದ ₹280ರವರೆಗೂ ಮಾರಾಟವಾಗುತ್ತಿದೆ. ಇದರಿಂದ, ಹೋಟೆಲ್ ಉದ್ಯಮಕ್ಕೆ ಶುಂಠಿ ದರ ಏರಿಕೆ ಬಿಸಿ ತಟ್ಟಿದೆ.

‘ಶುಂಠಿ ಬೆಳೆ ನಾಶ, ರೋಗ ಬಾಧೆ, ಇಳುವರಿ ಕುಸಿತ ದರ ಏರಿಕೆಗೆ ಮುಖ್ಯ ಕಾರಣ. ಮಾರುಕಟ್ಟೆಗೆ ಹೊಸದಾಗಿ ಶುಂಠಿ ಪೂರೈಕೆಯಾದರೆ ಮಾತ್ರ ಬೆಲೆ ಇಳಿಕೆಯಾಗುತ್ತದೆ’ ಎಂದು ವ್ಯಾಪಾರಿ ಇಮ್ರಾನ್ ತಿಳಿಸಿದರು.

**ಇಳಿಯದ ಟೊಮೆಟೊ ದರ:** ಕಳೆದ ವಾರ ಕೆ.ಜಿ.ಗೆ ₹100ರಿಂದ ₹120ಕ್ಕೆ ಮಾರಾಟವಾಗಿದ್ದ ಟೊಮೆಟೊ ದರ ಈ ವಾರವೂ ಬಹುತೇಕ ಸ್ಥಿರತೆ ಕಾಯ್ದುಕೊಂಡಿದೆ. ಚಿಲ್ಲರೆ ಮಾರುಕಟ್ಟೆಯಲ್ಲಿ ಕೆ.ಜಿ.ಗೆ ₹85 ರಿಂದ ₹100ರವರೆಗೆ ಮಾರಾಟವಾಯಿತು. ಕೋಲಾರ ಹಾಗೂ ಚಿಕ್ಕಬಳ್ಳಾಪುರದಿಂದ ಟೊಮೊಟೊ ನಗರಕ್ಕೆ ಬರುತ್ತದೆ. ಅಲ್ಲಿನ ಮಾರುಕಟ್ಟೆಗಳಲ್ಲೂ ಪ್ರತಿ ಕೆ.ಜಿಗೆ ₹80ರಂತೆ ಮಾರಾಟವಾಗುತ್ತಿದೆ. ಅದು ನಗರಕ್ಕೆ ಬಂದಾಗ ಬೆಲೆ ಇನ್ನೂ ಹೆಚ್ಚಾಗುತ್ತದೆ.

‘ಕೆ.ಆರ್. ಮಾರುಕಟ್ಟೆಯಲ್ಲಿ ಸೋಮವಾರ ಕೆ.ಜಿ ನುಗ್ಗೆಕಾಯಿಗೆ ₹180, ಮೆಣಸಿನಕಾಯಿ ₹120ರಿಂದ ₹150 ದರ ಇದ್ದರೆ, ಪಡವಲಕಾಯಿ 120, ಬೀನ್ಸ್ ₹80, ಕ್ಯಾರೆಟ್ ಮತ್ತು ಬದನೆಕಾಯಿ 60ರಂತೆ ಮಾರಾಟವಾಗುತ್ತಿದೆ. ಕೆಲವು ಕಡೆ ಮಳೆ ಕೊರತೆ ಇದ್ದರೆ, ಕೆಲವು ಕಡೆ ಅತಿಯಾದ ಮಳೆಯಿಂದಾಗಿ ತರಕಾರಿ ಬೆಳೆ ಹಾಳಾಗಿದೆ. ಬೆಂಗಳೂರು ನಗರಕ್ಕೆ ಬಹುತೇಕ ಹೊರ ರಾಜ್ಯ ಮತ್ತು ಜಿಲ್ಲೆಗಳಿಂದ ತರಕಾರಿ ಪೂರೈಕೆಯಾಗುತ್ತದೆ. ಆಯಾ ಪ್ರದೇಶಗಳ ಸ್ಥಿತಿಗತಿಗಳ ಆಧಾರದ ಮೇಲೆ ಬೆಲೆಗಳನ್ನು ನಿಗದಿಪಡಿಸಲಾಗುತ್ತದೆ’ ಎಂದು ವ್ಯಾಪಾರಿ ಅಕ್ರಂ, ಸುಭಾಸ್ ತಿಳಿಸಿದರು.

**ಸೊಪ್ಪಿನ ದರ ಕಡಿಮೆ:** ಕಳೆದ ವಾರ ಒಂದು ಕಟ್ಟಿಗೆ ₹40ರಂತೆ ಮಾರಾಟವಾಗುತ್ತಿದ್ದ ಕೊತ್ತಂಬರಿ, ಸದ್ಯ ₹20ರಂತೆ, ಮೆಂತೆ, ಸಬ್ಬಸ್ಸಿಗೆ ಪ್ರತಿ ಕಟ್ಟಿಗೆ ₹15ರಂತೆ ಮಾರಾಟವಾಗುತ್ತಿವೆ.

## ಹೆದ್ದಾರಿಯಲ್ಲಿ ಟೊಮೆಟೊ ಸಹಿತ ವಾಹನವನ್ನೇ ಕದ್ದೊಯ್ದ ಕಳ್ಳರು!

**ಬೆಂಗಳೂರು:** ನಗರದ ತುಮಕೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಟೊಮೆಟೊ ತುಂಬಿದ ಬೊಲೆರೊ ವಾಹನವನ್ನೇ ಮೂವರು ಕದ್ದೊಯ್ದಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ರೇಣುಕಾಪುರದ ಶಿವಣ್ಣ ಅವರ ವಾಹನದಲ್ಲಿ ಹಿರಿಯೂರಿನ ಮಲ್ಲೇಶ್ ಎಂಬುವವರು ಕೋಲಾರದ ಎಪಿಎಂಸಿಗೆ ಟೊಮೆಟೊ ಮಾರಾಟಕ್ಕೆ ಕೊಂಡೊಯ್ಯುತ್ತಿದ್ದರು. ವಾಹನ ಹಿಂಬಾಲಿಸಿಕೊಂಡು ಜೈಲೊ ವಾಹನದಲ್ಲಿ ಬಂದ ಮೂವರು, 210 ಟ್ರೇ ಟೊಮೆಟೊ ಸಹಿತ ವಾಹನವನ್ನು ಕಳವು ಮಾಡಿದ್ದಾರೆ. ಟೊಮೆಟೊ ಮೌಲ್ಯ ₹ 1.50 ಲಕ್ಷ ಎಂದು ಅಂದಾಜಿಸಲಾಗಿದೆ.

ನಗರದ ಆರ್.ಎಂ.ಸಿ. ಯಾರ್ಡ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಿದ್ದಾರೆ.

‘ಬೊಲೆರೊ ವಾಹನವನ್ನು ಮಾರ್ಗದುದ್ದಕ್ಕೂ ಹಿಂಬಾಲಿಸಿಕೊಂಡು ಬಂದಿದ್ದರು. ಮಾರ್ಗ ಮಧ್ಯದಲ್ಲಿ ಹೆಬ್ಬಾಳ ಕಡೆಗೆ ತೆರಳುವ ಮಾರ್ಗದಲ್ಲಿ ಟೀ ಕುಡಿಯಲು ವಾಹನ ನಿಲುಗಡೆ ಮಾಡಿದ್ದೆವು. ಅಲ್ಲಿಯೂ ಮೂವರು ಅನುಮಾನಸ್ಪದವಾಗಿ ಓಡಾಟ ನಡೆಸಿದ್ದರು. ಮಾರ್ಗ ಮಧ್ಯದಲ್ಲಿ ನಮ್ಮ ವಾಹನ ಅಡ್ಡಗಟ್ಟಿ, ಜೈಲೊ ವಾಹನಕ್ಕೆ ತಾಗಿಸಿದ್ದೀರಿ ಎಂದು ನಾಟಕವಾಡಿ ₹ 15 ಸಾವಿರ ನೀಡುವಂತೆ ರೈತ ಮಲ್ಲೇಶ್ ಅವರನ್ನು ಒತ್ತಾಯಿಸಿದ್ದರು. ಅವರ ಬಳಿ ಅಷ್ಟು ಹಣ ಇರಲಿಲ್ಲ. ಬಳಿಕ ವಾಹನದಲ್ಲಿ ಟೊಮೆಟೊ ಕಂಡು ಇಬ್ಬರು ನಮ್ಮ ವಾಹನ ಹತ್ತಿ ಅವರೇ ಚಲಾಯಿಸಿದರು. ಬಳಿಕ, ಚಿಕ್ಕಜಾಲದ ಸಮೀಪ ಇಳಿಸಿ ವಾಹನ ಸಹಿತ ಪರಾರಿಯಾದರು’ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

‘₹3.25 ಲಕ್ಷದ ವಾಹನ, ₹ 1.50 ಲಕ್ಷ ಮೌಲ್ಯದ ಟೊಮೆಟೊ, ಎರಡು ಮೊಬೈಲ್ ಕಳವು ಮಾಡಲಾಗಿದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲಿಸಲಾಗುತ್ತಿದೆ. ಆರೋಪಿಗಳ ಸುಳಿವು ಪತ್ತೆಯಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

### ಸೊಪ್ಪುಗಳ ಮಧ್ಯಮ ಗಾತ್ರದ ಕಟ್ಟಿನ ದರಗಳು

| | ಕಳೆದ ವಾರದ ದರ | ಈ ವಾರದ ದರ |
|---|---|---|
| ಕೊತ್ತಂಬರಿ | 40 | 20 |
| ಸಬ್ಬಸ್ಸಿಗೆ | 20 | 15 |
| ಮೆಂತೆ | 15 | 20 |
| ಪಾಲಕ್ | 10 | 10 |
| ಪುದಿನಾ | 10 | 10 |

(ಕೆ.ಆರ್. ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿಗೆ ₹ಗಳಲ್ಲಿ )

| ತರಕಾರಿ | ಕಳೆದ ವಾರದ ದರ | ಈ ವಾರದ ದರ | ತರಕಾರಿ | ಕಳೆದ ವಾರದ ದರ | ಈ ವಾರದ ದರ |
|---|---|---|---|---|---|
| ಶುಂಠಿ | 200 | 280 | ಆಲೂಗಡ್ಡೆ | 25 | 35 |
| ಬೆಳ್ಳುಳ್ಳಿ | 120 | 180 | ಈರುಳ್ಳಿ | 20 | 25 |
| ಬೀನ್ಸ್ | 100 | 80 | ಸೋರೆಕಾಯಿ | 50 | 60 |
| ಬಟಾಣಿ | 120 | 180 | ಪಡವಲಕಾಯಿ | 80 | 120 |
| ಕ್ಯಾರೆಟ್ | 100 | 60 | ನುಗ್ಗೆಕಾಯಿ | 100 | 180 |
| ಟೊಮೆಟೊ | 120 | 100 | ಬದನೆಕಾಯಿ | 60 | 60 |
| ಕ್ಯಾಪ್ಸಿಕಮ್ | 60 | 80 | ಹಾಗಲಕಾಯಿ | 60 | 60 |
| ಮೆಣಸಿನಕಾಯಿ | 80 | 120 | ತೊಂಡೆಕಾಯಿ | 60 | 40 |
| ಹೀರೇಕಾಯಿ | 60 | 60 | ಬೀಟ್‌ರೂಟ್ | 40 | 40 |
| ಬೆಂಡೇಕಾಯಿ | 40 | 50 | ಕುಂಬಳಕಾಯಿ | 50 | 60 |
| | | | ಎಲೆಕೋಸು | 30 | 30 |



# ಅಂಡರ್‌ಪಾಸ್ ದುರಸ್ತಿಗೆ ಮುಂದಾದ ರೈಲ್ವೆ

ಗೋಪಾಲಪುರ ರೈಲ್ವೆ ಅಂಡರ್‌ಪಾಸ್‌ನಲ್ಲಿ ನೀರು ತೆರವುಗೊಳಿಸಲಾಯಿತು (ಎಡ ಚಿತ್ರ). ಅಂಡರ್‌ಪಾಸ್‌ನ ಬಳಿ ಕಾಲುವೆ ನಿರ್ಮಾಣ ಮಾಡಲಾಯಿತು

ವರದಿ ಪರಿಣಾಮ

**ಹೆಸರಘಟ್ಟ:** ಗೋಪಾಲಪುರ ರೈಲ್ವೆ ಅಂಡರ್‌ಪಾಸ್‌ನ ದುರಸ್ತಿ ಕಾರ್ಯವನ್ನು ರೈಲ್ವೆ ಇಲಾಖೆ ಸೋಮವಾರ ಆರಂಭಿಸಿದೆ.

ರೈಲ್ವೆ ಅಂಡರ್‌ಪಾಸ್‌ನಲ್ಲಿ ನೀರು ನಿಲ್ಲುತ್ತಿರುವ ಕುರಿತು ‘ಪ್ರಜಾವಾಣಿ’ಯ ಜುಲೈ 8ರ ಸಂಚಿಕೆಯಲ್ಲಿ ‘ಅಂಡರ್ ಪಾಸ್: ಮಳೆಯಾದರೆ ಸಂಚಾರಕ್ಕೆ ಅಡ್ಡಿ’ ಎಂಬ ಶೀರ್ಷಿಕೆಯಡಿ ವರದಿ ಪ್ರಕಟಿಸಿತ್ತು. ವರದಿ ಗಮನಿಸಿದ ರೈಲ್ವೆ ಇಲಾಖೆ ಕ್ರಮ ಕೈಗೊಂಡಿದೆ.

ಅಂಡರ್ ಪಾಸ್‌ನಲ್ಲಿ ನಿಂತಿದ್ದ ನೀರನ್ನು ತೆರವುಗೊಳಿಸಿ ವಾಹನಗಳು ಮತ್ತು ಸಾರ್ವಜನಿಕರು ಮುಕ್ತವಾಗಿ ಓಡಾಡಲು ಅವಕಾಶ ಕಲ್ಪಿಸಲಾಗಿದೆ. ಅಂಡರ್‌ಪಾಸ್‌ನಿಂದ ನೀರು ಸರಾಗವಾಗಿ ಹರಿದು ಹೊರಗೆ ಹೋಗಲು, ಗೋಪಾಲಪುರ ಕೆರೆಯವರೆಗೆ 100 ಅಡಿ ಕಾಲುವೆ ನಿರ್ಮಾಣ ಮಾಡಲಾಗಿದೆ. ಪಕ್ಕದಲ್ಲಿದ್ದ ಪಾಳು ಬಿದ್ದಿದ್ದ ಪುರಾತನ ಕಲ್ಯಾಣಿಗೂ ನೀರು ಹರಿಯುವಂತೆ ವ್ಯವಸ್ಥೆ ಮಾಡುತ್ತಿದ್ದಾರೆ.

ಅಂಡರ್ ಪಾಸಿನ ಒಳಗೆ ನೀರು ಬರದಂತೆ ಇಕ್ಕೆಲಗಳಲ್ಲಿ ಹೂಳು ತುಂಬಿಕೊಂಡಿದ್ದ ಚರಂಡಿಗಳಲ್ಲಿ ಸ್ವಚ್ಛಗೊಳಿಸಲಾಗಿದೆ. ಸೋಮವಾರ ಕಾರ್ಯಪ್ರವೃತ್ತರಾದ ರೈಲ್ವೆ ಸಿಬ್ಬಂದಿ ಅಂಡರ್‌ಪಾಸ್‌ನಲ್ಲಿ ಬೆಳೆದಿದ್ದ ಕುರುಚಲು ಗಿಡಗಳನ್ನು ತೆರವುಗೊಳಿಸಿದರು.

‘ರೈತರು ಜಮೀನನ್ನು ಉಳುಮೆ ಮಾಡುವ ವೇಳೆ ಕಾಲುವೆ ಮುಚ್ಚಿ ಹೋಗಿತ್ತು. ಹೀಗಾಗಿ ನೀರು ಮುಂದೆ ಹೋಗದೆ ಅಂಡರ್‌ಪಾಸ್‌ನಲ್ಲೇ ಉಳಿಯುತ್ತಿತ್ತು. ಈಗ ನೀರು ಸರಾಗವಾಗಿ ಹರಿದು ಹೋಗುವಂತೆ ದುರಸ್ತಿ ಮಾಡಲಾಗಿದೆ’ ಎಂದು ರೈಲ್ವೆ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.


## ಮೆ. ವಿಸ್ಡಂ ಗ್ರೂಪ್ಸ್, ಬೆಂಗಳೂರು

ಹೊರಗುತ್ತಿಗೆ ಆಧಾರದ ಮೇಲೆ ಕೆ.ಎಸ್.ಆರ್.ಟಿ.ಸಿ ಬಸ್‌ಗಳಿಗೆ ಚಾಲಕರು ಬೇಕಾಗಿದ್ದಾರೆ. ಬೆಂಗಳೂರು, ರಾಮನಗರ, ಚಿಕ್ಕಬಳ್ಳಾಪುರ, ಮಂಗಳೂರು, ತುಮಕೂರು, ಶಿವಮೊಗ್ಗ ವಿಭಾಗಗಳಿಗೆ ಆಸಕ್ತಿಯಿರುವ ಅಭ್ಯರ್ಥಿಗಳು ಈ ಕೆಳಗೆ ನಮೂದಿಸಿರುವ ವಿಳಾಸ, ಇ–ಮೇಲ್‌ಅಥವಾ ವೆಬ್‌ಸೈಟ್ ಮುಖಾಂತರ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.

ಅಭ್ಯರ್ಥಿಗಳು ಸಲ್ಲಿಸಬೇಕಾದ ದಾಖಲಾತಿಗಳು.

1) ಕನಿಷ್ಠ 7ನೇ ತರಗತಿ ಪಾಸಾಗಿರಬೇಕು. 2) Heavy Badge ಮಾಡಿಸಿ ಕನಿಷ್ಟ 2 ವರ್ಷಗಳಾಗಿರಬೇಕು. 3) ವಯಸ್ಸಿನ ಮಿತಿ 55 ವರ್ಷ ಮೀರಿರಬಾರದು.

ವಿಸ್ಡಂ ಗ್ರೂಪ್ಸ್ ನಂ. 106, 40 ಅಡಿ ರಸ್ತೆ, ಮಂಜುನಾಥನಗರ, ಸಿಟಿ ಆಸ್ಪತ್ರೆ ಎದುರು, ವೆಸ್ಟ್ ಆಫ್ ಕಾರ್ಡ್‌ರೋಡ್, ಬೆಂಗಳೂರು – 560 010.
E-mail: wisdomgroups.kar.@gmail.com

Application Website link-
www.jobs.wisdomsecurity.in
ಮುಖಾಂತರ ಕೂಡ ಸಲ್ಲಿಸಬಹುದಾಗಿದೆ.

ಮೊ: 9945230211, 9535553075, 9019863627, 8296434555 7204907555
[ಕರೆ ಮಾಡಬೇಕಾದ ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 6–00 ಗಂಟೆಯವರೆಗೆ ಮಾತ್ರ]


# ‘ರಾಹುಲ್ ಪರ ಕಾಂಗ್ರೆಸ್ ಮೌನ ಪ್ರತಿಭಟನೆ ನಾಳೆ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ರಾಜಕೀಯ ಜೀವನ ಮುಗಿಸಲು ಬಿಜೆಪಿ ಷಡ್ಯಂತ್ರ ನಡೆಸುತ್ತಿದ್ದು, ಅದನ್ನು ಖಂಡಿಸಿ ಇದೇ 12ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆವರೆಗೆ ಸ್ವಾತಂತ್ರ್ಯ ಉದ್ಯಾನವನದಲ್ಲಿ ಮೌನ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ‘ದೇಶದ ಎಲ್ಲ ಪ್ರಮುಖ ಕೇಂದ್ರಗಳಲ್ಲಿ ಮೌನ ಪ್ರತಿಭಟನೆ ಹಮ್ಮಿಕೊಳ್ಳುವಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೂಚಿಸಿದ್ದಾರೆ. ಸ್ವಾತಂತ್ರ್ಯ ಉದ್ಯಾನವನದಲ್ಲಿ ನಡೆಯುವ ಪ್ರತಿಭಟನೆಯಲ್ಲಿ ಮುಖ್ಯಮಂತ್ರಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ಸಚಿವರು, ಸಂಸದರು, ಶಾಸಕರು, ಬ್ಲಾಕ್ ಕಾಂಗ್ರೆಸ್, ಮುಂಚೂಣಿ ಘಟಕದ ಅಧ್ಯಕ್ಷರು ಭಾಗವಹಿಸುತ್ತೇವೆ’ ಎಂದರು.

‘ರಾಜ್ಯದಲ್ಲಿ ರಾಹುಲ್ ಗಾಂಧಿ ಮಾಡಿದ್ದ ಭಾಷಣ ಮುಂದಿಟ್ಟುಕೊಂಡು ಅವರನ್ನು ರಾಜಕೀಯವಾಗಿ ಮುಗಿಸುವ ಷಡ್ಯಂತ್ರ ನಡೆಯುತ್ತಿದೆ. ದೇಶದ ಪರವಾಗಿ, ಸತ್ಯದ ಪರವಾಗಿ ಧ್ವನಿ ಎತ್ತುತ್ತಿರುವ ರಾಹುಲ್ ಗಾಂಧಿ ಅವರ ಪರವಾಗಿ ಇಡೀ ದೇಶ ಹಾಗೂ ವಿರೋಧ ಪಕ್ಷಗಳು ನಿಲ್ಲುವ ಸಂದೇಶ ರವಾನಿಸಬೇಕಾಗಿದೆ’ ಎಂದರು.

‘ಭಾರತ್ ಜೋಡೊ ಯಾತ್ರೆಯಲ್ಲಿ ಅವರಿಗೆ ಜನರಿಂದ ಸಿಕ್ಕಿದ ಪ್ರೀತಿ ವಿಶ್ವಾಸ, ಕರ್ನಾಟಕ ರಾಜ್ಯದಲ್ಲಿ ಅವರಿಗೆ ಸಿಕ್ಕಿದ ಯಶಸ್ಸು ಸಹಿಸಲಾಗದೆ ರಾತ್ರೋರಾತ್ರಿ ಅವರ ಸಂಸತ್ ಸದಸ್ಯತ್ವದಿಂದ ಅನರ್ಹಗೊಳಿಸಲಾಗಿದೆ. ಅವರ ಈ ಯಶಸ್ಸು, ಜನಪ್ರಿಯತೆ ಸಹಿಸಲಾಗದೇ ಬಿಜೆಪಿಯವರು ಈ ಷಡ್ಯಂತ್ರ ರೂಪಿಸಿದ್ದಾರೆ’ ಎಂದರು.

**ರಾಜ್ಯಕ್ಕೆ ಸೋನಿಯಾ?:** ‘ದೇಶದ ವಿರೋಧ ಪಕ್ಷಗಳ ನಾಯಕರ ಸಭೆ ಇದೇ 17- 18ರಂದು ಬೆಂಗಳೂರಿನಲ್ಲಿ ನಡೆಯಲಿದೆ. ಯುಪಿಎ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಈ ಸಭೆಯಲ್ಲಿ ಭಾಗವಹಿಸುವಂತೆ ಮಲ್ಲಿಕಾರ್ಜುನ ಖರ್ಗೆ ಆಹ್ವಾನಿಸಿದ್ದಾರೆ. ಅವರು ಭಾಗವಹಿಸುವ ಮಾಹಿತಿ ಬಂದಿದೆ’ ಎಂದರು.

ಜಾಲಿಮ್ ಲೋಷನ್® + ಗ್ರೀನ್ ಆಯಿಂಟ್ಮೆಂಟ್

ಈ ಜೋಡಿಯು ಗಜಕರ್ಣ, ಇಸಬು ಮತ್ತು ಗರಿಕಜ್ಜಿ ತುರಿಕೆಯಿಂದ ತಕ್ಷಣ ಆರಾಮ ನೀಡುತ್ತದೆ.

For Orders Scan QR Code

BUY ONLINE: www.zalimlotion.in amazon meesho Flipkart TATA 1mg

ANIL PUB.


## ನಗರದಲ್ಲಿ ಇಂದು

**ಹವಾಮಾನ ಬದಲಾವಣೆ ಕುರಿತ ರಾಜ್ಯಮಟ್ಟದ ಕಾರ್ಯಾಗಾರ:** ಕಾರ್ತಿಕೇಯ ವಿಕ್ರಂ ಸಾರಾಭಾಯಿ, ಅತಿಥಿಗಳು: ಉಷಾ ಸುಬ್ರಮಣಿಯನ್, ಕಾವ್ಯ ಆರ್., ಶ್ರೀನಿವಾಸಲು, ಆಯೋಜನೆ: ಸೆಂಟರ್ ಫಾರ್ ಎನ್ವಿರಾನ್‌ಮೆಂಟ್ ಎಜುಕೇಷನ್, ಸ್ಥಳ: ರೆಜಿಂಟಾ ಪ್ಯಾಲೆಸ್, ಕನ್ನಿಂಗಹ್ಯಾಮ್, ಇಂಡಿಯನ್ ಎಕ್ಸ್‌ಪ್ರೆಸ್ ವೃತ್ತದ ಹತ್ತಿರ, ಬೆಳಿಗ್ಗೆ 10ರಿಂದ

**‘ಸ್ಪೆಕ್ಟ್ರಮ್’ ಪತ್ರಿಕೆ ಬಿಡುಗಡೆ ಮತ್ತು ‘ಸಾಮಾಜಿಕ ಮಾಧ್ಯಮ ಮತ್ತು ಸಾಂಸ್ಕೃತಿಕ ಬದಲಾವಣೆ’ ಕುರಿತ ಉಪನ್ಯಾಸ:** ಬಿ.ಕೆ. ರವಿ, ಅಧ್ಯಕ್ಷತೆ: ಎಚ್.ಎನ್. ಸುಬ್ರಹ್ಮಣ್ಯ, ಅತಿಥಿಗಳು: ವೈ.ಜಿ. ಮಧುಸೂದನ್, ಬಿ.ಎಸ್. ಅರುಣ್ ಕುಮಾರ್, ಮಂಜುನಾಥ್, ಪಿ.ಎಲ್. ವೆಂಕಟರಾಮ ರೆಡ್ಡಿ, ವಿ. ವೆಂಕಟಶಿವ ರೆಡ್ಡಿ, ತಲ್ಲಂ ಆರ್. ದ್ವಾರಕಾನಾಥ್, ಸುಧಾಕರ್ ಈಸ್ತೂರಿ, ಜಿ.ಎಂ. ರವೀಂದ್ರ, ಆಯೋಜನೆ ಮತ್ತು ಸ್ಥಳ: ದಿ ನ್ಯಾಷನಲ್ ಕಾಲೇಜಿನ ಪತ್ರಿಕೋದ್ಯಮ ವಿಭಾಗ, ಜಯನಗರ, ಬೆಳಿಗ್ಗೆ 11

**ವಿಶ್ವ ಜನಸಂಖ್ಯಾ ದಿನ:** ಉದ್ಘಾಟನೆ: ದಿನೇಶ್ ಗುಂಡೂರಾವ್, ಅಧ್ಯಕ್ಷತೆ: ಅನಿಲ್ ಕುಮಾರ್ ಟಿ.ಕೆ., ಅತಿಥಿಗಳು: ರಂದೀಪ್, ನವೀನ್ ಭಟ್ ವೈ, ಎಂ. ಇಂದುಮತಿ, ಪುಷ್ಪಲತಾ, ಆಯೋಜನೆ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸ್ಥಳ: ಆರೋಗ್ಯ ಸೌಧ ಮಾಗಡಿ ರಸ್ತೆ, ಬೆಳಿಗ್ಗೆ 11

**ಚಾತುರ್ಮಾಸ್ಯ ಯತಿ ಸಮ್ಮೇಳನ:** ನಿರ್ಭಯಾನಂದ ಸ್ವಾಮೀಜಿ, ಸ್ವಾಮಿ ವಿರೇಶಾನಂದ ಸ್ವಾಮೀಜಿ, ಸ್ವಾಮಿ ಯೋಗೇಶ್ವರನಂದ, ಸ್ವಾಮಿ ಮಹೇಶ್ವರನಂದ, ಸ್ವಾಮಿ ಪ್ರಕೇಶಾನಂದ, ಸ್ವಾಮಿ ಅಭಯಾನಂದ, ಸ್ವಾಮಿ ಶಾಂತನಂದ, ಸ್ವಾಮಿ ಸದಾನಂದ, ಸ್ವಾಮಿ ವಿಜಯಾನಂದ, ಆಯೋಜನೆ: ಆದಿಶಂಕರಾಚಾರ್ಯ ಶಾರದಾ ಲಕ್ಷ್ಮಿನರಸಿಂಹ ಪೀಠ, ಸ್ಥಳ: ಹಿಂದೂ ಸಾದರ ಕ್ಷೇಮಾಭಿವೃದ್ಧಿ ಸಂಘ, ಮಹಾಲಕ್ಷ್ಮಿ ಲೇಔಟ, ಬೆಳಿಗ್ಗೆ 11

**ಅಪೊಲೋ ಕ್ರಾಡ್ಲ್ ಆ್ಯಂಡ್ ಚಿಲ್ಡ್ರನ್ ಹಾಸ್ಪಿಟಲ್ ಉದ್ಘಾಟನೆ:** ಶ್ರೀರಾಮ್ ಐಯ್ಯರ್, ಅತಿಥಿ: ಸಪ್ತಮಿ ಗೌಡ, ಆಯೋಜನೆ: ಅಪೊಲೋ ಕ್ರಾಡ್ಲ್ ಆ್ಯಂಡ್ ಚಿಲ್ಡ್ರನ್ ಹಾಸ್ಪಿಟಲ್, ರಾಜಾಜಿನಗರ 2ನೇ ಹಂತ, ಬೆಳಿಗ್ಗೆ 10

ಸಪ್ತಮಿ ಗೌಡ

**40ನೇ ಅಂತರ ವಿಭಾಗ ನಾಟಕ ಸ್ಪರ್ಧೆ–2023:** ಉದ್ಘಾಟನೆ: ರಾಜೇಂದ್ರ ಕಾರಂತ, ಅಧ್ಯಕ್ಷತೆ: ಸುಂದರ್ ರಾಜ್, ಅತಿಥಿ: ಅನಿಲ್ ಟಿ. ಸೋಗಿ, ‘ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್’ ನಾಟಕ ಪ್ರದರ್ಶನ, ಆಯೋಜನೆ: ಕನ್ನಡ ಸಾಹಿತ್ಯ ಕೂಟ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 5.30

**ಪ್ರವಚನ ವಾಹಿನಿ:** ‘ಭಗವಂತ ಮತ್ತು ಭಕ್ತನ ಅವಿನಾಭಾವ ಸಂಬಂಧ’ ಕುರಿತ ಉಪನ್ಯಾಸ: ವೀಣಾ ನಾಗರಾಜ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30


आज़ादी का अमृत महोत्सव

## ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

(“ವಿ ಟಿ ಯು ಅಧಿನಿಯಮ 1994” ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ)
“ಜ್ಞಾನ ಸಂಗಮ”, ಬೆಳಗಾವಿ – 590 018, ಕರ್ನಾಟಕ ರಾಜ್ಯ ಫೋನ್: (0831)2405468 ಫ್ಯಾಕ್ಸ್: (0831)2405467

ಉಲ್ಲೇಖ : ವಿತಾವಿ/ಆ.ಸ./2023–24/1890 ದಿನಾಂಕ : 10–07–2023

### ಅಧಿಸೂಚನೆ

ವಿಷಯ :ವಿ.ತಾ.ವಿ.ಯ ಇಪ್ಪತ್ಮೂರನೇಯ ವಾರ್ಷಿಕ ಘಟಿಕೋತ್ಸವ ಸಮಾರಂಭ – ಪದವಿ (UG) ಹಾಗೂ ಪಿಹೆಚ್.ಡಿ. ಪದವಿ ಪ್ರದಾನ

ಮೇಲ್ಕಾಣಿಸಿದ ವಿಷಯದನ್ವಯ, ಈ ಮೂಲಕ ತಿಳಿಸುವುದೇನೆಂದರೆ, ಪದವಿ (UG) ಹಾಗೂ ಪಿಹೆಚ್.ಡಿ. ಪದವಿ ಪ್ರದಾನ ಮಾಡಲು ವಿ.ತಾ.ವಿ.ಯ ಇಪ್ಪತ್ಮೂರನೇಯ ಘಟಿಕೋತ್ಸವ ಸಮಾರಂಭವು ಮಂಗಳವಾರ, ದಿನಾಂಕ 01 ಆಗಸ್ಟ್, 2023ರಂದು, ಪೂರ್ವಾಹ್ನ 11–30 ಗಂಟೆಗೆ ವಿ.ತಾ.ವಿ.ಯ ಡಾ. ಎ.ಪಿ.ಜೆ. ಅಬ್ದುಲ್ ಕಲಾಮ್ ಪ್ರೇಕ್ಷಾಗೃಹ, “ಜ್ಞಾನ ಸಂಗಮ”, ಬೆಳಗಾವಿಯಲ್ಲಿ ಏರ್ಪಡಿಸಲಾಗಿದೆ. ಮೇಲೆ ಉಲ್ಲೇಖಿತ ಪದವಿಗಳಿಗೆ ಅರ್ಹ ಅಭ್ಯರ್ಥಿಗಳನ್ನು ಈ ಮೂಲಕ ಘಟಿಕೋತ್ಸವದಲ್ಲಿ ಪಾಲ್ಗೊಳ್ಳಲು ಆಹ್ವಾನಿಸಲಾಗಿದೆ.

ಈ ಘಟಿಕೋತ್ಸವ ಸಮಾರಂಭದಲ್ಲಿ 2022–23ನೇ ಸಾಲಿನ ಪದವಿ(UG) ವಿಭಾಗದಲ್ಲಿ ಸುವರ್ಣ ಪದಕ ವಿಜೇತರಿಗೆ ಹಾಗೂ ರ‍್ಯಾಂಕ ವಿಜೇತರಿಗೆ ಮತ್ತು ಪಿಹೆಚ್.ಡಿ. ಪದವಿಗೆ ಅರ್ಹತೆ ಪಡೆದಿರುವ ಅಭ್ಯರ್ಥಿಗಳಿಗೆ ಮಾತ್ರ ಪದವಿ ಪ್ರದಾನ ಮಾಡಲಾಗುವುದು.

:ಅಭ್ಯರ್ಥಿಗಳು ಈ ಕೆಳಗಿನವುಗಳನ್ನು ಗಮನಿಸಬೇಕು:

* ವಿಶ್ವವಿದ್ಯಾಲಯದ ವೆಬ್ ಸೈಟಿನಲ್ಲಿ ತಿಳಿಸಿರುವಂತೆ ಶುಭ್ರವಾದ ಬಿಳಿಬಟ್ಟೆಗಳನ್ನು ಧರಿಸಿಕೊಂಡು ಪ್ರೇಕ್ಷಾಗೃಹದಲ್ಲಿ ಹಾಜರಿರಬೇಕು
* ಘಟಿಕೋತ್ಸವ ಸಮಾರಂಭವು ಪ್ರಾರಂಭವಾಗುವುದಕ್ಕಿಂತ ಅರ್ಧಘಂಟೆ ಮುಂಚಿತವಾಗಿ ಪ್ರೇಕ್ಷಾಗೃಹದಲ್ಲಿ ಹಾಜರಿದ್ದು ತಮ್ಮ ಆಸನಗಳಲ್ಲಿ ಕುಳಿತುಕೊಳ್ಳಬೇಕು
* ಶೀತ, ಕೆಮ್ಮು, ಜ್ವರ ಮುಂತಾದ ಲಕ್ಷಣಗಳು ಕಂಡುಬಂದಲ್ಲಿ ಈ ಘಟಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳದಿರುವುದು
* ಸನ್ಮಾನ್ಯ ರಾಜ್ಯಪಾಲರು ಹಾಗೂ ಕುಲಾಧಿಪತಿಗಳು ಮತ್ತು ಇತರ ಗಣ್ಯರು ಸಭಾಂಗಣವನ್ನು ಪ್ರವೇಶಿಸುತ್ತಿದ್ದಂತೆ ಹಾಗೂ ಆಸೀನರಾಗುವವರೆಗೆ ಎಲ್ಲರೂ ಎದ್ದು ನಿಂತು ಗೌರವ ಸೂಚಿಸಬೇಕು
* ಘಟಿಕೋತ್ಸವ ಸಮಾರಂಭವು ಪೂರ್ತಿ ಮುಗಿಯುವವರೆಗೆ ಶಾಂತತೆಯನ್ನು ಮತ್ತು ಶಿಸ್ತನ್ನು ಕಾಪಾಡಿಕೊಳ್ಳಬೇಕು
* ಸಭಾಂಗಣದಲ್ಲಿ ಮೊಬೈಲ್‌ಫೋನ್ ಚಾಲನೆಯಲ್ಲಿಡಬಾರದು
* ಘಟಿಕೋತ್ಸವ ಮುಗಿದಮೇಲೆ ಮೆರವಣಿಗೆಯು ಸಭಾಂಗಣವನ್ನು ಬಿಟ್ಟು ತೆರಳುವವರೆಗೆ ಎಲ್ಲರೂ ತಮ್ಮ ಸ್ಥಳಗಳಲ್ಲಿಯೇ ದಯವಿಟ್ಟು ಎದ್ದು ನಿಂತಿರಬೇಕು
* ಕುಲಸಚಿವರು(ಪರಿಕ್ಷಾಂಗ) ಇವರು ಘಟಿಕೋತ್ಸವದಲ್ಲಿ ಪಾಲ್ಗೊಳ್ಳುವ ಸಂಬಂಧವಾಗಿ ನೀಡುವ ನಿರ್ದೇಶನವನ್ನು ಪಾಲಿಸುವುದು

ಪದವಿ ಪ್ರಮಾಣ ಪತ್ರಗಳನ್ನು ವೈಯಕ್ತಿಕವಾಗಿ ಪಡೆಯಬಯಸುವ ಇತರ ಅಭ್ಯರ್ಥಿಗಳು ಮಾರನೇಯ ದಿನ, ಅಂದರೆ ದಿ:02–08–2023 ರಂದು ಕಛೇರಿ ಸಮಯದಲ್ಲಿ, ಕಾಲೇಜಿನಿಂದ ಕೊಡಲ್ಪಟ್ಟ ಗುರುತಿನಚೀಟಿಯನ್ನು ತೋರಿಸಿ ಪರೀಕ್ಷಾ ವಿಭಾಗದಿಂದ ಪಡೆದುಕೊಳ್ಳಬಹುದು. ಉಳಿದವರಿಗೆ ಪದವಿ ಪ್ರಮಾಣ ಪತ್ರಗಳನ್ನು ಘಟಿಕೋತ್ಸವದ ನಂತರ ಆಯಾ ಕಾಲೇಜುಗಳಿಗೆ ಕಳುಹಿಸಿಕೊಡಲಾಗುವುದು.

ಆಜ್ಞೆಯ ಮೇರೆಗೆ
(ಡಾ.ಬಿ. ಈ. ರಂಗಸ್ವಾಮಿ)
ಕುಲಸಚಿವರು

## ಪಾದಚಾರಿ ಮಾರ್ಗ ಒತ್ತುವರಿ ತೆರವು

**ಬೆಂಗಳೂರು:** ಬಿಬಿಎಂಪಿ ಯಲಹಂಕ ವಲಯ ಕೆಂಪೇಗೌಡ ವಾರ್ಡ್ ವ್ಯಾಪ್ತಿಯಲ್ಲಿನ ರೈತರ ಸಂತೆಯಿಂದ ಜಕ್ಕೂರು ಮುಖ್ಯರಸ್ತೆಯವರೆಗೆ ಪಾದಚಾರಿ ಮಾರ್ಗದಲ್ಲಿನ ಒತ್ತುವರಿ ತೆರವು ಮಾಡಲಾಯಿತು.

ವಲಯ ಜಂಟಿ ಆಯುಕ್ತೆ ಪೂರ್ಣಿಮಾ ನೇತೃತ್ವದಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆಯನ್ನು ನಡೆಸಲಾಯಿತು. ಅಂಗಡಿ, ಅನುಪಯುಕ್ತ ತಳ್ಳುವ ಗಾಡಿಗಳು, ಹಣ್ಣಿನ ಬಾಕ್ಸ್‌ಗಳನ್ನು ತೆರವುಗೊಳಿಸಲಾಯಿತು.

ಬ್ಯಾನರ್, ಬಂಟಿಂಗ್ಸ್, ಅಂಗಡಿ ಮುಂಭಾಗದಲ್ಲಿನ ಶೀಟ್‌ಗಳನ್ನು ತೆರವುಗೊಳಿಸಲಾಗಿದೆ. ಜತೆಗೆ ಪಾದಚಾರಿ ಮಾರ್ಗದಲ್ಲಿರುವ ಗಿಡಗಳ ರೆಂಬೆಗಳ ಕಟಾವು ಮಾಡಿ ಪಾದಚಾರಿಗಳ ಸುಗಮ ಓಡಾಟಕ್ಕೆ ಅನುವು ಮಾಡಲಾಗಿದೆ. ಜೆಸಿಬಿ, ಗ್ಯಾಂಗ್ ಮ್ಯಾನ್‌ಗಳನ್ನು ಬಳಸಿಕೊಂಡು ಸ್ವಚ್ಛತಾ ಕಾರ್ಯ ನಡೆಸಲಾಯಿತು. ಟ್ರ್ಯಾಕ್ಟರ್ ಹಾಗೂ ಕಾಂಪ್ಯಾಕ್ಟರ್ ನಲ್ಲಿ ತ್ಯಾಜ್ಯವನ್ನು ತೆರವುಗೊಳಿಸಲಾಗಿದೆ.

**ಎಲ್ಲೆಡೆ ತೆರವು:** ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡು ವ್ಯಾಪಾರ ಮಾಡುತ್ತಿದ್ದವರಿಗೆ ಇನ್ನು ಮುಂದೆ ಒತ್ತುವರಿ ಮಾಡದಂತೆ ಎಚ್ಚರಿಕೆ ನೀಡಬೇಕು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ಎಲ್ಲಾ ವಾರ್ಡ್‌ಗಳಲ್ಲೂ ಪಾದಚಾರಿ ಮಾರ್ಗಗಳ ಒತ್ತುವರಿ ಸೇರಿದಂತೆ ಸಂಪೂರ್ಣ ಸ್ವಚ್ಛತೆ ಕಾಪಾಡಬೇಕು. ಹಾಳಾಗಿರುವ ಸ್ಲ್ಯಾಬ್‌ಗಳು ಹಾಗೂ ಕಿತ್ತು ಬಂದಿರುವ ಕರ್ಬ್ ಸ್ಟೋನ್‌ಗಳನ್ನು ಕೂಡಲೇ ಸರಿಪಡಿಸಲು ಹೇಳಿದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಎರಡನೇ ಘಟಿಕೋತ್ಸವದಲ್ಲಿ ಡಾ.ಸಿ.ಎನ್. ಮಂಜುನಾಥ್

# ‘ವಿ.ವಿಗಳಲ್ಲಿ ಸಂಶೋಧನೆಗೆ ಹಿನ್ನಡೆ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಅನುದಾನದ ಕೊರತೆಯಿಂದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಗೆ ಹಿನ್ನಡೆಯಾಗಿದೆ’ ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಹೇಳಿದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಎರಡನೇ ವಾರ್ಷಿಕ ಘಟಿಕೋತ್ಸವದಲ್ಲಿ ಭಾಷಣ ಮಾಡಿದ ಅವರು, ‘ಸಂಶೋಧನಾ ಚಟುವಟಿಕೆಗಳಿಗೆ ರಾಜ್ಯ ಸರ್ಕಾರ ಮತ್ತು ಯುಜಿಸಿ ಅನುದಾನ ಬಿಡುಗಡೆಗೆ ಹಿಂದೇಟು ಹಾಕಬಾರದು. ಸಂಶೋಧನೆ ಇಲ್ಲದೆಯೇ ಪ್ರಗತಿ ಅಸಾಧ್ಯ. ಸಂಶೋಧನೆಯು ಆವಿಷ್ಕಾರದ ಜೀವನಾಡಿ. ಚೀನಾ, ಜಪಾನ್ ಸೇರಿದಂತೆ ಇತರ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದಲ್ಲಿ ಸಂಶೋಧನೆಗಳಿಗೆ ಅನುದಾನ ನೀಡುತ್ತಿರುವುದು ಕಡಿಮೆ’ ಎಂದರು.

‘ಇಂದಿನ ಶಿಕ್ಷಣ ವ್ಯವಸ್ಥೆಯಲ್ಲೂ ಬದಲಾವಣೆ ತರಬೇಕಾಗಿದೆ. ಶಿಕ್ಷಣವು ಜ್ಞಾನ ಪಡೆಯುವ ರಹದಾರಿಯಾಗಬೇಕೇ ವಿನಾ ಮಕ್ಕಳ ಮೇಲೆ ಒತ್ತಡ ಹೇರಬಾರದು. ಹೆಚ್ಚು ನಿರೀಕ್ಷಿಸಿದಷ್ಟು ಒತ್ತಡವೂ ಹೆಚ್ಚಾಗುತ್ತದೆ. ಎಲ್‌ಕೆಜಿ, ಯುಕೆಜಿ ಹಂತದಲ್ಲೇ ಅಂಕ ಗಳಿಕೆಗಾಗಿ ಮಕ್ಕಳ ಮೇಲೆ ಒತ್ತಡ ಹೇರಲಾಗುತ್ತಿದೆ. ಬಸ್‌ಗಳಲ್ಲೂ ಮಕ್ಕಳನ್ನು ಪ್ರಾಣಿಗಳ ರೀತಿಯಲ್ಲಿ ಶಾಲೆಗೆ ಕಳುಹಿಸಲಾಗುತ್ತಿದೆ. ಇಂತಹ ವ್ಯವಸ್ಥೆ ಅಮೂಲಾಗ್ರವಾಗಿ ಬದಲಾಗಬೇಕು’ ಎಂದು ಸಲಹೆ ನೀಡಿದರು.

‘ಸಂಸ್ಕೃತಿ, ಬುದ್ಧಿವಂತಿಕೆ ಮತ್ತು ಸಾಮಾಜಿಕ ಬದ್ಧತೆ ಇಲ್ಲದ ಪದವಿಗಳಿಗೆ ಯಾವುದೇ ಅರ್ಥ ಇಲ್ಲ. ಇದು ಕೊಳಚೆ ನೀರಿನಂತೆ. ಇಂದು ನಾವು 3ಜಿ, 4ಜಿ ಜಗತ್ತಿನಲ್ಲಿದ್ದೇವೆ. ಈ ‘ಜಿ’ಗಳು ಹೊಸತಲ್ಲ. ಮೊದಲ ‘ಜಿ’ ಗುರು, ಎರಡನೇ ‘ಜಿ’ ‘ದೇವರು’ ಮತ್ತು ಮೂರನೇ ‘ಜಿ’ ಗೈಡ್ ಹಾಗೂ ಸಹಜವಾಗಿ ನಾಲ್ಕನೇ ‘ಜಿ’ ಗೂಗಲ್ ಆಗಿದೆ’ ಎಂದು ವಿಶ್ಲೇಷಿಸಿದರು.

ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರದಾನ ಮಾಡಿದ ರಾಜ್ಯಪಾಲ ಥಾವರಚಂದ್ ಗೆಹಲೋತ್, ‘ಪದವಿ ಪಡೆದಿರುವವರು ನೌಕರಿಗೆ ಅಲೆದಾಡುವ ಬದಲು ಉದ್ಯಮಿಗಳಾಗುವ ಪ್ರಯತ್ನ ಮಾಡಬೇಕು. ಈ ಮೂಲಕ ಹಲವರಿಗೆ ಉದ್ಯೋಗ ಒದಗಿಸುವ ಅವಕಾಶ ಸೃಷ್ಟಿಸಬೇಕು’ ಎಂದು ಸಲಹೆ ನೀಡಿದರು.

‘ಹೆಚ್ಚಿನ ಸಂಖ್ಯೆಯಲ್ಲಿ ಯುವತಿಯರು ಚಿನ್ನದ ಪದಕ ಪಡೆದಿರುವುದು ಶ್ಲಾಘನೀಯ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಘಟಿಕೋತ್ಸವದಲ್ಲಿ ರ‍್ಯಾಂಕ್ ಪಡೆದ 61 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ವಿತರಿಸಲಾಯಿತು. ಪದವಿ ಪಡೆಯುತ್ತಿರುವವರಲ್ಲಿ ಶೇ 60ರಷ್ಟು ಮಹಿಳೆಯರು, ಶೇ 40ರಷ್ಟು ಪುರುಷರು ಇದ್ದರು.

ಕುಲಪತಿ ಪ್ರೊ. ಲಿಂಗರಾಜ ಗಾಂಧಿ, ಕುಲಸಚಿವ ಸಿ.ಎನ್.ಶ್ರೀಧರ್ ಇದ್ದರು.

ಬಿಬಿಎನಲ್ಲಿ ಮೂರು ಚಿನ್ನದ ಪದಕ ಪಡೆದ ಶೇಷಾದ್ರಿಪುರ ವಾಣಿಜ್ಯ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜಿನ ಎಸ್. ದೀಪ್ತಿ, ಬಿ.ಕಾಂ. ಪದವಿಯಲ್ಲಿ ಮೂರು ಚಿನ್ನದ ಪದಕ ಪಡೆದ ಕೃಪಾನಿಧಿ ಕಾಲೇಜ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್‌ನ ಎಂ. ಅಜಿತ್ ಕುಮಾರ್ ಹಾಗೂ ಎಂ.ಎಸ್ಸಿ. ರಾಸಾಯನ ವಿಜ್ಞಾನದಲ್ಲಿ ಮೂರು ಚಿನ್ನದ ಪದಕ ಪಡೆದ ಸೆಂಟ್ರಲ್ ಕಾಲೇಜಿನ ಪದ್ಮಾವತಿ ವಿ.ಕೆ. ನಾಯರ್ ಅವರು ಪರಸ್ಪರ ಹಸ್ತಲಾಘವ ಮಾಡಿ ಶುಭಾಶಯ ಕೋರಿದರು — ಪ್ರಜಾವಾಣಿ ಚಿತ್ರ

### ಚಿನ್ನದ ಸಾಧಕರ ಅನಿಸಿಕೆ...

ಪೋಷಕರು, ಪ್ರಾಂಶುಪಾಲರು, ಸ್ನೇಹಿತರು ಬೆಂಬಲದಿಂದ ರ‍್ಯಾಂಕ್ ಪಡೆಯಲು ಸಾಧ್ಯವಾಯಿತು. ಕೇವಲ ಪರೀಕ್ಷೆ ದೃಷ್ಟಿಯಿಂದ ಮಾತ್ರ ಅಧ್ಯಯನ ಮಾಡಲಿಲ್ಲ. ವಿಷಯ ಅರಿತುಕೊಂಡು ಓದುವುದು ಮುಖ್ಯ. ಈಗ ಎಂಬಿಎ ಮಾಡುತ್ತಿದ್ದೇನೆ. ಸ್ಪರ್ಧಾತ್ಮಕ ಪರೀಕ್ಷೆಗೂ ಸಿದ್ಧತೆ ನಡೆಸುತ್ತಿದ್ದೇನೆ.

**ಎಂ. ಅಜಿತ್ ಕುಮಾರ್,** (ಬಿ.ಕಾಂ. ಪದವಿಯಲ್ಲಿ ಮೂರು ಚಿನ್ನದ ಪದಕ) ಕೃಪಾನಿಧಿ ಕಾಲೇಜ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್

ಪದವಿಯ ಮೊದಲ ವರ್ಷದಿಂದಲೇ ಯೋಜನೆ ರೂಪಿಸಿ ಅಧ್ಯಯನ ಮಾಡುತ್ತಿದ್ದೆ. ಜತೆಗೆ, ಕಾಲೇಜಿನಲ್ಲೂ ಉತ್ತಮ ಶೈಕ್ಷಣಿಕ ವಾತಾವರಣ ಇದೆ. ಪಠ್ಯೇತರ ಚಟುವಟಿಕೆಗಳಿಗೂ ಪ್ರೋತ್ಸಾಹವಿದೆ. ಪೋಷಕರು, ಶಿಕ್ಷಕರ ಮಾರ್ಗದರ್ಶನ ಮತ್ತು ಬೆಂಬಲದಿಂದ ರ‍್ಯಾಂಕ್ ಪಡೆಯಲು ಸಾಧ್ಯವಾಯಿತು. ಸದ್ಯ ಅಮೆಜಾನ್ ಕಂಪನಿಗೆ ಸೇರಿದ್ದೇನೆ. ಒಂದೆರಡು ವರ್ಷ ಕೆಲಸ ಮಾಡಿದ ಬಳಿಕ ಎಂಬಿಎ ಅಧ್ಯಯನ ಮಾಡುತ್ತೇನೆ

**ಎಸ್. ದೀಪ್ತಿ.** (ಬಿಬಿಎನಲ್ಲಿ ಮೂರು ಚಿನ್ನದ ಪದಕ) ಶೇಷಾದ್ರಿಪುರ ವಾಣಿಜ್ಯ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜು

‘ರಾಸಾಯನ ವಿಜ್ಞಾನವನ್ನು ಇಷ್ಟಪಟ್ಟು ಓದಿದ್ದರಿಂದ ಚಿನ್ನದ ಪದಕ ಬರಬಹುದೆಂಬ ನಿರೀಕ್ಷೆ ಮಾಡಿದ್ದೆ. ಮೂರು ಚಿನ್ನ ಬಂದಿರುವುದಕ್ಕೆ ಖುಷಿಯಾಗಿದೆ. ಸಂಶೋಧನೆ ಕ್ಷೇತ್ರದಲ್ಲಿ ಮುಂದುವರಿಯುವ ಇಚ್ಛೆ ಹೊಂದಿದ್ದೇನೆ. ಪೋಷಕರು ಮತ್ತು ಪ್ರಾಧ್ಯಾಪಕರ ಪ್ರೋತ್ಸಾಹದಿಂದಲೇ ಪದಕ ಪಡೆಯಲು ಸಾಧ್ಯವಾಗಿದೆ.

**ಪದ್ಮಾವತಿ ವಿ.ಕೆ. ನಾಯರ್** (ಎಂ.ಎಸ್ಸಿ ರಾಸಾಯನ ವಿಜ್ಞಾನದಲ್ಲಿ ಮೂರು ಚಿನ್ನದ ಪದಕ) ಸೆಂಟ್ರಲ್ ಕಾಲೇಜು

## ಸುದ್ದಿ 2 ನಿಮಿಷ

### ಚಂದ್ರಯಾನ–3 ಇಳಿಯಲು ಚಂದ್ರನಲ್ಲಿ ವಿಸ್ತಾರ ನೆಲೆ ಗುರುತಿಸಿದ ಇಸ್ರೊ

**ನವದೆಹಲಿ:** ಚಂದ್ರನ ದಕ್ಷಿಣ ಧ್ರುವದ ಬಳಿಯ ನಾಲ್ಕು ಕಿ.ಮೀ ಉದ್ದದ ಮತ್ತು 2.5 ಕಿ.ಮೀ ಅಗಲದ ಪ್ರದೇಶವು ಆಗಸ್ಟ್ ಮೂರನೇ ವಾರದಲ್ಲಿ ‘ಚಂದ್ರಯಾನ-3’ ಇಳಿಯುವ ಜಾಗವಾಗಿರಲಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ(ಇಸ್ರೊ) ಅಧ್ಯಕ್ಷ ಎಸ್ ಸೋಮನಾಥ್ ಸೋಮವಾರ ತಿಳಿಸಿದರು.

ಚಂದ್ರನ ಮೇಲ್ಮೈನಲ್ಲಿ ಅಪ್ಪಳಿಸಿದ್ದ ‘ಚಂದ್ರಯಾನ-2’ಕ್ಕೆ ಹೋಲಿಸಿದರೆ ‘ಚಂದ್ರಯಾನ–3’ಗೆ ದೊಡ್ಡ ಲ್ಯಾಂಡಿಂಗ್ ವಲಯವನ್ನು ಒದಗಿಸಲಾಗಿದೆ. ಇಸ್ರೋ ವಿಜ್ಞಾನಿಗಳು ಮತ್ತು ಎಂಜಿನಿಯರ್‌ಗಳು ಈ ಬಾರಿಯ ಕಾರ್ಯಾಚರಣೆಯಲ್ಲಿ ಹಲವು ಸುರಕ್ಷತಾ ಕ್ರಮ ಕೈಗೊಂಡಿದ್ದಾರೆ.

‘ಚಂದ್ರಯಾನ-2ರಂತಹ ಯಶಸ್ಸು ಆಧಾರಿತ ಯೋಜನೆಗೆ ಬದಲಾಗಿ, ಚಂದ್ರಯಾನ-3ರಲ್ಲಿ ವೈಫಲ್ಯ ಆಧಾರಿತ ವಿನ್ಯಾಸವನ್ನು ಆರಿಸಿಕೊಂಡಿದ್ದೇವೆ! ಕಾರ್ಯಾಚರಣೆ ವೈಫಲ್ಯಕ್ಕೆ ಕಾರಣವಾಗುವ ವಿಷಯಗಳು ಯಾವುವು ಮತ್ತು ಅವುಗಳಿಂದ ಹೇಗೆ ರಕ್ಷಣೆ ಪಡೆಯಬೇಕು ಎಂಬುದರ ಕುರಿತು ಸೂಕ್ಷ್ಮವಾಗಿ ಪರಿಶೀಲಿಸಿದ್ದೇವೆ’ ಎಂದು ಇಂಡಿಯಾ ಸ್ಪೇಸ್ ಕಾಂಗ್ರೆಸ್’ನಲ್ಲಿ ಸೋಮನಾಥ್ ಹೇಳಿದರು.

ಚಂದ್ರಯಾನ–3 ಕಾರ್ಯಾಚರಣೆಯು ಜುಲೈ 14 ರಂದು ಮಧ್ಯಾಹ್ನ 2.35ಕ್ಕೆ ಉಡಾವಣೆಗೊಳ್ಳಲಿದೆ. ಲ್ಯಾಂಡರ್ ಮತ್ತು ರೋವರ್ ಅನ್ನು ಹೊತ್ತ ಬಾಹ್ಯಾಕಾಶ ನೌಕೆಯು ಆ. 23ರ ಸುಮಾರಿಗೆ ಚಂದ್ರನ ಕಕ್ಷೆಯನ್ನು ತಲುಪಲಿದೆ. ನಂತರದ15 ದಿನಗಳಲ್ಲಿ ನೌಕೆ ಚಂದ್ರನ ಮೇಲೆ ಇಳಿಯಲಿದೆ.

## ಬಿಡಿಎಯಿಂದ ಕಾಂಪೌಂಡ್ ತೆರವು

**ಬೆಂಗಳೂರು:** ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ, ದೇವರಚಿಕ್ಕನಹಳ್ಳಿಯಲ್ಲಿ ಕಾಂಪೌಂಡ್ ಅನ್ನು ಬಿಡಿಎ ಸೋಮವಾರ ತೆರವುಗೊಳಿಸಿದೆ.

ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ. 40/1ರಲ್ಲಿನ ಒಂದು ಎಕರೆ 12 ಗುಂಟೆ ಜಮೀನು ಬಿಟಿಎಂ 4ನೇ ಹಂತ 2ನೇ ಬ್ಲಾಕ್ ಬಡಾವಣೆಗೆ 1990ರಲ್ಲಿ ಅಂತಿಮ ಅಧಿಸೂಚನೆಯಾಗಿತ್ತು. ಈ ಪ್ರದೇಶದಲ್ಲಿ 26 ಗುಂಟೆ ಕೃಷ್ಣಾರೆಡ್ಡಿ ಮತ್ತು 26 ಗುಂಟೆಗೆ ಹುಚ್ಚಮ್ಮ ಭೂಮಾಲೀಕರಾಗಿದ್ದರು. 2022ರ ಜ.28ರಂದು ಹುಚ್ಚಮ್ಮ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸುಪ್ರೀಂ ಕೋರ್ಟ್ 26 ಗುಂಟೆ ಪ್ರದೇಶಕ್ಕೆ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲು ಆದೇಶ ನೀಡಿತ್ತು. ಆದರೆ, ನ್ಯಾಯಾಲಯ ಆದೇಶ ಉಲ್ಲಂಘಿಸಿ ಕಾಂಪೌಂಡ್ ನಿರ್ಮಿಸುತ್ತಿದ್ದರು. ಇದನ್ನು ತೆರವುಗೊಳಿಸಲಾಗಿದೆ ಎಂದು ಬಿಡಿಎ ಅಧಿಕಾರಿಗಳು ತಿಳಿಸಿದ್ದಾರೆ.

ಕೃಷ್ಣಾರೆಡ್ಡಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಡುವಿನ ಪ್ರಕರಣದಲ್ಲಿ ಹೈಕೋರ್ಟ್, ಬಿಡಿಎ ವಿರುದ್ಧ ತೀರ್ಪು ನೀಡಿತ್ತು. ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲಾಗಿ, 2022ರ ಸೆ.27ರಂದು ‘ಫಾರ್ ನಾನ್ ಪ್ರಾಸಿಕ್ಯೂಷನ್’ ಎಂದು ತೀರ್ಪನ್ನು ನೀಡಲಾಗಿದೆ.

ನಂತರ ಬಿಡಿಎ ಅಧಿಕಾರಿಗಳು ಈ ಪ್ರದೇಶದಲ್ಲಿ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಪ್ರಾಧಿಕಾರದ ವತಿಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯಲು ತಿಳಿಸಲಾಗಿತ್ತು. ಸದರಿ ಪ್ರದೇಶದಲ್ಲಿ ಕಾಮಗಾರಿಯು ನಡೆಯುತ್ತಿದ್ದರಿಂದ ಹೈಕೋರ್ಟ್‌ನಲ್ಲಿ ಮೇಲ್ಮನವಿಯನ್ನು ಸಲ್ಲಿಸಲಾಗಿತ್ತು ಎಂದು ಬಿಡಿಎ ಅಧಿಕಾರಿಗಳು ತಿಳಿಸಿದ್ದಾರೆ.

## ಡಿಸಿಎಂ ಭೇಟಿಗೆ ಗುತ್ತಿಗೆದಾರರ ನಿರ್ಧಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿದ ನಂತರ ಮುಂದಿನ ಹೋರಾಟ ಕೈಗೊಳ್ಳಲು ಬಿಬಿಎಂಪಿ ಗುತ್ತಿಗೆದಾರರ ಸಂಘ ನಿರ್ಧರಿಸಿದೆ.

ಬಿಬಿಎಂಪಿ ವತಿಯಿಂದ ಜುಲೈ 15ರ ಒಳಗೆ ಬಾಕಿ ಬಿಲ್ ಪಾವತಿಸುವಂತೆ ಈಗಾಗಲೇ ಮುಖ್ಯಮಂತ್ರಿ ಅವರಿಗೆ ಪತ್ರ ಬರೆಯಲಾಗಿದೆ. ಡಿ.ಕೆ. ಶಿವಕುಮಾರ್ ಅವರೂ ಒಂದೆರಡು ದಿನದಲ್ಲಿ ಮಾತುಕತೆ ನಡೆಸಲಿದ್ದಾರೆ. ನಂತರ ಯಾವ ರೀತಿ ಹೋರಾಟ ನಡೆಸಬಹುದು ಎಂಬುದನ್ನು ತೀರ್ಮಾನಿಸೋಣ ಎಂಬ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಅವರ ಮಾತಿಗೆ ಗುತ್ತಿಗೆದಾರರು ಸಹಮತ ಸೂಚಿಸಿದ್ದಾರೆ.

ಪಾಲಿಕೆ ವ್ಯಾಪ್ತಿಯಲ್ಲಿ ನಡೆದಿರುವ ಕಾಮಗಾರಿಗಳಿಗೆ ಬಿಲ್ ಪಾವತಿ ತಡೆಹಿಡಿಯಲಾಗಿದ್ದು, ಈ ಬಗ್ಗೆ ಚರ್ಚೆ ನಡೆಸಲು ಗುತ್ತಿಗೆದಾರರು ಸೋಮವಾರ ಸಭೆ ನಡೆಸಿದರು. ಎಲ್‌ಒಸಿ ತಡೆಹಿಡಿದಿರುವ ಬಗ್ಗೆ ನೂರಾರು ಗುತ್ತಿಗೆದಾರರು ಸಭೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

‘ಮುಗಿದಿರುವ ಕಾಮಗಾರಿಗಳ ಹಣವನ್ನು ಬಿಡುಗಡೆ ಮಾಡಲು ರಾಜ್ಯ ಸರ್ಕಾರ ಜೂನ್ 28ರಂದು ಸುತ್ತೋಲೆ ಹೊರಡಿಸಿದೆ. ಆ ನಿರ್ದೇಶನದಂತೆ ಬಿಬಿಎಂಪಿ ಮುಖ್ಯ ಆಯುಕ್ತರು ಯಾವುದೇ ಕ್ರಮ ಕೈಗೊಂಡಿಲ್ಲ. ಹೀಗಾಗಿ, ಜುಲೈ 15ರ ಗಡುವು ನೀಡಿ ಪತ್ರ ಬರೆಯಲಾಗಿದೆ. ನಂತರ ಕಾಮಗಾರಿ ನಿಲ್ಲಿಸುವುದಾಗಿಯೂ ಹೇಳಲಾಗಿದೆ. ಡಿಸಿಎಂ ಅವರ ಜೊತೆ ಚರ್ಚೆ ನಡೆಸಿ ಮುಂದಿನ ತೀರ್ಮಾನವಾಗುತ್ತದೆ’ ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಜಿ.ಎಂ. ರವೀಂದ್ರ ತಿಳಿಸಿದರು.

ಬಿಬಿಎಂಪಿ ಗುತ್ತಿಗೆದಾರರ ಸಂಘದ ಸಭೆಯಲ್ಲಿ ಭಾಗವಹಿಸಿದ್ದ ಗುತ್ತಿಗೆದಾರರು

## ಆರೋಪಗಳಿಗೆ ದಾಖಲೆ ಪರಿಶೀಲಿಸಿ: ಸುದೀಪ್ ಪತ್ರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಿರ್ಮಾಪಕ ಎಂ.ಎನ್. ಕುಮಾರ್ ಹಾಗೂ ನಟ ಕಿಚ್ಚ ಸುದೀಪ್ ನಡುವಿನ ವಿವಾದ ದಿನದಿಂದ ದಿನಕ್ಕೆ ತೀವ್ರವಾಗುತ್ತದೆ. ಕುಮಾರ್ ನೀಡಿರುವ ದೂರಿಗೆ ಪ್ರತಿಕ್ರಿಯೆ ರೂಪದಲ್ಲಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ನಟ ಸುದೀಪ್ ಸೋಮವಾರ ಸುದೀರ್ಘವಾದ ಪತ್ರ ಬರೆದಿದ್ದಾರೆ.

‘ನಿರ್ಮಾಪಕರೊಬ್ಬರು ವಾಣಿಜ್ಯ ಮಂಡಳಿಯ ಮೊರೆ ಹೋಗಿದ್ದಾರೆ. ಸ್ಪಂದಿಸಬೇಕಾದದ್ದು ನಿಮ್ಮ ಕರ್ತವ್ಯ, ನೀವು ಸ್ಪಂದಿಸಿದ್ದೀರಿ. ಆ ಬಗ್ಗೆ ನನಗೆ ಯಾವುದೇ ತಕರಾರು ಇರುವುದಿಲ್ಲ. ಆದರೂ, ಯಾವುದೇ ನಿರ್ಮಾಪಕರು, ಯಾರೇ ಕಲಾವಿದರ ಅಥವಾ ತಂತ್ರಜ್ಞರ ಮೇಲೆ ನಿರಾಧಾರ ಸುಳ್ಳು ಆರೋಪಗಳನ್ನು ಮಾಡುವಾಗ, ಕನಿಷ್ಠ ದಾಖಲಾತಿಗಳನ್ನು ಪರಿವೀಕ್ಷಿಸುವುದು ಮಾತ್ರ ಸಂಸ್ಥೆಗಳಾದ ನಿಮ್ಮ ಜವಾಬ್ದಾರಿ ಆಗಿರುತ್ತದೆ. ಈ ಹಿಂದೆ ನೀವು ಇದನ್ನೆಲ್ಲ ಪರಿಶೀಲಿಸಲಿಲ್ಲವೆಂದಲ್ಲ. ಈ ಬಾರಿ ನನ್ನ ವಿಚಾರದಲ್ಲಿ ಅದೇಕೋ ನಡೆಯುತ್ತಿಲ್ಲ, ಕಾರಣವೂ ನನಗೆ ತಿಳಿಯುತ್ತಿಲ್ಲ’ ಎಂದು ಸುದೀಪ್ ಪತ್ರದಲ್ಲಿ ಬರೆದಿದ್ದಾರೆ.

‘ನನ್ನ ಕಡೆಯಿಂದ ಕೊಡಬೇಕಾದ ಅಷ್ಟೂ ವಿವರಣೆಗಳನ್ನು ಅತ್ಯಂತ ಸಂಯಮದಿಂದ ತಮ್ಮ ಮುಂದೆ ಇಟ್ಟಿದ್ದೇನೆ. ಆ ಬಗ್ಗೆ ಬಹಿರಂಗವಾಗಿ ವಿವರಿಸುವುದಾದರೆ, ಎಂ.ಎನ್. ಕುಮಾರ್ ಅವರನ್ನು ನಾನು ಹಲವು ಬಾರಿ ಮುಖತಃ ಭೇಟಿಯಾಗಿದ್ದೇನೆ. ಒಂದು ಅನುಕಂಪದ ಆಧಾರದಲ್ಲಿ ಅವರಿಗೆ ಸಹಾಯ ಮಾಡಲು ಪ್ರಯತ್ನಿಸಿದ್ದೇನೆ. ನಾನು ಹಲವು ಬಾರಿ ಮುಖತಃ ಪ್ರಯತ್ನಪಟ್ಟರೂ ಹಲವಾರು ಕಾರಣಗಳಿಂದ ಅದು ಸಾಧ್ಯವಾಗಲಿಲ್ಲ. ಅವರು ನನ್ನ ವಿರುದ್ಧ ವದಂತಿಗಳನ್ನು ಹಬ್ಬಿಸಲು ಶುರುಮಾಡಿದಾಗ, ಕುಮಾರ್ ಅವರನ್ನು ಮುಖತಃ ಭೇಟಿಯಾಗುವುದನ್ನು ನಿಲ್ಲಿಸಿದೆ. ಇದೆಲ್ಲವನ್ನೂ ತಮಗೆ ವಿವರಿಸಿದೆ. ಅದಾದ ನಂತರವೂ, ಮಂಡಳಿಯ ಕಚೇರಿಯಲ್ಲಿ ನನ್ನ ವಿರುದ್ಧ ಸುಳ್ಳು, ನಿರಾಧಾರ ಆರೋಪಗಳ ಪತ್ರಿಕಾಗೋಷ್ಠಿ ನಡೆಯಿತು. ಆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನೂ ನಾನು ಗೌರವಿಸುತ್ತೇನೆ. ಜೊತೆಗೆ, ಸಂಧಾನ ಎಂಬ ಪದ ಹುಟ್ಟಿಕೊಂಡಿತು. ಸಂಧಾನ ಎಂದರೇನು? ಆ ನಿರ್ಮಾಪಕರು, ಅವರೆಲ್ಲ ಕಷ್ಟಗಳಿಗೆ, ನನ್ನನ್ನೇ ಹೊಣೆಗಾರನನ್ನಾಗಿಸಿ, ಬಲವಂತವಾಗಿ ಹಣ ಪಡೆಯುವುದು. ನಾನು ವರ್ಷಗಳ ಕಾಲ ಕಾಪಾಡಿಕೊಂಡು ಬಂದ ನೈತಿಕತೆ, ಹೊಣೆಗಾರಿಕೆ, ವ್ಯಕ್ತಿತ್ವದ ಕಾರಣಕ್ಕೆ, ಹಣ ಕೊಡಬೇಕಾಗಿಲ್ಲವೆಂಬ ನನ್ನ ನಿಲುವಿಗೆ ನಾನು ಬದ್ಧನಾಗಿರುವೆ’ ಎಂದು ಸುದೀಪ್ ಪತ್ರದಲ್ಲಿ ತಿಳಿಸಿದ್ದಾರೆ.

### ಏನಿದು ವಿವಾದ?

ನಟ ಸುದೀಪ್ ಚಿತ್ರವೊಂದಕ್ಕೆ ಮುಂಗಡ ಹಣ ಪಡೆದು ತಮಗೆ ಎಂಟು ವರ್ಷದಿಂದ ಕಾಲ್‌ಶೀಟ್ ನೀಡುತ್ತಿಲ್ಲ ಎಂದು ನಿರ್ಮಾಪಕ ಎಂ.ಎನ್. ಕುಮಾರ್ ಕೆಲ ದಿನಗಳ ಹಿಂದೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಆರೋಪಿಸಿದ್ದರು.

ಅದಕ್ಕೆ ಸುದೀಪ್ ಪ್ರತಿಕ್ರಿಯಿಸಿರಲಿಲ್ಲ. ಅದಾದ ಬಳಿಕ ಕಾನೂನು ಮೊರೆಹೋದ ಸುದೀಪ್, ಕುಮಾರ್‌ಗೆ ನ್ಯಾಯಾಲಯದ ಮೂಲಕ ನೋಟಿಸ್ ನೀಡಿದ್ದರು. ಬಳಿಕ ನಿರ್ಮಾಪಕ ಜಾಕ್ ಮಂಜು ಅವರು ಸುದೀಪ್ ಪರ ಪತ್ರಿಕಾಗೋಷ್ಠಿ ನಡೆಸಿ, ಕುಮಾರ್ ಮಾಡಿದ ಆರೋಪಗಳನ್ನು ತಳ್ಳಿ ಹಾಕಿದ್ದರು.

ಇದಾದ ಬಳಿಕ ‘ಹುಚ್ಚ’ ಸಿನಿಮಾದ ನಿರ್ಮಾಪಕ ರೆಹಮಾನ್ ಕೂಡ ಸೋಮವಾರ ಸುದೀಪ್ ತಮಗೂ ಕಾಲ್‌ಶೀಟ್ ನೀಡಿಲ್ಲ. ತಮ್ಮದು ಆರೋಪವಲ್ಲ, ಮನವಿ ಎಂದ ರೆಹಮಾನ್, ಸುದೀಪ್ ಅವರು ಕೆಲ ಚಿತ್ರಗಳ ರೀಮೇಕ್ ಹಕ್ಕು ಖರೀದಿಸಲು ಹೇಳಿ, ನಂತರ ಆ ಸಿನಿಮಾಗಳನ್ನು ಮಾಡಿಲ್ಲ. ಅದರಿಂದ ತಮಗೆ ನಷ್ಟವಾಗಿತ್ತು ಎಂದು ಬೇಸರ ತೋಡಿಕೊಂಡಿದ್ದರು.

ಪ್ರಜಾವಾಣಿ @75

ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಕ್ಕೆ
8147623791
080 45557204
readerservicecell@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

## ಬೀದಿನಾಯಿಗಳ ಸಮೀಕ್ಷೆ ಇಂದಿನಿಂದ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯಲ್ಲಿ ಪಶುಪಾಲನಾ ವಿಭಾಗದಿಂದ ಜುಲೈ 11ರಿಂದ ಬೀದಿ ನಾಯಿಗಳ ಸಮೀಕ್ಷೆ ಆರಂಭವಾಗುತ್ತಿದೆ.

2019ನೇ ಸಾಲಿನಲ್ಲಿ ಬೀದಿ ನಾಯಿಗಳ ಸಮೀಕ್ಷೆ ಮಾಡಲಾಗಿತ್ತು. ಆಗ, 3.10 ಲಕ್ಷ ಬೀದಿ ನಾಯಿಗಳಿದ್ದವು. ಎಂಟೂ ವಲಯಗಳಲ್ಲಿ ಸಂತಾನ ಶಕ್ತಿ ಹರಣ ಶಸ್ತ್ರ ಚಿಕಿತ್ಸೆ ಮತ್ತು ಆಂಟಿರೇಬಿಸ್ ಲಸಿಕಾ ಕಾರ್ಯಕ್ರಮವನ್ನು ನಿರಂತರವಾಗಿ ನಡೆಯುತ್ತಿದ್ದು, ಈ ಕಾರ್ಯಕ್ರಮದ ಯಶಸ್ವಿ ಅನುಷ್ಠಾನದ ಬಗ್ಗೆ ತಿಳಿಯಲು ಸಮೀಕ್ಷೆಯ ಕಾರ್ಯ ಪ್ರಾರಂಭಿಸಲಾಗುತ್ತಿದೆ ಎಂದು ಪಶುಪಾಲನಾ ವಿಭಾಗ ಜಂಟಿ ನಿರ್ದೇಶಕ ಡಾ. ರವಿಕುಮಾರ್ ತಿಳಿಸಿದ್ದಾರೆ.

ಡಾ. ಕೆ.ಪಿ.ಸುರೇಶ್, ಪ್ರಧಾನ ವಿಜ್ಞಾನಿ, ಐಸಿಎಆರ್–ನಿವೇದಿ, ಡಾ. ಹೇಮಾದ್ರಿ ದಿವಾಕರ್, ಪ್ರಧಾನ ವಿಜ್ಞಾನಿ, ಐಸಿಎಆರ್–ನಿವೇದಿ, ಡಾ. ಶ್ರೀಕೃಷ್ಣ ಇಸ್ಲೂರು, ಪ್ರಾಧ್ಯಾಪಕ, ಸೂಕ್ಷ್ಮಾಣುಜೀವಿ ಶಾಸ್ತ್ರ ವಿಭಾಗ, ಪಶುವೈದ್ಯ ಕಾಲೇಜು, ಡಾ. ಬಾಲಾಜಿ ಚಂದ್ರಶೇಖರ್, ವ್ಯವಸ್ಥಾಪಕ– ಕಾರ್ಯಾಚರಣೆ, ಡಬ್ಲ್ಯೂವಿಎಸ್ ಸಂಸ್ಥೆ ಮತ್ತು ಪಶುಪಾಲನಾ ಹಾಗೂ ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ನಗರ ಜಿಲ್ಲೆಯ ಅರೆತಾಂತ್ರಿಕ ಸಿಬ್ಬಂದಿಯ ಸಹಯೋಗದೊಂದಿಗೆ ಸಮೀಕ್ಷೆ ನಡೆಯಲಿದೆ.

840 ಚದರ ಕಿ.ಮೀ ವ್ಯಾಪ್ತಿಯುಳ್ಳ ಬಿಬಿಎಂಪಿಯನ್ನು ವಸತಿ ಪ್ರದೇಶ, ಕೊಳಚೆ ಪ್ರದೇಶ, ವಾಣಿಜ್ಯ ಪ್ರದೇಶ ಹಾಗೂ ಕೆರೆಗಳ ಪ್ರದೇಶವಾಗಿ 0.5 ಚದರ ಕಿ.ಮೀ ವ್ಯಾಪ್ತಿಯ 6,850 ಮೈಕ್ರೋ ಜೋನ್‌ಗಳನ್ನಾಗಿ ವಿಂಗಡಿಸಲಾಗಿದೆ. ಅದರಲ್ಲಿ ಶೇ 20ರಷ್ಟು ರ‍್ಯಾಂಡಂ ಸ್ಯಾಂಪಲ್‌ಗಳನ್ನು , 1,360 ಮೈಕ್ರೋ ಜೋನ್‌ಗಳಲ್ಲಿ ಸಮೀಕ್ಷೆ ಮಾಡಲು ಆಯ್ಕೆ ಮಾಡಲಾಗಿದೆ. ಅದರಂತೆ, 70 ಅರೆತಾಂತ್ರಿಕ ಸಿಬ್ಬಂದಿ ಹಾಗೂ ಪಾಲಿಕೆಯ ಪಶುಪಾಲನಾ ವಿಭಾಗದ 30 ಸಿಬ್ಬಂದಿ ಸೇರಿದಂತೆ 100 ಮಂದಿ ಮೂಲಕ ಸಮೀಕ್ಷೆ ಮಾಡಲಾಗುತ್ತಿದೆ. ವಾರ್ಡ್‌ವಾರು ಸಮೀಕ್ಷೆಗೆ 50 ತಂಡಗಳನ್ನು ರಚಿಸಲಾಗಿದ್ದು, 15 ಮೇಲ್ವಿಚಾರಕರನ್ನು ನೇಮಿಸಲಾಗಿದೆ ಎಂದು ರವಿಕುಮಾರ್ ಮಾಹಿತಿ ನೀಡಿದರು.

ಬೀದಿ ನಾಯಿಗಳ ಸಮೀಕ್ಷೆ 14 ದಿನ ನಡೆಯಲಿದ್ದು, ಪ್ರತಿ ದಿನ ಬೆಳಿಗ್ಗೆ 6ರಿಂದ 8.30ರವರೆಗೆ ನಡೆಯಲಿದೆ. ಮೈಕ್ರೋಜೋನ್‌ನಲ್ಲಿ ಕಂಡು ಬರುವ ಬೀದಿನಾಯಿಗಳ ಭಾವಚಿತ್ರದೊಂದಿಗೆ ಪ್ರತಿನಾಯಿಯ ಮಾಹಿತಿಯನ್ನು ಡಬ್ಲ್ಯೂವಿಎಸ್ ಡೇಟಾ ಕಲೆಕ್ಷನ್ ಆ್ಯಪ್‌ನಲ್ಲಿ ನಮೂದಿಸಲಾಗುತ್ತದೆ. ಸಮೀಕ್ಷೆಯ ನಂತರ ಡಾ. ಕೆ.ಪಿ.ಸುರೇಶ್ ಮಾಹಿತಿಯನ್ನು ಕ್ರೋಡೀಕರಿಸಿ ಪಾಲಿಕೆಗೆ ವರದಿ ನೀಡಲಿದ್ದಾರೆ.

### ಪ್ರಮುಖ ಉದ್ದೇಶ

- ಹೆಣ್ಣು– ಗಂಡು ಬೀದಿನಾಯಿಗಳ ಸಂಖ್ಯೆ ಲಭ್ಯ
- ಸಂತಾನ ಶಕ್ತಿಹರಣ ಶಸ್ತ್ರ ಚಿಕಿತ್ಸೆಗೆ ಒಳಪಟ್ಟಿರುವ ಶೇಕಡವಾರು ಬೀದಿನಾಯಿಗಳ ಸಂಖ್ಯೆ
- ಮಾನವ-ಬೀದಿನಾಯಿಗಳ ಅನುಪಾತ
- ವಾರ್ಡ್-ವಲಯವಾರು ಬೀದಿನಾಯಿಗಳ ಸಂಖ್ಯೆ

## ವಾಸ್ತವ್ಯಕ್ಕೆ ನೀಡದ ಅವಕಾಶ: ಹುಸಿ ಬಾಂಬ್ ಕರೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಶಿವಾಜಿ ನಗರದ ಆಜಂ ಮಸೀದಿಯಲ್ಲಿ ಬಾಂಬ್ ಇರಿಸಲಾಗಿದೆ ಎಂದು ಹುಸಿ ಕರೆ ಮಾಡಿದ್ದ ಆರೋಪಿ, ಮಹಾರಾಷ್ಟ್ರದ ನಿವಾಸಿ ಸೈಯದ್ ಮಹಮ್ಮದ್ ಅನ್ವರ್ (37) ಎಂಬಾತನನ್ನು ಶಿವಾಜಿನಗರದ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ತೆಲಂಗಾಣದಲ್ಲಿ ಆರೋಪಿಯನ್ನು ಬಂಧಿಸಿ ನಗರಕ್ಕೆ ಕರೆ ತರಲಾಗಿದೆ.

‘ಆರೋಪಿ ಪದವೀಧರನಾಗಿದ್ದ. ಎಲ್ಲಿಯೂ ಕೆಲಸ ಮಾಡುತ್ತಿರಲಿಲ್ಲ. ಬೇರೆ ಬೇರೆ ರಾಜ್ಯಗಳಿಗೆ ತೆರಳಿ ಅಲ್ಲಿನ ಮಸೀದಿಗಳಲ್ಲಿ ಚಂದಾ ವಸೂಲಿ ಮಾಡುತ್ತಿದ್ದ. ಜುಲೈ 4ರಂದು ಬೆಂಗಳೂರಿಗೂ ಆರೋಪಿ ಬಂದಿದ್ದ. ಶಿವಾಜಿನಗರದ ರಸೆಲ್ ಮಾರುಕಟ್ಟೆ ಹಿಂಭಾಗದ ಆಜಾಂ ಮಸೀದಿಗೂ ಬಂದಿದ್ದ. ಅಲ್ಲಿ ಚಂದಾ ಪಡೆದುಕೊಂಡಿದ್ದ. ರಾತ್ರಿಯಾಗಿದ್ದರಿಂದ ಮಸೀದಿಯಲ್ಲೇ ವಾಸ್ತವ್ಯಕ್ಕೆ ಅವಕಾಶ ನೀಡುವಂತೆ ಸಿಬ್ಬಂದಿಯನ್ನು ಕೋರಿಕೊಂಡಿದ್ದ. ಮಸೀದಿ ಸಿಬ್ಬಂದಿ ಅವಕಾಶ ನೀಡಿರಲಿಲ್ಲ. ಇದರಿಂದ ಸಿಟ್ಟಿಗೆದ್ದು, ಮಸೀದಿಗೆ ಬಾಂಬ್ ಇಡಲಾಗಿದೆ ಎಂದು ಪೊಲೀಸ್ ಸಹಾಯವಾಣಿಗೆ ಕರೆ ಮಾಡಿದ್ದ’ ಎಂದು ಮೂಲಗಳು ತಿಳಿಸಿವೆ.

ಅನ್ವರ್

‘ತಕ್ಷಣವೇ ಮಸೀದಿಗೆ ತೆರಳಿ ಪರಿಶೀಲನೆ ನಡೆಸಲಾಗಿತ್ತು. ಅಲ್ಲಿ ಯಾವುದೇ ಬಾಂಬ್ ಇರಲಿಲ್ಲ. ಇದೊಂದು ಹುಸಿ ಬಾಂಬ್ ಕರೆ ಎಂದು ಗೊತ್ತಾಯಿತು. ಆರೋಪಿ ಕರೆ ಮಾಡಿದ್ದ ಮೊಬೈಲ್ ನಂಬರ್‌ನ ಲೊಕೇಶನ್ ಆಧರಿಸಿ ತೆಲಂಗಾಣಕ್ಕೆ ತೆರಳಿ ಆರೋಪಿಯನ್ನು ಬಂಧಿಸಿ ಕರೆ ತರಲಾಯಿತು’ ಎಂದು ಪೊಲೀಸರು ಹೇಳಿದರು.

## ಬನಿಹಾಲ್‌ನಲ್ಲಿ ಸಿಲುಕಿರುವ ಆರು ಯಾತ್ರಾರ್ಥಿಗಳು

ಪ್ರಜಾವಾಣಿ ವಾರ್ತೆ

**ಬೀದರ್:** ಜಮ್ಮು ಮತ್ತು ಕಾಶ್ಮೀರದ ಅಮರನಾಥ ಯಾತ್ರೆಗೆ ತೆರಳಿದ್ದ ತಾಲ್ಲೂಕಿನ ಆರು ಜನ ಶ್ರೀನಗರದಿಂದ 50 ಕಿ.ಮೀ ದೂರದ ಬನಿಹಾಲ್ ಕ್ಯಾಂಪ್‌ನಲ್ಲಿ ಸಿಲುಕಿಕೊಂಡಿದ್ದಾರೆ.

ಬೀದರ್ ತಾಲ್ಲೂಕಿನ ಇಸ್ಲಾಂಪುರದ ಪಂಡರಿನಾಥ ಕೌಟಗೆ, ಅವರ ಕಿರಿಯ ಸಹೋದರ ಸಂಗಮೇಶ, ಜನವಾಡದ ಬಸಯ್ಯ ಸ್ವಾಮಿ, ಶಿವರಾಜ ಪಾಟೀಲ, ಬಂಪಳ್ಳಿಯ ರಾಜಕುಮಾರ ಸ್ವಾಮಿ, ಕಪಲಾಪುರದ ಶಿವಾನಂದ ಪಾಟೀಲ ಕ್ಯಾಂಪಿನಲ್ಲಿದ್ದಾರೆ.

ಶ್ರೀನಗರದಿಂದ ಕಟ್ರಾಗೆ ಹೋಗುವ ಮಾರ್ಗದಲ್ಲಿನ ಸೇತುವೆ ಕುಸಿದು ಬಿದ್ದು ಸಂಪರ್ಕ ಕಡಿತಗೊಂಡಿದ್ದು, ಎಲ್ಲಿಗೂ ಹೋಗಲಾರದೆ ಕ್ಯಾಂಪಿನಲ್ಲೇ ಉಳಿದುಕೊಂಡಿದ್ದಾರೆ. ಇವರ ಜತೆ ತೆರಳಿದ್ದ ಜನವಾಡದ ಧನರಾಜ ಪಾಟೀಲ ಹಾಗೂ ಹಣಮಂತ ಪಾಂಚಾಳ ಜುಲೈ 7ರಂದು ಅಲ್ಲಿಂದ ಸುರಕ್ಷಿತವಾಗಿ ವಾಪಸ್ ಮರಳಿದ್ದಾರೆ.

‘ಜುಲೈ 1ಕ್ಕೆ ನಾವು ಎಂಟು ಜನ ಬೀದರ್‌ನಿಂದ ಅಮರನಾಥ ಯಾತ್ರೆಗೆ ಹೋಗಿದ್ದೆವು. ನಮ್ಮ ಜತೆಗಿದ್ದ ಇಬ್ಬರು ಜು. 7ರಂದು ಬೀದರ್‌ಗೆ ವಾಪಸ್ ತೆರಳಿದ್ದಾರೆ. ನಾವು ಆರು ಜನ ವೈಷ್ಣೋದೇವಿಗೆ ಹೋಗಲು ಶ್ರೀನಗರಕ್ಕೆ ಬಂದಿದ್ದೆವು. ಅಲ್ಲಿಂದ ಕಟ್ರಾಗೆ ಹೋಗಬೇಕಿತ್ತು. ಆದರೆ, ಮಾರ್ಗ ಮಧ್ಯದ ಸೇತುವೆ ಕುಸಿದು ಬಿದ್ದದ್ದರಿಂದ ಬನಿಹಾಲ್ ಕ್ಯಾಂಪ್‌ನಲ್ಲಿ ಉಳಿಯುವಂತಾಗಿದೆ. ನಮ್ಮಂತಹ ಅನೇಕ ಜನರಿಗೆ ಟೆಂಟ್, ಊಟದ ವ್ಯವಸ್ಥೆ ಮಾಡಿದ್ದಾರೆ’ ಎಂದು ಸಂಗಮೇಶ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

### ಚಿತ್ರಾವಳಿ

ಬೆಂಗಳೂರು ವಿಜಯನಗರದ ಆದಿಚುಂಚನಗಿರಿ ಮಠದಲ್ಲಿ ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಬ್ರಿಟಿಷ್ ಡೆಪ್ಯುಟಿ ಹೈ ಕಮಿಷನರ್ ಚಂದ್ರು ಅಯ್ಯರ್ ಮತ್ತು ನಿಯೋಗ ಭೇಟಿ ಮಾಡಿತು.

ನಗರದ ಲಯನ್ಸ್ ಕುಮಾರಪಾರ್ಕ್ ಕ್ಲಬ್‌ನ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಡಾ. ಆರ್. ಇಂದಿರಾ ಅವರ ಪದಗ್ರಹಣ ಕಾರ್ಯಕ್ರಮದಲ್ಲಿ ಶ್ರವಣ ದೋಷವಿರುವ 10 ಜನರಿಗೆ ಶ್ರವಣ ಯಂತ್ರವನ್ನು ಉಚಿತವಾಗಿ ನೀಡಲಾಯಿತು. (ಎಡದಿಂದ) ರೇಣುಕಾ ಕರ್ಜತ್ಕಾರ್, ರಾಜು ಚಂದ್ರಶೇಖರ, ನಾಗರಾಜ ಶೆಟ್ಟಿ, ಬಿ.ಎಸ್. ರಾಜಶೇಖರಯ್ಯ ಇದ್ದರು.

## ಅಧಿಕೃತ ವಕ್ತಾರರಾಗಿ ಜಂಟಿ ಪೊಲೀಸ್ ಆಯುಕ್ತರ ನೇಮಕ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರ ಪೊಲೀಸ್ ವಿಭಾಗದಲ್ಲಿ ಸಾರ್ವಜನಿಕರು, ಮಾಧ್ಯಮದ ಜೊತೆ ಸಂವಹನ ನಡೆಸಲು ಜಂಟಿ ಪೊಲೀಸ್ ಆಯುಕ್ತರನ್ನು (ಅಪರಾಧ) ಅಧಿಕೃತ ವಕ್ತಾರರಾಗಿ ನೇಮಕಗೊಳಿಸಿ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ಅವರು ಆದೇಶಿಸಿದ್ದಾರೆ.

ಸಾರ್ವಜನಿಕ ಸುರಕ್ಷತೆ, ಸಂಚಾರ, ಅಪರಾಧ ನಿಯಂತ್ರಣ ಸಮುದಾಯ ಕಾವಲುಗಳಂತಹ ವಿಶೇಷ ಅಭಿಯಾನವನ್ನು ಅಧಿಕೃತ ವಕ್ತಾರರು ರೂಪಿಸಬೇಕು. ಸಾಮಾಜಿಕ ಮಾಧ್ಯಮಗಳಲ್ಲಿ ಬರುವ ಸುಳ್ಳುಸುದ್ದಿ, ತಿರುಚಿದ ಮಾಹಿತಿ, ಊಹಾಪೋಹಗಳನ್ನು ನಿಖರವಾದ ಮಾಹಿತಿ ನೀಡುವ ಮೂಲಕ ಸಾರ್ವಜನಿಕರ ವಿಶ್ವಾಸಾರ್ಹತೆ ಉಳಿಸಿಕೊಳ್ಳಬೇಕು. ಹಿರಿಯ ಅಧಿಕಾರಿಗಳು, ತನಿಖಾಧಿಕಾರಿಗಳು, ಬೆಂಗಳೂರು ಸಂಚಾರ ಪೊಲೀಸ್ ಮತ್ತಿತರ ವಿಭಾಗದ ಅಧಿಕಾರಿಗಳೊಂದಿಗೆ ನಿಕಟ ಸಂಪರ್ಕ ಸಾಧಿಸಿ ಎಲ್ಲೆಡೆಯ ಮಾಹಿತಿ ಸಂಗ್ರಹಿಸಿ ಇಲಾಖೆ ಆದ್ಯತೆಗೆ ಏಕರೀತಿಯ ಸಂದೇಶ ಬರುವಂತೆ ನೋಡಿಕೊಳ್ಳಬೇಕು ಎಂದು ಆದೇಶದಲ್ಲಿ ಹೇಳಿದ್ದಾರೆ.

ಪೊಲೀಸರಿಗೆ ತನಿಖೆಗೆ ಸಹಾಯ ಮಾಡುವ ವ್ಯಕ್ತಿಗಳು ಹಾಗೂ ಅವರ ಕೆಲಸದ ಪಟ್ಟಿಯನ್ನು ಪೊಲೀಸ್ ಆಯುಕ್ತರಿಗೆ ಸಲ್ಲಿಸಬೇಕು. ಮಾಸಿಕ ಜನಸಂಪರ್ಕ ಸಭೆ ನಡೆಸಬೇಕು. ಸಾರ್ವಜನಿಕರೊಂದಿಗೆ ಅಧಿಕೃತ ವಕ್ತಾರರಾಗಿ ಪಾರದರ್ಶಕತೆ ಕಾಯ್ದುಕೊಳ್ಳುವ ಮೂಲಕ ಪೊಲೀಸ್ ಇಲಾಖೆಯ ವರ್ಚಸ್ಸು, ವಿಶ್ವಾಸಾರ್ಹತೆ ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡಬೇಕು. ಸಾರ್ವಜನಿಕರ ಮತ್ತು ಮಾಧ್ಯಮಗಳ ಪ್ರಶ್ನೆಗಳಿಗೆ ಅಧಿಕೃತ ವಕ್ತಾರರು ಮಾಹಿತಿ ನೀಡಬೇಕು ಎಂದಿದ್ದಾರೆ.

ತನಿಖೆ ಮತ್ತು ಇಲಾಖೆಯ ಯೋಜನೆಗಳ ಕುರಿತು ನಿಖರ ಮಾಹಿತಿಯನ್ನು ಸಕಾಲದಲ್ಲಿ ನೀಡಬೇಕು. ತುರ್ತು ಸಂದರ್ಭಗಳ ನಿರ್ವಹಣೆ, ಸಾರ್ವಜನಿಕ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಕಮಿಷನರ್ ಸೂಚಿಸಿದ್ದಾರೆ.

## ₹2 ಲಕ್ಷ ಮೌಲ್ಯದ ವಾಹನ ಜಪ್ತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜರಾಜೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಬೈಕ್ ಕಳವು ಮಾಡುತ್ತಿದ್ದ ಆರೋಪಿಯನ್ನು ಬಂಧಿಸಿರುವ ಪೊಲೀಸರು, ₹ 2 ಲಕ್ಷ ಬೆಲೆಯ ಮೂರು ಬೈಕ್‌ಗಳನ್ನು ಜಪ್ತಿ ಮಾಡಿದ್ದಾರೆ. ‘ಆರ್.ಆರ್.ನಗರದಲ್ಲಿ 1 ಹಾಗೂ ಕಾಡುಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 1 ಬೈಕ್ ಕಳವು ಪ್ರಕರಣದಲ್ಲಿ ಆರೋಪಿ ಭಾಗಿಯಾಗಿದ್ದ’ ಎಂದು ಪೊಲೀಸರು ಹೇಳಿದರು.

ನಾಲ್ಕೈದು ತಿಂಗಳಲ್ಲಿ ಹೊಸ ಮೊಬೈಲ್ ನೀಡಲು ಒತ್ತಾಯ

## ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸರ್ಕಾರ ನಾಲ್ಕು ವರ್ಷಗಳ ಹಿಂದೆ ಅಂಗನವಾಡಿ ಕಾರ್ಯಕರ್ತೆಯರಿಗೆ ನೀಡಿದ್ದ ಮೊಬೈಲ್‌ಗಳನ್ನು ಕೂಡಲೇ ಹಿಂಪಡೆಯಬೇಕು ಎಂದು ಆಗ್ರಹಿಸಿ ರಾಜ್ಯದಾದ್ಯಂತ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿಗಳ ಕಚೇರಿ (ಸಿಡಿಪಿಒ) ಮುಂಭಾಗದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಸೋಮವಾರ ಪ್ರತಿಭಟನೆ ನಡೆಸಿದರು.

‘ಕಳಪೆ ಗುಣಮಟ್ಟದಿಂದ ಕೂಡಿರುವ ಮೊಬೈಲ್‌ಗಳ ಬಗ್ಗೆ ಅಧಿಕಾರಿಗಳಿಗೆ ಗೊತ್ತಿದ್ದರೂ ಅದೇ ಮೊಬೈಲ್‌ಗಳಲ್ಲೇ ಬೇರೆ ಬೇರೆ ಇಲಾಖೆಯ ಸಮೀಕ್ಷೆಗಳು ಮತ್ತು ಚುನಾವಣೆ ಕೆಲಸಗಳನ್ನು ಮಾಡಲು ಒತ್ತಾಯಿಸಲಾಗುತ್ತದೆ. ಕೆಲಸ ಮಾಡದಿದ್ದರೆ ಶಿಸ್ತು ಕ್ರಮ ಕೈಗೊಳ್ಳುವ, ವೇತನ ತಡೆ ಹಿಡಿಯುವ ಬೆದರಿಕೆ ಹಾಕುತ್ತಿದ್ದು, ಮಾನಸಿಕ ಕಿರುಕುಳ ನೀಡುತ್ತಿದ್ದಾರೆ’ ಎಂದು ಕಾರ್ಯಕರ್ತೆಯರು ಆರೋಪಿಸಿದರು.

ಈ ಬಗ್ಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ನಿರ್ದೇಶಕರಿಗೆ ಸಲ್ಲಿಸಿರುವ ಮನವಿ ಪತ್ರದಲ್ಲಿ ‘ಅಂಗನವಾಡಿ ಕಾರ್ಯಕರ್ತೆಯರಿಗೆ ನೀಡಿರುವ ಮೊಬೈಲ್‌ಗಳನ್ನು ವಾಪಸ್ ಪಡೆಯುವಂತೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಸೂಚಿಸಬೇಕು. ಜತೆಗೆ ಸಮೀಕ್ಷಾ ಕಾರ್ಯಕ್ಕೆ ಒತ್ತಡ ಹಾಕಬಾರದು. ಇಲಾಖೆಯ ಅಧಿಕಾರಿಗಳು ಅಂಗನವಾಡಿ ಸಂಘಟನೆಗಳೊಂದಿಗೆ ಸಮಾಲೋಚನೆ ಸಭೆ ನಡೆಸುವದರ ಮೂಲಕ ಸಮಸ್ಯೆಗಳ ಪರಿಹಾರಕ್ಕೆ ಆದ್ಯತೆ ನೀಡಬೇಕು’ ಎಂದು ಆಗ್ರಹಿಸಿದ್ದಾರೆ.

‘2018ರಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಎಲ್‌ಜಿ ಕಂಪನಿಯ 63 ಸಾವಿರ ಮೊಬೈಲ್‌ಗಳನ್ನು ನೀಡಲಾಗಿತ್ತು. ಈ ಮೊಬೈಲ್‌ಗಳಲ್ಲಿ ನೆಟ್‌ವರ್ಕ್, ಸ್ಟೋರೇಜ್ ಸಮಸ್ಯೆ ಇದೆ. ಹೊಸ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶವಿಲ್ಲ. ಮುಂದಿನ ನಾಲ್ಕೈದು ತಿಂಗಳಲ್ಲಿ ಹೊಸ ಮೊಬೈಲ್‌ಗಳನ್ನು ನೀಡದಿದ್ದರೆ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು’ ಎಂದು ರಾಜ್ಯ ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಎಸ್. ವರಲಕ್ಷ್ಮಿ ಎಚ್ಚರಿಕೆ ನೀಡಿದರು.

ಮೊಬೈಲ್ ಹಿಂಪಡೆಯುವಂತೆ ಆಗ್ರಹಿಸಿ ನಗರದ ಬಸವನಗುಡಿ ವ್ಯಾಪ್ತಿಯ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿಗಳ ಕಚೇರಿ ಮುಂಭಾಗದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿದರು.

### ಜೈನ ಮುನಿ ಕೊಲೆ ಪ್ರಕರಣ: ವಿಧಾನಮಂಡಲದಲ್ಲಿ ಚರ್ಚೆ

# ಸಿಬಿಐ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಹಿರೇಕೋಡಿಯ ಜೈನ ಮುನಿ ಕಾಮಕುಮಾರ ನಂದಿ ಮಹಾರಾಜರ ಕೊಲೆ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಬಿಜೆಪಿ ಸದಸ್ಯರು ವಿಧಾನಮಂಡಲದಲ್ಲಿ ಸೋಮವಾರ ಆಗ್ರಹಿಸಿದರು.

ವಿಧಾನಸಭೆಯಲ್ಲಿ ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ಅಭಯ ಪಾಟೀಲ, 'ಕಾಮಕುಮಾರ ನಂದಿ ಅವರನ್ನು ಅತ್ಯಂತ ಬರ್ಬರವಾಗಿ ಕೊಲೆ ಮಾಡಲಾಗಿದೆ. ನಾರಾಯಣ ಮಾಳಿ ಎಂಬ ಮೊದಲನೇ ಆರೋಪಿಯ ಹೆಸರನ್ನು ಮಾತ್ರ ಬಹಿರಂಗಪಡಿಸಲಾಗಿದೆ. ಹಸನ್ ದಲಾಯತ್ ಎಂಬ ಎರಡನೇ ಆರೋಪಿಯ ಹೆಸರನ್ನು ಮುಚ್ಚಿಡಲಾಗಿದೆ. ಪೊಲೀಸರು ಸರಿಯಾಗಿ ತನಿಖೆ ನಡೆಸುತ್ತಿಲ್ಲ. ಆದ್ದರಿಂದ ಪ್ರಕರಣವನ್ನು ಸಿಬಿಐಗೆ ವರ್ಗಾಯಿಸಬೇಕು' ಎಂದು ಒತ್ತಾಯಿಸಿದರು.

ನಂತರ ಮಾತನಾಡಿದ ಕಾಂಗ್ರೆಸ್‌ನ ಲಕ್ಷ್ಮಣ ಸವದಿ, 'ಬೆಳಗಾವಿ ಪೊಲೀಸರು ಅತ್ಯಂತ ದಕ್ಷತೆಯಿಂದ ಪ್ರಕರಣದ ತನಿಖೆ ನಡೆಸುತ್ತಿದ್ದಾರೆ. ದೂರು ದಾಖಲಾದ ಆರು ಗಂಟೆಗಳೊಳಗೆ ಆರೋಪಿಗಳನ್ನು ಬಂಧಿಸಿದ್ದಾರೆ. ಯಾವ ಒತ್ತಡವೂ ಇಲ್ಲ. ನಿಷ್ಪಕ್ಷಪಾತವಾಗಿ ತನಿಖೆ ನಡೆಯುತ್ತಿದೆ. ರಾಜಕೀಯ ಬೆರೆಸುವುದು ಬೇಡ' ಎಂದರು.

'ಇಬ್ಬರು ಆರೋಪಿಗಳಿದ್ದರೂ, ಒಂದು ಹೆಸರು ಮಾಯ ಆಗಿದೆ' ಎಂದು ಬಿಜೆಪಿಯ ಶಶಿಕಲಾ ಜೊಲ್ಲೆ ದೂರಿದರು. 'ಹಸನ್ ದಲಾಯತ್ ಹೆಸರನ್ನು ಮುಚ್ಚಿಡಲಾಗಿದೆ. ಪ್ರಕರಣದಲ್ಲಿ ಒಂದು ಕೋಮಿನವರನ್ನು ರಕ್ಷಿಸುವ ಪ್ರಯತ್ನ ನಡೆಯುತ್ತಿದೆ. ಪೊಲೀಸರು ಒತ್ತಡಕ್ಕೆ ಮಣಿದಿದ್ದಾರೆ' ಎಂದು ಆರೋಪಿಸಿದರು.

'ಉತ್ತರ ಪ್ರದೇಶದ ಮಾದರಿಯಲ್ಲಿ ಆರೋಪಿಗಳನ್ನು ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಬೇಕು. ಇಲ್ಲವಾದಲ್ಲಿ ಮರಣದಂಡನೆ ವಿಧಿಸಬೇಕು' ಎಂದು ಬಿಜೆಪಿಯ ಸಿದ್ದು ಸವದಿ ಆಗ್ರಹಿಸಿದರು. ಬಿಜೆಪಿಯ ವಿ. ಸುನಿಲ್ ಕುಮಾರ್, ಆರಗ ಜ್ಞಾನೇಂದ್ರ ಕೂಡ ಪ್ರಕರಣವನ್ನು ಸಿಬಿಐಗೆ ವರ್ಗಾವಣೆ ಮಾಡುವಂತೆ ಒತ್ತಾಯಿಸಿದರು.

ಬಿಜೆಪಿಯ ಶಾಸಕ ಬಸವರಾಜ ಬೊಮ್ಮಾಯಿ ಮಾತನಾಡಿ, 'ಜೈನ ಮುನಿ ಕೊಲೆ ಪ್ರಕರಣದ ತನಿಖೆ ಸರಿಯಾಗಿ ನಡೆಯುತ್ತಿಲ್ಲ. ಕೊಲೆಯ ಹಿಂದಿನ ಉದ್ದೇಶವನ್ನು ತಿಳಿಯುವ ಪ್ರಯತ್ನ ಆಗಿಲ್ಲ. ಹಣಕಾಸು ವ್ಯವಹಾರದ ಕುರಿತು ಸುಳ್ಳುಸುದ್ದಿಯನ್ನು ಪೊಲೀಸರೇ ಹಬ್ಬಿಸಿದ್ದಾರೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ರಾಜ್ಯದಲ್ಲಿ ಬಹುಬೇಗ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ' ಎಂದರು.

**ಪರಿಷತ್‌ನಲ್ಲೂ ಪ್ರಸ್ತಾಪ:** ವಿಧಾನ ಪರಿಷತ್‌ನಲ್ಲಿ ಇದೇ ವಿಚಾರದಲ್ಲಿ ನಿಲುವಳಿ ಸೂಚನೆ ಮಂಡನೆಗೆ ಅವಕಾಶ ನೀಡುವಂತೆ ಬಿಜೆಪಿ ಸದಸ್ಯರು ಆಗ್ರಹಿಸಿದರು. ಕೋಟ ಶ್ರೀನಿವಾಸ ಪೂಜಾರಿ, ಭಾರತಿ ಶೆಟ್ಟಿ, ತೇಜಸ್ವಿನಿ ಗೌಡ, ಎನ್. ರವಿಕುಮಾರ್, ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಸಿಬಿಐ ತನಿಖೆಗೆ ಆಗ್ರಹಿಸಿದರು.

ಜೆಡಿಎಸ್‌ನ ಟಿ.ಎ. ಶರವಣ ಕೂಡ ಬಿಜೆಪಿ ಬೇಡಿಕೆಯನ್ನು ಬೆಂಬಲಿಸಿದರು. ಕಾಂಗ್ರೆಸ್‌ನ ಜಗದೀಶ ಶೆಟ್ಟರ್, ಪ್ರಕಾಶ್ ಹುಕ್ಕೇರಿ ಸರ್ಕಾರದ ನಿಲುವನ್ನು ಸಮರ್ಥಿಸಿಕೊಂಡರು.

ಕಾನೂನು ಸಚಿವ ಎಚ್.ಕೆ.ಪಾಟೀಲ, ಹಣಕ್ಕಾಗಿ ಕೊಲೆ ಮಾಡಲಾಗಿದೆ ಎಂಬ ಆರೋಪಿಗಳ ಹೇಳಿಕೆಯನ್ನು ಗೃಹ ಸಚಿವರು, ಪೊಲೀಸರು ಉಲ್ಲೇಖಿಸಿದ್ದಾರೆ. ಅದನ್ನೇ ಟೀಕೆ ಮಾಡಿದರೆ ಹೇಗೆ? ಡಿಸಿಪಿ ಮಟ್ಟದ ಅಧಿಕಾರಿಗೆ ತನಿಖೆಯ ಹೊಣೆ ವಹಿಸಲಾಗಿದೆ ಎಂದರು.

> **ಕೊಲೆಯನ್ನು ತೀವ್ರವಾಗಿ ಖಂಡಿಸುತ್ತೇನೆ. ಪ್ರಕರಣದ ಕುರಿತು ಪರಿಶೀಲಿಸಲು ಗೃಹ ಸಚಿವರು ಚಿಕ್ಕೋಡಿಗೆ ತೆರಳಿದ್ದಾರೆ. ಅವರಿಂದ ಮಾಹಿತಿ ಪಡೆದು ಮಂಗಳವಾರ ನಾವು ಉತ್ತರ ನೀಡುತ್ತೇವೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> **ಜೈನ ಮುನಿ ಕೊಲೆ ಪ್ರಕರಣದ ತನಿಖೆಯನ್ನು ರಾಜ್ಯದ ಪೊಲೀಸರು ನಿಷ್ಪಕ್ಷಪಾತವಾಗಿ ನಡೆಸುತ್ತಿಲ್ಲ. ಆದ್ದರಿಂದ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕು**
> **ಬಸವರಾಜ ಬೊಮ್ಮಾಯಿ,** ಬಿಜೆಪಿ ಶಾಸಕ

# ಉಪವಾಸ ಕೈಬಿಟ್ಟ ಗುಣಧರ ನಂದಿ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

**ಹುಬ್ಬಳ್ಳಿ:** 'ರಾಜ್ಯದ ಎಲ್ಲ ಜೈನ ಮುನಿಗಳಿಗೆ ಪೊಲೀಸ್ ಭದ್ರತೆ ನೀಡುವುದಾಗಿ ಗೃಹ ಸಚಿವ ಜಿ.ಪರಮೇಶ್ವರ ಅವರು ಭರವಸೆ ನೀಡಿದ್ದಾರೆ. ಅದನ್ನು ಅವರು ಲಿಖಿತ ರೂಪದಲ್ಲಿ ನೀಡಲಿದ್ದು, ಶೀಘ್ರ ಸುತ್ತೋಲೆ ಹೊರಡಿಸುವ ವಿಶ್ವಾಸವಿದೆ. ಈ ಹಿನ್ನೆಲೆಯಲ್ಲಿ ಆಮರಣ ಉಪವಾಸ ನಿರ್ಧಾರ ಕೈಬಿಟ್ಟಿದ್ದೇನೆ' ಎಂದು ಇಲ್ಲಿನ ವರೂರು ನವಗ್ರಹ ತೀರ್ಥಕ್ಷೇತ್ರದ ಗುಣಧರ ನಂದಿ ಮಹಾರಾಜರು ಹೇಳಿದರು.

ವರೂರು ನವಗ್ರಹ ತೀರ್ಥಕ್ಷೇತ್ರಕ್ಕೆ ಸೋಮವಾರ ಬೆಳಿಗ್ಗೆ ಗೃಹ ಸಚಿವ ಜಿ. ಪರಮೇಶ್ವರ ಭೇಟಿ ನೀಡಿ, ಚರ್ಚಿಸಿದ ನಂತರ ಮಾಧ್ಯಮಗಳಿಗೆ ಈ ವಿಷಯ ತಿಳಿಸಿದರು.

ಚಿಕ್ಕೋಡಿಯ ಹಿರೇಕೋಡಿಯ ನಂದಿಪರ್ವತ ಆಶ್ರಮದ ಮುನಿ ಕಾಮಕುಮಾರ ನಂದಿ ಮಹಾರಾಜರ ಬರ್ಬರ ಹತ್ಯೆ ಹಿನ್ನೆಲೆಯಲ್ಲಿ ಜೈನ ಮುನಿಗಳಿಗೆ ರಕ್ಷಣೆ ನೀಡುವ ಕುರಿತು ಸರ್ಕಾರ ಸೋಮವಾರ ಸಂಜೆಯೊಳಗೆ ಲಿಖಿತ ಹೇಳಿಕೆ ನೀಡಬೇಕು. ತಪ್ಪಿದಲ್ಲಿ ಉಪವಾಸ ಮುಂದುವರಿಸಿ, ದೇಹ ತ್ಯಾಗಕ್ಕೂ ಸಿದ್ಧ ಎಂದು ಸ್ವಾಮೀಜಿ ಸರ್ಕಾರಕ್ಕೆ ಗಡುವು ನೀಡಿದ್ದರು.

'ಈ ಪ್ರಕರಣ ರಾಜಕೀಯ ಹೋರಾಟ ಆಗಬಾರದು. ಎಲ್ಲ ಪಕ್ಷದ ಮುಖಂಡರೂ ಮುನಿಗಳ ಹತ್ಯೆ ಖಂಡಿಸಿದ್ದಾರೆ. ಜೈನ ಸಮುದಾಯಕ್ಕೆ ಎಲ್ಲ ಪಕ್ಷದವರ, ಧರ್ಮದವರ ಸಹಕಾರವಿದೆ. ಎಲ್ಲರೂ ನಮ್ಮ ಆತ್ಮೀಯರಾಗಿದ್ದು ಅವರೆಲ್ಲರ ಸಹಕಾರದಿಂದ ನಮ್ಮ ಪುಟ್ಟ ಸಮುದಾಯ ನೆಮ್ಮದಿಯಿಂದ ಬದುಕಲು ಸಾಧ್ಯವಾಗುತ್ತಿದೆ' ಎಂದರು.

ಜೈನ ಅಭಿವೃದ್ಧಿ ನಿಗಮ ಮಂಡಳಿ ಸ್ಥಾಪನೆ ಸೇರಿದಂತೆ ಕೆಲವು ಬೇಡಿಕೆಗಳ ಈಡೇರಿಕೆಗೆ ಗುಣಧರ ನಂದಿ ಮಹಾರಾಜರು, ಗೃಹ ಸಚಿವ ಜಿ. ಪರಮೇಶ್ವರ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಅವರಿಗೆ ಮನವಿ ಸಲ್ಲಿಸಿದರು.

ಹುಬ್ಬಳ್ಳಿ ತಾಲ್ಲೂಕಿನ ವರೂರು ನವಗ್ರಹ ತೀರ್ಥಕ್ಷೇತ್ರಕ್ಕೆ ಸೋಮವಾರ ಭೇಟಿ ನೀಡಿದ್ದ ಗೃಹ ಸಚಿವ ಜಿ. ಪರಮೇಶ್ವರ ಅವರು, ಗುಣಧರ ನಂದಿ ಮಹಾರಾಜರ ಜೊತೆ ಚರ್ಚಿಸಿದರು. ಸಚಿವ ಸಂತೋಷ ಲಾಡ್, ಶಾಸಕ ಪ್ರಸಾದ ಅಬ್ಬಯ್ಯ ಇದ್ದಾರೆ –ಪ್ರಜಾವಾಣಿ ಚಿತ್ರ

### 'ಶಿಕ್ಷೆ ಬೇಡ, ಶಿಕ್ಷಣ ನೀಡಿ'

**ಹುಬ್ಬಳ್ಳಿ:** 'ಮುನಿ ಹತ್ಯೆ ಅಪರಾಧಿಗಳಿಗೆ ಕಠಿಣ ಶಿಕ್ಷೆಗೆ ಗುರಿಪಡಿಸುವುದಕ್ಕಿಂತ, ಅವರ ಮನಃ ಪರಿವರ್ತನೆಯಾಗುವ ಶಿಕ್ಷಣ ಕೊಡಿಸಬೇಕು. ಅವರನ್ನು ನಂಬಿಕೊಂಡ ಕುಟುಂಬ ಅನಾಥವಾಗಬಾರದು. ಅವರ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲು ಸರ್ಕಾರ ಮುಂದಾಗಬೇಕು' ಎಂದು ಗುಣಧರ ನಂದಿ ಮಹಾರಾಜರು ಪ್ರತಿಪಾದಿಸಿದರು.

### ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಹೇಳಿಕೆ: ಗೃಹ ಸಚಿವ ಜಿ. ಪರಮೇಶ್ವರ

**ಹುಬ್ಬಳ್ಳಿ:** 'ಚಿಕ್ಕೋಡಿಯ ಕಾಮಕುಮಾರ ಮುನಿ ಹತ್ಯೆ ಪ್ರಕರಣದ ಆರೋಪಿಗಳನ್ನು ರಕ್ಷಿಸುವ ಪ್ರಶ್ನೆಯೇ ಇಲ್ಲ. ಜವಾಬ್ದಾರಿ ಸ್ಥಾನದಲ್ಲಿ ಇರುವ ಕೇಂದ್ರ ಸಚಿವರು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಇಲ್ಲಸಲ್ಲದ ಹೇಳಿಕೆ ನೀಡುವುದು ಸರಿಯಲ್ಲ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

'ರಾಜ್ಯ ಸರ್ಕಾರ ಆರೋಪಿಗಳನ್ನು ರಕ್ಷಿಸುತ್ತಿದೆ' ಎಂಬ ಸಚಿವ ಪ್ರಲ್ಹಾದ ಜೋಶಿ ಆರೋಪಕ್ಕೆ ತಿರುಗೇಟು ಕೊಟ್ಟರು.

'ಜೈನ ಮುನಿ ಹತ್ಯೆ ಪ್ರಕರಣಕ್ಕೆ ರಾಜಕೀಯ ಬಣ್ಣ ಹಚ್ಚಬಾರದು. ಇಂತಹ ವಿಷಯವನ್ನು ಸರ್ಕಾರಕ್ಕೆ ಹಾಗೂ ಕಾನೂನಿಗೆ ಬಿಟ್ಟು ಬಿಡಬೇಕು' ಎಂದು ಹೇಳಿದರು.

'ಹತ್ಯೆ ಪ್ರಕರಣ ಸಿಬಿಐ ತನಿಖೆಗೆ ಕೊಡುವ ಅಗತ್ಯವಿಲ್ಲ. ರಾಜ್ಯ ಪೊಲೀಸರು ಉತ್ತಮವಾಗಿ ಕೆಲಸ ಮಾಡುತ್ತಿದ್ದು, ಡಿವೈ ಎಸ್‌ಪಿ ನೇತೃತ್ವದಲ್ಲಿ ತನಿಖೆ ಮುಂದುವರಿದಿದೆ. ಈಗಾಗಲೇ ಪ್ರಕರಣದ ಆರೋಪಿಗಳನ್ನು ಬಂಧಿಸಲಾಗಿದೆ' ಎಂದರು.

'ಎ1 ಮತ್ತು ಎ2 ಆರೋಪಿಗಳ ಹೆಸರನ್ನು ಅದಲು ಬದಲು ಮಾಡಲಾಗಿದೆ' ಎನ್ನುವ ಶಾಸಕ ಅಭಯ ಪಾಟೀಲ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ಪೊಲೀಸರು ಕಾನೂನು ವ್ಯಾಪ್ತಿಯಲ್ಲಿ ತನಿಖೆ ಕೈಗೊಂಡಿದ್ದಾರೆ. ಶಾಸಕರು ಆರೋಪ ಸತ್ಯವಲ್ಲ, ಸರಿಯೂ ಅಲ್ಲ. ತನಿಖೆಯ ನಂತರ ಎಲ್ಲವೂ ಬಹಿರಂಗವಾಗಲಿದೆ' ಎಂದರು.

### ನಂದಿಪರ್ವತ ಆಶ್ರಮಕ್ಕೆ ಭೇಟಿ

**ಬೆಳಗಾವಿ:** ಜೈನ ಮುನಿ ಹತ್ಯೆ ಹಿನ್ನೆಲೆಯಲ್ಲಿ ಗೃಹಸಚಿವ ಜಿ.ಪರಮೇಶ್ವರ ಅವರು ಬೆಳಗಾವಿ, ಚಿಕ್ಕೋಡಿ, ಹಿರೇಕೋಡಿ ಆಶ್ರಮಗಳಿಗೆ ಸೋಮವಾರ ಭೇಟಿ ನೀಡಿ ಸಮಾಜದ ಜನರಿಗೆ ಧೈರ್ಯ ಹೇಳಿದರು.

ಬೆಳಗಾವಿ ತಾಲ್ಲೂಕಿನ ಹಲಗಾದ ಬಾಲಾಚಾರ್ಯ ಸಿದ್ಧಸೇನ ಮಹಾರಾಜ ಅವರನ್ನು ಭೇಟಿ ಮಾಡಿ ಅವರಿಂದ ಮನವಿ ಸ್ವೀಕರಿಸಿದರು. ನಂತರ ಚಿಕ್ಕೋಡಿಯಲ್ಲಿ ಸಮಾಜದ ಮುಖಂಡರ ಸಭೆ ನಡೆಸಿದರು. ಅಲ್ಲಿಂದ ಕಾಮಕುಮಾರ ನಂದಿ ಮಹಾರಾಜರು ಕಟ್ಟಿದ ಹಿರೇಕೋಡಿಯ ನಂದಿ ಪರ್ವತ ಆಶ್ರಮಕ್ಕೂ ಭೇಟಿ ನೀಡಿದರು.

# ಜೈನ ಮುನಿ ಹತ್ಯೆ: ಪ್ರತಿಭಟನೆ

ಒಂದನೇ ಪುಟದಿಂದ...

ಬೈಲಹೊಂಗಲದಲ್ಲಿ ರಾಯಣ್ಣ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಬೃಹತ್ ಪ್ರತಿಭಟನೆ ನಡೆಯಿತು. ಹಾವೇರಿಯಲ್ಲಿ ಜಿಲ್ಲಾ ದಿಗಂಬರ ಹಾಗೂ ಶ್ವೇತಾಂಬರ ಸಮಾಜದವರು ಕಪ್ಪುಬಟ್ಟೆ ಧರಿಸಿ ಹತ್ಯೆ ಖಂಡಿಸಿ, ತಹಶೀಲ್ದಾರ್‌ಗೆ ಮನವಿ ಪತ್ರ ನೀಡಿದರು. ಧಾರವಾಡದಲ್ಲಿ ಜಿಲ್ಲಾಧಿಕಾರಿ ಕಚೇರಿವರೆಗೆ ಮೌನ ಮೆರವಣಿಗೆ ನಡೆಯಿತು.

**ಜೈನ ಆಶ್ರಮಗಳಿಗೆ ಭದ್ರತೆ ಹೆಚ್ಚಿಸಿ:** ಮಂಗಳೂರಿನಲ್ಲಿ ಭಾರತೀಯ ಜೈನ್ ಮಿಲನ್‌ನ ಮಂಗಳೂರು ವಿಭಾಗ ಹಾಗೂ ಸಮಸ್ತ ಜೈನ ಸಮಾಜದ ವತಿಯಿಂದ ನಡೆದ ಪ್ರತಿಭಟನೆಯಲ್ಲಿ ಮೂಡುಬಿದಿರೆ ಜೈನ ಮಠದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಮಾತನಾಡಿ, 'ಗ್ರಾಮಾಂತರ ಪ್ರದೇಶದ ಆಶ್ರಮಗಳೂ ಸೇರಿದಂತೆ ಎಲ್ಲ ಜೈನ ಆಶ್ರಮಗಳಿಗೆ ಭದ್ರತೆ ಹೆಚ್ಚಿಸಬೇಕು. ಎಲ್ಲ ಧಾರ್ಮಿಕ ಶ್ರದ್ಧಾ ಕೇಂದ್ರಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಲು ಅಲ್ಪಸಂಖ್ಯಾತರ ಇಲಾಖೆ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಜೈನ ಸಮುದಾಯದ ಪ್ರಮುಖರಾದ ರತ್ನಾಕರ ಜೈನ್, ಸುದರ್ಶನ ಜೈನ್, ಪುಷ್ಪರಾಜ್ ಜೈನ್, ಸುರೇಶ್ ಬಲ್ಲಾಳ್ ಇದ್ದರು.

ಬೆಳ್ತಂಗಡಿಯಲ್ಲಿ ಜೈನ್ ಮಿಲನ್, ಧೀಮತಿ ಜೈನ ಮಹಿಳಾ ಸಮಾಜ, ಉಜಿರೆ, ವೇಣೂರಿನ ದಿಗಂಬರ ಜೈನ ತೀರ್ಥಕ್ಷೇತ್ರ ಸಮಿತಿ, ಬಸದಿ ಸ್ವಚ್ಛತಾ ತಂಡದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ಮೈಸೂರು, ಚಾಮರಾಜನಗರ, ಹಾಸನ, ಶ್ರವಣಬೆಳಗೊಳ, ಅರಸೀಕೆರೆಯಲ್ಲಿ ಜೈನರು ಪ್ರತಿಭಟನೆ– ಮೌನ ಮೆರವಣಿಗೆ ನಡೆಸಿದರು. ಮೈಸೂರು ಜಿಲ್ಲೆಯ ಸರಗೂರಿನಲ್ಲಿ ಜೈನ ಸಮಾಜ, ಅನಂತಮತಿ ಮಹಿಳಾ ಸಮಾಜದ ಸದಸ್ಯರು, 'ಹತ್ಯೆಯ ಸಮಗ್ರ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದರು. ಹಾಸನದ ಜೈನ ಸಂಘದ ಸದಸ್ಯರು ದೊಡ್ಡಬಸದಿ ರಸ್ತೆಯಲ್ಲಿ ಪ್ರತಿಭಟಿಸಿದರು.

ಶ್ರವಣಬೆಳಗೊಳ ಜೈನ ಮಠದ ಪೀಠಾಧಿಪತಿ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ, 'ಜೈನ ಮುನಿಗಳು ಹಾಗೂ ಸಾಧು ಸಂತರಿಗೆ, ಅಲ್ಪ ಸಂಖ್ಯಾತ ಜೈನ ಸಮುದಾಯಕ್ಕೆ ರಕ್ಷಣೆ ಒದಗಿಸಬೇಕು. ಹೇಯ ಕೃತ್ಯ ಎಸಗಿದವರಿಗೆ ಕಠಿಣ ಶಿಕ್ಷೆ ಕೊಡಬೇಕು' ಎಂದು ಒತ್ತಾಯಿಸಿದರು.

ಶ್ರೀಮಹಾವೀರ ಸಂಘ ಹಾಗೂ ಕರ್ನಾಟಕ ಜೈನ ಅಸೋಸಿಯೇಷನ್ ನೇತೃತ್ವದಲ್ಲಿ ದಾವಣಗೆರೆಯಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಚಿತ್ರದುರ್ಗ, ಶಿವಮೊಗ್ಗ, ಕೊಪ್ಪಳ ನಗರ, ಕುಕನೂರು, ಯಾದಗಿರಿಯಲ್ಲಿ ಮೌನ ಪ್ರತಿಭಟನಾ ಮೆರವಣಿಗೆಗಳು ನಡೆದವು.

### 'ವಿಹಾರ ವೇಳೆ ಭದ್ರತೆ: ಶೀಘ್ರ ಸುತ್ತೋಲೆ'

ಒಂದನೇ ಪುಟದಿಂದ...

ಸೋಮವಾರ ವರೂರಿನಲ್ಲಿ ಮುನಿ ಗುಣಧರ ನಂದಿ ಸ್ವಾಮೀಜಿ ಭೇಟಿ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿ, 'ಚಿಕ್ಕೋಡಿ ಕಾಮಕುಮಾರ ಮುನಿ ಹತ್ಯೆ ಹಿನ್ನೆಲೆಯಲ್ಲಿ ಗುಣಧರನಂದಿ ಮಹಾರಾಜರು ಜೈನ ಮುನಿಗಳಿಗೆ ರಕ್ಷಣೆ ಒದಗಿಸುವುದು ಸೇರಿದಂತೆ ನಾಲ್ಕು ಬೇಡಿಕೆಗಳನ್ನು ಮುಂದಿಟ್ಟಿದ್ದರು. ಅವುಗಳನ್ನು ಈಡೇರಿಸಲು ಸರ್ಕಾರ ಸಿದ್ಧವಿದೆ' ಎಂದರು.

'ಮುನಿಗಳು ವಿಹಾರ ಸಂದರ್ಭದಲ್ಲಿ ರಾತ್ರಿ ವೇಳೆ ವಿಶ್ರಾಂತಿ ಪಡೆಯಲು ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ ಅವಕಾಶ ನೀಡಬೇಕು ಎಂದು ವಿನಂತಿಸಿದ್ದರು. ಪ್ರಾಥಮಿಕ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಜೊತೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು. ಜೈನ ನಿಗಮ ಅಥವಾ ಮಂಡಳಿ ಸ್ಥಾಪಿಸಬೇಕು ಎನ್ನುವ ಬೇಡಿಕೆ ಸಹ ಮುಂದಿಟ್ಟಿದ್ದಾರೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಜೊತೆ ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು. ಜೈನ ಮಂದಿರಗಳ ಅತಿಕ್ರಮಣ ಮತ್ತು ದಬ್ಬಾಳಿಕೆ ಕುರಿತು ಪೊಲೀಸ್ ಇಲಾಖೆಗೆ ದೂರು ನೀಡಿದಲ್ಲಿ ಸೂಕ್ತ ಕ್ರಮ ಕೈಗೊಳ್ಳುತ್ತೇವೆ' ಎಂದು ಭರವಸೆ ನೀಡಿದರು.

### ಬಿಜೆಪಿ 2 ತಂಡಗಳ ಭೇಟಿ ಇಂದು

**ಬೆಂಗಳೂರು:** ಬೆಳಗಾವಿ ಜಿಲ್ಲೆಯಲ್ಲಿನ ಜೈನ ಮುನಿ ಹತ್ಯೆ ಮತ್ತು ಮೈಸೂರು ಜಿಲ್ಲೆಯಲ್ಲಿ ಯುವಬ್ರಿಗೇಡ್ ಕಾರ್ಯಕರ್ತನ ಹತ್ಯೆಗೆ ಸಂಬಂಧಿಸಿದಂತೆ ಸತ್ಯಾಸತ್ಯತೆ ಪರಿಶೀಲಿಸಲು ಬಿಜೆಪಿಯ ಎರಡು ತಂಡಗಳು ಮಂಗಳವಾರ ಸ್ಥಳಕ್ಕೆ ಭೇಟಿ ನೀಡಲಿವೆ.

ಬೆಳಗಾವಿಗೆ ಭೇಟಿ ನೀಡುವ ತಂಡದಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಅಶ್ವತ್ಥನಾರಾಯಣಗೌಡ, ಮಹೇಶ್ ಟೆಂಗಿನಕಾಯಿ, ಅಭಯಪಾಟೀಲ, ಈರಣ್ಣ ಕಡಾಡಿ, ಮಂಗಳಾ ಸುರೇಶ್ ಅಂಗಡಿ, ಮಹಾಂತೇಶ್ ಕವಟಗಿಮಠ, ಅನಿಲ್ ಬೆನಕೆ, ರಾಜೇಶ್ ನೇರ್ವಿ, ಸಂಜಯ್ ಪಾಟೀಲ, ಎಂ.ಬಿ.ಜರಲಿ ಇದ್ದಾರೆ. ಮೈಸೂರಿಗೆ ಭೇಟಿ ನೀಡುವ ತಂಡದಲ್ಲಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ಡಾ.ಸಿ.ಎನ್.ಅಶ್ವತ್ಥನಾರಾಯಣ, ಪ್ರತಾಪಸಿಂಹ, ಶ್ರೀವತ್ಸ, ಎನ್.ಮಹೇಶ್, ಪ್ರೀತಮ್‌ಗೌಡ, ಅಪ್ಪಣ್ಣ, ಮಲ್ಲಿಕಾರ್ಜುನ, ವೈ.ವಿ.ರವಿಶಂಕರ್, ಮಂಗಳಾ ಸೋಮಶೇಖರ್ ಇದ್ದಾರೆ.

### ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯುಸೆಕ್‌ಗಳಲ್ಲಿ) | ಹೊರಹರಿವು (ಕ್ಯುಸೆಕ್‌ಗಳಲ್ಲಿ) |
|---|---|---|---|---|
| ಕೆ ಆರ್ ಎಸ್* | 124.80 | 86.90 | 9,068 | 380 |
| ಹಾರಂಗಿ | 2,859 | 2,838.90 | 1,495 | 50 |
| ಕಬಿನಿ | 2284.00 | 2,268.24 | 3,580 | 800 |
| ಹೇಮಾವತಿ | 2,922 | 2892.30 | 2,517 | 200 |
| ಲಿಂಗನಮಕ್ಕಿ | 1,819 | 1,751.70 | 8,636 | 834 |
| ಸೂಪಾ (ಮೀ) | 564 | 527.25 | 7448.94 | 1,906.45 |
| ಮಾಣಿ | 595 | 576.86 | 1493 | - |
| ತುಂಗಭದ್ರಾ | 1,633 | 1,578.79 | 17,061 | 255 |
| ಮಲಪ್ರಭಾ | 2079.50 | 2,043.21 | 00 | 194 |
| ಘಟಪ್ರಭಾ | 2175 | 2,082.25 | 6,097 | 85 |
| ಭದ್ರಾ | 186 | 140.9 | 4,156 | 163 |
| ಆಲಮಟ್ಟಿ (ಮೀ) | 519.6 | 507.31 | 00 | 578 |
| ತುಂಗಾ | 588.24 | 588.24 | 6,677 | 6,145 |
| ನಾರಾಯಣಪುರ (ಮೀ) | 492.25 | 486.86 | 00 | 50 |

* ನೆಲಮಟ್ಟದಿಂದ

# ಎಸ್‌ಪಿಪಿ–1 ಬಿ.ಎ. ಬೆಳ್ಳಿಯಪ್ಪ ನೇಮಕ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್–1 (ಎಸ್‌ಪಿಪಿ) ಆಗಿ ಹೈಕೋರ್ಟ್ ವಕೀಲ ಬಿ.ಎ. ಬೆಳ್ಳಿಯಪ್ಪ ಅವರನ್ನು ನೇಮಕ ಮಾಡಲಾಗಿದೆ.

ಅಂತೆಯೇ, ಎಸ್‌ಪಿಪಿ–2 ಹುದ್ದೆಗೆ ವಿಜಯಕುಮಾರ್ ಮಜಗೆ ಮತ್ತು ಹೆಚ್ಚುವರಿ ಎಸ್‌ಪಿಪಿಯಾಗಿ ಬಿ.ಎನ್. ಜಗದೀಶ್ ಅವರನ್ನು ನೇಮಕ ಮಾಡಿ ಸೋಮವಾರ ಆದೇಶಿಸಲಾಗಿದೆ.


**ಸಿಬಿಐಸಿ – ತುಮಕೂರು ಇಂಡಸ್ಟ್ರಿಯಲ್ ಟೌನ್‌ಶಿಪ್ ಲಿಮಿಟೆಡ್ (ಸಿಬಿಐಸಿ–ಟಿಐಟಿಎಲ್)**
5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001.
ಫೋನ್ : 080–22267900, ಫ್ಯಾಕ್ಸ್: 22267901,
website: www.kiadb.in email.mdcbic23@gmail.com
ಸಂಖ್ಯೆ: ಸಿಬಿಐಸಿ ಟಿಐಟಿಎಲ್/ಇಎನ್‌ಜಿಜಿ/ಇಟಿಎನ್‌ಡಿ–ಇ–ಸರ್ವೀಸ್–01/166/2023–24 ದಿನಾಂಕ: 10.07.2023

**ಟೆಂಡರ್ ಆಹ್ವಾನ ಪ್ರಕಟಣೆ**
(ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಸಿ.ಬಿ.ಐ.ಸಿ–ಟಿ.ಐ.ಟಿ.ಎಲ್ ರವರು ಈ ಕೆಳಕಂಡ ಸೇವೆಗೆ ಇದೇ ರೀತಿಯ ಸೇವೆಯಲ್ಲಿ ಅಪಾರ ಪರಿಣಿತ ಹೊಂದಿದ ಹಾಗೂ ಬೆಂಗಳೂರಿನಲ್ಲಿ ಕಛೇರಿಯನ್ನು ಹೊಂದಿರುವ ಅರ್ಹ ಸಲಹೆಗಾರರು/ ಸಂಸ್ಥೆ ಗಳಿಂದ ದ್ವಿ–ಲಕೋಟೆ ಪದ್ದತಿಯಡಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು: ಚೆನ್ನೈ ಬೆಂಗಳೂರು ಇಂಡಸ್ಟ್ರೀಯಲ್ ಕಾರಿಡಾರ್ (ಸಿ.ಬಿ.ಐ.ಸಿ–ಟಿ.ಐ.ಟಿ.ಎಲ್), ತುಮಕೂರು ಇಂಡಸ್ಟ್ರಿಯಲ್ ನೋಡ್ ಇಲ್ಲಿ ಮಾಹಿತಿ ಮತ್ತು ಸಂವಹನೆಗಾಗಿ ಸಲಹೆಗಾರರನ್ನು ಆಯ್ಕೆ ಮಾಡುವುದು (2ನೇ ಕರೆ).
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 09.08.2023, ಸಂಜೆ 4.00 ಗಂಟೆವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in. ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/–
ಮುಖ್ಯ ಅಭಿಯಂತರರು, ಸಿಬಿಐಸಿ–ಟಿಐಟಿಎಲ್, ಬೆಂಗಳೂರು
DIPR/CP/499/Zen/2023-24



**ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ**
ಮುಖ್ಯ ಅಭಿಯಂತರ ಕಛೇರಿ, ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ,
"ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ–585105, ದೂ: 08472-220817,
ಫಾ: 08472-260818, E-mail ID : kwbceklb14@gmail.com
ಕ್ರ.ಸಂ. ಕಜಮ/ಮುಅಕ/ತಾಂತ್ರಿಕ/ನೀಸ/ಕುರೆಕುಪ್ಪಾ/ಓ.ಹೆಚ್.ಟಿ / 385 /2023–24 ದಿನಾಂಕ : 07–07–2023

**:: ಟೆಂಡರ್ ಪ್ರಕಟಣೆ ::**

1) ಕಾಮಗಾರಿ ವಿವರ: ನಗರೋತ್ಥಾನ ಹಂತ–3 (ಮುನಿಸಿಪಾಲಿಟಿ) ರಡಿ ಬಳ್ಳಾರಿ ಜಿಲ್ಲೆಯ ಕುರೆಕುಪ್ಪಾ ಪಟ್ಟಣದ ವಾರ್ಡ ಸಂಖ್ಯೆ–16 ರ ಚಿಕ್ಕಗುಡ್ಡಾ ಹತ್ತಿರ 02 ಸಂಖ್ಯೆಯ 10 ಲಕ್ಷ ಲೀಟರ್ ಸಾಮರ್ಥ್ಯದ 15 ಮೀಟರ್ ಎತ್ತರದ ಶಾಫ್ಟ್ ಮಾದರಿಯ ಆರ್.ಸಿ.ಸಿ ಮೇಲ್ಮಟ್ಟ ಜಲಸಂಗ್ರಹಗಾರ ನಿರ್ಮಾಣ ಮಾಡುವ ಕಾಮಗಾರಿ (ಲಂಪಸಮ್) – ವೇರಿಯೇಷನ್ ಇರುವುದಿಲ್ಲ. **(ವರ್ಕ ಇಂಡೆಂಟ್ : ಕೆ.ಯು.ಡಬ್ಲ್ಯೂ.ಎಸ್.ಡಿ.ಬಿ/2023–24 / ಡಬ್ಲ್ಯೂ.ಟಿ/ವರ್ಕ_ಇಂಡೆಂಟ್16)** 2) ಕಾಮಗಾರಿ ಅಂದಾಜು ಮೊತ್ತ: **ರೂ. 398.14 ಲಕ್ಷಗಳು (ಜಿ.ಎಸ್.ಟಿ ಹೊರತು ಪಡಿಸಿ),** 3) ಗುತ್ತಿಗೆದಾರರ ಅರ್ಹತೆ ವಿವರ: ಗುತ್ತಿಗೆದಾರರ ಅರ್ಹತೆಯಂತೆ. 4) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ: **ರೂ.7,04,000/–,** 5) ಕಾಮಗಾರಿಯ ಅವಧಿ: 12 (ಹನ್ನೆರಡು ತಿಂಗಳು ಮಳೆಗಾಲ ಸೇರಿ), 6) ಪೂರ್ವ ಟೆಂಡರ್ ಸಭೆ ದಿನಾಂಕ: **25–07–2023 ಸಮಯ : 11:30 ಗಂಟೆಯವರೆಗೆ,** 7) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **11–08–2023 ಸಮಯ : 17:30 ಗಂಟೆಯವರೆಗೆ,** 8) ಟೆಂಡರ್ ತೆರೆಯುವ ದಿನಾಂಕ: **14–08–2023 ಸಮಯ : 11:00 ಗಂಟೆ ನಂತರ,** 9) ಹೆಚ್ಚಿನ ವಿವರಗಳಿಗೆ: ಮುಖ್ಯ ಅಭಿಯಂತರರವರ ಕಛೇರಿ, ಕ.ನ.ನೀ.ಸ ಮತ್ತು ಒಚ ಮಂಡಳಿ, ಕಲಬುರಗಿ ವಲಯ, "ಜಲಭವನ", ರಾಜಾಪೂರ, ಕುಸನೂರು ರಸ್ತೆ, ಕಲಬುರಗಿ–585105, ದೂ: 08472–220817, E-mail ID : kwbceklb14@gmail.com, 10) ಅಂತರಜಾಲ ತಾಣದ ವಿಳಾಸ: www.kppp.karnataka.gov.in.
ಸಹಿ/– ಮುಖ್ಯ ಅಭಿಯಂತರು
ಕನನೀಸ ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ವಲಯ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/101/ಕೆ.ಎಸ್.ಎಂ.ಸಿ.&ಎ/2023–24


### ಹತ್ಯೆ ಖಂಡಿಸಿ ತಿ. ನರಸೀಪುರ ಬಂದ್

# 'ಯುವ ಬ್ರಿಗೇಡ್' ಸಂಚಾಲಕ ಕೊಲೆ

ಪ್ರಜಾವಾಣಿ ವಾರ್ತೆ

ವೇಣು ಗೋಪಾಲ್

**ತಿ.ನರಸೀಪುರ (ಮೈಸೂರು ಜಿಲ್ಲೆ):** ಪಟ್ಟಣದಲ್ಲಿ ಹನುಮ ಜಯಂತಿ ಆಚರಣೆ ವೇಳೆ ನಡೆದ ಜಗಳವು ವಿಕೋಪಕ್ಕೆ ತಿರುಗಿ ದುಷ್ಕರ್ಮಿಗಳು 'ಯುವ ಬ್ರಿಗೇಡ್' ಸಂಚಾಲಕ ವೇಣುಗೋಪಾಲ್ (31) ಅವರನ್ನು ಭಾನುವಾರ ರಾತ್ರಿ ಕೊಲೆ ಮಾಡಿದ್ದಾರೆ.

ಶ್ರೀರಾಂಪುರ ಕಾಲೊನಿ ನಿವಾಸಿ, ಬಾಳೆ ಮಂಡಿ ವರ್ತಕರಾಗಿದ್ದ ಅವರಿಗೆ ಪತ್ನಿ ಹಾಗೂ ಪುತ್ರಿ ಇದ್ದಾರೆ.

ಹತ್ಯೆ ಖಂಡಿಸಿ, ಸೋಮವಾರ ಪಟ್ಟಣ ಬಂದ್‌ಗೆ ಕರೆ ನೀಡಲಾಗಿತ್ತು. ಬಹುತೇಕ ಅಂಗಡಿಗಳು, ಮಳಿಗೆಗಳು ಮುಚ್ಚಿದ್ದವು. ವ್ಯಾಪಾರ– ವಹಿವಾಟು ಸಂಪೂರ್ಣ ಸ್ಥಗಿತಗೊಂಡಿತ್ತು. ಮುಂಜಾಗ್ರತಾ ಕ್ರಮವಾಗಿ ಪೊಲೀಸ್ ಬಂದೋಬಸ್ತ್ ಮುಂದುವರಿಸಲಾಗಿದೆ.

**ವಿವರ:** ಪಟ್ಟಣದಲ್ಲಿ ಜುಲೈ 8ರಂದು ನಡೆದ ಹನುಮ ಜಯಂತಿಯ ನೇತೃತ್ವವನ್ನು ವೇಣುಗೋಪಾಲ್ ಹಾಗೂ ಸ್ನೇಹಿತರು ವಹಿಸಿದ್ದರು. ಗುಂಜಾ ನರಸಿಂಹಸ್ವಾಮಿ ದೇವಾಲಯದ ಆವರಣಕ್ಕೆ ಬೈಕ್‌ಗಳನ್ನು ತರುತ್ತಿದ್ದ ಮಣಿಕಂಠ ಹಾಗೂ ಸಂದೇಶ್ ಅವರನ್ನು ತಡೆದಾಗ ಮಾತಿನ ಚಕಮಕಿ ನಡೆದಿತ್ತು.

ಬಳಿಕ ಮೆರವಣಿಗೆ ವೇಳೆ ಜೀಪ್‌ನಲ್ಲಿ ಹನುಮಂತನ ಫೋಟೊ ಜೊತೆಗೆ ನಟ ಪುನೀತ್ ರಾಜ್‌ಕುಮಾರ್ ಫೋಟೊ ಹಾಕಲಾಗಿತ್ತು. 'ದೇವರ ಫೋಟೊ ಸಾಕು, ಪುನೀತ್ ಫೋಟೊ ಬೇಡ' ಎಂದು ಹೇಳಿದ್ದ ವೇಣುಗೋಪಾಲ್ ಅದನ್ನು ತೆರವುಗೊಳಿಸಿದ್ದರು. ಆಗಲೂ ಜಗಳ ನಡೆದಿತ್ತು. 'ನಾಳೆ ನಿನ್ನನ್ನು ನೋಡಿಕೊಳ್ಳುತ್ತೇನೆ' ಎಂದು ಕೆಲವರು ಬೆದರಿಕೆ ಹಾಕಿದ್ದರು ಎನ್ನಲಾಗಿದೆ.

ಭಾನುವಾರ ಸಂಜೆ ರಾಮಾನುಜಂ ಹಾಗೂ ವೇಣುಗೋಪಾಲ್ ಶಾಮಿಯಾನ ಅಂಗಡಿಗೆ ವಸ್ತುಗಳನ್ನು ಹಿಂತಿರುಗಿಸುತ್ತಿದ್ದಾಗ, ಅಲ್ಲಿಗೆ ಬಂದ ಮಣಿಕಂಠ ಹಾಗೂ ಸ್ನೇಹಿತರು, ಜಗಳದ ವಿಚಾರ ಪ್ರಸ್ತಾಪಿಸಿ ಹಲ್ಲೆ ನಡೆಸಿದ್ದರು ಎಂದು ದೂರಿನಲ್ಲಿ ಆರೋಪಿಸಲಾಗಿದೆ.

'ಮಣಿಕಂಠ, ಸಂದೇಶ್, ಅನಿಲ್, ಶಂಕರ್, ಮಂಜು ಹಾಗೂ ಹ್ಯಾರಿಸ್ ಭಾನುವಾರ ರಾತ್ರಿ 8ಕ್ಕೆ ಮಾತುಕತೆಗೆಂದು ಅಗ್ನಿಶಾಮಕ ದಳದ ಕಚೇರಿ ಬಳಿಗೆ ವೇಣುಗೋಪಾಲ್ ಅವರನ್ನು ಕರೆಸಿಕೊಂಡಿದ್ದರು. ಅವರೊಂದಿಗೆ ಸ್ನೇಹಿತರಾದ ಚೇತನ್ ಹಾಗೂ ಸಂಜಯ್ ಜೊತೆ ತೆರಳಿದ್ದೆ. ಅಲ್ಲಿ ವೇಣುಗೋಪಾಲ್‌ಗೆ ಬಾಟಲಿಯಿಂದ ತಲೆಗೆ ಹೊಡೆದು, ದೇಹಕ್ಕೆ ಚುಚ್ಚಿದರು. ನಾವು ಜಗಳ ಬಿಡಿಸಿ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಮೃತಪಟ್ಟರು' ಎಂದು ರಾಮಾನುಜಂ ದೂರು ನೀಡಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಆಕ್ರೋಶ:** ಘಟನೆಯ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ, 'ಹಿಂದೂ ಕಾರ್ಯಕರ್ತರ ಹತ್ಯೆಗೆ ಕೊನೆ ಇಲ್ಲವೇ?' ಎಂಬ ಆಕ್ರೋಶ ವ್ಯಕ್ತವಾಗಿದೆ. ಅವರ ಕುಟುಂಬಕ್ಕೆ ಆರ್ಥಿಕ ನೆರವು ನೀಡುವಂತೆ ಪತ್ನಿಯ ಬ್ಯಾಂಕ್ ಖಾತೆ ವಿವರ ಹಾಕಿ ಪೋಸ್ಟ್‌ಗಳನ್ನು ಹಂಚಿಕೊಳ್ಳಲಾಗಿದೆ.

ಕೊಲೆ ಘಟನೆಯನ್ನು ಖಂಡಿಸಿ 'ಯುವ ಬ್ರಿಗೇಡ್' ಕಾರ್ಯಕರ್ತರು ಮೈಸೂರಿನ ವೈದ್ಯಕೀಯ ಕಾಲೇಜು ಶವಾಗಾರದ ಮುಂದೆ ಸೋಮವಾರ ಸಂಜೆ ಪ್ರತಿಭಟನೆ ನಡೆಸಿದರು.

> **ಫೋಟೊ ತೆರವು ವಿಚಾರದಲ್ಲಿ ಗುಂಪುಗಳ ನಡುವೆ ಗಲಾಟೆ ನಡೆದಿದ್ದು, ಒಬ್ಬರ ಕೊಲೆಯಾಗಿದೆ. ತಲೆಮರೆಸಿಕೊಂಡಿರುವ ಆರು ಆರೋಪಿಗಳ ಪತ್ತೆಗೆ ಕ್ರಮ ವಹಿಸಲಾಗಿದೆ**
> **ಸೀಮಾ ಲಾಟ್ಕರ್,** ಎಸ್ಪಿ

> **ಸಣ್ಣ ಜಗಳವನ್ನೇ ಪ್ರತಿಷ್ಠೆಯಾಗಿಸಿಕೊಂಡು ಮಾತುಕತೆ ಮೂಲಕ ಬಗೆಹರಿಸಿಕೊಳ್ಳೋಣವೆಂದು ನಂಬಿಸಿ ಪತಿಯನ್ನು ಕೊಲೆ ಮಾಡಿದ್ದಾರೆ. ನನಗೆ, ಮಗಳಿಗೆ ಯಾರು ದಿಕ್ಕು?**
> **ಪೂರ್ಣಿಮಾ,** ವೇಣುಗೋಪಾಲ್ ಪತ್ನಿ

### ಕಸ್ತೂರಿ ರಂಗನ್‌ಗೆ ಹೃದಯಾಘಾತ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಮಾಜಿ ಅಧ್ಯಕ್ಷ ಡಾ. ಕೆ. ಕಸ್ತೂರಿ ರಂಗನ್ (82) ಅವರಿಗೆ ಸೋಮವಾರ ಹೃದಯಾಘಾತವಾಗಿದೆ.

ಶ್ರೀಲಂಕಾ ಪ್ರವಾಸದಲ್ಲಿದ್ದ ಅವರಿಗೆ ಹೃದಯಾಘಾತವಾಗಿತ್ತು. ಕೊಲಂಬೊದಿಂದ ಬೆಂಗಳೂರಿನ ನಾರಾಯಣ ಹೃದಯಾಲಯಕ್ಕೆ ಅವರನ್ನು ವಿಮಾನದಲ್ಲಿ ಕರೆತರಲಾಗಿದೆ. ತಜ್ಞವೈದ್ಯರ ತಂಡ ಚಿಕಿತ್ಸೆ ನೀಡುತ್ತಿದೆ. ಸದ್ಯ ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಎಂದು ಆಸ್ಪತ್ರೆ ಪ್ರಕಟಣೆ ತಿಳಿಸಿದೆ.

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಟ್ವೀಟ್ ಮಾಡಿದ್ದು, 'ಬಾಹ್ಯಾಕಾಶ ವಿಜ್ಞಾನಿ ಕಸ್ತೂರಿ ರಂಗನ್ ಅವರಿಗೆ ಹೃದಯಾಘಾತವಾಗಿರುವುದು ಬೇಸರದ ಸಂಗತಿ. ಅವರು ಶೀಘ್ರ ಚೇತರಿಸಿಕೊಳ್ಳಲಿ' ಎಂದು ಹಾರೈಸಿದ್ದಾರೆ.

### ಬೈಕ್ ಅಪಘಾತ ಇಬ್ಬರು ನೀರುಪಾಲು

**ಮೂಡಲಗಿ (ಬೆಳಗಾವಿ ಜಿಲ್ಲೆ):** ತಾಲ್ಲೂಕಿನ ಔರಾದಿ ಗ್ರಾಮದ ಬಳಿ ಸೋಮವಾರ, ಘಟಪ್ರಭಾ ನದಿ ಸೇತುವೆ ಮೇಲೆ ಬೈಕ್ ಅಪಘಾತಕ್ಕೀಡಾಗಿ ಇಬ್ಬರು ಸವಾರರು ನೀರುಪಾಲಾಗಿದ್ದಾರೆ.

ಔರಾದಿ ಗ್ರಾಮದ ಚನ್ನಪ್ಪ ಹರಿಜನ (38) ಹಾಗೂ ದುರ್ಗಾಣಿ ಹರಿಜನ (35) ನದಿ ಪಾಲಾದವರು. ಸೇತುವೆ ಮೇಲೆ ಬೈಕಿನಲ್ಲಿ ಬಂದಾಗ, ಬೈಕ್ ಜಾರಿ ನದಿಗೆ ಬಿದ್ದಿದೆ. ಕೂಡಲೇ ಇಬ್ಬರೂ ನೀರಿಗೆ ಬಿದ್ದರು. ಅವರನ್ನು ರಕ್ಷಿಸಲು ಸ್ಥಳೀಯರು ನಡೆಸಿದ ಯತ್ನ ವಿಫಲವಾಯಿತು.


**ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ. 8, "ಸಂಪರ್ಕ ಸೌಧ", ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್,
ಬೆಂಗಳೂರು–560010. ಟೆಲಿಫ್ಯಾಕ್ಸ್: 080–22024000
ಇ–ಮೇಲ್: cekrdcl@gmail.com ವೆಬ್‌ಸೈಟ್: http://www.krdcl.in
ಸಂ: ಕರಅನಿನಿ/ಐಎಫ್‌ಬಿ/2023–24/08 ದಿನಾಂಕ: 10.07.2023

**ಸಮಾಲೋಚಕರ ಸೇವೆಗಾಗಿ ಅಲ್ಪಾವಧಿ ಬಿಡ್‌ಗಳ ಆಹ್ವಾನ (ಗುಣಮಟ್ಟ ಮತ್ತು ವೆಚ್ಚ ಆಧಾರಿತ ಆಯ್ಕೆ)**

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು (ಕೆ.ಆರ್.ಡಿ.ಸಿ.ಎಲ್) **ಪ್ರತಿಷ್ಠಿತ ಸಮಾಲೋಚಕರಿಂದ ಡಿ.ಪಿ.ಆರ್ ತಯಾರಿಸಲು ಬಿಡ್‌ಗಳನ್ನು ಆಹ್ವಾನಿಸಲಾಗಿದೆ. ರಸ್ತೆ ವಿವರಗಳು: ದೇವನಹಳ್ಳಿ– ವಿಜಯಪುರ – ಹೆಚ್.ಕ್ರಾಸ್ – ವೇಮಗಲ್–ಮಾಲೂರು–ತಮಿಳುನಾಡು ಗಡಿಯವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಗೆ** (ಗುಣಮಟ್ಟ ಮತ್ತು ವೆಚ್ಚ ಆಧಾರಿತ ಆಯ್ಕೆ) ಮುಖಾಂತರ ಸಮಾಲೋಚಕರ ಸೇವೆಗಾಗಿ ಟೆಂಡರ್ ಆಹ್ವಾನಿಸಲಾಗಿದ್ದು, ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು **https://kppp.karnataka.gov.in** ವೆಬ್‌ಸೈಟ್ ಮೂಲಕ ಡಾಕ್ಯುಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: **20.07.2023ರ 17.30 ಗಂಟೆಯವರೆಗೆ** ಇರುತ್ತದೆ. ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **21.07.2023ರ 11.00 ಗಂಟೆಗೆ** ತೆರೆಯಲಾಗುತ್ತದೆ.

ಗಮನಿಸಿ: ಇನ್ನು ಮುಂದೆ ಈ ಪ್ರಕಟಣೆಯಲ್ಲಿನ ಯಾವುದೇ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಆದರೆ ಮುಂದಿನ ಬದಲಾವಣೆಗಳನ್ನು ಕೇವಲ ಕೆಪಿಪಿ–ಪೋರ್ಟಲ್ / ಕರಅನಿನಿ ವೆಬ್‌ಸೈಟ್ **https://kppp.karnataka.gov.in / http://www.krdcl.in** ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.
ಸಹಿ/– ಮುಖ್ಯ ಅಭಿಯಂತರರು
ಕರಅನಿನಿ, ಬೆಂಗಳೂರು
DIPR/CP/BCPL/497/2023-24



**ಗದಗ–ಬೆಟಗೇರಿ ನಗರಸಭೆ ಕಾರ್ಯಾಲಯ–582101**
ದೂ: 08372–259932 ಇ–ಮೇಲ್: itstaff.ulb.gadag@gmail.com ಜಿಲ್ಲಾ: ಗದಗ ರಾಜ್ಯ : ಕರ್ನಾಟಕ
ಸಂಖ್ಯೆ: ಗಬೆನಸ/ತಾಂವಿ/15ನೇಹ/2022–23 ದಿನಾಂಕ: 07–07–2023

**ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ** (ಕರ್ನಾಟಕ ಪಾರದರ್ಶಕ ಅಧಿನಿಯಮ 2000 ರನ್ವಯ)

ಗದಗ ಬೆಟಗೇರಿ ನಗರಸಭೆಗೆ ಸನ್ 2020–21 ಮತ್ತು 2021–22 ನೇ ಸಾಲಿನ 15ನೇ ಹಣಕಾಸು ಅನುದಾನದಡಿ ಮಾನ್ಯ ಜಿಲ್ಲಾಧಿಕಾರಿಗಳು, ಗದಗ ರವರ ಆದೇಶದಂತೆ ಈ ಕೆಳಕಂಡ ಕಾಮಗಾರಿಗಳಿಗೆ ಮರು ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಇ ಪ್ರೊಕ್ಯೂರ್ ಮೆಂಟ್ ಮೂಲಕ ಆಹ್ವಾನಿಸಿದೆ ಅರ್ಹತೆಯುಳ್ಳ ಗುತ್ತಿಗೆದಾರರು ಇ ಪ್ರೊಕೂರ್ ಮೆಂಟ್ ಮೂಲಕ ಬಿಡ್ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಾರ್ಯಾಲಯದ ತಾಂತ್ರಿಕ ವಿಭಾಗವನ್ನು ಸಂಪರ್ಕಿಸಿ ಪಡೆಯಬಹುದು.

| ಕ್ರ ಸಂ. | ಕಾಮಗಾರಿ ಇಂಡೆಂಟ್ ನಂಬರ್ | ಅಂದಾಜು ಮೊತ್ತ (ಲಕ್ಷಗಳಲ್ಲಿ) | ಇ.ಎಮ್.ಡಿ. (ರೂ.) |
|---|---|---|---|
| 1 | DMA/2023-24/OW/WORK INDENT 1060-Construction of mechanical Building compound and platform for development of SWM Motor Shed in Gadag-Betageri CMC | 100.00 | 200000.00 |
| 2 | DMA/2023-24/OW/ WORK_INDENT 1037- Construction of compound wall at South side of SWM site in survey no 650 and 659/2a total 24 acre 15 gunta owened by city muncipal Council - Call 2 | 99.99 | 199980.00 |

| | |
|---|---|
| ಟೆಂಡರ ಫಾರ್ಮ್ ವೆಬ್ ಸೈಟಿನಿಂದ ಡೌನ್ ಲೋಡ ಮಾಡಿಕೊಳ್ಳುವ | ದಿನಾಂಕ: 07–07–2023 |
| ಭರ್ತಿ ಮಾಡಿದ ಟೆಂಡರಗಳನ್ನು ಅಪಲೋಡ್ (Upload) ಮಾಡುವ ಕೊನೆಯ | ದಿನಾಂಕ: 14–07–2023 ಸಾಯಂಕಾಲ 4:30 ಘಂಟೆಯವರೆಗೆ |
| ಟೆಂಡರ್ ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: | ದಿನಾಂಕ: 15–07–2023 ರ ಸಾಯಂಕಾಲ: 5:00 ಘಂಟೆಯ ನಂತರ ತೆರೆಯಲಾಗುವುದು. |

ಹೆಚ್ಚಿನ ಮಾಹಿತಿಗಾಗಿ Website: Kppp Portal ವೆಬ್ ಸೈಟನಲ್ಲಿ ನೋಡಬಹುದು
ಸಹಿ/– ಶ್ರೀ ರಮೇಶ ಸುಣಗಾರ ಪೌರಾಯುಕ್ತರು, ನಗರಸಭೆ ಗದಗ–ಬೆಟಗೇರಿ
ಸಹಿ/– ಶ್ರೀಮತಿ ಉಷಾ ಎಂ. ದಾಸರ ಅಧ್ಯಕ್ಷರು, ನಗರಸಭೆ ಗದಗ–ಬೆಟಗೇರಿ
ವಾ.ಸಾ.ಇ/ಗದಗ/58/2023–24/ದೇಶಪಾಂಡೆಪಬ್ಲಿಸಿಟಿ



**ಚಿತ್ರದುರ್ಗ ನಿರ್ಮಿತಿ ಕೇಂದ್ರ, ಚಿತ್ರದುರ್ಗ–577502**
(ಕರ್ನಾಟಕ ಸರ್ಕಾರದ ಪ್ರಾಯೋಜಿತ ಸಂಸ್ಥೆ)
ಮೇಗಳಹಳ್ಳಿ ಗ್ರಾಮ. ಮೆದೇಹಳ್ಳಿ ಗ್ರಾಮ ಪಂಚಾಯಿತಿ, ಚಿತ್ರದುರ್ಗ ತಾಲ್ಲೂಕು.
ಸಂಖ್ಯೆ: ಚಿ.ಜಿ.ನಿ.ಕೇ/ಆಡಳಿತ/ಸಿಬ್ಬಂದಿ/ನೇಮಕಾತಿ/01/2023–24 ದಿನಾಂಕ:–04.07.2023

**ಸಿಬ್ಬಂದಿ ನೇಮಕಾತಿ ಪ್ರಕಟಣೆ (ಗುತ್ತಿಗೆ ಆಧಾರದಲ್ಲಿ)**

ಚಿತ್ರದುರ್ಗ ನಿರ್ಮಿತಿ ಕೇಂದ್ರವು ಕರ್ನಾಟಕ ಸಹಕಾರ ಸಂಘಗಳ ನೊಂದಣಿ ಕಾಯ್ದೆ–1960 ಪ್ರಕಾರ ನೊಂದಾಯಿತ ಸಂಸ್ಥೆಯಾಗಿದ್ದು, ಚಿತ್ರದುರ್ಗ ನಿರ್ಮಿತಿ ಕೇಂದ್ರದಲ್ಲಿ ಈ ಕೆಳಕಾಣಿಸಿದ ಖಾಲಿ ಇರುವ ಹುದ್ದೆಗೆ ಎರಡು (02) ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಹತೆ ಮತ್ತು ಅನುಭವವುಳ್ಳ ಅಭ್ಯರ್ಥಿಗಳು ಅರ್ಜಿಯನ್ನು ದಿನಾಂಕ: 18–07–2023ರ ಸಂಜೆ 5.00 ಗಂಟೆಯ ಒಳಗೆ ಇ–ಮೇಲ್ ಮೂಲಕ ಮಾತ್ರ ಸ್ವಯಂ ಧೃಢೀಕೃತ ದಾಖಲಾತಿಯೊಂದಿಗೆ ಸಲ್ಲಿಸಬಹುದಾಗಿರುತ್ತದೆ. ಅರ್ಜಿಗಳನ್ನು ಮುದ್ದಾಂ, ಅಂಚೆ ಅಥವಾ ಕೋರಿಯರ್ ಮೂಲಕ ಸಲ್ಲಿಸುವಂತಿಲ್ಲ. ಅರ್ಜಿಗಳನ್ನು ಸಲ್ಲಿಸಬೇಕಾದ ಇ–ಮೇಲ್ ಐ.ಡಿ:–dc.chitradurga@ka.gov.in

| ಕ್ರ ಸಂ | ಹುದ್ದೆಯ ಹೆಸರು | ಹುದ್ದೆಯ ಸಂಖ್ಯೆ | ವಿದ್ಯಾರ್ಹತೆ, ಅನುಭವ | ಗುತ್ತಿಗೆ ಅವಧಿ (ವರ್ಷಗಳಲ್ಲಿ) |
|---|---|---|---|---|
| 1 | ಯೋಜನಾ ನಿರ್ದೇಶಕರು | 2 | Must be holder of a regular Bachelor's Degree in Engineering /Technology in Civil/M.Tech in Structural Engineering, ಕನಿಷ್ಠ 10 ವರ್ಷಗಳು ಸರ್ಕಾರಿ/ಅರೆಸರ್ಕಾರಿ/ಸರ್ಕಾರದ ಸ್ವಾಮ್ಯದ ಇತರೆ ಸಂಸ್ಥೆಗಳು/ ನಿಗಮ ಮಂಡಳಿಗಳಲ್ಲಿ ಖಾಸಗಿ ಸಂಸ್ಥೆಗಳಲ್ಲಿ ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ಅನುಭವ ಹೊಂದಿರಬೇಕು ( ನಿರ್ಮಿತಿ ಕೇಂದ್ರದಲ್ಲಿ ಅನುಭವ ಹೊಂದಿದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.) | 02 ವರ್ಷ |

**ಷರತ್ತುಗಳು:–** (1) ಆಂಗ್ಲ ಮತ್ತು ಕನ್ನಡ ಭಾಷೆಯಲ್ಲಿ ಉತ್ತಮ ಜ್ಞಾನವುಳ್ಳವರಾಗಿರಬೇಕು, Auto CAD Design software ನಲ್ಲಿ ಪರಿಣಿತಿ ಹೊಂದಿರಬೇಕು ಹಾಗೂ ಅಂದಾಜು ಪಟ್ಟಿ ತಯಾರಿಸುವ ಜ್ಞಾನವುಳ್ಳವರಾಗಿರಬೇಕು. (2) ವಯೋಮಿತಿ ಕನಿಷ್ಠ 32 ವರ್ಷಗಳಾಗಿರಬೇಕು. (3) B.E/B.Tech in civil/M.Tech in Structural Engineering ಅನ್ನು ಸರ್ಕಾರದ ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳಿಂದ ಪಡೆದ ಪದವಿಗಳನ್ನು ಮಾತ್ರ ಪರಿಗಣಿಸಲಾಗುವುದು, Distance education/open university/ online ಮೂಲಕ ಪಡೆದ ಪದವಿಯನ್ನು ಪರಿಗಣಿಸಲಾಗುವುದಿಲ್ಲ. (4) ಅಭ್ಯರ್ಥಿಗಳು ತಮ್ಮ Resume ಹಾಗೂ 10ನೇ ತರಗತಿ ಅಂಕಪಟ್ಟಿ, ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಪ್ರಮಾಣ ಪತ್ರ ಅನುಭವ ಪ್ರಮಾಣ ಪತ್ರಗಳನ್ನು, ಒಂದು ಭಾವಚಿತ್ರ ಮತ್ತು ಆಧಾರ್ ಪ್ರತಿಯನ್ನು ದೃಢೀಕರಿಸಿ Scan ಮಾಡಿ ಕೇವಲ ಇ–ಮೇಲ್ ಮುಖಾಂತರ ಸಲ್ಲಿಸುವುದು. (5) ಸೂಕ್ತ ಲಗತ್ತುಗಳಿಲ್ಲದ ಅರ್ಜಿಗಳನ್ನು ಮತ್ತು ನಿಗಧಿಪಡಿಸಿದ ಸಮಯ ಮೀರಿ ಬಂದ ಅರ್ಜಿಗಳನ್ನು ಯಾವುದೇ ಸೂಚನೆಗಳಿಲ್ಲದೆ ತಿರಸ್ಕರಿಸಲಾಗುವುದು. (6) ಅಂತಿಮ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವ ಮುನ್ನ ಯಾವುದೇ ಕಾರಣ ನೀಡದೆ ಈ ನೇಮಕಾತಿ ಪ್ರಕ್ರಿಯೆಯನ್ನು ಮುಂದೂಡುವ ಅಥವಾ ರದ್ದುಗೊಳಿಸುವ ಸಂಪೂರ್ಣ ಹಕ್ಕನ್ನು ಆಯ್ಕೆ ಸಮಿತಿ ಉಳಿಸಿಕೊಂಡಿರುತ್ತದೆ. (7) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 18–07–2023ರ ಸಾಯಂಕಾಲ 5.00 ಗಂಟೆ ಒಳಗೆ ಸಲ್ಲಿಸುವುದು. (8) ಅಭ್ಯರ್ಥಿಗಳ ಅರ್ಜಿಗಳನ್ನು ಪರಿಶೀಲಿಸಿಲಾಗಿ ವಿದ್ಯಾರ್ಹತೆ/ ಅನುಭವದ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳನ್ನು ಶಾರ್ಟ್‌ಲಿಸ್ಟ್ ಮಾಡಲಾಗುವುದು. ಶಾರ್ಟ್‌ಲಿಸ್ಟ್ ಆದ ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನ ನಡೆಸಿ ಆಯ್ಕೆ ಪಟ್ಟಿಯನ್ನು ಘೋಷಿಸಲಾಗುವುದು. ಆಯ್ಕೆಯಾದ ನಂತರ ಷರತ್ತುಬದ್ಧ ಒಡಂಬಡಿಕೆಯಂತೆ ಕರ್ತವ್ಯ ನಿರ್ವಹಿಸುವುದು. (9) ಅರ್ಜಿ ಸ್ವೀಕಾರ ಮತ್ತು ತಿರಸ್ಕಾರ ಮಾಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ನಿರ್ಮಿತಿ ಕೇಂದ್ರ, ಚಿತ್ರದುರ್ಗ ಇವರು ಹೊಂದಿರುತ್ತಾರೆ. (10) ಆಯ್ಕೆಯಾದ ನಂತರ ಸುಳ್ಳು ಅಥವಾ ನಕಲಿ ದಾಖಲೆಗಳನ್ನು ಸಲ್ಲಿಸಿರುವುದು ಕಂಡುಬಂದಲ್ಲಿ ಯಾವುದೇ ಮುನ್ನೆಚ್ಚರಿಕೆ ನೀಡದೇ ಅಭ್ಯರ್ಥಿಯನ್ನು ಹುದ್ದೆಯಿಂದ ತೆಗೆದು ಹಾಕಲಾಗುವುದು ಹಾಗೂ ಕಾನೂನು ರೀತಿ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲಾಗುವುದು. (11) ಹೆಚ್ಚಿನ ವಿವರಗಳನ್ನು ಚಿತ್ರದುರ್ಗ ನಿರ್ಮಿತಿ ಕೇಂದ್ರ ಮೇಗಳಹಳ್ಳಿ, ಮೆದೆಹಳ್ಳಿ ಗ್ರಾಪಂ, ಚಿತ್ರದುರ್ಗ ಇಲ್ಲಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.
DIPR/CTA/KSMCA/87/2023-24 ಸಹಿ/– ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ನಿರ್ಮಿತಿ ಕೇಂದ್ರ, ಚಿತ್ರದುರ್ಗ.

## ಆಯುಷ್ ವೈದ್ಯರ ಸೇವೆ ಕಾಯಂ ಇಲ್ಲ: ದಿನೇಶ್ ಗುಂಡೂರಾವ್

**ಬೆಂಗಳೂರು:** ಆಯುಷ್ ಇಲಾಖೆಯಲ್ಲಿ ತಜ್ಞ ವೈದ್ಯರು, ಸಿಬ್ಬಂದಿ ಸೇವೆ ಕಾಯಂಗೆ ನಿಯಮಗಳಲ್ಲಿ ಅವಕಾಶ ಇಲ್ಲ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್‌ನ ಯು.ಬಿ.ವೆಂಕಟೇಶ್ ಪ್ರಶ್ನೆಗೆ ಉತ್ತರಿಸಿದ ಅವರು, ರಾಷ್ಟ್ರೀಯ ಆಯುಷ್ ಅಭಿಯಾನ ಅಡಿ 113 ತಜ್ಞ ವೈದ್ಯರು ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದಾರೆ. ಕೇಂದ್ರದ ಈ ಯೋಜನೆ ತಾತ್ಕಾಲಿಕವಾದುದು. ಹಾಗಾಗಿ, ವೈದ್ಯರ ಹುದ್ದೆಗಳನ್ನು ಕಾಯಂ ಮಾಡಲು ಸಾಧ್ಯವೇ ಇಲ್ಲ. ಆದರೆ, ಆಯುಷ್ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವಾಗ ವಿಶೇಷ ನೇಮಕಾತಿ ನಿಯಮಗಳನ್ನು ರೂಪಿಸಿ, ಕೃಪಾಂಕ ಹಾಗೂ ವಯೋಮಿತಿ ಸಡಿಲಿಕೆಯ ಅವಕಾಶ ಕಲ್ಪಿಸಲಾಗಿದೆ ಎಂದರು.

**ಆಶಾ ಕಾರ್ಯಕರ್ತೆಯರ ವೇತನ ಹೆಚ್ಚಳ ಇಲ್ಲ:** ರಾಜ್ಯದಲ್ಲಿ 41,119 ಆಶಾ ಕಾರ್ಯಕರ್ತೆಯರು ಕೆಲಸ ಮಾಡುತ್ತಿದ್ದಾರೆ. ಕಾರ್ಯನಿರ್ವಹಣೆಯ ಆಧಾರದಲ್ಲಿ ಪ್ರತಿ ತಿಂಗಳು ₹ 5 ಸಾವಿರ ಗೌರವಧನ ನೀಡಲಾಗುತ್ತಿದೆ. 40 ಚಟುವಟಿಕೆಗಳಿಗೆ ಪ್ರೋತ್ಸಾಹಧನ ವಿತರಿಸಲಾಗುತ್ತಿದೆ. ಸದ್ಯಕ್ಕೆ ಅವರ ವೇತನ ಹೆಚ್ಚಳ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ ಎಂದು ದಿನೇಶ್ ಗುಂಡೂರಾವ್ ಪ್ರತಿಕ್ರಿಯಿಸಿದರು. ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ ಪ್ರಶ್ನೆ ಕೇಳಿದ್ದರು.

**ಏಕ ಬಳಕೆ ಪ್ಲಾಸ್ಟಿಕ್ ನಿರ್ಮೂಲನೆ:** ಪರಿಸರದ ಮೇಲೆ ಪ್ಲಾಸ್ಟಿಕ್ ಬಳಕೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಏಕ ಬಳಕೆಯ ಪ್ಲಾಸ್ಟಿಕ್ ನಿಷೇಧವಿದ್ದರೂ, ನಿರ್ಮೂಲನೆ ಸಾಧ್ಯವಾಗಿಲ್ಲ. ಏಕ ಬಳಕೆ ಪ್ಲಾಸ್ಟಿಕ್ ಸಂಪೂರ್ಣ ನಿರ್ಮೂಲನೆಗೆ ನಾಂದಿ ಹಾಡಲು ಕಲಬುರಗಿ, ಬೀದರ್ ಸೇರಿದಂತೆ ರಾಜ್ಯದ ಐದು ನಗರಗಳಲ್ಲಿ ಪ್ರಾಯೋಗಿಕ ಯೋಜನೆ ಜಾರಿಗೆ ತರಲಾಗುವುದು. ನಂತರ ರಾಜ್ಯವನ್ನು ಪ್ಲಾಸ್ಟಿಕ್ ಮುಕ್ತವಾಗಿಸಲು ಶ್ರಮಿಸಲಾಗುವುದು ಎಂದು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಸದನಕ್ಕೆ ತಿಳಿಸಿದರು.

## ಬಸನಗೌಡ ಯತ್ನಾಳ ನೆರವಿಗೆ ಬಾರದ ಬಿಜೆಪಿ ಸದಸ್ಯರು

**ಬೆಂಗಳೂರು:** ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತು ಇಂಧನ ಸಚಿವ ಕೆ.ಜೆ.ಜಾರ್ಜ್ ಮಧ್ಯೆ ವಿಧಾನಸಭೆಯಲ್ಲಿ ಮಾತಿನ ಜಟಾಪಟಿ ನಡೆಯುವಾಗ ಯತ್ನಾಳ ಅವರ ನೆರವಿಗೆ ಸ್ವಪಕ್ಷೀಯರೇ ಬರಲಿಲ್ಲ.

ಬಸವರಾಜ ಬೊಮ್ಮಾಯಿ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ, ಗೃಹಜ್ಯೋತಿಯ ವಿಚಾರದಲ್ಲಿ ಬೊಮ್ಮಾಯಿ ಮತ್ತು ಜಾರ್ಜ್ ಮಧ್ಯೆ ವಾಗ್ವಾದ ನಡೆಯಿತು. ಆಗ ಯತ್ನಾಳ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಎದ್ದು ನಿಂತರು.

ಆಗ ಜಾರ್ಜ್, 'ನಿಮಗೆ ಏನೂ ಗೊತ್ತಾಗಲ್ಲ ಕುತ್ಕೊಳ್ಳಿ' ಎಂದು ಗದರಿದರು. ಇದರಿಂದ ಕೆರಳಿದ ಯತ್ನಾಳ, 'ನಾನೂ ನಿಮ್ಮ ಹಾಗೆ ಜನರಿಂದ ಆರಿಸಿ ಶಾಸಕನಾಗಿ ಬಂದವನು. ಕುತ್ಕೊಳ್ಳಿ ಎನ್ನಲು ನೀವು ಯಾರು? ನೀವೇನು ಸರ್ವಜ್ಞರೇ? ನಾನೂ ಕೇಂದ್ರದಲ್ಲಿ ಮಂತ್ರಿಯಾಗಿ ಕೆಲಸ ಮಾಡಿದವನು' ಎಂದು ತಿರುಗೇಟು ನೀಡಿದರು.

'ಮೊದಲು ಸದಸ್ಯರ ಬಗ್ಗೆ ಗೌರವದಿಂದ ಮಾತನಾಡಲು ಕಲಿತುಕೊಳ್ಳಿ. ನಿಮ್ಮ ಶ್ರೀಮಂತಿಕೆ ನಿಮಗಾಯಿತು. ಅದನ್ನು ಕಟ್ಟಿಕೊಂಡು ನಾನೇನು ಮಾಡಲಿ. ಅದರ ಅಹಂಕಾರ ಇಲ್ಲಿ ತೋರಿಸಬೇಡಿ. ಇಲ್ಲಿ ನೀವು ಹೇಳಿದಂತೆ ಕೇಳಲು ಬಂದಿಲ್ಲ' ಎಂದು ಯತ್ನಾಳ ಕಿಡಿಕಾರಿದರು. ಒಂದು ಹಂತದಲ್ಲಿ ಇಬ್ಬರೂ ಏಕ ವಚನ ಪ್ರಯೋಗಿಸಿದರು.

'ವಿರೋಧ ಪಕ್ಷದ ಸ್ಥಾನ ಖಾಲಿ ಇದೆ ಎಂದು ಮಾತನಾಡುತ್ತಿದ್ದೀರಿ. ನೀವೇನೇ ಮಾತನಾಡಿದರೂ ವಿರೋಧ ಪಕ್ಷದ ನಾಯಕ ಆಗುವುದಿಲ್ಲ. ನಿಮಗೇನೂ ಗೊತ್ತಿಲ್ಲ ಕುಳಿತುಕೊಳ್ಳಿ' ಎಂದು ಜಾರ್ಜ್ ಗದರಿದರು.

ಈ ವೇಳೆ ಯತ್ನಾಳ ಅವರನ್ನು ಕುಳಿತುಕೊಳ್ಳುವಂತೆ ಬೊಮ್ಮಾಯಿ ಅವರು ಹೇಳಿದರು. 'ಎಲ್ಲರದು ಅಡ್ಜೆಸ್ಟ್‌ಮೆಂಟ್' ಎಂದು ಯತ್ನಾಳ ಸಣ್ಣ ಧ್ವನಿಯಲ್ಲಿ ಗೊಣಗಿದರು.

### 45 ತಾಲ್ಲೂಕು ರಚನೆಗೆ ಶಿಫಾರಸು ಮಾಡಿದ್ದ ಎಂ.ಬಿ. ಪ್ರಕಾಶ್ ಸಮಿತಿ • ಸಚಿವ ಕೃಷ್ಣ ಬೈರೇಗೌಡ ಹೇಳಿಕೆ

# 'ಹೊಸ ತಾಲ್ಲೂಕು ರಚನೆಗೆ ಮಾರ್ಗಸೂಚಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವೈಜ್ಞಾನಿಕ ಮಾನದಂಡಗಳ ಆಧಾರದಲ್ಲಿ ಹೊಸ ತಾಲ್ಲೂಕುಗಳನ್ನು ರಚಿಸುವುದಕ್ಕಾಗಿ ಪ್ರತ್ಯೇಕ ಮಾರ್ಗಸೂಚಿಗಳನ್ನು ರೂಪಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಟಿ. ರಘುಮೂರ್ತಿ ಪ್ರಶ್ನೆಗೆ ಉತ್ತರಿಸಿದ ಅವರು, 'ಎಂ.ಬಿ. ಪ್ರಕಾಶ್ ಸಮಿತಿಯು ಸರಿಯಾದ ಕ್ರಮದಲ್ಲಿ ಅಧ್ಯಯನ ನಡೆಸಿ 45 ತಾಲ್ಲೂಕುಗಳ ರಚನೆಗೆ ಶಿಫಾರಸು ಮಾಡಿತ್ತು. ಅದರಲ್ಲಿ ಚಳ್ಳಕೆರೆ ತಾಲ್ಲೂಕಿನ ಪರಶುರಾಂಪುರ ಹೋಬಳಿ ಕೇಂದ್ರವನ್ನು ಹೊಸದಾಗಿ ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವ ಶಿಫಾರಸು ಇತ್ತು. ಆದರೆ, ಕಾರಣಾಂತರಗಳಿಂದ ಅದು ಅನುಷ್ಠಾನಕ್ಕೆ ಬಂದಿಲ್ಲ' ಎಂದರು.

ಈಗ ತಾಲ್ಲೂಕುಗಳ ರಚನೆಗಿಂತಲೂ ಮೊದಲು ಆ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕ್ರಮಗಳ ಕುರಿತು ಮಾರ್ಗಸೂಚಿ ರಚಿಸಲಾಗುವುದು. ಆ ಬಳಿಕವೇ ಹೊಸ ತಾಲ್ಲೂಕುಗಳ ರಚನೆ ಬಗ್ಗೆ ಯೋಚಿಸಲಾಗುವುದು ಎಂದರು.

**ಕುಟುಂಬದ ಬಳಕೆಗೆ ನಿರ್ಬಂಧವಿಲ್ಲ:** ಬಿಜೆಪಿಯ ಎಚ್.ಕೆ. ಸುರೇಶ್ ಪ್ರಶ್ನೆಗೆ ಉತ್ತರಿಸಿದ ಕಂದಾಯ ಸಚಿವರು, 'ಸ್ವಂತ ಜಮೀನಿನಲ್ಲಿ ಐದು ಗುಂಟೆಗಿಂತ ಕಡಿಮೆ ವಿಸ್ತೀರ್ಣದ ಪ್ರದೇಶವನ್ನು ಕುಟುಂಬದ ಸದಸ್ಯರೇ ಮನೆ ನಿರ್ಮಿಸಲು ಬಳಸುವುದಕ್ಕೆ ಯಾವುದೇ ನಿರ್ಬಂಧ ಇಲ್ಲ. ಕಂದಾಯ ನಿವೇಶನಗಳನ್ನು ಮಾರಾಟ ಮಾಡುವುದನ್ನು ತಡೆಯಲು ಮಾರಾಟಕ್ಕೆ ಇರುವ ನಿರ್ಬಂಧ ಮುಂದುವರಿಯುತ್ತದೆ' ಎಂದರು.

**ಅನರ್ಹರಿದ್ದರೆ ಕ್ರಮ:** ಕಾಂಗ್ರೆಸ್‌ನ ವಿನಯ ಕುಲಕರ್ಣಿ ಪ್ರಶ್ನೆಗೆ ಉತ್ತರಿಸಿದ ಕೃಷ್ಣ ಬೈರೇಗೌಡ, 'ಧಾರವಾಡ ಗ್ರಾಮೀಣ ವಿಧಾನಸಭಾ ಕ್ಷೇತ್ರವೂ ಸೇರಿ ಕೆಲವೆಡೆ ಅತಿವೃಷ್ಟಿಯಲ್ಲಿ ಹಾನಿಗೀಡಾದ ಮನೆಗಳ ಮರು ನಿರ್ಮಾಣ ಯೋಜನೆಯನ್ನು ಕೆಲವರು ದುರ್ಬಳಕೆ ಮಾಡಿಕೊಂಡ ದೂರುಗಳಿವೆ. ದೂರು ಬಂದ ಪ್ರಕರಣಗಳಲ್ಲಿ ಪರಿಶೀಲಿಸಲಾಗುವುದು. ಅನರ್ಹ ಫಲಾನುಭವಿಗಳ ಆಯ್ಕೆಯಾಗಿದ್ದಲ್ಲಿ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದರು.

## 'ಬೆಳೆ ವಿಮೆ ನೋಂದಣಿ ಅವಧಿ ವಿಸ್ತರಿಸಿ'

**ಬೆಂಗಳೂರು:** ಫಸಲ್ ಬಿಮಾ ಯೋಜನೆಯಡಿ ರೈತರು ಬೆಳೆ ವಿಮೆ ಸೌಲಭ್ಯಕ್ಕೆ ನೋಂದಣಿ ಮಾಡಿಸುವ ಅವಧಿ ವಿಸ್ತರಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ವಿಧಾನಸಭೆಯಲ್ಲಿ ಸೋಮವಾರ ಕಾಂಗ್ರೆಸ್‌ನ ಕೆ.ಎಂ. ಶಿವಲಿಂಗೇಗೌಡ ಶೂನ್ಯ ವೇಳೆಯಲ್ಲಿ ಮಾಡಿದ ಪ್ರಸ್ತಾಪಕ್ಕೆ ಉತ್ತರಿಸಿದ ಸಚಿವರು, 'ಫಸಲ್ ಬಿಮಾ ಯೋಜನೆಯು ಕೇಂದ್ರ ಪ್ರಾಯೋಜಿತ ಕಾರ್ಯಕ್ರಮ. ರಾಜ್ಯವೂ ವೆಚ್ಚ ಭರಿಸುತ್ತದೆ. ಆದರೆ, ನೋಂದಣಿ ಅವಧಿ ವಿಸ್ತರಣೆಗೆ ಪೋರ್ಟಲ್‌ನಲ್ಲಿ ಅವಕಾಶ ನೀಡುವುದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ' ಎಂದರು.

'ಕೆಲವು ಬೆಳೆಗಳ ವಿಮೆ ನೋಂದಣಿಗೆ ಜೂನ್ 30ರವರೆಗೆ ಅವಕಾಶ ಇತ್ತು. ರಾಜ್ಯ ಸರ್ಕಾರದ ಮನವಿ ಮೇರೆಗೆ ಒಂದು ದಿನ ವಿಸ್ತರಿಸಲಾಗಿತ್ತು. ಒಂದೇ ದಿನ 30,000 ರೈತರು ನೋಂದಣಿ ಮಾಡಿಸಿದ್ದರು. ಉದ್ದು, ಎಳ್ಳು, ಶೇಂಗಾ ಬೆಳೆಗಳ ವಿಮೆ ನೋಂದಣಿಗೆ ಜುಲೈ 15ರವರೆಗೆ ಅವಕಾಶವಿದೆ. ಕೆಲವು ಬೆಳೆಗಳ ವಿಮೆ ನೋಂದಣಿಗೆ ನವೆಂಬರ್‌ವರೆಗೂ ಅವಕಾಶವಿದೆ. ಈಗಾಗಲೇ ಅವಧಿ ಮುಗಿದಿರುವ ಬೆಳೆಗಳ ವಿಮೆ ನೋಂದಣಿಗೆ ಮತ್ತೊಮ್ಮೆ ಕಾಲಾವಕಾಶ ವಿಸ್ತರಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡುತ್ತೇವೆ' ಎಂದು ತಿಳಿಸಿದರು.

ಫಸಲ್ ಬಿಮಾ ಯೋಜನೆಯಲ್ಲಿ ಹಲವು ಸಮಸ್ಯೆಗಳಿವೆ. ಗುಜರಾತ್ ಸೇರಿದಂತೆ ಕೆಲವು ರಾಜ್ಯಗಳು ಈ ಯೋಜನೆಯಿಂದ ಹೊರಬಂದು ಪ್ರತ್ಯೇಕ ಬೆಳೆ ವಿಮೆ ಯೋಜನೆ ಜಾರಿಗೊಳಿಸುತ್ತಿವೆ ಎಂದರು.

ಶಿವಲಿಂಗೇಗೌಡ ಮಾತನಾಡಿ, 'ಫಸಲ್ ಬಿಮಾ ಯೋಜನೆಗಿಂತ ಹಿಂದೆ ರಾಜ್ಯ ಸರ್ಕಾರ ಜಾರಿಗೊಳಿಸಿದ್ದ ವಿಮಾ ಯೋಜನೆಯೇ ಉತ್ತಮವಾಗಿತ್ತು. ಈಗ ನೋಂದಣಿ ಅವಧಿ ಮುಗಿದಿರುವುದರಿಂದ ಸಮಸ್ಯೆಯಾಗಿದೆ. ಅವಧಿ ವಿಸ್ತರಣೆಗೆ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

## ಪಶು ವೈದ್ಯರ ಹುದ್ದೆ ಭರ್ತಿಗೆ ಕ್ರಮ: ಕೆ. ವೆಂಕಟೇಶ್

ರಾಜ್ಯದಲ್ಲಿ ಪಶುವೈದ್ಯರು ಮತ್ತು ಪಶು ವೈದ್ಯಕೀಯ ನಿರೀಕ್ಷಕರ ಹುದ್ದೆಗಳ ಕೊರತೆ ತೀವ್ರವಾಗಿದೆ. ಎರಡು ತಿಂಗಳೊಳಗೆ 200 ಪಶು ವೈದ್ಯಕೀಯ ನಿರೀಕ್ಷಕರು ಹಾಗೂ ಡಿಸೆಂಬರ್ ಅಂತ್ಯದೊಳಗೆ 400 ಪಶು ವೈದ್ಯರ ನೇಮಕಾತಿ ಮಾಡಲಾಗುವುದು ಎಂದು ಪಶುಸಂಗೋಪನಾ ಸಚಿವ ಕೆ. ವೆಂಕಟೇಶ್ ತಿಳಿಸಿದರು.

ಬಿಜೆಪಿಯ ಗುರುರಾಜ್ ಶೆಟ್ಟಿ ಗಂಟಿಹೊಳೆ ಪ್ರಶ್ನೆಗೆ ಉತ್ತರಿಸಿದ ಅವರು, 'ಪಶು ವೈದ್ಯರು ಮತ್ತು ಪಶು ವೈದ್ಯಕೀಯ ಸಿಬ್ಬಂದಿ ಕೊರತೆ ನೀಗಲು ಕ್ರಮ ಕೈಗೊಳ್ಳಲಾಗುತ್ತಿದೆ. ಹೆಚ್ಚುವರಿ ವೈದ್ಯರು ಮತ್ತು ಸಿಬ್ಬಂದಿಯನ್ನು ಅಗತ್ಯ ಇರುವ ಜಿಲ್ಲೆಗಳಿಗೆ ವರ್ಗಾವಣೆ ಮಾಡಲಾಗುವುದು' ಎಂದು ಭರವಸೆ ನೀಡಿದರು.

'ಪಶು ಸಂಗೋಪನಾ ನೀತಿ ಪ್ರಕಾರ, ಪ್ರತಿ ನಾಲ್ಕು ಸಾವಿರ ಜಾನುವಾರುಗಳಿಗೆ ಒಬ್ಬ ಪಶು ವೈದ್ಯ ಇರಬೇಕು. ಕರಾವಳಿ ಜಿಲ್ಲೆಗಳಲ್ಲಿ 40,000 ಜಾನುವಾರುಗಳಿಗೆ ಒಬ್ಬ ವೈದ್ಯರಿದ್ದಾರೆ. ಇದರಿಂದಾಗಿ ಕರಾವಳಿಯಲ್ಲಿ ಹಾಲಿನ ಉತ್ಪಾದನೆ ಕುಸಿಯುತ್ತಿದೆ' ಎಂದು ಗುರುರಾಜ್ ಶೆಟ್ಟಿ ಹೇಳಿದರು.

ಮಾತುಕತೆ

ಬೆಂಗಳೂರಿನ ವಿಧಾನಸೌಧದಲ್ಲಿ ಸೋಮವಾರ ನಡೆದ ವಿಧಾನ ಪರಿಷತ್ ಕಲಾಪದಲ್ಲಿ ಸಚಿವರಾದ ದಿನೇಶ್ ಗುಂಡೂರಾವ್, ಬೋಸರಾಜು ಮತ್ತು ಲಕ್ಷ್ಮಿ ಹೆಬ್ಬಾಳ್ಕರ್ ಮಾತುಕತೆಯಲ್ಲಿ ತೊಡಗಿದ್ದರು ಪ್ರಜಾವಾಣಿ ಚಿತ್ರ: ರಂಜು ಪಿ

## ವಿಧಾನಸೌಧ, ರಾಜಭವನಕ್ಕೆ ಭದ್ರತೆ ಹೆಚ್ಚಳ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಧಾನಸೌಧ, ಶಾಸಕರ ಭವನ ಮತ್ತು ರಾಜಭವನಕ್ಕೆ ಅತ್ಯಾಧುನಿಕ ತಂತ್ರಜ್ಞಾನವನ್ನು ಆಧರಿಸಿದ ಹೊಸ ಭದ್ರತಾ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ವಿಧಾನಸಭೆಯ ಅಧ್ಯಕ್ಷ ಯು.ಟಿ. ಖಾದರ್ ಸೋಮವಾರ ಸದನಕ್ಕೆ ತಿಳಿಸಿದರು.

ಶುಕ್ರವಾರ ಬಜೆಟ್ ಮಂಡನೆ ಸಮಯದಲ್ಲಿ ತಿಪ್ಪೇರುದ್ರಪ್ಪ ಎಂಬ ವ್ಯಕ್ತಿ ಸದನ ಪ್ರವೇಶಿಸಿ ಶಾಸಕಿ ಕರೆಮ್ಮ ಜಿ. ನಾಯಕ್ ಅವರ ಆಸನದಲ್ಲಿ ಕುಳಿತಿದ್ದ ಪ್ರಕರಣ ಕುರಿತು ಸೋಮವಾರ ಸದನಕ್ಕೆ ಮಾಹಿತಿ ನೀಡಿದ ಸ್ಪೀಕರ್, 'ಶಾಸಕರಲ್ಲದ ವ್ಯಕ್ತಿಯೊಬ್ಬರು ಸದನ ಪ್ರವೇಶಿಸಿರುವುದು ಶಾಸಕರ ಗಮನಕ್ಕೆ ಬಂದಿತ್ತು. ಅವರು ತಕ್ಷಣ ಸದನದ ಸಿಬ್ಬಂದಿಗೆ ಮಾಹಿತಿ ನೀಡಿದರು. ಮಾರ್ಷಲ್‌ಗಳು ಆ ವ್ಯಕ್ತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ ನಂತರ ಪೊಲೀಸರಿಗೆ ಒಪ್ಪಿಸಿದ್ದರು' ಎಂದರು.

'ತಿಪ್ಪೇರುದ್ರಪ್ಪ ಎಂಬ 76 ವರ್ಷ ವಯಸ್ಸಿನ ವ್ಯಕ್ತಿ ಸದನ ಪ್ರವೇಶಿಸಿದ್ದರು. ಮಾರ್ಷಲ್‌ಗಳು ನೀಡಿದ ದೂರನ್ನು ಆಧರಿಸಿ ಪೊಲೀಸರು ಅವರನ್ನು ಬಂಧಿಸಿದ್ದಾರೆ' ಎಂದರು. ಇಂತಹ ಲೋಪ ತಡೆಯಲು ಅತ್ಯಾಧುನಿಕ ಭದ್ರತಾ ವ್ಯವಸ್ಥೆ ಕಲ್ಪಿಸಲು ನಿರ್ಧರಿಸಲಾಗಿದೆ. ವಿಧಾನಸೌಧ, ಶಾಸಕರ ಭವನ ಮತ್ತು ರಾಜಭವನಕ್ಕೆ ಹೆಚ್ಚಿನ ಭದ್ರತೆ ಒದಗಿಸಲಾಗುವುದು ಎಂದರು.

### ಲೋಹಶೋಧಕ ಯಂತ್ರದಲ್ಲಿ ತಪಾಸಣೆ

ಶುಕ್ರವಾರದ ಪ್ರಕರಣದಿಂದ ಎಚ್ಚೆತ್ತುಕೊಂಡಿರುವ ಪೊಲೀಸರು, ವಿಧಾನ ಮಂಡಲಕ್ಕೆ ಸೋಮವಾರ ಭಾರಿ ಭದ್ರತೆ ಕಲ್ಪಿಸಿದ್ದರು. ವಿಧಾನಸೌಧ, ವಿಧಾನ ಸಭೆ, ವಿಧಾನ ಪರಿಷತ್ ಪ್ರವೇಶಿಸುವವರ ತಪಾಸಣೆಯನ್ನೂ ಹೆಚ್ಚಿಸಲಾಗಿತ್ತು.

ವಿಧಾನಸೌಧದ ಆವರಣ ಪ್ರವೇಶಿಸುವ ದ್ವಾರಗಳು, ವಿಧಾನಸೌಧ ಕಟ್ಟಡ ಪ್ರವೇಶಿಸುವ ದ್ವಾರಗಳಲ್ಲಿ ಗುರುತಿನ ಚೀಟಿಗಳನ್ನು ಪರಿಶೀಲಿಸಿ ಒಳಕ್ಕೆ ಬಿಡಲಾಯಿತು. ವಿಧಾನಸಭೆಯಲ್ಲಿ ಶಾಸಕರ ಭಾವಚಿತ್ರ ಸಹಿತ ಪಟ್ಟಿ ಹಿಡಿದು ನಿಂತಿದ್ದ ಮಾರ್ಷಲ್‌ಗಳು, ಸದನ ಪ್ರವೇಶಿಸುವ ಎಲ್ಲರ ಗುರುತು ಖಚಿತಪಡಿಸಿಕೊಂಡು ಒಳಕ್ಕೆ ಬಿಡುತ್ತಿದ್ದರು. ವಿಧಾನಸೌಧ ಪ್ರವೇಶಿಸುವ ಎಲ್ಲ ವ್ಯಕ್ತಿಗಳ ಬ್ಯಾಗ್‌ಗಳನ್ನು ಲೋಹಶೋಧಕ ಯಂತ್ರಗಳಲ್ಲಿ ತಪಾಸಣೆ ನಡೆಸಲಾಯಿತು. ಸಚಿವಾಲಯದ ಮಹಿಳಾ ಸಿಬ್ಬಂದಿಯೊಬ್ಬರ ಬ್ಯಾಗ್‌ನಲ್ಲಿ ಚಾಕು ಇತ್ತು. ಅದನ್ನು ಭದ್ರತಾ ಸಿಬ್ಬಂದಿ ವಶಕ್ಕೆ ಪಡೆದರು.

# ₹170 'ಧನ ಭಾಗ್ಯ'ಕ್ಕೆ ಚಾಲನೆ

ಒಂದನೇ ಪುಟದಿಂದ...

ಈ ಯೋಜನೆಯಡಿ 44.80 ಲಕ್ಷ ಅಂತ್ಯೋದಯ (ಎಎವೈ) ಮತ್ತು 3.97 ಕೋಟಿ ಆದ್ಯತಾ (ಬಿಪಿಎಲ್) ಪಡಿತರಚೀಟಿದಾರರಿಗೆ ಪ್ರಯೋಜನ ಆಗಲಿದೆ. ಡಿಬಿಟಿ ಮೂಲಕ ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ ನಗದು ವರ್ಗಾವಣೆ ಆಗಲಿದೆ. ಯೋಜನೆಯ ಅನುಷ್ಠಾನಕ್ಕೆ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ₹10 ಸಾವಿರ ಕೋಟಿ ನಿಗದಿಪಡಿಸಲಾಗಿದೆ. ಜುಲೈ ತಿಂಗಳ ನಗದು ಮೊತ್ತ ಇದೇ ತಿಂಗಳ ಒಳಗೆ ಫಲಾನುಭವಿಗಳ ಖಾತೆಗೆ ಜಮೆ ಆಗಲಿದೆ.

ಕಾರ್ಯಕ್ರಮದಲ್ಲಿ ಮಾತನಾಡಿ ಮುಖ್ಯಮಂತ್ರಿ, 'ಅನ್ನಭಾಗ್ಯ ಯೋಜನೆ ಘೋಷಣೆಯಾದ ತಕ್ಷಣ ರಾಜ್ಯದ ಜನರಿಗೆ ಅಕ್ಕಿ ಕೊಡುವುದನ್ನು ಸ್ಥಗಿತ ಮಾಡಿದ ಕೇಂದ್ರ ಸರ್ಕಾರ, ಬಳಿಕ ಆ ಅಕ್ಕಿಯನ್ನು ಇ-ಹರಾಜು ಮೂಲಕ ಹರಾಜು ಹಾಕಲು ಮುಂದಾಯಿತು. ಆದರೆ, ಇ-ಹರಾಜು ಮೂಲಕ ಅಕ್ಕಿ ಖರೀದಿಸಲು ಯಾರೂ ಮುಂದೆ ಬರುತ್ತಿಲ್ಲವೆಂಬ ಮಾಹಿತಿಯಿದೆ. ಇದನ್ನು ನಾವು ಡರ್ಟಿ ಪಾಲಿಟಿಕ್ಸ್ ಎಂದು ಕರೆಯಬೇಕೋ ಬೇಡವೋ? ಇದು ದ್ವೇಷದ ರಾಜಕಾರಣ ಅಲ್ಲವೇ. ' ಎಂದು ಪ್ರಶ್ನಿಸಿದರು.

ಯೋಜನೆಯ ಪ್ರಚಾರದ ವಿಡಿಯೊವನ್ನು ಮುಖ್ಯಮಂತ್ರಿ, ಲಾಂಛನವನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಹಿತಿ ಪತ್ರವನ್ನು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಬಿಡುಗಡೆ ಮಾಡಿದರು. ಬೈರತಿ ಸುರೇಶ್, ಎಚ್.ಕೆ. ಪಾಟೀಲ ಇದ್ದರು.

ಅನ್ನಭಾಗ್ಯ ಯೋಜನೆಯ ಲಾಂಛನ ಅನಾವರಣ ಮಾಡಿದ ಸಂದರ್ಭದಲ್ಲಿ ಆಹಾರ ಸಚಿವ ಕೆ.ಎಚ್ ಮುನಿಯಪ್ಪ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಇದ್ದರು –ಪ್ರಜಾವಾಣಿ ಚಿತ್ರ

1.28 ಕೋಟಿ ಪಡಿತರ ಕುಟುಂಬಗಳು

4.42 ಕೋಟಿ ಅಂದಾಜು ಫಲಾನುಭವಿಗಳು

**ಕೇಂದ್ರದ ಬಿಜೆಪಿ ಸರ್ಕಾರ ರಾಜ್ಯಕ್ಕೆ ಅಕ್ಕಿ ಕೊಡದೆ ಬಡವರ ವಿರೋಧಿಯಾದ ಡರ್ಟಿ ಪಾಲಿಟಿಕ್ಸ್ ಮಾಡುತ್ತಿದೆ. ಅವರೇನು ಪುಕ್ಕಟ್ಟೆ ಕೊಡುತ್ತಿರಲಿಲ್ಲ. ನಮ್ಮಿಂದ ಕೆ.ಜಿಗೆ ₹ 34 ತೆಗೆದುಕೊಳ್ಳುತ್ತಿದ್ದರು**

**ಸಿದ್ದರಾಮಯ್ಯ,** ಮುಖ್ಯಮಂತ್ರಿ

**10 ಕೆ.ಜಿ ಅಕ್ಕಿ ನೀಡುವವರೆಗೂ ಹೆಚ್ಚುವರಿ ಐದು ಕೆ.ಜಿ ಅಕ್ಕಿಯ ಹಣ ನೀಡಲು ತೀರ್ಮಾನಿಸಿದ್ದು, ನಿತ್ಯ ನಾಲ್ಕೈದು ಜಿಲ್ಲೆಯ ಫಲಾನುಭವಿಗಳ ಖಾತೆಗೆ ಹಣ ಜಮೆ ಆಗಲಿದೆ**

**ಡಿ.ಕೆ. ಶಿವಕುಮಾರ್,** ಡಿ.ಸಿ.ಎಂ

# ನಿಗಮದ 'ಮುಕ್ತ' ಅಕ್ಕಿಗಿಲ್ಲ ಬೇಡಿಕೆ !

ಒಂದನೇ ಪುಟದಿಂದ...

ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಿಗೆ ಅಕ್ಕಿ ಮಾರುವುದನ್ನು ಸ್ಥಗಿತಗೊಳಿಸಿದ ನಂತರ 'ದೇಶೀಯ ಮುಕ್ತ ಮಾರುಕಟ್ಟೆ ಮಾರಾಟ ಯೋಜನೆ (ಒಎಂಎಸ್‌ಎಸ್-ಡಿ)' ಅಡಿಯಲ್ಲಿ ಇ-ಹರಾಜು ನಡೆಸುವಂತೆ ನಿಗಮಕ್ಕೆ ಕೇಂದ್ರ ಸರ್ಕಾರ ಸೂಚಿಸಿತ್ತು. ಈ ಹರಾಜಿನಲ್ಲಿ ರಾಜ್ಯ ಸರ್ಕಾರಗಳು ಭಾಗವಹಿಸಲು ಅವಕಾಶ ಇಲ್ಲ. ಇಲ್ಲಿ ವ್ಯಾಪಾರಿಗಳು ಮಾತ್ರ ಭಾಗವಹಿಸಬಹುದು. ಪ್ರತಿ ಕೆ.ಜಿ. ಅಕ್ಕಿಗೆ ₹31.75 ದರ ನಿಗದಿಪಡಿಸಲಾಗಿತ್ತು. ಆದರೆ, ಅಕ್ಕಿ ಖರೀದಿ ಮಾಡಲು ವ್ಯಾಪಾರಿಗಳು ಹೆಚ್ಚಿನ ಆಸಕ್ತಿ ತೋರಿಲ್ಲ.

ಅನ್ನ ಭಾಗ್ಯ ಯೋಜನೆಗೆ ತಿಂಗಳಿಗೆ 2.28 ಲಕ್ಷ ಟನ್ ಅಕ್ಕಿ ಒದಗಿಸುವಂತೆ ಕರ್ನಾಟಕ ಸರ್ಕಾರವು ಆಹಾರ ನಿಗಮಕ್ಕೆ ಪತ್ರ ಬರೆದಿತ್ತು. ಅಗತ್ಯ ಅಕ್ಕಿ ಒದಗಿಸಲು ನಿಗಮವು ಜೂನ್ 12ರಂದು ಒಪ್ಪಿಗೆ ನೀಡಿತ್ತು. ಮರುದಿನವೇ ನಿಲುವು ಬದಲಿಸಿತ್ತು.

ಈಶಾನ್ಯ ರಾಜ್ಯಗಳು, ನೈಸರ್ಗಿಕ ವಿಕೋಪ ಎದುರಿಸುತ್ತಿರುವ ರಾಜ್ಯಗಳಿಗೆ ಹೊರತುಪಡಿಸಿ ಉಳಿದ ರಾಜ್ಯಗಳಿಗೆ ಮುಕ್ತ ಮಾರುಕಟ್ಟೆ ಮಾರಾಟ ಯೋಜನೆಯಡಿ ಅಕ್ಕಿ ಹಾಗೂ ಗೋಧಿ ಮಾರಾಟವನ್ನು ಜೂನ್ 13ರಂದು ಕೇಂದ್ರ ಸರ್ಕಾರ ಸ್ಥಗಿತಗೊಳಿಸಿತ್ತು. ವಿವಿಧ ಇಲಾಖೆಗಳ ಜತೆಗೆ ಸಮಾಲೋಚನೆ ನಡೆಸಿ ಈ ಆದೇಶ ಹೊರಡಿಸಲಾಗಿದೆ ಎಂದು ಕೇಂದ್ರ ಹೇಳಿತ್ತು. 'ಅಗತ್ಯ ವಸ್ತುಗಳ ಬೆಲೆಗಳನ್ನು ನಿಯಂತ್ರಿಸಲು ರಾಜ್ಯಗಳಿಗೆ ಅಕ್ಕಿ ಮಾರಾಟ ಸ್ಥಗಿತಗೊಳಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ. ಜನರ ಹಿತಾಸಕ್ತಿ ರಕ್ಷಿಸುವ ಉದ್ದೇಶ ಈ ನಿರ್ಧಾರದ ಹಿಂದೆ ಇದೆ. ಮಂಡಿಗಳಲ್ಲಿ ಇತ್ತೀಚಿನ ದಿನಗಳಲ್ಲಿ ಅಕ್ಕಿ ಮತ್ತು ಗೋಧಿಗಳ ಬೆಲೆ ಏರುಗತಿಯಲ್ಲಿದೆ' ಎಂದೂ ಸಮಜಾಯಿಷಿಯನ್ನೂ ನೀಡಿತ್ತು.

ಮುಂಗಾರು, ತಾಪಮಾನ ಬದಲಾವಣೆ ಹಾಗೂ ಭೌಗೋಳಿಕ ರಾಜಕೀಯ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಬೆಲೆಗಳನ್ನು ನಿಯಂತ್ರಣದಲ್ಲಿಡಲು ಆಹಾರಧಾನ್ಯಗಳ ದಾಸ್ತಾನು ಸಾಕಷ್ಟು ಇರಬೇಕಾಗುತ್ತದೆ. ರಾಜ್ಯ ಸರ್ಕಾರಗಳಿಗೆ ಧಾನ್ಯಗಳನ್ನು ಸ್ಥಗಿತಗೊಳಿಸಿರುವುದು ಅಂತಹ ಒಂದು ನಿರ್ಧಾರವಾಗಿದೆ ಎಂದೂ ಹೇಳಿತ್ತು. 'ಒಂದು ವೇಳೆ ಕರ್ನಾಟಕಕ್ಕೆ ಅಕ್ಕಿ ಪೂರೈಕೆ ಮಾಡಿದರೆ ಬೇರೆ ರಾಜ್ಯಗಳು ಸಹ ಇದೇ ರೀತಿಯ ಬೇಡಿಕೆ ಸಲ್ಲಿಸಬಹುದು. ಆಗ ಆ ಬೇಡಿಕೆಯನ್ನು ಈಡೇರಿಸುವುದು ಕಷ್ಟಕರವಾಗಲಿದೆ' ಎಂದು ಆಹಾರ ಸಚಿವಾಲಯದ ಅಧಿಕಾರಿಗಳು ಹೇಳಿದ್ದರು.

ಗ್ರಾಹಕ ವ್ಯವಹಾರಗಳ ಸಚಿವಾಲಯದ ವೆಬ್‌ಸೈಟ್‌ನಲ್ಲಿರುವ ದತ್ತಾಂಶಗಳ ಪ್ರಕಾರ, ಅಕ್ಕಿಯ ಅಖಿಲ ಭಾರತ ದಿನನಿತ್ಯದ ಸರಾಸರಿ ಚಿಲ್ಲರೆ ದರ ಜುಲೈ 8ರಂದು ಕೆ.ಜಿ.ಗೆ ₹40.15 ಆಗಿತ್ತು. ಇದು ಕಳೆದ ವರ್ಷದ ₹36.52 ದರಕ್ಕೆ ಹೋಲಿಸಿದರೆ ಶೇ 9.94 ಹೆಚ್ಚಳ ಆಗಿದೆ. ಜುಲೈ 8ರಂದು ದಿನನಿತ್ಯದ ಸರಾಸರಿ ಸಗಟು ಮಾರಾಟ ಕ್ವಿಂಟಲ್‌ಗೆ ₹3,522.54 ಇತ್ತು. ಕಳೆದ ವರ್ಷ ಇದೇ ಸಮಯದಲ್ಲಿ ಕ್ವಿಂಟಲ್‌ಗೆ ₹3,187.25 ಆಗಿತ್ತು. ಈ ಮೂಲಕ ದರ ಶೇ 10.52ರಷ್ಟು ಹೆಚ್ಚಳ ಆಗಿದೆ.

### 'ಮೋದಿ ಸರ್ಕಾರದ ಸೇಡಿನ ರಾಜಕಾರಣ'

'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಕ್ಷುಲ್ಲಕ ಹಾಗೂ ಸೇಡಿನ ರಾಜಕಾರಣ ಮಾಡಿ ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಅನ್ನ ಭಾಗ್ಯ ಯೋಜನೆ ಹಾಳುಗೆಡವಲು ಯತ್ನಿಸಿತು. ಆದರೆ, ಕಾಂಗ್ರೆಸ್ ಸರ್ಕಾರವು ಬಡವರಿಗೆ ನೇರ ನಗದು ವರ್ಗಾವಣೆ ಮಾಡುವ ಮೂಲಕ ತಕ್ಕ ಉತ್ತರ ನೀಡಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ತಿಳಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, 'ಕೇಂದ್ರದ ರಾಜಕಾರಣದಿಂದ ಕಾಂಗ್ರೆಸ್ ಸರ್ಕಾರ ಹೆದರಿಲ್ಲ. 5 ಕೆ.ಜಿ. ಅಕ್ಕಿ ಬದಲು ಪ್ರತಿ ವ್ಯಕ್ತಿಗೆ ₹170 ವರ್ಗಾವಣೆ ಮಾಡುತ್ತಿದೆ. ಇದರಿಂದ 4.42 ಕೋಟಿ ಜನರಿಗೆ ಅನುಕೂಲವಾಗುತ್ತದೆ' ಎಂದು ತಿಳಿಸಿದ್ದಾರೆ. 'ರಾಜ್ಯ ಸರ್ಕಾರಗಳು ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಗಿಂತ ಹಣದುಬ್ಬರವನ್ನು ನಿಯಂತ್ರಿಸಲು ಖಾಸಗಿ ವ್ಯಾಪಾರಿಗಳ ಮೇಲೆ ಮೋದಿ ಸರ್ಕಾರವು ಹೆಚ್ಚಿನ ನಂಬಿಕೆಯನ್ನು ಹೊಂದಿದೆ ಎಂಬುದು ಸ್ಪಷ್ಟವಾಗಿದೆ' ಎಂದು ಹೇಳಿದ್ದಾರೆ.

### 'ಹೆಚ್ಚು ಹಣ ಕೊಡುತ್ತಿದ್ದೆವು'

'ಮುಕ್ತ ಮಾರುಕಟ್ಟೆಗಿಂತ ಹೆಚ್ಚು ಹಣ ಕೊಡಲು ಸಿದ್ಧರಿದ್ದರೂ ಅಕ್ಕಿ ಒದಗಿಸಲಿಲ್ಲ' ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ಬೇಸರ ವ್ಯಕ್ತಪಡಿಸಿದರು.

'ಕೇಂದ್ರ ಸರ್ಕಾರವು ಮುಕ್ತ ಮಾರುಕಟ್ಟೆ ಪೂರೈಕೆ ಯೋಜನೆಯನ್ನು ಸ್ಥಗಿತಗೊಳಿಸುವ ಮೂಲಕ ರಾಜ್ಯಗಳ ಅಧಿಕಾರ ಮೊಟಕು ಮಾಡಿದೆ' ಎಂದೂ ದೂರಿದರು. 'ನಾವು ಪ್ರತಿ ಕೆ.ಜಿ.ಗೆ ₹34 ಕೊಡುತ್ತೇವೆ ಎಂದರೂ ಅಕ್ಕಿ ಕೊಡುತ್ತಿಲ್ಲ. ಆದರೆ, ಮುಕ್ತ ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿ. ಅಕ್ಕಿಯನ್ನು ₹31ಕ್ಕೆ ಮಾರುತ್ತಿದ್ದಾರೆ. ಅಲ್ಲಿ ನಾವು ಖರೀದಿ ಮಾಡುವಂತಿಲ್ಲ. ಇದು ಯಾವ ನ್ಯಾಯ' ಎಂದು ಪ್ರಶ್ನಿಸಿದರು.

### 16 ರಾಜ್ಯಗಳಿಂದ ಬಿಡ್ಡಿಂಗ್ ಇಲ್ಲ

ಜುಲೈ 5ರಂದು ನಡೆದ ಇ- ಹರಾಜಿನಲ್ಲಿ ನಿಗಮವು 19 ರಾಜ್ಯಗಳು ಮತ್ತು ಈಶಾನ್ಯ ರಾಜ್ಯಗಳ ಒಕ್ಕೂಟ ಪ್ರದೇಶಕ್ಕೆ ಒಟ್ಟು 3.86 ಲಕ್ಷ ಟನ್ ಅಕ್ಕಿ ಮಾರಲು ಯೋಜಿಸಿತ್ತು. ಪಂಜಾಬ್‌ಗೆ 1.5 ಲಕ್ಷ ಟನ್, ತಮಿಳುನಾಡಿಗೆ 49 ಸಾವಿರ ಟನ್ ಹಾಗೂ ಕರ್ನಾಟಕಕ್ಕೆ 33 ಸಾವಿರ ಟನ್ ಮಾರಲು ಉದ್ದೇಶಿಸಲಾಗಿತ್ತು. ಆದರೆ, ಮಹಾರಾಷ್ಟ್ರ (70 ಟನ್), ಗುಜರಾತ್ (50 ಟನ್), ಕರ್ನಾಟಕ (40 ಟನ್) ಹಾಗೂ ಈಶಾನ್ಯ ರಾಜ್ಯಗಳ ಒಕ್ಕೂಟ ಪ್ರದೇಶದಿಂದ 10 ಟನ್ ಅಕ್ಕಿಗೆ ಮಾತ್ರ ಬಿಡ್ ಬಂದಿದೆ. ಉಳಿದ 16 ರಾಜ್ಯಗಳಿಂದ ಬಿಡ್ಡಿಂಗ್ ಬಂದಿಲ್ಲ ಎಂಬ ಮಾಹಿತಿಯು ಇಲಾಖೆಯ ವೆಬ್‌ಸೈಟ್‌ನಲ್ಲಿದೆ.

**ಭಾರತೀಯ ಆಹಾರ ನಿಗಮವು ಇ-ಹರಾಜು ಆರಂಭಿಸಿದೆ. ಮುಂದೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುವ ನಿರೀಕ್ಷೆ ಇದೆ. ಈ ಪ್ರಕ್ರಿಯೆ 9 ತಿಂಗಳ ವರೆಗೆ ಮುಂದುವರಿಯಲಿದೆ.**

**ಸಂಜೀವ್ ಚೋಪ್ರಾ**
ಆಹಾರ ಸಚಿವಾಲಯದ ಕಾರ್ಯದರ್ಶಿ

### 'ಪ್ರಜಾವಾಣಿ' ಒಳನೋಟ ವರದಿ ಪ್ರಸ್ತಾಪ

# 'ಹೆರಿಗೆ ಆಸ್ಪತ್ರೆಗಳಲ್ಲಿ ವೈದ್ಯರ ಲಭ್ಯತೆ ಖಾತ್ರಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರಾಜ್ಯದಲ್ಲಿರುವ ಎಲ್ಲ ಹೆರಿಗೆ ಆಸ್ಪತ್ರೆಗಳು ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ದಿನದ 24X7 ವೈದ್ಯರು, ಸಿಬ್ಬಂದಿ ಲಭ್ಯ ಇರುವಂತೆ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಮಂಜುನಾಥ ಭಂಡಾರಿ ಅವರು ನಿಯಮ 330ರಡಿ, ಜೂನ್ 11ರಂದು 'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿದ್ದ 'ತಾಯ್ತನ ಸುರಕ್ಷೆ ಮರೀಚಿಕೆ: ದಕ್ಷಿಣದಲ್ಲಿ ಕರ್ನಾಟಕದಲ್ಲಿಯೇ ಹೆಚ್ಚು ತಾಯಂದಿರ ಸಾವು' ವಿಶೇಷ ವರದಿಯನ್ನು (ಒಳನೋಟ) ಉಲ್ಲೇಖಿಸಿ, ಪ್ರಸವ ಸಂದರ್ಭದಲ್ಲಿ ಸಂಭವಿಸುತ್ತಿರುವ ಮರಣ ತಡೆಯಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಮನವಿ ಮಾಡಿದರು.

'ವಿವಿಧ ಕಾರ್ಯಕ್ರಗಳು ಜಾರಿಯಲ್ಲಿ ಇದ್ದರೂ ದಕ್ಷಿಣ ಭಾರತದ ರಾಜ್ಯಗಳ ಪೈಕಿ ಕರ್ನಾಟಕದಲ್ಲಿ ಅತೀ ಹೆಚ್ಚು ತಾಯಂದಿರ ಮರಣ ಪ್ರಮಾಣ ದಾಖಲಾಗಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ಪ್ರಕಾರ ಕರ್ನಾಟಕದಲ್ಲಿ 15ರಿಂದ 18 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಮದುವೆ ಮಾಡುವ ಪ್ರಮಾಣ ನಗರ ಪ್ರದೇಶದಲ್ಲಿ ಶೇ 3.4ರಷ್ಟು, ಗ್ರಾಮೀಣ ಪ್ರದೇಶದಲ್ಲಿ ಶೇ 6.6ರಷ್ಟಿದೆ ಎಂದು ವರದಿಯಾಗಿದೆ. ತಳಮಟ್ಟದಲ್ಲಿ ಯೋಜನೆಗಳ ಅನುಷ್ಠಾದಲ್ಲಿರುವ ತೊಡಕುಗಳು ಹಾಗೂ ಪ್ರಾದೇಶಿಕ ಭಿನ್ನತೆಗಳು ಸವಾಲಾಗಿ ಪರಿಣಮಿಸಿದೆ' ಎಂದು ಮಂಜುನಾಥ ಭಂಡಾರಿ ಗಮನಸೆಳೆದರು.

ಉತ್ತರ ನೀಡಿದ ಸಚಿವರು, 'ದಕ್ಷಿಣ ರಾಜ್ಯಗಳ ಪೈಕಿ ಕರ್ನಾಟಕವು ತಾಯಿ, ಶಿಶು ಮರಣ ಪ್ರಮಾಣದಲ್ಲಿ ಮೇಲಿನ ಸ್ಥಾನದಲ್ಲಿರುವುದು ಸರ್ಕಾರದ ಗಮನದಲ್ಲಿದೆ. ಈ ಪ್ರಮಾಣವನ್ನು ಇಳಿಸಲು ಈಗಾಗಲೇ ಹಲವು ಯೋಜನೆಗಳು ಜಾರಿಯಲ್ಲಿವೆ. ಅವುಗಳ ಸಮರ್ಪಕ ಅನುಷ್ಠಾನಕ್ಕೆ ಹೆಚ್ಚಿನ ಒತ್ತು ನೀಡಲಾಗುವುದು. ಬಾಲ್ಯ ವಿವಾಹ ತಡೆಯಲು ತಾಲ್ಲೂಕು ಪಂಚಾಯಿತಿಯ ಸಹಾಯಕ ನಿರ್ದೇಶಕರನ್ನು ಬಾಲ್ಯ ವಿವಾಹ ನಿಷೇಧಾಧಿಕಾರಿಗಳನ್ನಾಗಿ ನೇಮಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ' ಎಂದರು.

# 13 ವರ್ಷದ ಒಗರು ಮರೆತು ಒಂದಾದ ದಂಪತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಚಿತ್ರದುರ್ಗ ಜಿಲ್ಲೆಯೊಂದರ ನಿವಾಸಿಯಾದ ಆತ ಟ್ಯಾಕ್ಸಿ ಚಾಲಕ. ಈಕೆ ಗೃಹಿಣಿ. ಸುದೀರ್ಘ 13 ವರ್ಷಗಳ ಕೌಟುಂಬಿಕ ಕಲಹದಲ್ಲಿ ಪರಸ್ಪರ ಹಾವು ಮುಂಗುಸಿಯಾಗಿದ್ದ ಈ ದಂಪತಿ ಕಡೆಗೂ ಒಡಲೊಳಗಿನ ಒಗರನ್ನು ಮರೆತರು. ಈ ಬಾರಿಯ ಗ್ರೀಷ್ಮ ಋತುವಿನ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಪುನರ್ಮಿಲನದ ಭಾವೋತ್ಕರ್ಷದಲ್ಲಿ ಮತ್ತೆ ಹೊಸಬಾಳಿಗೆ ಸಾಕ್ಷಿಯಾದರು...!

'ರಾಜ್ಯದಾದ್ಯಂತ ಜುಲೈ 8ರಂದು ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ 35 ಲಕ್ಷಕ್ಕೂ ಹೆಚ್ಚು ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ. ಇವುಗಳಲ್ಲಿ ₹ 1,911 ಕೋಟಿ ಮೊತ್ತವನ್ನು ಪರಿಹಾರ ರೂಪದಲ್ಲಿ ಕೊಡಿಸಲಾಗಿದೆ' ಎಂದು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷರೂ ಆದ ನ್ಯಾಯಮೂರ್ತಿ ಜಿ. ನರೇಂದರ್ ಸೋಮವಾರ ತಿಳಿಸಿದರು.

ಈ ಕುರಿತಂತೆ ಮಾಧ್ಯಮಗೋಷ್ಠಿಯಲ್ಲಿ ವಿವರ ನೀಡಿ, 'ರಾಜ್ಯದಾದ್ಯಂತ ಒಟ್ಟು 1,020 ಪೀಠಗಳು ಕಾರ್ಯನಿರ್ವಹಿಸಿದ್ದು, 34,76,231 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ಈ ಪೈಕಿ 2,50,344 ನ್ಯಾಯಾಲಯದಲ್ಲಿ ಬಾಕಿ ಇರುವ ಮತ್ತು 32,25,887 ವ್ಯಾಜ್ಯಪೂರ್ವ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ' ಎಂದು ವಿವರಿಸಿದರು.

'ಅದಾಲತ್‌ನಲ್ಲಿ 1,874 ವೈವಾಹಿಕ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದ್ದು, ರಾಜ್ಯದ ವಿವಿಧ ಭಾಗಗಳ 243 ಜೋಡಿಗಳನ್ನು ಒಂದು ಮಾಡಲಾಗಿದೆ. ಆಸ್ತಿಗೆ ಸಂಬಂಧಿಸಿದ 3,844 ಪಾಲುದಾರಿಕೆ ದಾವೆಗಳನ್ನು ಇತ್ಯರ್ಥಪಡಿಸಲಾಗಿದೆ. ಮೋಟಾರು ವಾಹನ ಅಪರಾಧಕ್ಕೆ ಸಂಬಂಧಿಸಿದ 5,007 ಪ್ರಕರಣಗಳಿಗೆ ಮುಕ್ತಿ ನೀಡಲಾಗಿದ್ದು, ₹ 224 ಕೋಟಿ ಪರಿಹಾರ ಕೊಡಿಸಲಾಗಿದೆ. 11,982 ಚೆಕ್ ಬೌನ್ಸ್ ಪ್ರಕರಣಗಳು ಅಂತ್ಯ ಕಂಡಿವೆ. 615 ಭೂಸ್ವಾಧೀನ ಎಕ್ಸಿಕ್ಯೂಷನ್ ಪ್ರಕರಣಗಳನ್ನು ಇತ್ಯರ್ಥಪಡಿಸಿ, ₹ 141 ಕೋಟಿ ಪರಿಹಾರ ಕೊಡಿಸಲಾಗಿದೆ. ಇತರೆ 4,921 ಎಕ್ಸಿಕ್ಯೂಷನ್ ಪ್ರಕರಣ ಗಳನ್ನು ಇತ್ಯರ್ಥಪಡಿಸಿ, ₹ 234 ಕೋಟಿ ಪರಿಹಾರ ಪಾವತಿಸುವಂತೆ ಮಾಡಲಾಗಿದೆ. ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (ರೇರಾ) ವ್ಯಾಪ್ತಿಗೆ ಒಳಪಡುವ 98 ಪ್ರಕರಣಗಳನ್ನು ಪರಿಹರಿಸಿ, ₹ 14 ಕೋಟಿ ಪರಿಹಾರ ಕೊಡಿಸಲಾಗಿದೆ. 180 ಗ್ರಾಹಕರ ವ್ಯಾಜ್ಯ ಸಂಬಂಧಿ ಪ್ರಕರಣಗಳನ್ನು ಬಗೆಹರಿಸುವ ಮೂಲಕ ₹ 6 ಕೋಟಿ ಪರಿಹಾರ ಕೊಡಿಸಲಾಗಿದೆ' ಎಂದು ವಿವರಿಸಿದರು.

ವಿಶೇಷಗಳು: ಶ್ರೀರಾಮ ಜನರಲ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್ ವರ್ಸಸ್ ಕೆ. ಪೂಜಾ ಇತರರು ವಿರುದ್ಧದ ಪ್ರಕರಣವನ್ನು ಹೈಕೋರ್ಟ್ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ನ್ಯಾಯಮೂರ್ತಿ ಕೆ. ಸೋಮಶೇಖರ್ ನೇತೃತ್ವದ ಪೀಠವು ₹ 1.15 ಕೋಟಿ ಪರಿಹಾರದೊಂದಿಗೆ ಇತ್ಯರ್ಥಪಡಿಸಿದೆ.

ಆಸ್ತಿ ಪಾಲುದಾರಿಕೆ ವ್ಯಾಜ್ಯಕ್ಕೆ ಸಂಬಂಧಿಸಿದ ಪ್ರಕರಣವನ್ನು ನ್ಯಾಯಮೂರ್ತಿ ಕೆ. ಎಸ್. ಹೇಮಲೇಖಾ ಅವರಿದ್ದ ಪೀಠವು ಇತ್ಯರ್ಥಪಡಿಸಿದ್ದು, ಪಕ್ಷಕಾರರಲ್ಲಿ ಒಬ್ಬರಾದ 74 ವರ್ಷದ ಲಲಿತಮ್ಮ ಎಂಬವರು ಆಂಬುಲೆನ್ಸ್‌ನಲ್ಲೇ ಹೈಕೋರ್ಟ್‌ಗೆ ಬಂದಿದ್ದರು. ಈ ವೇಳೆ ಹೇಮಲೇಖಾ ಅವರು ಖುದ್ದು ಆಂಬುಲೆನ್ಸ್ ಬಳಿ ತೆರಳಿ ಲಲಿತಮ್ಮನವರ ಹೇಳಿಕೆ ದಾಖಲಿಸಿಕೊಂಡು ಪ್ರಕರಣ ಇತ್ಯರ್ಥಪಡಿಸಿದ್ದಾರೆ. ಹುಬ್ಬಳ್ಳಿ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ 63 ವರ್ಷಗಳಷ್ಟು ಹಿಂದಿನ ಸಿವಿಲ್ ದಾವೆಗೆ ಮುಕ್ತಿ ದೊರಕಿಸಲಾಗಿದೆ.

### ಜಿ20 ಸಭೆ: ಲಂಬಾಣಿ ಕಸೂತಿ ಕಂಡು ವಿದೇಶಿ ಗಣ್ಯರ ಪುಳಕ

# ಗಿನ್ನೆಸ್ ದಾಖಲೆ ಸೇರಿದ ಕಸೂತಿ ಕಲೆ ಪ್ರದರ್ಶನ

ಪ್ರಜಾವಾಣಿ ವಾರ್ತೆ

**ಹೊಸಪೇಟೆ (ವಿಜಯನಗರ):** ಹವಾನಿಯಂತ್ರಿತ ಬಸ್ ಇಳಿಯುತ್ತಿದ್ದಂತೆಯೇ ಮೊಬೈಲ್ ಫೋನ್‌ಗಳು ಅವರ ಕೈಗೆ ಬಂದಿದ್ದವು. ಲಂಬಾಣಿ ನೃತ್ಯ ಸ್ವಾಗತ ಕೋರುತ್ತಿದ್ದಂತೆಯೇ ಮೊಬೈಲ್‌ಗಳು ವಿಡಿಯೊ ಚಿತ್ರೀಕರಣ ಮಾಡುತ್ತಿದ್ದವು. ಕಣ್ಣು ಕೋರೈಸುವ ಬಣ್ಣ, ಸುಂದರ ಕಸೂತಿ, ಮಿಂಚುವ ಕನ್ನಡಿಗಳಲ್ಲಿ ಮೂಡಿದ ಪ್ರತಿಬಿಂಬ ಕಂಡು ಅವರೆಲ್ಲ ಬೆರಗಾದರು...

ಹಂಪಿಯ ವಿರೂಪಾಕ್ಷ ದೇವಸ್ಥಾನದ ಮುಂಭಾಗದಲ್ಲಿರುವ ಬಸವಣ್ಣ ಮಂಟಪದ ಬಳಿ ಜಿ20 ಸಾಂಸ್ಕೃತಿಕ ಕಾರ್ಯಕಾರಿ ಗುಂಪಿನ (ಸಿಡಬ್ಲ್ಯುಜಿ) 45 ಮಂದಿ ಗಣ್ಯರಿಗೆ ಸೋಮವಾರ ಸಂಜೆ ಸ್ವಾಗತ ಕೋರಿದಾಗ ಕಂಡ ದೃಶ್ಯಗಳಿವು.

ಗಿನ್ನೆಸ್ ದಾಖಲೆ ಪುಸ್ತಕ ಸೇರಿದ ಕಸೂತಿ ಬಟ್ಟೆಗಳ ಪ್ರದರ್ಶನ ನೋಡಲು ಅವರು ಬಂದಿದ್ದರು. ಸ್ವಾಗತ ಕೋರಿದ ಲಂಬಾಣಿ ಮಹಿಳೆಯರಲ್ಲೇ ಕಸೂತಿಯ ವಿವಿಧ ವಿನ್ಯಾಸಗಳನ್ನು ಅವರು ಕಣ್ತುಂಬಿಕೊಂಡರು.

ಬಳಿಕ ಸಂಡೂರು ಕಲಾಕೇಂದ್ರದ ಸುಮಾರು 450 ಕಲಾವಿದರು 30 ದಿನಗಳಲ್ಲಿ ಸಿದ್ಧಪಡಿಸಿದ 1,755 ಕಸೂತಿಗಳನ್ನು ಕಂಡು ನಿಬ್ಬೆರಗಾದರು. ಅಲ್ಲಿ ಗಿನ್ನೆಸ್ ದಾಖಲೆಯನ್ನು ಖಚಿತಪಡಿಸುವ ರಿಶಿನಾಥ್ ಮತ್ತು ನಿಶಲ್ ಬರೂಚ ಇದ್ದರು.

ಈ ಹಿಂದೆ ಒಂದು ಸಾವಿರ ಕಸೂತಿಗಳು ಒಂದೆಡೆ ಪ್ರದರ್ಶನಗೊಂಡಿದ್ದು ಗಿನ್ನೆಸ್ ದಾಖಲೆಯಾಗಿತ್ತು. 'ಇಲ್ಲಿ ಹೊಸ ದಾಖಲೆ ನಿರ್ಮಾಣವಾಗಿದೆ' ಎಂದು ರಿಶಿನಾಥ್ ಘೋಷಿಸಿ, ಕೇಂದ್ರದ ಸಂಸದೀಯ ವ್ಯವಹಾರ ಸಚಿವ ಪ್ರಲ್ಹಾದ ಜೋಷಿ ಅವರಿಗೆ ಲಂಬಾಣಿ ಮಹಿಳೆಯರ ಸಮ್ಮುಖದಲ್ಲಿ 'ಗಿನ್ನೆಸ್ ಪ್ರಮಾಣಪತ್ರ' ಹಸ್ತಾಂತರಿಸಿದರು.

ಲಂಬಾಣಿ ಕಸೂತಿ ತಂಡದ ನಾಯಕಿ ಶಾಂತಾಬಾಯಿ ಮತ್ತು ಶ್ರುತಿ ಮುನಿಯಪ್ಪ ತಮ್ಮ ಅನುಭವ ಹಂಚಿಕೊಂಡರು. ಸಂಸದ ಉಮೇಶ್ ಜಾಧವ್ ಅವರು ಲಂಬಾಣಿ ಕಲೆಗೆ ಜಾಗತಿಕ ಮನ್ನಣೆ ಸಿಕ್ಕಿದ್ದಕ್ಕೆ ಹೆಮ್ಮೆಪಟ್ಟರು. ಲಂಬಾಣಿ ಸಮುದಾಯದವರತ್ತ ಕೈಬೀಸಿ, 'ನಾನೂ ನಿಮ್ಮವನೇ' ಎಂದರು. ದಿನವಿಡೀ ಸಾಂಸ್ಕೃತಿಕ ಕಾರ್ಯಕಾರಿ ಗುಂಪಿನ ಸಭೆಯಲ್ಲಿ ಪಾಲ್ಗೊಂಡಿದ್ದ ಗಣ್ಯರು ಭಾರತದ ಕಸೂತಿ ಕಲೆಯ ಸಾಂಸ್ಕೃತಿಕ ಹಿನ್ನೆಲೆಯನ್ನು ತಿಳಿದುಕೊಂಡರು.

ಹಂಪಿಯಲ್ಲಿ ಸೋಮವಾರ ಜಿ20 ರಾಷ್ಟ್ರಗಳ ಗಣ್ಯರ ಸಮ್ಮುಖದಲ್ಲಿ ಲಂಬಾಣಿ ಕಸೂತಿ ಕಲೆಗ ದೊರೆತ 'ಗಿನ್ನೆಸ್ ದಾಖಲೆ' ಪ್ರಮಾಣ ಪತ್ರವನ್ನು ಲಂಬಾಣಿ ಮಹಿಳೆಯರೊಂದಿಗೆ ಕೇಂದ್ರ ಸಚಿವ ಪ್ರಲ್ಹಾದ ಜೋಷಿ ಸ್ವೀಕರಿಸಿದರು –ಪ್ರಜಾವಾಣಿ ಚಿತ್ರ/ಲವ

**ಶ್ಲಾಘನೀಯ ಪ್ರಯತ್ನ, ಲಂಬಾಣಿ ಕಲೆ ಮತ್ತು ಕರಕುಶಲತೆಯನ್ನು ಜನಪ್ರಿಯಗೊಳಿಸುತ್ತದೆ ಮತ್ತು ಸಾಂಸ್ಕೃತಿಕ ಉಪಕ್ರಮಗಳಲ್ಲಿ ನಾರಿ ಶಕ್ತಿಯ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುತ್ತದೆ**

**ನರೇಂದ್ರ ಮೋದಿ,** ಪ್ರಧಾನಿ

# ಮಕ್ಕಳ ಆತಂಕಗಳಲ್ಲಿ ಪೋಷಕರ ಪಾತ್ರ

ಡಾ. ಕಿರಣ್ ವಿ. ಎಸ್.

ಧಾವಂತದ ಆಧುನಿಕ ಬದುಕು ಯಾರನ್ನೂ ಮಾನಸಿಕ ಆತಂಕಕ್ಕೆ ದೂಡದೆ ಬಿಟ್ಟಿಲ್ಲ. ಮನೆಯಲ್ಲಿ, ಕಚೇರಿಯಲ್ಲಿ, ರಸ್ತೆಯಲ್ಲಿ - ಹೀಗೆ ಪ್ರತಿಯೊಂದು ಕಡೆಯೂ ಮನಸ್ಸಿಗೆ ಒಂದಲ್ಲ ಒಂದು ಆತಂಕ ಕಾಡುತ್ತಲೇ ಇರುತ್ತದೆ. ಯಾವುದೋ ಒಂದು ರೀತಿಯಲ್ಲಿ ಈ ಆತಂಕವನ್ನು ಶಮನಗೊಳಿಸಲು ಪ್ರಯತ್ನಗಳು ನಡೆಯುತ್ತಲೇ ಇರುತ್ತವೆ. ಆದರೆ ಮಕ್ಕಳ ಕಥೆ ಏನು? ಇಂದಿನ ಮಕ್ಕಳಿಗೆ ಆತಂಕ ಇರುವುದಿಲ್ಲವೇ? ತಮ್ಮ ಮನಸ್ಸಿನಲ್ಲಿ ಮನೆ ಮಾಡಿರುವ ಆತಂಕದ ಭಾವನೆಗಳನ್ನು ಮಾತಿನಲ್ಲಿ ವ್ಯಕ್ತಪಡಿಸಲಾಗದ ಮಕ್ಕಳು ಅದನ್ನು ಯಾವ ರೀತಿಗಳಲ್ಲಿ ಸೂಚಿಸುತ್ತಾರೆ? ಹಿರಿಯರಾಗಿ ನಾವು ಅವರ ಆತಂಕವನ್ನು ಗ್ರಹಿಸುವುದು ಹೇಗೆ? ಮಕ್ಕಳ ಆತಂಕವನ್ನು ದೂರ ಮಾಡುವ ಯಾವ ವಿಧಾನಗಳನ್ನು ನಾವು ಪಾಲಿಸಬಹುದು? ಈ ನಿಟ್ಟಿನಲ್ಲಿ ಕೆಲವು ನೋಟಗಳು.

ಪ್ರತಿಯೊಂದು ಕಾಲದಲ್ಲೂ ಆಯಾ ಕಾಲಘಟ್ಟಕ್ಕೆ ಸಂಬಂಧಿಸಿದ ವಿಶಿಷ್ಟ ಸಮಸ್ಯೆಗಳು ಇದ್ದೇ ಇರುತ್ತವೆ. ಎರಡು-ಮೂರು ದಶಕಗಳ ಹಿಂದಿನ ಸಮಸ್ಯೆಗಳು ಇಂದಿಗೆ ಪ್ರಾಯಶಃ ಪ್ರಸ್ತುತವಾಗಲಾರವು. ಹೀಗಾಗಿ, ಇಂದಿನ ಪೋಷಕರು 'ನಾವು ಎದುರಿಸಿದ ಸಮಸ್ಯೆಗಳನ್ನು ನಮ್ಮ ಮಕ್ಕಳು ಎದುರಿಸಬಾರದು' ಎನ್ನುವಷ್ಟು ಎಚ್ಚರಿಕೆ ತೆಗೆದುಕೊಳ್ಳುತ್ತಾರೆ. ಆದರೆ, ಮಕ್ಕಳಿಗೆ ಒದಗಬಹುದಾದ ಇಂದಿನ ಕಾಲದ ಸಮಸ್ಯೆಗಳತ್ತಲೂ ಅರಿವು ಮೂಡಿಸಿಕೊಳ್ಳುವುದು ಹಿರಿಯರ ಜವಾಬ್ದಾರಿಯೇ ಆಗಿರುತ್ತದೆ. ವರ್ತಮಾನದ ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳ ಆತಂಕದ ಆಯಾಮಗಳು ಬೇರೆಯೇ ಇದ್ದಾವು. ನಮಗಿಂತಲೂ ಭಿನ್ನವಾದ ವಾತಾವರಣದಲ್ಲಿ ಬೆಳೆದಿರುವ ಮಕ್ಕಳಿಗೆ ತಮ್ಮ ಆತಂಕಗಳನ್ನು ವ್ಯಕ್ತಪಡಿಸುವ ವಿಧಾನಗಳೂ ವಿಭಿನ್ನವಾಗಿಯೇ ಇರುತ್ತವೆ.

> ಮಕ್ಕಳ ಬೆಳವಣಿಗೆಯ ಪ್ರತಿಯೊಂದು ಹಂತದಲ್ಲಿಯೂ ಕೆಲವು ವಯೋಸಹಜ ಆತಂಕಗಳು ಸಾಮಾನ್ಯ.

ಮಕ್ಕಳ ಬೆಳವಣಿಗೆಯ ಪ್ರತಿಯೊಂದು ಹಂತದಲ್ಲಿಯೂ ಕೆಲವು ವಯೋಸಹಜ ಆತಂಕಗಳು ಸಾಮಾನ್ಯ. ಸಣ್ಣ ಮಕ್ಕಳು ಪೋಷಕರಿಂದ ದೂರಾಗುವ ಆತಂಕವನ್ನು ಅನುಭವಿಸುತ್ತಾರೆ. ಬೆಳವಣಿಗೆಯ ಹಂತಗಳಲ್ಲಿ ಕತ್ತಲೆಯ ಆತಂಕ, ಅಪರಿಚಿತರ ಆತಂಕ, ಪ್ರಾಣಿಗಳ, ಕೀಟಗಳ ಆತಂಕವನ್ನು ಆರೋಗ್ಯವಂತ ಮಕ್ಕಳೂ ಅನುಭವಿಸುತ್ತಾರೆ. ಇವು ತಾತ್ಕಾಲಿಕ ಆತಂಕಗಳು. ಇದನ್ನು ಮೀರಿದ ಆತಂಕಗಳು ಕೂಡ ಮಕ್ಕಳನ್ನು ಕಾಡಬಹುದು. ತನ್ನ ದೇಹದ ಬಗ್ಗೆ, ಚರ್ಮದ ಬಣ್ಣದ ಬಗ್ಗೆ, ಶಾಲೆಗೆ ಹೋಗುವ ಹಾದಿಯಲ್ಲಿ ವೇಗವಾಗಿ ಚಲಿಸುವ ವಾಹನಗಳಿಗೆ ಸಿಲುಕುವ ಸಾಧ್ಯತೆಗಳ ಬಗ್ಗೆ, ಶಾಲೆಯ ಶಿಕ್ಷಕರ ಅಭಿಪ್ರಾಯದ ಬಗ್ಗೆ, ಸ್ನೇಹಿತರು ತನ್ನನ್ನು ಸ್ವೀಕರಿಸುವ ಬಗ್ಗೆ, ತನ್ನ ಜೊತೆಯಲ್ಲಿ ಕೆಟ್ಟದ್ದಾಗಿ ವರ್ತಿಸುವವರ ಬಗ್ಗೆ ಮಕ್ಕಳಿಗೆ ಆತಂಕವಿರುವ ಸಾಧ್ಯತೆಗಳು ಇಂದಿನ ದಿನಗಳಲ್ಲಿ ದಟ್ಟವಾಗಿವೆ. ಇದನ್ನು ಪೋಷಕರು ತಿರಸ್ಕರಿಸದೆ, ಹಾಸ್ಯ ಮಾಡದೆ, ನಿರ್ಲಕ್ಷ್ಯ ಮಾಡದೆ, ಉಪೇಕ್ಷಿಸದೆ, ಗಮನಿಸಿ, ಪರಿಹರಿಸಬೇಕಾಗುತ್ತದೆ.

ಆತಂಕಗಳನ್ನು ಮಾತುಗಳ ಮೂಲಕ ವ್ಯಕ್ತಪಡಿಸುವುದರಲ್ಲಿ ಬಹಳ ಮಕ್ಕಳು ಸೋಲುತ್ತಾರೆ. ಬಹುತೇಕ ಮಕ್ಕಳಲ್ಲಿ ಆತಂಕ ಅವರ ವರ್ತನೆಗಳಲ್ಲಿ ಕಾಣುತ್ತದೆ. ಮಗು ಅಕಾರಣವಾಗಿ ಸಹನೆ ಕಳೆದುಕೊಳ್ಳಬಹುದು; ಕೋಪ ಪ್ರದರ್ಶಿಸಬಲ್ಲದು; ಹಿರಿಯರ ಮೇಲೆ ಸಿಡುಕಬಲ್ಲದು; ನಿದ್ರಾಹೀನತೆ ಇಲ್ಲವೆ ಅತಿನಿದ್ರೆಯಿಂದ ಬಳಲಬಹುದು; ಹಾಸಿಗೆಯಲ್ಲಿಯೇ ಮೂತ್ರ ಮಾಡಬಹುದು; ಕೆಟ್ಟ ಕನಸುಗಳಿಂದ ಭೀತಿಗೊಳ್ಳಬಹುದು; ಶಾಲೆಯ ಪರೀಕ್ಷೆಗಳಲ್ಲಿ ಅಂಕಗಳು ಇಳಿ ಮುಖವಾಗಬಲ್ಲವು; ಓದು, ಹೋಂವರ್ಕ್‌ಗಳಲ್ಲಿ ಹಿಂದುಳಿಯಬಲ್ಲದು; ಅನ್ಯ ಮನಸ್ಕವಾಗಬಲ್ಲದು; ಓರಗೆಯ ಮಕ್ಕಳ ಜೊತೆಗೆ ಆಟವಾಡಲು ನಿರಾಕರಿಸಬಲ್ಲದು; ಆಗಾಗ ಸುಸ್ತು, ತಲೆನೋವು, ಹೊಟ್ಟೆನೋವು, ಮೈ-ಕೈ ನೋವುಗಳೆಂದು ದೂರಬಹುದು. ಕೆಲವೊಮ್ಮೆ ಇಂತಹ ಮಕ್ಕಳಲ್ಲಿ ಕಾಣುವ ಉಸಿರಾಟದ ಸಮಸ್ಯೆ, ತಲೆಸುತ್ತು, ಎದೆಬಡಿತದ ಅನುಭವ, ಶರೀರ ಕಂಪನ, ಅಧಿಕ ಬೆವರುವಿಕೆಯಂತಹ ಚಿಹ್ನೆಗಳು ಪೋಷಕರ ಭಯಕ್ಕೆ ಕಾರಣವಾಗಬಲ್ಲವು. ಕೆಲವು ಮಕ್ಕಳು ಯಾವುದಾದರೂ ಕಾರಣದಿಂದ ತಮ್ಮ ಆತಂಕಗಳನ್ನು ಹೊರಗೆ ತೋರದೆ ಮನದೊಳಗೇ ಉಳಿಸಿಕೊಂಡು ಮಾನಸಿಕ ಖಿನ್ನತೆಗೆ ಜಾರಬಹುದು.

ಕಾರಣಗಳು ಸ್ಪಷ್ಟವಾಗಿ ಪತ್ತೆಯಾಗುವ ಆತಂಕಗಳನ್ನು ನಿವಾರಿಸಬಹುದು. ಇಂತಹವುಗಳ ಸಂಖ್ಯೆ ಕಡಿಮೆ. ಮಕ್ಕಳು ಅನುಭವಿಸುವುದಕ್ಕಿಂತ ಊಹಿಸಿಕೊಂಡು ಆತಂಕಕ್ಕೆ ಒಳಗಾಗುವ ಸಾಧ್ಯತೆಗಳು ಹೆಚ್ಚು. ಇಂತಹ ಬಹುತೇಕ ಆತಂಕಗಳನ್ನು ನಿರ್ವಹಿಸುವ ವಿಧಾನಗಳನ್ನು, ಕಲೆಯನ್ನು ಮಕ್ಕಳಿಗೆ ತಿಳಿಸಿಕೊಡಬೇಕಾಗುತ್ತದೆ. ಇದನ್ನು ಸಾಧಿಸಲು ಬೇಕಾದ ಅತ್ಯಂತ ಮುಖ್ಯ ಆವಶ್ಯಕತೆ ಮಕ್ಕಳೊಡನೆ ಪ್ರಾಮಾಣಿಕ ಸಂವಹನ. ನಮ್ಮ ತುರ್ತುಗಳು ಏನೇ ಇದ್ದರೂ ಕನಿಷ್ಠ ಒಬ್ಬ ಪೋಷಕರಾದರೂ ಮಕ್ಕಳೊಡನೆ ದಿನವೂ ಕೆಲನಿಮಿಷಗಳ ಕಾಲ ಅನೌಪಚಾರಿಕವಾಗಿ ಸಂವಹನ ನಡೆಸಬೇಕು. ಈ ಪ್ರಕ್ರಿಯೆಯಲ್ಲಿ ಮಕ್ಕಳಿಗೆ ಮಾತನಾಡಲು ಅವಕಾಶ ನೀಡಬೇಕು. ಅವರ ಮಾತುಗಳನ್ನು ಮಧ್ಯದಲ್ಲಿ ತುಂಡರಿಸಬಾರದು. ಅನಗತ್ಯ ಮುಖಭಾವಗಳನ್ನು ಪ್ರದರ್ಶಿಸಬಾರದು. ಅವರ ಮಾತಿನ ಮಧ್ಯದಲ್ಲಿ ಬಾಯಿ ಹಾಕಿ ಪರಿಹಾರಗಳನ್ನು ಸೂಚಿಸುವತ್ತ ಸಂಭಾಷಣೆಯನ್ನು ಒಯ್ಯಬಾರದು. ಅವರು ಪರಿಹಾರಗಳನ್ನು ಬೇಡಿದರೆ ಅವರ ಆತ್ಮವಿಶ್ವಾಸವನ್ನು ಕುಗ್ಗಿಸುವಂತಹ ಮಾತುಗಳನ್ನು ಆಡಬಾರದು. ಎಲ್ಲಿ ಸರಿಯಾದ ಸಲಹೆಗಳನ್ನು ನೀಡುವಲ್ಲಿ ನಮ್ಮ ಜ್ಞಾನ, ಅನುಭವಗಳು ಸಾಲುವುದಿಲ್ಲವೋ, ಅಲ್ಲಿ ಮಕ್ಕಳಿಗೆ ಸಾಂತ್ವನದ ಮಾತುಗಳನ್ನು ಹೇಳಿ, ತಜ್ಞರ ಸಲಹೆ ಪಡೆಯುವುದು ಸೂಕ್ತ. ಒಟ್ಟಿನಲ್ಲಿ ಮಕ್ಕಳ ವರ್ತನೆಗೆ ಕಣ್ಣಾಗಬೇಕು; ಅವರ ಅಗತ್ಯಗಳಿಗೆ ಕಿವಿಯಾಗಬೇಕು. ಈ ನಿಟ್ಟಿನಲ್ಲಿ ತೀರ್ಪುದಾರರ ವರ್ತನೆ ಸಲ್ಲದು; ಸಮಾನಸ್ತರದ ವ್ಯವಹಾರ ಮುಖ್ಯವಾಗುತ್ತದೆ.

ನೈಜ ಆತಂಕಗಳಿಂದ ಪಲಾಯನ ಮಾಡುವುದು ತಾತ್ಕಾಲಿಕ ಪರಿಹಾರವನ್ನು ನೀಡಬಹುದು. ಆದರೆ ಭವಿಷ್ಯದಲ್ಲಿ ಅಂತಹುದೇ ಪ್ರಸಂಗಗಳು ಮತ್ತೆ ಎದುರಾದಾಗ ಹೇಗೆ ನಿಭಾಯಿಸಬೇಕು ಎಂದು ಹೇಳಿಕೊಡುವುದಿಲ್ಲ. ಈಚಿನ ದಿನಗಳಲ್ಲಿ ಪೋಷಕರು ಮಕ್ಕಳನ್ನು ಪ್ರತಿಯೊಂದು ಅಹಿತಕರ ಅನುಭವದಿಂದ ದೂರವಿಡಬೇಕೆಂದು ಬಯಸುತ್ತಾರೆ. ಆಟವಾಡುವ ಮಕ್ಕಳ ಮಾತುಕತೆಯಂತಹ ತೀರಾ ಸಣ್ಣ ವಿಷಯಗಳಲ್ಲೂ ತಾವೇ ಮಧ್ಯೆ ಪ್ರವೇಶಿಸಿ, ತಮ್ಮ ಮಗುವಿನ ಪರವಾಗಿ ವಕಾಲತ್ತು ಮಾಡುತ್ತಾ, ಮಗುವಿನ ಮಾನಸಿಕ ಬೆಳವಣಿಗೆಯನ್ನು ಕುಂಠಿಸುತ್ತಾರೆ. ಇದರ ದೀರ್ಘಕಾಲಿಕ ಪರಿಣಾಮಗಳನ್ನು ಅವರು ಅರಿಯುವುದೇ ಇಲ್ಲ. ಇಂತಹ ಮಕ್ಕಳು ಸ್ವಭಾವತಃ ಅಂಜುಬುರುಕರಾಗಿ, ಪ್ರತಿಯೊಂದಕ್ಕೂ ಪೋಷಕರನ್ನೇ ಆಶ್ರಯಿಸುತ್ತಾ ಬೆಳೆಯುತ್ತಾರೆ. ಇದು ಭವಿಷ್ಯದಲ್ಲಿ ಅಪಾಯಕಾರಿ ಪರಿಣಾಮಗಳಿಗೆ ದಾರಿಯಾಗಬಹುದು. ಅವರ ಆತಂಕಗಳನ್ನು ಏನಕೇನ ಪ್ರಕಾರಗಳಿಂದ ಕಳೆಯುವುದಕ್ಕಿಂತಲೂ ಮಕ್ಕಳಿಗೆ ಪರಿಹಾರಗಳನ್ನು ಕಂಡುಕೊಳ್ಳಲು ನೀಡುವ ಶಿಕ್ಷಣ ಮುಖ್ಯ. ಬಹುತೇಕ ಆತಂಕಗಳ ನಿರ್ವಹಣೆಯಲ್ಲಿ ಮಕ್ಕಳ ಜೊತೆ ಮಾನಸಿಕವಾಗಿ ನಿಂತು ಆತ್ಮವಿಶ್ವಾಸ ಹೆಚ್ಚಿಸುವುದು ಭೌತಿಕವಾಗಿ ನಿಂತು ರಕ್ಷಣೆ ನೀಡುವುದಕ್ಕಿಂತಲೂ ಸೂಕ್ತ.

ಬದಲಾಗುತ್ತಿರುವ ಜೀವನವಿಧಾನಗಳಲ್ಲಿ ಮಕ್ಕಳ ಕಲಿಕೆಯ ಜೊತೆಗೆ ಹಿರಿಯರ ಕಲಿಕೆಯೂ ನಿರಂತರವಾಗಿ ಆಗುತ್ತಿರಬೇಕು. ಆತಂಕಗಳ ನಿರ್ವಹಣೆ ಇದಕ್ಕೊಂದು ಪ್ರಬಲ ಉದಾಹರಣೆ.

# ನಾಳೆ ಎನ್ನುವುದು ಹಾಳು!

ರೂಪಾ ಕೆ.ಎಂ.

**ಇವತ್ತಿಂದ ಯೋಗ** ಶುರು ಮಾಡಬೇಕು. ಕೊನೆಪಕ್ಷ ಈ ವರ್ಷದಿಂದ ಡೈರಿಯನ್ನಾದರೂ ಬರೆಯುವುದನ್ನು ಅಭ್ಯಾಸ ಮಾಡಬೇಕು. ಹೀಗೆ ಅಂದುಕೊಳ್ಳುತ್ತಲೇ ದಿನಗಳು ಉರುಳಿರುತ್ತವೆ. 'ಐಟಿ ರಿಟರ್ನ್' ಫೈಲ್ ಮಾಡುವುದಕ್ಕೆ ಇನ್ನು ಸಮಯ ಇದೆಯಲ್ಲ ಎಂದು ಅದನ್ನು ಮುಂದು ಹಾಕುತ್ತಲೇ ವರ್ಷದ ಅಂತ್ಯಕ್ಕೆ ಬಂದುಬಿಟ್ಟಿರುತ್ತದೆ. ಕೊನೆಗೆ ದಂಡ ತೆತ್ತಾದರೂ ಐಟಿ ರಿಟರ್ನ್ ಫೈಲ್ ಮಾಡಲಾಗುತ್ತದೆ.

ಏನೇ ಕೆಲಸ ಇರಲಿ, ಅದನ್ನು ಮುಂದು ಹಾಕುವ ಪ್ರವೃತ್ತಿಗೆ (procrastination) ಮನಸ್ಸು ಒಗ್ಗಿ ಹೋಯಿತೆಂದರೆ ಅದರ ತೆಕ್ಕೆಯಿಂದ ಬಿಡಿಸಿಕೊಳ್ಳುವುದು ಬಲು ಕಷ್ಟ. ಒಮ್ಮೆ ರೂಢಿಯಾಗಿಬಿಟ್ಟರೆ ನಿತ್ಯದ ಕೆಲಸಗಳನ್ನು ಮುಂದು ಹಾಕಲು ಮನಸ್ಸು ತುದಿಗಾಲಲ್ಲಿ ನಿಂತಿರುತ್ತದೆ. ಬೆಳಿಗ್ಗೆ ಎದ್ದ ಕೂಡಲೇ ಸ್ನಾನ ಮಾಡಬೇಕು ಎನ್ನುವುದು ಪುಟ್ಟ ನಿಯಮವಾದರೂ ಅದನ್ನು ಮುರಿಯಲು ಮನಸ್ಸು ಬಯಸುತ್ತಿರುತ್ತದೆ. ತಿಂಡಿ ತಿಂದಮೇಲೆ ಸ್ನಾನ ಮಾಡಿದರಾಯಿತು ಎಂದುಕೊಳ್ಳುವ ಮನಸ್ಸು ಅದನ್ನು ಮುಂದು ಹಾಕುತ್ತಲೇ, ಮಧ್ಯಾಹ್ನದ ಊಟವಾದ ಮೇಲೆ ಮಾಡಿದರಾಯಿತು ಎಂದುಕೊಳ್ಳುತ್ತ ಕೊನೆಗೆ ರಾತ್ರಿ ಊಟವಾದ ಮೇಲೆ ಸ್ನಾನ ಮಾಡುವಲ್ಲಿಗೆ ಬಂದು ನಿಲ್ಲುತ್ತದೆ.

ಯಾಕೆ ಹೀಗೆ ಆಗುತ್ತದೆ? ಇದನ್ನು ಸೂಕ್ಷ್ಮವಾಗಿ ಗಮನಿಸಿ ನೋಡಿದರೆ ಇದಕ್ಕೆ ಉತ್ತರ ಸಿಗದೆ ಇರುವುದಿಲ್ಲ. ಈ ಮುಂದು ಹಾಕುವ ಪ್ರವೃತ್ತಿ ಮೇಲ್ನೋಟಕ್ಕೆ ಸೋಮಾರಿಯ ಲಕ್ಷಣ ಎನಿಸಿದರೂ ಆಳದಲ್ಲಿ ಮನುಷ್ಯನಲ್ಲಿ ಇರಬಹುದಾದ ತೀವ್ರತರದ ಒತ್ತಡ , ಆತಂಕ ಹಾಗೂ ತನ್ನ ಬಗ್ಗೆ ತನಗೆ ಇರುವ ಅಪನಂಬಿಕೆಯ ಕನ್ನಡಿಯಂತೆ!

**ಈ ಪ್ರವೃತ್ತಿ ಹುಟ್ಟಲು ಕಾರಣಗಳು ಏನಿರಬಹುದು?**

**ಆತ್ಮವಿಶ್ವಾಸದ ಕೊರತೆ:** ಇಂಟರ್‌ನೆಟ್ ಬ್ಯಾಂಕಿಂಗ್ ಸೇವೆ ಪಡೆಯಬೇಕೆಂದು ನಿರ್ಧರಿಸಿರುತ್ತೀರಿ; ಆದರೆ, ಅದಕ್ಕೆ ಸಂಬಂಧಪಟ್ಟ ಅರ್ಜಿ ಕೊಟ್ಟು ಬರುವ ಪ್ರಕ್ರಿಯೆಯನ್ನು ಮುಂದು ಹಾಕುತ್ತ ಇರುತ್ತೀರಿ. ಬ್ಯಾಂಕಿಂಗ್ ಹಾಗೂ ಹಣಕಾಸು ಸಂಬಂಧಿತ ಚಟುವಟಿಕೆಗಳಲ್ಲಿ ಇರುವ ನಿರಾಸಕ್ತಿಯಿಂದಾಗಿ ಅದರ ಬಗ್ಗೆ ಸರಿಯಾಗಿ ತಿಳಿದುಕೊಂಡಿರುವುದಿಲ್ಲ. ಹಾಗಾಗಿ ಆತ್ಮವಿಶ್ವಾಸ ಇರುವುದಿಲ್ಲ. ಸರಿಯಾಗಿ ತಿಳಿದುಕೊಳ್ಳದೇ ಹೋಗಿದ್ದಕ್ಕೆ ಬ್ಯಾಂಕ್ ಸಿಬ್ಬಂದಿ ಏನು ಅನ್ನುತ್ತಾರೋ ಎಂದುಕೊಂಡು ಬ್ಯಾಂಕಿಗೆ ಹೋಗುವ ಪ್ರಕ್ರಿಯೆಯನ್ನೇ ಮುಂದೂಡುತ್ತೀರಿ.

**ಪರಿಪೂರ್ಣತೆಯ ಜಿಗುಟು:** ಪರಿಪೂರ್ಣತೆಯ ಜಿಗುಟು ಒಮ್ಮೆ ತಾಕಿ ಬಿಟ್ಟರೆ ಸದಾ ಹಾಗೇ ಉಳಿಯಲು ಇಚ್ಛಿಸುತ್ತೀರಿ. ಸಣ್ಣ ತಪ್ಪು ಆಗಬಾರದು ಎಂದು ಮನಸ್ಸು ಚಡಪಡಿಸುತ್ತಿರುತ್ತದೆ. ಯಾವುದೇ ಕೆಲಸ ಅಚ್ಚುಕಟ್ಟಾಗಿ, ಪರಿಪೂರ್ಣವಾಗಿ ಮಾಡಬೇಕು ಎನ್ನುವುದು ನಿಜವಾದ ಬದ್ಧತೆ ಹೌದಾದರೂ ಒಂದು ಯೋಜನೆ ಆರಂಭಗೊಳ್ಳದೇ ಹಾಗೇ ಉಳಿಯುವುದಕ್ಕೂ ಈ ಪರಿಪೂರ್ಣತೆ ಅಡ್ಡಗಾಲಾಗುವ ಅಪಾಯವಿದೆ. ಒಂದೊಳ್ಳೆಯ ಕವಿತೆ ಇಂದಾದರೂ ಬರೆಯಬೇಕು ಎಂದುಕೊಂಡು ಪರಿಪೂರ್ಣತೆಯತ್ತ ಯೋಚಿಸಿ, ಬರೆಯುವುದನ್ನೇ ಮುಂದಕ್ಕೆ ಹಾಕಬಹುದು.

**ಸೋಲುವ ಭಯ:** ಸೋಲುವ ಭೀತಿಯಿಂದ ಯಾವುದೇ ಯೋಜನೆಗಳಿರಲಿ ಅದನ್ನು ಮನಸ್ಸಿನಲ್ಲಿಯೇ ಕಲ್ಪಿಸಿಕೊಂಡು ಒಮ್ಮೆಯೂ ಪ್ರಯತ್ನಿಸದೇ ಸುಮ್ಮನೆ ಇದ್ದುಬಿಡುವುದು. ಇದರಿಂದ ಪ್ರಯತ್ನವೆಂಬುದೇ ಇಲ್ಲದೆ ಸೋಲಿನ ಭೀತಿಯಿಂದ ನರಳುವುದು. ಸದಾ ಟೀಕೆ ಮಾಡುವ, ಯಾವುದಕ್ಕೂ ಪ್ರೋತ್ಸಾಹ ನೀಡದವರ ಮಧ್ಯೆ ಇದ್ದರೆ ಈ ರೀತಿಯ ಸೋಲುವ ಭೀತಿಯೊಂದು ಸದ್ದಿಲ್ಲದೇ ನಮ್ಮನ್ನು ಆವರಿಸುತ್ತದೆ. ಎಲ್ಲಿ ಸೋಲುತ್ತೇನೋ, ಎಲ್ಲಿ ನಗೆಪಾಟಲಿಗೆ ಈಡಾಗುತ್ತೇನೋ ಎಂದುಕೊಳ್ಳುತ್ತಲೇ ಗೊತ್ತಿರುವ ಕೆಲಸವನ್ನೇ ಮುಂದೆ ಹಾಕಿ ಆ ಕ್ಷಣಕ್ಕೆ ನೆಮ್ಮದಿಯ ನಿಟ್ಟುಸಿರುಬಿಡುವುದು.

**ಉತ್ತೇಜನ ಸಿಗದೇ ಇರುವುದು:** ಸೂರ್ಯನ ಕಿರಣಗಳ ಉತ್ತೇಜನದಿಂದ ಹೂವು ತಾನಾಗಿಯೇ ಅರಳುತ್ತದೆ. ಹಾಗೆಯೇ ಪ್ರೀತಿ, ಅಂತಃಕರಣ, ಪ್ರೋತ್ಸಾಹದಾಯಕ ಮಾತುಗಳು ಇದ್ದರಷ್ಟೆ ಬದುಕು ಚಂದವೆನಿಸುತ್ತದೆ. ಒಂದು ಉತ್ತೇಜನವೇ ಇಲ್ಲದೇ ಇದ್ದರೆ, ಹುರಿದುಂಬಿಸುವವರು ಇಲ್ಲದೇ ಹೋದರೆ ಯಾವ ಕೆಲಸ ಮಾಡಲೂ ಮನಸ್ಸು ಬರುವುದಿಲ್ಲ.

## ಈ ಪ್ರವೃತ್ತಿಯಿಂದ ಬಿಡುಗಡೆ ಹೊಂದುವುದು ಹೇಗೆ?

- **ಚಿಕ್ಕ ಹೆಜ್ಜೆಗಳನ್ನ ಇಡಿ:** ನಿತ್ಯ ಡೈರಿ ಬರೆಯಬೇಕು ಎನ್ನುವುದು ನಿಮ್ಮ ಯೋಚನೆಯಾದರೆ, ಆರಂಭದಲ್ಲಿ ಒಂದು ಪುಟ ಬರೆಯಲು ಆಗದೇ ಇದ್ದರೂ ಎರಡು ಸಾಲುಗಳನ್ನು ಬರೆಯಲು ಪ್ರಯತ್ನಿಸಿ. ಸಣ್ಣ ಸಣ್ಣ ಹೆಜ್ಜೆಗಳನ್ನು ಇಟ್ಟು ನಂತರದ ದಾಪುಗಾಲು ಹಾಕಿ.
- **ಯೋಜನಾಬದ್ಧರಾಗಿ:** ಆಗಾಗ್ಗೆ ನಿಯಮಗಳನ್ನು ಮುರಿಯುವುದಕ್ಕೆ ಖುಷಿ ಸಿಗುತ್ತೆಯಾದರೂ ಪ್ರತಿ ಕೆಲಸವನ್ನು ಯೋಜನಾಬದ್ಧವಾಗಿ ಮಾಡಿ. ಬೆಳಿಗ್ಗೆ ಎದ್ದಕೂಡಲೇ ಸ್ನಾನ, ನಂತರ ತಿಂಡಿ, ಆಮೇಲೆ ಓದು ಹಾಗೂ ಬರವಣಿಗೆ ಹೀಗೆ ಮಾಡಬೇಕಾದ ಚಟುವಟಿಕೆಗಳೆಲ್ಲವೂ ವೇಳಾಪಟ್ಟಿಯಲ್ಲಿದ್ದು, ಅದನ್ನು ಸರಿಯಾಗಿ ಪಾಲಿಸಿದರೆ ಮುಂದಕ್ಕೆ ಹಾಕುವ ಪವೃತ್ತಿ ಹತ್ತಿರವೂ ಸುಳಿಯುವುದಿಲ್ಲ.
- **ನಿಗದಿತ ಸಮಯ ಮೀಸಲಿಡಿ:** ನಿತ್ಯ 10 ನಿಮಿಷ ಮನೆಯನ್ನು ಚೊಕ್ಕ ಮಾಡುತ್ತೇನೆ ಎಂದುಕೊಂಡರೆ ಆ ಸಮಯಕ್ಕೆ ಅದನ್ನು ಮುಗಿಸಿಬಿಡಿ. ಮುಗಿಸಿದ ಖುಷಿಗೆ ಇಷ್ಟದ ಸಿಹಿಯನ್ನು ತಿಂದು ನಿಮಗೆ ನೀವೇ ರಿವಾರ್ಡ್ ಕೊಟ್ಟುಕೊಳ್ಳಿ. ಇದೇ ರೀತಿ ಎಲ್ಲ ಚಟುವಟಿಕೆಗಳಿಗೆ ಸಮಯ ನಿಗದಿಪಡಿಸಿ. ಅದರ ಒಳಗೆ ಮುಗಿಸುವ ಸಂಕಲ್ಪ ಮಾಡಿ.
- **ನಕಾರಾತ್ಮಕ ಆಲೋಚನೆಯನ್ನು ದೂರವಿಡಿ:** ನಕಾರಾತ್ಮಕ ಆಲೋಚನೆ ಹಾಗೂ ಜನರಿಂದ ದೂರವಿರಿ. ಪರೀಕ್ಷೆ ಬರೆಯದೇ ಫಲಿತಾಂಶ ಬರಬೇಕು ಎಂದುಕೊಳ್ಳುವುದು ಎಷ್ಟು ಮೂರ್ಖತನವೊ, ಚಟುವಟಿಕೆ ಆರಂಭಿಸದೇ ಸೋಲುವ ಭಯವನ್ನು ಇಟ್ಟುಕೊಳ್ಳುವುದೂ ಅಷ್ಟೆ ಪೆದ್ದುತನವಾಗುತ್ತದೆ. ಆ ಕೆಲಸ ಮಾಡಬೇಡಿ. ಸದಾ ಹುರಿದುಂಬಿಸುವ, ಕ್ರಿಯಾಶೀಲವಾಗಿಸುವ ಮನಸ್ಸುಗಳೊಂದಿಗೆ ನಿರಂತರ ಸಂಪರ್ಕದಲ್ಲಿರಿ. ಎಂಥ ಸೋಲು ನಿಮ್ಮದಾಗಿದ್ದರೂ ಕುಗ್ಗಬೇಡಿ.

# ಆರೋಗ್ಯಕ್ಕೆ ಬೇಕು ವಯಸ್ಸಿಗೆ ತಕ್ಕ ವ್ಯಾಯಾಮ

ಭುಜಂಗಾಸನ – 1



ಭುಜಂಗಾಸನ – 2

ಭುಜಂಗಾಸನ – 3

ಎನ್. ಎಸ್. ಓಂಕಾರ್

**ನಾವು ವಯಸ್ಸಾದಂತೆ,** ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಪ್ರಯೋಜನಗಳನ್ನು ಹೆಚ್ಚಿಸಿಕೊಳ್ಳಲು ಕಾಳಜಿ ಮತ್ತು ಪರಿಗಣನೆಯೊಂದಿಗೆ ವ್ಯಾಯಾಮ ವಿಧಾನಗಳನ್ನು ಅಳವಡಿಸಿಕೊಳ್ಳುವುದು ಮುಖ್ಯ. ವಯಸ್ಸಾದಂತೆ ವ್ಯಾಯಾಮದಲ್ಲಿ ತೊಡಗಿಸಿಕೊಳ್ಳುವಾಗ ಅನುಸರಿಸಬೇಕಾದ ಕೆಲವು ಅಗತ್ಯ ಮುನ್ನೆಚ್ಚರಿಕೆಗಳು ಮತ್ತು ಮಾರ್ಗಸೂಚಿಗಳು ಇಲ್ಲಿವೆ:

## ಆರೋಗ್ಯ ಪರಿಗಣನೆಗಳು

ನಿಮ್ಮ ಆರೋಗ್ಯ ಪರಿಸ್ಥಿತಿಗಳು ಅಥವಾ ಮಿತಿಗಳನ್ನು ಪರಿಗಣಿಸಿ. ಕೆಲವು ವೈದ್ಯಕೀಯ ಪರಿಸ್ಥಿತಿಗಳು ಅಥವಾ ಗಾಸಿಗಳ ತೀವ್ರತೆಯನ್ನು, ವ್ಯಾಯಾಮ ಮಾಡುವ ಮೊದಲು ಗಮನದಲ್ಲಿರಿಸಿ.

## ಆರೋಗ್ಯವೃತ್ತಿಪರರೊಂದಿಗೆ ಸಮಾಲೋಚಿಸಿ

ಯಾವುದೇ ಹೊಸ ವ್ಯಾಯಾಮವನ್ನು ಪ್ರಾರಂಭಿಸುವ ಮೊದಲು, ವಿಶೇಷವಾಗಿ ಮೊದಲೇ ಅಸ್ತಿತ್ವದಲ್ಲಿರುವ ಆರೋಗ್ಯ ಪರಿಸ್ಥಿತಿಗಳು ಅಥವಾ ಕಾಳಜಿಗಳನ್ನು ಹೊಂದಿದ್ದರೆ, ನಿಮ್ಮ ವೈದ್ಯರೊಂದಿಗೆ ಸಮಾಲೋಚಿಸಿ ಸಲಹೆ ಪಡೆಯಿರಿ.

ನಿಧಾನವಾಗಿ ಪ್ರಾರಂಭಿಸಿ ಮತ್ತು ಕ್ರಮೇಣ ತೀವ್ರತೆಯನ್ನು ಹೆಚ್ಚಿಸಿ. ಕಡಿಮೆ-ಪ್ರಭಾವದ ವ್ಯಾಯಾಮಗಳೊಂದಿಗೆ ಪ್ರಾರಂಭಿಸಿ ಮತ್ತು ಕಾಲಾನಂತರದಲ್ಲಿ ಕ್ರಮೇಣ ತೀವ್ರತೆ ಮತ್ತು ಅವಧಿಯನ್ನು ಹೆಚ್ಚಿಸಿ. ನಿಮ್ಮ ಮನೋದೈಹಿಕ ಸಾಮರ್ಥ್ಯ ಮತ್ತು ಮಿತಿಗಳನ್ನು ಗೌರವಿಸಿ.

## ಚೇತರಿಕೆಯ ಸಮಯ

ವ್ಯಾಯಾಮದ ನಂತರ ನಿಮ್ಮ ದೇಹವು ಎಷ್ಟು ಬೇಗನೆ ಚೇತರಿಸಿಕೊಳ್ಳುತ್ತದೆ ಎಂಬುದನ್ನು ಪರಿಗಣಿಸಿ. ನೀವು ವಯಸ್ಸಾದಂತೆ, ಚೇತರಿಕೆಯ ಸಮಯ ಹೆಚ್ಚಾಗಬಹುದು. ವ್ಯಾಯಾಮದ ಅವಧಿಗಳ ನಡುವೆ ಸಾಕಷ್ಟು ವಿಶ್ರಾಂತಿ ಮತ್ತು ಚೇತರಿಸಿಕೊಳ್ಳಲು ಅನುಮತಿಸಿ, ವಿಶೇಷವಾಗಿ ನೀವು ಅತಿಯಾದ ಆಯಾಸ ಅಥವಾ ಅಸ್ವಸ್ಥತೆಯ ಯಾವುದೇ ಚಿಹ್ನೆಗಳನ್ನು ಅನುಭವಿಸಿದರೆ ವೈದ್ಯರ ಸಲಹೆಯನ್ನು ಪಡೆಯಿರಿ.

## ಅಗತ್ಯಕ್ಕನುಗುಣವಾಗಿ ವ್ಯಾಯಾಮಗಳನ್ನು ಮಾರ್ಪಡಿಸಿ

ಯಾವುದೇ ದೈಹಿಕ ಮಿತಿಗಳು ಅಥವಾ ಅಸ್ವಸ್ಥತೆಯನ್ನು ಸರಿಹೊಂದಿಸಲು ವ್ಯಾಯಾಮಗಳನ್ನು ಮಾರ್ಪಡಿಸಲು ಸಿದ್ಧರಾಗಿರಿ. ಉದಾಹರಣೆಗೆ, ನೆಲದ ಮೇಲೆ ಕುಳಿತು ತಿರುಚಿವಿಕೆಯ ಆಸನ ಮಾಡುವುದು ಕಷ್ಟವಾದರೆ, ಕುರ್ಚಿಯ ಮೇಲೆ ಕುಳಿತು ಮಾಡಬಹುದು. ಅಂತೆಯೇ ಸಹಾಯಕ ಸಾಧನಗಳನ್ನು ಬಳಸಿ ವ್ಯಾಯಾಮವನ್ನು ಮಾಡುವುದು ಪ್ರಯೋಜನಕಾರಿ.

ಕುರ್ಚಿಯ ಮೇಲೆ ಕುಳಿತು ತಿರುಚುವಿಕೆ

ನೆಲದ ಮೇಲೆ ಕುಳಿತು ತಿರುಚುವಿಕೆ

ಊರ್ಧ್ವಧನುರಾಸನ – 1

ಊರ್ಧ್ವಧನುರಾಸನ – 2

ಊರ್ಧ್ವಧನುರಾಸನ – 3

## ವಾರ್ಮ್-ಅಪ್ ಮತ್ತು ಕೂಲ್-ಡೌನ್

ವ್ಯಾಯಾಮದ ಮೊದಲು, ನಿಮ್ಮ ಸ್ನಾಯುಗಳು ಮತ್ತು ಕೀಲುಗಳನ್ನು ಮೃದುವಾದ ಚಲನೆಗಳೊಂದಿಗೆ ಉದ್ದೀಪನಗೊಳಿಸಿ. ವ್ಯಾಯಾಮದ ನಂತರ, ಸ್ನಾಯುವಿನ ಚೇತರಿಕೆಯನ್ನು ಉತ್ತೇಜಿಸಲು ಮತ್ತು ಬಿಗಿತವನ್ನು ತಡೆಗಟ್ಟಲು ಸರಿಯಾದ ವಿಧಾನಗಳನ್ನು ಅಳವಡಿಸಿಕೊಳ್ಳಿ.

## ಶಿಸ್ತುಬದ್ಧವಾಗಿರಿ

ವ್ಯಾಯಾಮದ ಪ್ರಯೋಜನಗಳನ್ನು ಪಡೆಯಲು ನಿಯಮಿತತೆಯು ಪ್ರಮುಖವಾಗಿದೆ. ವಾರದುದ್ದಕ್ಕೂ ವಿವಿಧ ವ್ಯಾಯಾಮಗಳು ಮತ್ತು ಚಟುವಟಿಕೆಗಳನ್ನು ಒಳಗೊಂಡಿರುವ ಸಮತೋಲಿತ ದಿನಚರಿಯ ಗುರಿಯನ್ನು ಹೊಂದಿರಿ.

## ಶ್ರೇಣೀಕೃತ ಅಭ್ಯಾಸ

ಹಿಂಬಾಗುವಿಕೆ, ಮುಂಬಾಗುವಿಕೆ, ಇತ್ಯಾದಿ ಚಲನೆಗಳನ್ನು ಮಾಡುವಾಗ ಹಂತಹಂತವಾಗಿ ಚಲನಾ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳಬೇಕು. ನಿಮ್ಮ ಮನೋದೈಹಿಕ, ಆರಾಮದಾಯಕ ಅನುಭವವನ್ನು ಗಮನಿಸಿ ಚಲನೆಯ ಪರಿಮಿತಿಗಳನ್ನು ನಿರ್ಧರಿಸಿ. ಉದಾಹರಣೆಗೆ, ಊರ್ಧ್ವಧನುರಾಸನ ಅಥವಾ ಭುಜಂಗಾಸನದ ಶ್ರೇಣೀಕೃತ ಅಭ್ಯಾಸದಲ್ಲಿ ಬಾಗುವಿಕೆಯ ಪ್ರಮಾಣವನ್ನು ಬ್ಲಾಂಕೆಟ್ ಬಳಸಿ ನಿರ್ಧರಿಸಬಹುದು.

## ಓವರ್‌ಟ್ರೇನಿಂಗ್ ಸಿಂಡ್ರೋಮ್

ವ್ಯಾಯಾಮದಿಂದ ಚೇತರಿಸಿಕೊಳ್ಳುವ ಗುಣ ನಿಮ್ಮ ದೇಹದ ಸಾಮರ್ಥ್ಯವನ್ನು ನೀವು ಮೀರಿದಾಗ ಅತಿಯಾದ ಒತ್ತಡ ಸಂಭವಿಸುತ್ತದೆ. ಇದು ನಿರಂತರ ಆಯಾಸ, ಕಡಿಮೆ ಕಾರ್ಯಕ್ಷಮತೆ, 'ಮೂಡ್' ಅಡಚಣೆಗಳು, ತೊಂದರೆಗೊಳಗಾದ ನಿದ್ರೆ, ದುರ್ಬಲಗೊಂಡ ಪ್ರತಿರಕ್ಷಣಾ ವ್ಯವಸ್ಥೆ ಮತ್ತು ಇತ್ಯಾದಿ ರೋಗಲಕ್ಷಣಗಳಿಗೆ ಕಾರಣವಾಗಬಹುದು. ಸಾಕಷ್ಟು ವಿಶ್ರಾಂತಿ ಮತ್ತು ಚೇತರಿಕೆಯಿಲ್ಲದೆ ಅತಿಯಾಗಿ ವ್ಯಾಯಾಮಗಳನ್ನು ಮಾಡುವುದು 'ಓವರ್ ಟ್ರೇನಿಂಗ್ ಸಿಂಡ್ರೋಮ್'ಗೆ ಕಾರಣವಾಗಬಹುದು. ಉದಾಹರಣೆಗೆ, ಸೂರ್ಯನಮಸ್ಕಾರದ ಅಭ್ಯಾಸದಲ್ಲಿ ಮಾಡಬೇಕಾದ ಆವರ್ತನಗಳ ಸಂಖ್ಯೆ, ಅತಿ ಉತ್ಸಾಹದಿಂದ ವಿಪರೀತ ಆವರ್ತಗಳನ್ನು ಮಾಡಬಾರದು.

## ಮಾತಿನ ಪರೀಕ್ಷೆ

ವ್ಯಾಯಾಮದ ಸಮಯದಲ್ಲಿ ಅತಿಯಾದ ಉಸಿರುಗಟ್ಟುವಿಕೆ ಇಲ್ಲದೆ ನೀವು ಆರಾಮವಾಗಿ ಮಾತನಾಡಲು ಸಾಧ್ಯವಾದರೆ, ಇದು ಮಧ್ಯಮ ತೀವ್ರತೆಯನ್ನು ಸೂಚಿಸುತ್ತದೆ. ಯೌವನವನ್ನು ದಾಟಿದಮೇಲೆ ವ್ಯಾಯಾಮವನ್ನು ಈ ಮಧ್ಯಮ ಮಟ್ಟದಲ್ಲಿ ಕಾಯ್ದುಕೊಳ್ಳುವುದು ಉತ್ತಮ.

ನೆನಪಿಡಿ, ಪ್ರತಿಯೊಬ್ಬರ ಸಾಮರ್ಥ್ಯಗಳು ಮತ್ತು ಮಿತಿಗಳು ಬದಲಾಗುತ್ತವೆ, ಆದ್ದರಿಂದ ನಿಮ್ಮ ವೈಯಕ್ತಿಕ ಅಗತ್ಯಗಳ ಆಧಾರದ ಮೇಲೆ ವ್ಯಾಯಾಮದ ತೀವ್ರತೆಯನ್ನು ಸರಿಹೊಂದಿಸುವುದು ಬಹಳ ಮುಖ್ಯ. ನಿಮ್ಮ ವ್ಯಾಯಾಮದ ದಿನಚರಿಗೆ ಸೂಕ್ತವಾದ ತೀವ್ರತೆಯ ಬಗ್ಗೆ ನಿಮಗೆ ಖಚಿತವಿಲ್ಲದಿದ್ದರೆ, ನಿಮಗೆ ವೈಯಕ್ತೀಕರಿಸಿದ ಮಾರ್ಗದರ್ಶನವನ್ನು ಒದಗಿಸುವ ಅರ್ಹ ಫಿಟ್‌ನೆಸ್ ವೃತ್ತಿಪರರು ಅಥವಾ ನುರಿತ ಶಿಕ್ಷರವೊಂದಿಗೆ ಸಮಾಲೋಚನೆಯನ್ನು ನಡೆಸಿ.



### ಸುಭಾಷಿತ

ಮಾಡಬೇಕಾಗಿರುವ ಸರಿಯಾದ ಕೆಲಸ ಯಾವುದು ಎಂಬುದು ತಿಳಿದಿದ್ದರೂ ಅದನ್ನು ಮಾಡದಿರುವುದು ಅತಿದೊಡ್ಡ ಹೇಡಿತನ.

-ಕನ್‌ಫ್ಯೂಷಿಯಸ್

# ಪಶ್ಚಿಮ ಬಂಗಾಳ ಚುನಾವಣಾ ಹಿಂಸೆ ಎಲ್ಲ ಪಕ್ಷಗಳದ್ದೂ ಸಮಾನ ಹೊಣೆಗಾರಿಕೆ

**ಪಶ್ಚಿಮ ಬಂಗಾಳದಲ್ಲಿ** ಪಂಚಾಯಿತಿ ಚುನಾವಣೆ ಘೋಷಣೆಯಾದ ಬಳಿಕ ಮತ್ತು ಮತದಾನ ನಿಗದಿಯಾಗಿದ್ದ ಶನಿವಾರದಂದು ನಡೆದ ಭಾರಿ ಹಿಂಸಾಚಾರದಲ್ಲಿ 20ಕ್ಕೂ ಹೆಚ್ಚು ಜನರ ಹತ್ಯೆಯಾಗಿದೆ. ಹತ್ತಾರು ಮಂದಿ ಗಾಯಗೊಂಡಿದ್ದಾರೆ ಮತ್ತು ಅಪಾರ ಮೌಲ್ಯದ ಆಸ್ತಿ ನಾಶವಾಗಿದೆ. ಬೆದರಿಕೆ, ಮತಗಟ್ಟೆ ಮೇಲೆ ದಾಳಿ, ಮತಪತ್ರ ಕಸಿದುಕೊಳ್ಳುವಿಕೆ, ಮತಗಟ್ಟೆ ಸಿಬ್ಬಂದಿ ಮೇಲೆ ಹಲ್ಲೆಯಂತಹ ಹಲವು ಪ್ರಕರಣಗಳು ನಡೆದಿವೆ. ಸುಮಾರು 700 ಮತಗಟ್ಟೆಗಳಲ್ಲಿ ನಡೆದ ಮರು ಮತದಾನವೂ ಹಿಂಸೆಯಿಂದ ಮುಕ್ತವಾಗಿ ಇರಲಿಲ್ಲ. ದೇಶದ ಬಹುಪಾಲು ಪ್ರದೇಶಗಳಲ್ಲಿ ಚುನಾವಣಾ ಹಿಂಸಾಚಾರವು ಪೂರ್ಣವಾಗಿ ನಿಂತುಹೋಗಿದೆ. ಚುನಾವಣಾ ಹಿಂಸಾಚಾರ ಮತ್ತು ಚುನಾವಣಾ ಅಕ್ರಮಗಳಿಗೆ ಒಂದು ಕಾಲದಲ್ಲಿ ಕುಖ್ಯಾತವಾಗಿದ್ದ ಬಿಹಾರ ಮತ್ತು ಉತ್ತರಪ್ರದೇಶ ಕೂಡ ಈ ಕುಸಂಸ್ಕೃತಿಯನ್ನು ಬಿಟ್ಟು ದೂರ ಸಾಗಿವೆ. ಆದರೆ, ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಹಿಂಸಾಚಾರ ಹೆಚ್ಚುತ್ತಲೇ ಇದೆ. ರಾಜ್ಯದ ರಾಜಕಾರಣದ ಹೃದಯದಲ್ಲಿಯೇ ಹಿಂಸೆಯು ಅಡಗಿದೆ ಮತ್ತು ಚುನಾವಣೆಯಂತಹ ತೀವ್ರ ರಾಜಕೀಯ ಚಟುವಟಿಕೆ ಸಂದರ್ಭದಲ್ಲಿ ಇದು ಸಂಘಟಿತವಾಗಿ ಅಭಿವ್ಯಕ್ತಗೊಳ್ಳುತ್ತದೆ. ಈ ಮನಃಸ್ಥಿತಿಯು ಸಮಾಜದಲ್ಲಿ ಬೂದಿ ಮುಚ್ಚಿದ ಕೆಂಡದಂತೆ ನಿರಂತರವಾಗಿ ಇದೆ. ಯಾವುದೇ ಕಾರಣಕ್ಕೂ ಹಿಂಸಾಚಾರವನ್ನು ಸಮರ್ಥಿಸಿಕೊಳ್ಳುವುದು ಸಾಧ್ಯವಿಲ್ಲ. ಹಾಗಾಗಿಯೇ ರಾಜ್ಯವು ಇಂತಹ ಹಿಂಸಾಚಾರವನ್ನು ಮೀರಿ ಮುಂದಕ್ಕೆ ಸಾಗಬೇಕಿದೆ.

ಹಿಂಸಾಚಾರ ನಡೆಯುವುದಿಲ್ಲ ಮತ್ತು ಹಿಂಸೆಯ ಬೆದರಿಕೆ ಒಡ್ಡುವುದಿಲ್ಲ ಎಂಬುದನ್ನು ಎಲ್ಲ ರಾಜಕೀಯ ಪಕ್ಷಗಳೂ ಖಾತರಿಪಡಿಸಿಕೊಳ್ಳಬೇಕಾಗಿದೆ

ರಾಜ್ಯದಲ್ಲಿ ನಡೆದ ಹಿಂಸಾಚಾರದಲ್ಲಿ ಎಲ್ಲ ಪಕ್ಷಗಳ ಪಾಲೂ ಇದೆ. ದೊಡ್ಡ ಪಕ್ಷಗಳ ಪಾಲು ದೊಡ್ಡ ಪ್ರಮಾಣದಲ್ಲಿಯೇ ಇದೆ. ಈ ಹಿಂಸಾಚಾರದಲ್ಲಿ ಆಡಳಿತಾರೂಢ ಪಕ್ಷದ ಪ್ರಾಬಲ್ಯ ಎದ್ದು ಕಾಣಿಸುತ್ತಿದೆ. ಏಕೆಂದರೆ ಇತರ ಪಕ್ಷಗಳಿಗೆ ಹೋಲಿಸಿದರೆ ಈ ಪಕ್ಷಕ್ಕೆ ಚುನಾವಣೆ ಗೆಲ್ಲಲೇಬೇಕಾದ ಅಗತ್ಯ ಹೆಚ್ಚು ಮತ್ತು ಈ ಪಕ್ಷದ ಬಳಿ ಇತರ ಪಕ್ಷಗಳಿಗಿಂತ ಹೆಚ್ಚಿನ ಸಂಪನ್ಮೂಲ ಸಹಜವಾಗಿಯೇ ಇದೆ. ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷವು ಹಿಂಸಾಚಾರ ಮತ್ತು ದೌರ್ಜನ್ಯವನ್ನು ವ್ಯವಸ್ಥಿತವಾಗಿ ನಡೆಸಿದೆ. ಇತರ ಪಕ್ಷಗಳು ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಹಿಂಸೆ ಎಸಗಿವೆ. ಚುನಾವಣೆಯಲ್ಲಿ ಸ್ಪರ್ಧಿಸಲು ಬಯಸಿದ್ದ ವ್ಯಕ್ತಿಗಳು ನಾಮಪತ್ರ ಸಲ್ಲಿಸುವುದಕ್ಕೇ ಅವಕಾಶ ನೀಡದ ಘಟನೆಗಳು ಹಲವೆಡೆ ನಡೆದಿವೆ. ರಾಜ್ಯವನ್ನು ದೀರ್ಘಕಾಲ ಆಳಿದ್ದ ಕಾಂಗ್ರೆಸ್ ಮತ್ತು ಸಿಪಿಎಂ, ಈಗ ಆಳ್ವಿಕೆ ನಡೆಸುತ್ತಿರುವ ಟಿಎಂಸಿ ಮತ್ತು ಅದಕ್ಕೆ ಸವಾಲು ಒಡ್ಡಲು ತವಕಿಸುತ್ತಿರುವ ಬಿಜೆಪಿ ಎಲ್ಲವೂ ಚುನಾವಣಾ ಅಸ್ತ್ರವಾಗಿ ಹಿಂಸೆಯನ್ನು ಬಳಸಿಕೊಂಡಿವೆ. 2003 ಮತ್ತು 2008ರ ಪಂಚಾಯಿತಿ ಚುನಾವಣೆಗಳಲ್ಲಿ ಕ್ರಮವಾಗಿ 70 ಮತ್ತು 36 ಜನರ ಹತ್ಯೆ ಆಗಿತ್ತು. 2013 ಮತ್ತು 2018ರಲ್ಲಿ ಕ್ರಮವಾಗಿ 31 ಮತ್ತು 75 ಮಂದಿಯನ್ನು ಕೊಲ್ಲಲಾಗಿತ್ತು. ಸಾವಿನ ಸಂಖ್ಯೆಯಲ್ಲಿ ಏರಿಳಿತ ಕಾಣಿಸಿಕೊಂಡಿದೆ. ಆದರೆ, ಹಿಂಸಾಚಾರ ಎನ್ನುವುದು ಇಲ್ಲಿ ಸದಾ ಇದ್ದೇ ಇತ್ತು ಎಂಬುದಕ್ಕೆ ಈ ಸಂಖ್ಯೆಗಳು ಪುರಾವೆಯಾಗಿವೆ. ವಿಧಾನಸಭೆ ಮತ್ತು ಲೋಕಸಭೆಗೆ ಚುನಾವಣೆ ನಡೆದಾಗಲೂ ಇಲ್ಲಿ ಹಿಂಸಾಚಾರದ ಅಬ್ಬರ ಕಾಣಿಸಿಕೊಂಡಿದೆ.

ಮತದಾನದ ದಿನ ಕೇಂದ್ರ ಮತ್ತು ರಾಜ್ಯ ಪಡೆಗಳ ನಿಯೋಜನೆ ಕುರಿತಂತೆಯೂ ವಿವಾದಗಳು ಹಾಗೂ ಪರಸ್ಪರ ಆರೋಪ-ಪ್ರತ್ಯಾರೋಪಗಳು ಉಂಟಾಗಿವೆ. ಚುನಾವಣಾ ಆಯೋಗ ಮತ್ತು ರಾಜ್ಯಪಾಲರ ಪಾತ್ರದ ಬಗ್ಗೆಯೂ ಪ್ರಶ್ನೆಗಳು ಎದ್ದಿವೆ. ಈ ವಿಚಾರಗಳು ನ್ಯಾಯಾಲಯದ ಮೆಟ್ಟಿಲು ಕೂಡ ಹತ್ತಿವೆ. ಕೇಂದ್ರದ ಪಡೆಗಳನ್ನು ರಾಜ್ಯದಲ್ಲಿ ನಿಯೋಜಿಸಬೇಕು ಎಂದು ಹೈಕೋರ್ಟ್ ಈ ಬಾರಿ ಹೇಳಿತ್ತು. ರಾಷ್ಟ್ರಪತಿ ಆಳ್ವಿಕೆ ಹೇರಬೇಕು ಎಂಬ ಆಗ್ರಹವೂ ಕೇಳಿಬಂದಿದೆ. ರಾಜ್ಯಪಾಲ ಸಿ.ವಿ. ಆನಂದ ಬೋಸ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಮುಖತಃ ಭೇಟಿಯಾಗಿ ರಾಜ್ಯದ ಪರಿಸ್ಥಿತಿಯ ವಿವರಣೆ ನೀಡಿದ್ದಾರೆ. ಹಿಂಸಾಚಾರ ನಡೆಯುವುದಿಲ್ಲ ಮತ್ತು ಹಿಂಸೆಯ ಬೆದರಿಕೆ ಒಡ್ಡುವುದಿಲ್ಲ ಎಂಬುದನ್ನು ಖಾತರಿಪಡಿಸಿಕೊಳ್ಳುವುದು ಎಲ್ಲ ರಾಜಕೀಯ ಪಕ್ಷಗಳ ಹೊಣೆಗಾರಿಕೆ ಆಗಿದೆ. ಹಿಂಸಾಚಾರವು ಚುನಾವಣೆಗೆ ಮಾತ್ರ ಸಂಬಂಧಿಸಿದ ವಿಚಾರ ಅಲ್ಲ. ಸಮಾಜದಲ್ಲಿ ಹಿಂಸಾಚಾರ ನಡೆಯುವುದಕ್ಕೆ ಇರುವ ಚಾರಿತ್ರಿಕ ಕಾರಣಗಳು ಮತ್ತು ವ್ಯವಸ್ಥೆಯೊಳಗೆಯೇ ಅಡಗಿರುವ ಕಾರಣಗಳಿಗೆ ಸೂಕ್ತವಾದ ಪರಿಹಾರವನ್ನು ಹುಡುಕಿಕೊಳ್ಳಬೇಕು. ಈ ರೀತಿ ಆದಾಗ ಮಾತ್ರ ಹಿಂಸೆಯನ್ನು ಪರಿಣಾಮಕಾರಿಯಾಗಿ ತಡೆಯುವುದು ಸಾಧ್ಯ.

## ದಿನದ ಟ್ವೀಟ್

### ಅಕ್ರಮ ನಿರ್ಮಾಣದ ಫಲ

ಹಿಮಾಚಲ ಪ್ರದೇಶದಲ್ಲಿ ಸಂಕಷ್ಟಕ್ಕೆ ಸಿಲುಕಿರುವವರಿಗಾಗಿ ನಾನು ಪ್ರಾರ್ಥಿಸುತ್ತೇನೆ: ರಾಜ್ಯದ ಹಲವು ಕಡೆಗಳಲ್ಲಿ ಭೂಕುಸಿತ ಸಂಭವಿಸಿದೆ, ಹಲವರು ಸಾವಿಗೀಡಾಗಿದ್ದಾರೆ. ರಾಜ್ಯದ ಹಲವು ಭಾಗಗಳು ಈಗಲೂ ಸಂಪರ್ಕ ಕಡಿದುಕೊಂಡಿವೆ. ಹವಾಮಾನ ವೈಪರೀತ್ಯದ ವಿದ್ಯಮಾನಗಳು ಮಾಮೂಲಿ ಎಂಬಂತಾಗಿವೆ, ಒಂದೇ ಪ್ರದೇಶದಲ್ಲಿ ಭಾರಿ ಮಳೆ ಸುರಿಯುವುದನ್ನು ಕಾಣುತ್ತಿದ್ದೇವೆ. ಪ್ರಶ್ನೆ ಏನೆಂದರೆ, ನಾವು ಪಾಠ ಕಲಿತಿದ್ದೇವೆಯೇ? ಗುಡ್ಡಗಾಡುಗಳು ಮತ್ತು ಬಯಲು ಪ್ರದೇಶಗಳಲ್ಲಿ ಅಕ್ರಮ ನಿರ್ಮಾಣ ಕಾರ್ಯಗಳು ಮುಂದುವರಿದೇ ಇವೆ.

**ರಾಜ್‌ದೀಪ್ ಸರ್ದೇಸಾಯಿ,** ಪತ್ರಕರ್ತ

## ಕಿಡಿನುಡಿ

ಸಾವಿನ ಸಂಖ್ಯೆ ಏರಿದೆ. ಮತದಾನದಲ್ಲಿ ಅಕ್ರಮ, ಮತಪೆಟ್ಟಿಗೆಗಳನ್ನು ಬದಲಾಯಿಸಿದ, ಸುಟ್ಟುಹಾಕಿದ ಅಥವಾ ಗಟಾರದಲ್ಲಿ ಎಸೆದ ವರದಿಗಳು ಬಂದಿವೆ. ಬಂಗಾಳದ ಸುಮಾರು 700 ಬೂತ್‌ಗಳಲ್ಲಿ ಮರು ಮತದಾನ ಆಗಿದೆ. ಟಿಎಂಸಿಯು ಈ ಮೊದಲು ಎಲೆಕ್ಟ್ರಾನಿಕ್ ಮತಯಂತ್ರಗಳನ್ನು ವಿರೋಧಿಸಿ ಮತಪತ್ರಗಳನ್ನು ಮತ್ತೆ ಬಳಸಬೇಕು ಎಂದು ಒತ್ತಾಯಿಸಿದ್ದು ಇದಕ್ಕಾಗಿಯೇ?

**ಆನಂದ್ ರಂಗನಾಥನ್,** ಲೇಖಕ

## 25 ವರ್ಷಗಳ ಹಿಂದೆ

ಶನಿವಾರ, 11-7-1998

**• ಸಿ.ಟಿ.ಬಿ.ಟಿ.ಗೆ ಸಹಿ ಇಲ್ಲ: ಪ್ರಧಾನಿ ವಾಜಪೇಯಿ ಘೋಷಣೆ**

ನವದೆಹಲಿ, ಜುಲೈ 10 (ಪಿಟಿಐ)– ಸಮಗ್ರ ಅಣ್ವಸ್ತ್ರ ಪರೀಕ್ಷೆ ನಿಷೇಧ ಒಪ್ಪಂದಕ್ಕೆ ಭಾರತ ಸಹಿ ಮಾಡುವ ಪ್ರಶ್ನೆಯೇ ಇಲ್ಲ ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಇಲ್ಲಿ ಸ್ಪಷ್ಟಪಡಿಸಿದರು.

‘ಅಣ್ವಸ್ತ್ರ ಶಕ್ತ ರಾಷ್ಟ್ರಗಳಿಗೆ ಭಾರತ ಮಣಿಯುವುದಿಲ್ಲ. ನಮ್ಮ ಅಣ್ವಸ್ತ್ರ ತಯಾರಿಕೆ ಮತ್ತು ಕ್ಷಿಪಣಿ ಕಾರ್ಯಕ್ರಮಗಳನ್ನು ಯಾವ ರಾಷ್ಟ್ರವೂ ಸ್ಥಗಿತಗೊಳಿಸುವಂತಿಲ್ಲ’ ಎಂದು ಹೇಳಿದರು.

ವಿದೇಶಾಂಗ ವ್ಯವಹಾರಗಳ ಖಾತೆಯ ಕಾರ್ಯವೈಖರಿಯ ಬಗೆಗಿನ ಪ್ರಶ್ನೆಗಳಿಗೆ ರಾಜ್ಯಸಭೆಯಲ್ಲಿ ಉತ್ತರಿಸಿದ ಪ್ರಧಾನಿ, ‘ಭಾರತ ಮತ್ತು ಪಾಕಿಸ್ತಾನ ‘ಮೊದಲು ಅಣ್ವಸ್ತ್ರ ಪ್ರಯೋಗಿಸುವುದಿಲ್ಲ’ ಎಂಬ ಒಪ್ಪಂದಕ್ಕೆ ಮೊದಲು ಸಹಿ ಹಾಕಬೇಕು. ಬಳಿಕ ಎಲ್ಲ ಅಣ್ವಸ್ತ್ರ ರಾಷ್ಟ್ರಗಳೂ ನಿಗದಿತ ಕಾಲಮಿತಿಯಲ್ಲಿ ಅಣ್ವಸ್ತ್ರಗಳನ್ನು ನಾಶಪಡಿಸುವಂತೆ ಜಂಟಿಯಾಗಿ ಒತ್ತಡ ತರಬೇಕು’ ಎಂದು ಹೇಳಿದರು.

**• 13ರಂದು ಮಹಿಳಾ ಮಸೂದೆ ಮಂಡನೆ: ಪ್ರಧಾನಿ ಘೋಷಣೆ**

ನವದೆಹಲಿ, ಜುಲೈ 10 (ಪಿಟಿಐ)– ಮಹಿಳಾ ಮೀಸಲಾತಿ ಮಸೂದೆಯನ್ನು ಸೋಮವಾರ ಸಂಸತ್ತಿನಲ್ಲಿ ಮಂಡಿಸಲಾಗುವುದು ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಇಂದು ಘೋಷಿಸಿದರು.

ಈ ವಿಷಯದ ಬಗ್ಗೆ ಏರ್ಪಡಿಸಿದ್ದ ಸರ್ವಪಕ್ಷಗಳ ಸಭೆಯಲ್ಲಿ ವಿವಿಧ ರಾಜಕೀಯ ಪಕ್ಷಗಳ ನಾಯಕರ ಅಭಿಪ್ರಾಯಗಳನ್ನು ಕೇಳಿದ ನಂತರ ಪ್ರಧಾನಿ ಅವರು ಈ ಘೋಷಣೆ ಮಾಡಿದರು ಎಂದು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಮದನ್‌ಲಾಲ್ ಖುರಾನ ಸುದ್ದಿಗಾರರಿಗೆ ತಿಳಿಸಿದರು.

## 50 ವರ್ಷಗಳ ಹಿಂದೆ

ಬುಧವಾರ, 11-7-1973

**• ಹಿಂದುಳಿದ ವರ್ಗಕ್ಕೆ ಜನಸಂಖ್ಯೆ ಅನುಗುಣ ಸರ್ಕಾರಿ ಸೇವೆ ಮೀಸಲು**

ಬೆಂಗಳೂರು, ಜುಲೈ, 10– ಹಿಂದುಳಿದ ವರ್ಗಗಳ ಜನಸಂಖ್ಯೆಗೆ ಅನುಗುಣವಾಗಿ ಸರ್ಕಾರಿ ಸೇವೆಗಳಲ್ಲಿ ಅವುಗಳಿಗೆ ಹುದ್ದೆಗಳನ್ನು ಕಾದಿರಿಸಬೇಕೆಂದು ಎಲ್.ಜಿ. ಹಾವನೂರ್ ಅವರು ಅಧ್ಯಕ್ಷರಾಗಿರುವ ರಾಜ್ಯದ ಹಿಂದುಳಿದ ವರ್ಗಗಳ ಆಯೋಗ ತನ್ನ ಹಂಗಾಮಿ ವರದಿಯಲ್ಲಿ ಶಿಫಾರಸು ಮಾಡಲಿದೆಯೆಂದು ಖಚಿತವಾಗಿ ತಿಳಿದುಬಂದಿದೆ.

ಸರ್ಕಾರಿ ಸೇವೆಗಳಿಗೆ ನೇಮಕ ಮಾಡಿಕೊಳ್ಳುವಾಗ ಹಿಂದುಳಿದ ವರ್ಗಗಳಿಗಾಗಿ ಕಾದಿರಿಸಿರುವ ಹುದ್ದೆಗಳು ಶೇಕಡ 32ಕ್ಕಿಂತ ಮೀರಬಾರದು. ಶೇಕಡ 15ರಷ್ಟು ಹರಿಜನ, ಶೇಕಡ 3ರಷ್ಟು ಗಿರಿಜನರಿಗೆ ಮೀಸಲಾಗಿದ್ದು ಉಳಿದ ಶೇಕಡ 50ರಷ್ಟು ಅಥವಾ ಅದಕ್ಕಿಂತ ಹೆಚ್ಚು ಹುದ್ದೆಗಳನ್ನು ಸಾರ್ವತ್ರಿಕ ಸ್ಪರ್ಧೆಯ ಆಧಾರದ ಮೇಲೆ ಭರ್ತಿ ಮಾಡಬೇಕೆಂದು ಆಯೋಗ ಶಿಫಾರಸು ಮಾಡಲಿದೆಯೆಂದು ಆಯೋಗದ ವಲಯಗಳಿಂದ ತಿಳಿದುಬಂದಿದೆ.

**• ಕೃಷ್ಣರಾಜ ಸಾಗರ ಪೂರ್ಣ ಭರ್ತಿ**

ಮೈಸೂರು, ಜುಲೈ 10– ಕೃಷ್ಣರಾಜ ಸಾಗರ ಜಲಾಶಯ ಇಂದು ತನ್ನ ಪರಮಾವಧಿ ಮಟ್ಟವನ್ನು ಮುಟ್ಟಿತು. ಸಂಜೆ ಜಲಾಶಯದಲ್ಲಿ 124.42 ಅಡಿ ನೀರಿದ್ದು, ಒಳಕ್ಕೆ ಬರುತ್ತಿರುವ 97,007 ಕ್ಯೂಸೆಕ್ ನೀರನ್ನೂ ಹೊರಕ್ಕೆ ಬಿಡಲಾಗುತ್ತಿದೆ. ನಾಲ್ಕು ದಿನಗಳ ಹಿಂದೆ ಜಲಾಶಯದಲ್ಲಿ 103 ಅಡಿಗಳಷ್ಟಿದ್ದು ನಾಲ್ಕೇ ದಿನಗಳಲ್ಲಿ ಸುಮಾರು 21 ಅಡಿಗಳಷ್ಟು ನೀರು ಬಂದು, ಜಲಾಶಯ ಭರ್ತಿಯಾಯಿತು.

### ವ್ಯಾಗ್ನರ್ ಪ್ರಕರಣದಿಂದ ವಿಚಲಿತರಾದರೇ ಅಥವಾ ಅದು ಅವರ ತಂತ್ರಗಾರಿಕೆಯ ಭಾಗವೇ?

# ಗಟ್ಟಿಗ ಪುಟಿನ್ ಕಂಗೆಟ್ಟಿದ್ದು ಏಕೆ?



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

**ಕೆಲವು** ಸಂಗತಿಗಳನ್ನು ಊಹಿಸುವುದು ಕಷ್ಟ. ಅಚಾನಕ್ ಆಗಿ ಸಂಭವಿಸುವ ಕೆಲವು ಪ್ರಕರಣಗಳು ದಿಗ್ಭ್ರಮೆ, ಆತಂಕ ಅಥವಾ ಅಚ್ಚರಿಯನ್ನಷ್ಟೇ ಮೂಡಿಸುವುದಿಲ್ಲ, ಅಂತಹ ಪ್ರಕರಣಗಳಿಂದ ಬೇರೂರಿದ್ದ ನಂಬಿಕೆಗಳು ಕದಲಬಹುದು, ಗ್ರಹಿಕೆ ತಪ್ಪು ಎನಿಸಬಹುದು ಮತ್ತು ಭ್ರಮೆ ಕಳಚಿ ಬೀಳಬಹುದು.

ರಷ್ಯಾಕ್ಕೆ ಸಂಬಂಧಿಸಿದಂತೆ ಅಂತಹದ್ದೊಂದು ಪ್ರಕರಣ ಜೂನ್ 24ರಂದು ನಡೆಯಿತು. ಉಕ್ರೇನ್ ಸೈನಿಕರ ವಿರುದ್ಧ ರಷ್ಯಾವು ವ್ಯಾಗ್ನರ್ ಪಡೆಯನ್ನು ಬಳಸುತ್ತಿದೆ ಎಂಬುದು ಗೋಪ್ಯವಾಗಿಯೇನೂ ಇರಲಿಲ್ಲ. ರಷ್ಯಾದ ಕೈದಿಗಳಿಗೆ ಆಮಿಷವೊಡ್ಡಿ, ಅವರನ್ನು ಬಳಸಿಕೊಂಡು ವ್ಯಾಗ್ನರ್ ಪಡೆಯನ್ನು ಕಟ್ಟಲಾಗಿದೆ. ವ್ಯಾಗ್ನರ್ ಸೈನಿಕರು ಯುದ್ಧನೀತಿಯನ್ನು ಅನುಸರಿಸುವುದಿಲ್ಲ, ಸೆರೆ ಸಿಕ್ಕ ಶತ್ರುಪಡೆಯ ಸೈನಿಕರನ್ನು ಹಿಂಸಿಸಿ ಕೊಲ್ಲುತ್ತಾರೆ ಎಂಬೆಲ್ಲಾ ಮಾತುಗಳು ಜಾಗತಿಕ ಚಾವಡಿಯಲ್ಲಿ ಕೇಳಿಬರುತ್ತಿದ್ದವು. ಆದರೆ ರಷ್ಯಾದ ಪರ ಕಾದಾಡಲು ಸಜ್ಜುಗೊಂಡವರೇ ರಷ್ಯಾದ ವಿರುದ್ಧ ತಿರುಗಿಬೀಳಬಹುದು ಎಂದು ಯಾರೂ ಊಹಿಸಿರಲಿಲ್ಲ.

ಸೋವಿಯತ್ ಅವಧಿಯಲ್ಲಿ ಅದರ ರಕ್ಷಣಾ ಮತ್ತು ಗುಪ್ತಚರ ಇಲಾಖೆಯಾದ ಕೆಜಿಬಿಯಲ್ಲಿ ಕಾರ್ಯನಿರ್ವಹಿಸಿದ್ದ, ತಂತ್ರಗಾರಿಕೆಯಲ್ಲಿ ನಿಪುಣ ಎನಿಸಿರುವ ಪುಟಿನ್ ಕೂಡ ಈ ಬಗ್ಗೆ ಯೋಚಿಸಿರಲಿಲ್ಲವೇ? ಜೂನ್ 24ರಂದು ವ್ಯಾಗ್ನರ್ ಪಡೆ ಮಾಸ್ಕೊ ಕಡೆ ದಾಂಗುಡಿಯಿಟ್ಟಾಗ, ಪುಟಿನ್ ಅವರಂತಹ ಗಟ್ಟಿಗ ಕೂಡ ಕೆಲವು ಗಂಟೆಗಳ ಕಾಲ ವಿಚಲಿತಗೊಂಡಂತೆ ಕಂಡರು.

ಸಾಮಾನ್ಯವಾಗಿ ಯಾವುದೇ ಭಾವನೆಯನ್ನು ಸುಲಭಕ್ಕೆ ಅಭಿವ್ಯಕ್ತಿಸದ, ಗಂಭೀರ ಮುಖಮುದ್ರೆಯ ಪುಟಿನ್, ಅಂದು ಮುಂಜಾನೆ ರಷ್ಯಾದ ನಾಗರಿಕರನ್ನು ಉದ್ದೇಶಿಸಿ ಗಡಿಬಿಡಿಯಲ್ಲಿ ನಾಲ್ಕು ಮಾತನಾಡಿದರು. ವ್ಯಾಗ್ನರ್ ಪಡೆ ನಂಬಿಕೆದ್ರೋಹದ ಕೆಲಸ ಮಾಡಿದೆ, ಬೆನ್ನಿಗೆ ಚೂರಿ ಇರಿದವರನ್ನು ಶಿಕ್ಷಿಸದೇ ಬಿಡುವುದಿಲ್ಲ, ರಷ್ಯಾವನ್ನು ಪ್ರೀತಿಸುವ ಯಾರೂ ಈ ದ್ರೋಹಿಗಳ ಜೊತೆ ಸಹಕರಿಸಬಾರದು ಎಂದು ಮನವಿ ಮಾಡಿದರು.

ಆನಂತರ ಪುಟಿನ್ ಕೈಗೊಂಡ ಕ್ರಮವೇನು ಎಂಬುದು ಜಗತ್ತಿಗೆ ತಿಳಿಯಲಿಲ್ಲ. ಕೆಲ ಗಂಟೆಗಳ ಬಳಿಕ ವ್ಯಾಗ್ನರ್ ನಾಯಕ ಯೆವ್ಗನಿ ಪ್ರಿಗೋಷಿನ್, ಮಾಸ್ಕೊ ಮುತ್ತಿಗೆಯನ್ನು ಕೈಬಿಟ್ಟಿರುವುದಾಗಿ ಹೇಳಿದರು. ವ್ಯಾಗ್ನರ್ ಪಡೆಗೆ ಬೆಲರೂಸ್ ಆಶ್ರಯ ನೀಡಲಿದೆ ಎಂಬ ಸುದ್ದಿ ಬಂತು. ರಷ್ಯಾದಲ್ಲಿ ಮಾರನೆಯ ಬೆಳಗು ಆತಂಕಮುಕ್ತವಾಗಿತ್ತು.

ಜೂನ್ 24ರಂದು 24 ಗಂಟೆಗಳ ಅವಧಿಯಲ್ಲಿ ನಡೆದ ಈ ವಿದ್ಯಮಾನದಿಂದ ವ್ಯಾಗ್ನರ್ ಪಡೆಯ ನಾಯಕ ಪ್ರಿಗೋಷಿನ್ ಖಳನಾಯಕನಾಗಿ ಜಗತ್ತಿಗೆ ಪರಿಚಯವಾದರೆ, ಬೆಲರೂಸ್ ಅಧ್ಯಕ್ಷ ಲುಕಶೆಂಕೋ ನಾಯಕನಾಗಿ ಹೊರಹೊಮ್ಮಿದರು. ಪುಟಿನ್ ಅವರ ಅಸಹಾಯಕತೆ, ರಷ್ಯಾದ ಆಂತರಿಕ ಒಡಕು, ಆಡಳಿತದ ದೌರ್ಬಲ್ಯ ಜಾಹೀರಾಯಿತು.

ಹಾಗಾದರೆ ಪುಟಿನ್ ಪ್ರಬಲ ನಾಯಕನಾಗಿ ಉಳಿದಿಲ್ಲವೇ? ಈ ಪ್ರಶ್ನೆಯನ್ನು ಇಟ್ಟುಕೊಂಡೇ ಕೆಲವು ಸಂಗತಿಗಳನ್ನು ಗಮನಿಸಬೇಕು. ವ್ಯಾಗ್ನರ್ ನಾಯಕ ಪ್ರಿಗೋಷಿನ್ ಏಕಾಏಕಿ ಉಕ್ರೇನ್ ಗಡಿ ಬಿಟ್ಟು ಮಾಸ್ಕೊದತ್ತ ಹೆಜ್ಜೆ ಹಾಕಲಿಲ್ಲ. ಅವರು ಮೊದಲಿಗೆ ರಷ್ಯಾದ ರಕ್ಷಣಾ ಸಚಿವರ ವಿರುದ್ಧ ಮಾತನಾಡಿದರು. ಭ್ರಷ್ಟ ಅಧಿಕಾರಿಗಳು ಮತ್ತು ಸೇನಾ ಮುಖ್ಯಸ್ಥರು ತಮ್ಮ ಸ್ವಾರ್ಥಕ್ಕಾಗಿ ರಷ್ಯಾದ ಹಿತವನ್ನು ಬಲಿ ಕೊಡುತ್ತಿದ್ದಾರೆ, ವ್ಯಾಗ್ನರ್ ಸೈನಿಕರಿಗೆ ಅಗತ್ಯ ಶಸ್ತ್ರಾಸ್ತ್ರಗಳನ್ನು ಒದಗಿಸುತ್ತಿಲ್ಲ, ಹಾಗಾಗಿ ಯುದ್ಧದಲ್ಲಿ ಹಿನ್ನಡೆಯಾಗುತ್ತಿದೆ, ನೂರಾರು ಸೈನಿಕರು ಪ್ರಾಣತೆರುತ್ತಿದ್ದಾರೆ ಎಂದು ಸಾಮಾಜಿಕ ಜಾಲತಾಣಗಳ ಮೂಲಕ ಆರೋಪಿಸಿದರು.

ರಕ್ಷಣಾ ಸಚಿವರ ಕುರಿತು ಟೀಕೆ ಬಂದಾಗ ಪುಟಿನ್ ಪ್ರತಿಕ್ರಿಯಿಸಲಿಲ್ಲ. ವ್ಯಾಗ್ನರ್ ಪಡೆ ಮಾಸ್ಕೊದತ್ತ ಮುಖಮಾಡಿದಾಗ, ರಷ್ಯಾದ ಆಂತರಿಕ ಭದ್ರತಾ ಪಡೆ ಮತ್ತು ಸೇನೆ, ‘ನಿಮ್ಮ ಯೋಜನೆಯನ್ನು ಕೈಬಿಡಿ’ ಎಂದು ವ್ಯಾಗ್ನರ್ ಪಡೆಗೆ ಮನವಿ ಮಾಡಿದವೇ ಪರಂತು ದಂಗೆಯನ್ನು ಮಟ್ಟಹಾಕುವ ದಿಸೆಯಲ್ಲಿ ವ್ಯಾಗ್ನರ್ ಗುಂಪಿನ ಮೇಲೆ ಎರಗಲಿಲ್ಲ!

ಇದೀಗ ವ್ಯಾಗ್ನರ್ ಪ್ರಕರಣ ನಡೆದು ಎರಡು ವಾರಗಳು ಕಳೆದರೂ, ಪ್ರಿಗೋಷಿನ್ ಎಲ್ಲಿದ್ದಾರೆ ಎಂಬ ಬಗ್ಗೆ ಖಚಿತ ಮಾಹಿತಿ ಲಭ್ಯವಿಲ್ಲ. ವ್ಯಾಗ್ನರ್ ಗುಂಪಿನ ವಿರುದ್ಧ ಪುಟಿನ್ ಏನಾದರೂ ಕ್ರಮ ಕೈಗೊಂಡರೇ ಎಂಬ ಬಗ್ಗೆ ಅಧಿಕೃತ ಹೇಳಿಕೆ ಹೊರಬಿದ್ದಿಲ್ಲ! ಈ ಎಲ್ಲ ಸಂಗತಿಗಳನ್ನು ಗಮನಿಸಿದಾಗ, ಮೇಲ್ನೋಟಕ್ಕೆ ಪುಟಿನ್ ಅಸಹಾಯಕರಂತೆ ಕಂಡರೂ, ಒಟ್ಟಾರೆಯಾಗಿ ಈ ವ್ಯಾಗ್ನರ್ ಪ್ರಕರಣ ಅವರ ತಂತ್ರಗಾರಿಕೆಯ ಒಂದು ಭಾಗವೇ ಎಂಬ ಸಣ್ಣ ಅನುಮಾನಕ್ಕೂ ಜಾಗ ಒದಗಿಸಿದೆ.

ಉಕ್ರೇನ್ ಯುದ್ಧ ಇದೀಗ 500 ದಿನಗಳನ್ನು ಪೂರೈಸಿದೆ. ಯುದ್ಧ ಆರಂಭವಾದಾಗ ಎರಡು ಸಾಧ್ಯತೆಗಳ ಬಗ್ಗೆ ಚರ್ಚೆ ನಡೆದಿತ್ತು. ಮೊದಲನೆಯದು, ಅಮೆರಿಕ ಮತ್ತು ಮಿತ್ರ ರಾಷ್ಟ್ರಗಳು ಹೇರಿದ ಆರ್ಥಿಕ ದಿಗ್ಬಂಧನದಿಂದ ರಷ್ಯಾದ ಜನ ಆರ್ಥಿಕ ಸಂಕಷ್ಟ ಎದುರಿಸಬೇಕಾಗುತ್ತದೆ. ಯುದ್ಧ ದೀರ್ಘಾವಧಿಗೆ ಮುಂದುವರಿದರೆ, ರಷ್ಯಾದ ಜನ ಪುಟಿನ್ ಅವರ ವಿರುದ್ಧ ದಂಗೆ ಏಳಬಹುದು. ಆಗ ಯುದ್ಧ ಅಂತ್ಯಗೊಳ್ಳಬಹುದು. ಎರಡನೆಯದು, ಅಮೆರಿಕದ ಶಸ್ತ್ರಾಸ್ತ್ರಗಳಿಂದ ಉಕ್ರೇನ್ ಸೈನಿಕರು ಮೇಲುಗೈ ಸಾಧಿಸಬಹುದು. ದಿನಕಳೆದಂತೆ ರಷ್ಯಾದ ಸೈನಿಕರು ನೈತಿಕ ಸ್ಥೈರ್ಯ ಕಳೆದುಕೊಳ್ಳಬಹುದು. ಈ ‘ಅನವಶ್ಯಕ ಯುದ್ಧ’ ರಷ್ಯಾದ ಸೇನೆಯಲ್ಲಿ ಒಡಕು ಉಂಟು ಮಾಡಿ ಸೇನಾ ದಂಗೆಗೆ ಕಾರಣವಾಗಬಹುದು. ಹಾಗಾದಾಗ ಯುದ್ಧದ ಅಂತ್ಯ ಸಾಧ್ಯ ಎನ್ನಲಾಗಿತ್ತು.

ಆದರೆ, ಈ 500 ದಿನಗಳಲ್ಲಿ ರಷ್ಯಾ ಆರ್ಥಿಕವಾಗಿ ಹೆಚ್ಚು ಬಾಧೆಗೊಳಗಾದಂತೆ ಕಾಣುತ್ತಿಲ್ಲ. ಅದು ತನ್ನ ಉತ್ಪನ್ನಗಳಿಗೆ ಬದಲಿ ಗ್ರಾಹಕರನ್ನು ಹುಡುಕಿಕೊಂಡಿದೆ. ಅಗತ್ಯ ವಸ್ತುಗಳನ್ನು ಮತ್ತೊಂದು ದಿಕ್ಕಿನಿಂದ ಪಡೆಯುತ್ತಿದೆ. ಹಾಗಾಗಿ ಪುಟಿನ್ ವಿರುದ್ಧ ಜನ ದಂಗೆ ಏಳುವ ಸಾಧ್ಯತೆ ಕ್ಷೀಣಿಸಿದೆ. ಆದರೆ ಎರಡನೇ ಸಾಧ್ಯತೆಯನ್ನು ಪೂರ್ಣವಾಗಿ ತಳ್ಳಿಹಾಕುವಂತಿಲ್ಲ. ಉಕ್ರೇನ್ ವಿರುದ್ಧದ ಯುದ್ಧದಲ್ಲಿ ಹಿನ್ನಡೆ ಮುಂದುವರಿದರೆ, ರಷ್ಯಾದ ಸೇನೆಯಲ್ಲಿ ಗುಪ್ತವಾಗಿರುವ ಭಿನ್ನಮತ ಬಹಿರಂಗಗೊಳ್ಳಬಹುದು. ವ್ಯಾಗ್ನರ್ ದಂಗೆ ಅದರ ಮುನ್ಸೂಚನೆ ಆಗಿರಬಹುದು ಅಥವಾ ವ್ಯಾಗ್ನರ್ ಪಡೆಯನ್ನು ದ್ರೋಹಿಗಳು ಎನ್ನುವ ಮೂಲಕ ಪುಟಿನ್, ಭಿನ್ನಮತಕ್ಕೆ ಆಸ್ಪದವಿಲ್ಲ ಎಂಬ ಸಂದೇಶ ರವಾನಿಸಿರಬಹುದು.



ಹಾಗಾದರೆ ಮುಂದೇನು? ಪ್ರಬಲ ಪುಟಿನ್ ಅವರಿಗಿಂತ, ಅಸಹಾಯಕ ಪುಟಿನ್ ಹೆಚ್ಚು ಅಪಾಯಕಾರಿ. ಈ ಸತ್ಯ ಅಮೆರಿಕಕ್ಕೆ ಕೂಡ ಗೊತ್ತಿದೆ. ಪರಿಸ್ಥಿತಿ ಕೈ ಮೀರಿದರೆ ಪುಟಿನ್ ಯಾವ ದುಃಸಾಹಸಕ್ಕೂ ಕೈ ಹಾಕಬಹುದು, ಪರಮಾಣು ಅಸ್ತ್ರಗಳನ್ನು ಬಳಸಲು ಮುಂದಾಗಬಹುದು ಎಂಬ ಆತಂಕ ಇದ್ದೇ ಇದೆ. ಒಂದೊಮ್ಮೆ ಪುಟಿನ್ ಅಸಹಾಯಕ ಸ್ಥಿತಿ ತಲುಪಿದರೆ, ಅವರು ಚೀನಾದ ಮೇಲೆ ಹೆಚ್ಚಿನ ಅವಲಂಬನೆ ತೋರಬಹುದು. ಈ ಅವಕಾಶವನ್ನು ಚೀನಾ ತನ್ನ ಹಿತಕ್ಕೆ ಬಳಸಿಕೊಂಡರೆ, ಭಾರತ ಮತ್ತು ರಷ್ಯಾ ನಡುವಿನ ಸಂಬಂಧದಲ್ಲಿ ವ್ಯತ್ಯಾಸಗಳಾಗಬಹುದು.

ಇತ್ತ, ಇಂದಿನಿಂದ (ಜುಲೈ 11) ಎರಡು ದಿನ ಲಿಥುವೇನಿಯಾದ ರಾಜಧಾನಿಯಲ್ಲಿ ನ್ಯಾಟೊ ರಾಷ್ಟ್ರಗಳ ವಾರ್ಷಿಕ ಶೃಂಗಸಭೆ ನಡೆಯುತ್ತಿದೆ. ವ್ಯಾಗ್ನರ್ ದಂಗೆಯಿಂದ ಕಂಗೆಟ್ಟಿರುವ ಪುಟಿನ್ ಅವರನ್ನು ಮತ್ತಷ್ಟು ದುರ್ಬಲಗೊಳಿಸಲು ನ್ಯಾಟೊ ರಾಷ್ಟ್ರಗಳು ಹೊಸ ತಂತ್ರಗಳನ್ನು ಹೆಣೆಯಬಹುದು. ಉಕ್ರೇನಿಗೆ ಶಕ್ತಿ ತುಂಬುವ ಯೋಜನೆ ರೂಪಿಸಬಹುದು. ಈಗಾಗಲೇ ಅಮೆರಿಕವು ವಿವಾದಿತ ಮತ್ತು ಅಪಾಯಕಾರಿ ಕ್ಲಸ್ಟರ್ ಮ್ಯುನಿಷನ್‌ಗಳನ್ನು (ಸಿಡಿಗುಂಡುಗಳ ಗೊಂಚಲು) ಉಕ್ರೇನಿಗೆ ಪೂರೈಸುವುದಾಗಿ ಹೇಳಿದೆ. ಮತ್ತಷ್ಟು ಶಸ್ತ್ರಾಸ್ತ್ರಗಳು ಉಕ್ರೇನ್ ಬತ್ತಳಿಕೆ ಸೇರಬಹುದು.

1991ರಲ್ಲಿ ರಷ್ಯಾದ ಕಟ್ಟರ್‌ವಾದಿಗಳು ಅಂದಿನ ಸೋವಿಯತ್ ನಾಯಕ ಗೋರ್ಬಚೆವ್ ವಿರುದ್ಧ ದಂಗೆ ಎದ್ದಿದ್ದರು. ದಂಗೆ ವಿಫಲವಾದರೂ ಗೋರ್ಬಚೆವ್ ಅವರ ವರ್ಚಸ್ಸು ಕುಗ್ಗಿತ್ತು. ನಂತರ ಆದ ಬೆಳವಣಿಗೆಗಳು ಸೋವಿಯತ್ ವಿಘಟನೆಗೆ ಕಾರಣವಾದವು. ಗೋರ್ಬಚೆವ್ ಅವರಂತೆ ಪುಟಿನ್ ಉದಾರಿಯಲ್ಲ. ಯಾರನ್ನೂ, ಯಾವುದನ್ನೂ ಅಷ್ಟು ಸುಲಭಕ್ಕೆ ಮರೆಯುವುದಿಲ್ಲ ಮತ್ತು ಕ್ಷಮಿಸುವುದೂ ಇಲ್ಲ ಎನ್ನುವುದು ಪುಟಿನ್ ವ್ಯಕ್ತಿತ್ವದ ಹೆಗ್ಗುರುತು. ಪ್ರಿಗೋಷಿನ್ ನಡೆಯನ್ನು ಪುಟಿನ್ ಕ್ಷಮಿಸಿದರೆ ಅದು ಮತ್ತೊಂದು ಅಚ್ಚರಿ ಮತ್ತು ಜಗತ್ತು ಅದನ್ನು ಅನುಮಾನದಿಂದಲೇ ನೋಡಬೇಕು.

## ಚುರುಮುರಿ




### ಹಾವಿನ ವೇಷ

• ಲಿಂಗರಾಜು ಡಿ.ಎಸ್.

**ಪಂಚಾಯಿತಿ** ಎಲೆಕ್ಷನ್ನಲ್ಲಿ ಹಾವಾಡಿಗರು, ಹೂವಾಡಿಗರು ಸೋತು ಕೈಪಾಳ್ಯದೋರು ಗೆದ್ದಿದ್ದರು. ಅದ್ರೂ ಹಾವಾಡಿಗರು, ಹೂವಾಡಿಗರು ಕೈಪಾಳ್ಯದ ಮ್ಯಾಲೆ ಹೊಟ್ಟುರುಕತುದ್ರು.

ಹೂವಾಡಿಗರು ‘ನಮ್ಮ ಹೂವಿಂದ ಮಾತ್ರ ದೇಶದ ಅಲಂಕಾರ ಸಾಧ್ಯ’ ಅಂತ ಹೇಳಿಕ್ಯಂದು ಒಳ್ಳೆ ಹೂವು ಕೊಡದೇ ಸೋತೋದ್ರು. ಇವುರ ಗುಂಪಿಗೆ ಸಮರ್ಥ ನಾಯಕನೂ ಇರಲಿಲ್ಲ, ಅಧ್ಯಕ್ಷನೂ ಇರಲಿಲ್ಲ. ಆದರೂ ಸೋತ ಸಂಕಟಕ್ಕೆ ಕೆಡಿಸಣ್ಣನ ಕಥೆ ಮಾಡಿಕ್ಯಂದು ಕಾಲ ಕಳೀತಿದ್ರು.

ಹಾವಾಡಿಗರ ಮಾರಣ್ಣ ಸಮಯ-ಸಂದರ್ಪ, ಪಾಯ್ದೆ ನೋಡಿಕ್ಯಂದು ಒಂದ್ಸಲ ಕೈಪಾಳ್ಯದೋರ ಕಡೆ ಇನ್ನೊಂದ್ಸಲ ಹೂವಾಡಿಗರ ಕಡೆ ಆಟ ಕಟ್ಟಿ ಹಾವು-ಹಲ್ಲಿ, ಸೀಡಿ-ಪಾಡಿ ತೋರ್ಸಿ ಕಾಲ ಕಳೀತಿದ್ದ. ಈ ಸಲ ಆಟ ಕಟ್ಟಕ್ಕೆ ಯಾರೂ ಇವರುನ್ನ ಕರೀನಿಲ್ಲ!

ಮೊನ್ನೆ ಡೋಲು ಬಾರ್ಸೋರು, ಪುಂಗಿ ಊದೋರು ಯಾರೂ ಇಲ್ಲದೆ ಮಾರಣ್ಣ ಒಬ್ಬನೇ ಆಟ ಕಟ್ಟಿದ್ದ. ತಾನೇ ಡೋಲು ಬಡಕಂದು ‘ಬ್ರದರ್, ಸಿಸ್ಟರ್ ಬರ್ರಿ! ಈ ಬುಟ್ಟೀಲಿ ಒಂದು ವಿಷದ ಹಾವದೆ. ಈಚೆಗೆ ಬುಟ್ರೆ ಪಂಚಾಯಿತಿಗೆ ತೊಂದರೆ!’ ಅಂತ ಒಂದು ಪೆನ್ನುಡ್ರೈವು ತೋರ್ಸಿ ತೋರ್ಸಿ ಬುಟ್ಟಿ ಒಳಿಕ್ಕೆ ಮಡೀಕೆತಿದ್ದ. ಜನ ‘ಎಲ್ಲಿ, ಎಲ್ಲಿ ಅದೇನು ತೋರ್ಸು!’ ಅಂದ್ರೆ ಮಾರಣ್ಣ ‘ಟೇಮು ಬರಲಿ ತೋರಿಸ್ತೀನಿ!’ ಅಂತಿದ್ದ.

‘ಅಣ್ಣೆ, ನಿನ್ನ ಹಾವ ಈಚೆಗೆ ಬುಟ್ರಲ್ಲವಾ ಅದರ ಪವರ್ ಗೊತ್ತಾಗದು. ಸುಮ್ನೆ ಡೋಂಗಿ ಮಾಡ್ತೀಯ!’ ಅಂದ್ರು ಯಾರೋ ಒಬ್ಬರು.

‘ಬ್ರದರ್, ಕೈಪಾಳ್ಯದೇಲಿ ಇರೋವೆಲ್ಲಾ ನನ್ನ ತಾವ್ಲೇ ಬೆಳೆದು ಡೋಲು ಬಡಿಯದು, ಪುಂಗಿ ಊದ ಆಟ ಕಲಿತಿರದು. ಈಗ ಅಲ್ಲೋಗಿ ಮೆರೀತಾವೆ’ ಅಂತ ಉರಿದುಬಿದ್ದ. ಜನವೆಲ್ಲಾ ‘ಈವಯ್ಯನ ತಾವು ಹಾವೂ ಇಲ್ಲ ಪುಂಗೀನೂ ಇಲ್ಲ!’ ಅಂತ ಹೊಂಟೋದರು. ಮಾರಣ್ಣ ಮತ್ತೆ ಸುರುಮಾಡಿದ. ‘ಬ್ರದರ್, ಇಲ್ಲೊಂದು ನಾಗರಹಾವದೆ’ ಅಂತ. ಹೂವಾಡಿಗರಿಗೂ ಕೇಮೆ ಇರಲಿಲ್ಲ ನೋಡ್ತಾ ನಿಂತಿದ್ದರು!

## ಸಂಗತ

# ಭೂಮಿ ಸೀಮಿತ, ಕಡಿಮೆ ಜನ ಹಿತ

### ಅನಿಯಂತ್ರಿತ ಜನಸಂಖ್ಯಾ ಬೆಳವಣಿಗೆಯಿಂದ ಬದುಕಿನ ಗುಣಮಟ್ಟಕ್ಕೇ ಪೆಟ್ಟು. ಹಾಗಾಗಿ, ಜನಸಂಖ್ಯಾ ಸ್ಫೋಟಕ್ಕೆ ಕಡಿವಾಣ ಹಾಕಲೇಬೇಕು

• ಬಿ.ಎಸ್.ಭಗವಾನ್

**ಜಗತ್ತಿನ** ಜನಸಂಖ್ಯೆ 800 ಕೋಟಿ ದಾಟಿದ್ದು, ದಿನಕ್ಕೆ 2 ಲಕ್ಷದಷ್ಟು ಹೆಚ್ಚುತ್ತಿದೆ. ಕೈ ಗಡಿಯಾರ ನೋಡುವಷ್ಟರಲ್ಲಿ 3 ಮಂದಿಯ ಹೆಚ್ಚಳ! ತೀವ್ರವಾಗಿ ಹೆಚ್ಚುತ್ತಿರುವ ಜನಸಂಖ್ಯೆ ಪ್ರತಿಯೊಬ್ಬ ವಿಶ್ವಪ್ರಜೆಯ ಗಮನ ಸೆಳೆಯಬೇಕಿದೆ. ಇರುವುದೊಂದೇ ಭೂಮಿ, ವಾಸ್ತವವಾಗಿ 400 ಕೋಟಿ ಮಂದಿಗಷ್ಟೇ ಅದರ ಧಾರಣಾಶಕ್ತಿ. ಅಧಿಕ ಮಂದಿ ಎಂದರೆ ಆಹಾರ, ಆರೋಗ್ಯ, ಆಶ್ರಯ, ಇಂಧನ, ಆರೋಗ್ಯ ರಕ್ಷಣೆ... ಹೀಗೆ ಎಲ್ಲಕ್ಕೂ ಅಧಿಕ ಬೇಡಿಕೆ. ಈ ಬಳಕೆಗಳೆಲ್ಲ ಪರಿಸರ ಅಸಮತೋಲನ, ತೀವ್ರ ಪೈಪೋಟಿ, ಹಸಿವು, ನೆರೆ, ಬರ, ಬಡತನ, ಖಂಡಾಂತರ ವ್ಯಾಧಿಗಳಲ್ಲಿ ಪರ್ಯವಸಾನಗೊಳ್ಳುತ್ತವೆ. ಇದು ಮನುಷ್ಯ ತಂತಾನೇ ಹೇರಿಕೊಂಡ ದುರ್ದೆಸೆ.

2040ರ ವೇಳೆಗೆ ವಿಶ್ವದಲ್ಲಿ ಒಟ್ಟು 970 ಕೋಟಿ ಜನರಿರುತ್ತಾರೆ ಎಂದು ಅಂದಾಜು. ಅವರ ಆಹಾರಕ್ಕೆ ಇಂದಿನದರ ಮೂರುಪಟ್ಟು ಕೃಷಿ ಉತ್ಪನ್ನಗಳು ಬೇಕಾಗುತ್ತವೆ! ಮಹಿಳೆಯರ ಆರೋಗ್ಯ ಸುಧಾರಣೆ ಹಾಗೂ ಸಬಲೀಕರಣವು ಆದ್ಯತೆ ಪಡೆದುಕೊಂಡಂತೆ ಜನಸಂಖ್ಯಾ ವೃದ್ಧಿಗೆ ತಂತಾನೆ ಕಡಿವಾಣ ಬೀಳುವುದೆಂಬ ವಿಖ್ಯಾತ ಉದ್ಯಮಿ ಬಿಲ್‌ಗೇಟ್ಸ್ ಅವರ ನುಡಿ ಅರ್ಥವತ್ತಾಗಿದೆ. 1987ರ ಜುಲೈ 11ನೇ ತೇದಿಯಂದು ವಿಶ್ವಸಂಸ್ಥೆ ‘500 ಕೋಟಿ ಜನರ ಜಗತ್ತು’ ಎಂದು ಸಾರಿತು. 1989ರಲ್ಲಿ ‘ಯುನೈಟೆಡ್ ನೇಷನ್ಸ್ ಡೆವಲಪ್‌ಮೆಂಟ್ ಪ್ರೋಗ್ರ್ಯಾಂ’ (ಯುಎನ್‌ಡಿಪಿ) ಪ್ರತಿವರ್ಷ ಜುಲೈ 11, ‘ವಿಶ್ವ ಜನಸಂಖ್ಯಾ ದಿನ’ ಎಂದು ನಿರ್ಣಯಿಸಿತು. ಮರುವರ್ಷ ತೊಂಬತ್ತಕ್ಕೂ ಹೆಚ್ಚು ದೇಶಗಳು ‘ವಿಶ್ವ ಜನಸಂಖ್ಯಾ ದಿನ’ ಆಚರಿಸಿದವು. ಜನಸಂಖ್ಯಾ ಸ್ಫೋಟವು ಅಭಿವೃದ್ಧಿಗೆ ಮತ್ತು ಪರಿಸರಕ್ಕೆ ತಂದೊಡ್ಡುವ ಬಹುಮುಖಿ ಕಂಟಕಗಳ ಬಗ್ಗೆ ಜನಜಾಗೃತಿ ಮೂಡಿಸುವುದೇ ಏರ್ಪಾಡಿನ ಗುರಿ.

ಜೋಕೆ, ಇಳೆ ಇಷ್ಟೊಂದು ಜನಸಾಂದ್ರತೆಯನ್ನು ತಾಳಿಕೊಳ್ಳದು ಎಂದು ಎಚ್ಚರಿಸುವ ಸಲುವಾಗಿಯೇ ಪ್ರತಿವರ್ಷ ಈ ದಿನಾಚರಣೆ ಬಂದೇಬರುತ್ತದೆ. ಮಾತೆಯರ ಆರೋಗ್ಯ, ಕುಟುಂಬ ಯೋಜನೆ ಮತ್ತು ಮಾನವ ಹಕ್ಕುಗಳ ಬಗ್ಗೆ ಕಾಳಜಿಯು ಜನಜಾಗೃತಿಯ ಪ್ರಮುಖ ಅಂಶಗಳಾಗಿವೆ.

1960ರಲ್ಲಿ 45 ಕೋಟಿ ಜನಸಂಖ್ಯೆಯಿದ್ದ ಭಾರತದಲ್ಲಿ ಇದೀಗ 143 ಕೋಟಿ ಮಂದಿ. ಜನಸಂಖ್ಯೆ ಹೆಚ್ಚುವುದರ ಪರಿಣಾಮವಾಗಿ ಸಮಾಜದ ಮೇಲೆ ಬೀಳುವ ಒತ್ತಡ ವಿಪರೀತ. ವಿಶೇಷವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ಲಿಂಗತ್ವ ಅಸಮಾನತೆಯ ಚಿತ್ರಣಗಳನ್ನು ಪರಿಶೀಲಿಸಬೇಕು. ಹೀನಾಯ ಅಪರಾಧಗಳು, ಶೋಷಣೆಗಳು, ಕಾನೂನು ಉಲ್ಲಂಘನೆಗಳು ಸಂಭವಿಸುತ್ತಿವೆ. ಮಹಿಳೆಯರು ಮತ್ತು ಹೆಣ್ಣುಮಕ್ಕಳ ದನಿಯನ್ನು ನಿರ್ಲಕ್ಷಿಸಿದರೆ ಕಂಟಕವಷ್ಟೇ ಅಲ್ಲ, ಪ್ರಗತಿಯ ಅಗಾಧ ಸಾಧ್ಯತೆಗಳು ಕೈತಪ್ಪುತ್ತವೆ. ಭೂಗ್ರಹದ ಉಳಿವು ಹಾಗೂ ನಾಳೆಯ ರಕ್ಷಣೆಗಾಗಿ ವಿಶ್ವದ ಇಂದಿನ ಜನಸಂಖ್ಯೆಗೆ ಕಡಿವಾಣ ಹಾಕಬೇಕು.

ಅನಿಯಂತ್ರಿತ ಜನಸಂಖ್ಯಾ ಬೆಳವಣಿಗೆಯಿಂದ ಬದುಕಿನ ಗುಣಮಟ್ಟಕ್ಕೇ ಪೆಟ್ಟು. ಭೂಮಿ ನಮ್ಮ ಪಾಲಿಗೆ, ಬದುಕಬಹುದಾದ, ನಮಗೆ ತಿಳಿದಿರುವ ಏಕೈಕ ಗ್ರಹ. ಅದು ವಿಸ್ತಾರವಾಗಿರಲಿ ಎನ್ನುವುದೇ ಆಶಯ. ಈ ವರ್ಷದ ವಿಶ್ವ ಜನಸಂಖ್ಯಾ ದಿನದ ಧ್ಯೇಯವಾಕ್ಯವಿದು: ‘ಜಗತ್ತಿನ ಪ್ರತಿಯೊಬ್ಬರೂ ಭರವಸೆ ಮತ್ತು ಶಕ್ಯತೆಯ ಭವಿಷ್ಯವುಳ್ಳವರು ಎಂದು ಆಶಿಸಿ’. ಸೀಮಿತ ಭೂಮಿಯು ಸೀಮಿತ ಜನಸಂಖ್ಯೆಗೆ ಮಾತ್ರ ಆಸರೆಯಾಗಬಲ್ಲದು, ಹಾಗಾಗಿ ಜನಸಂಖ್ಯಾ ಬೆಳವಣಿಗೆ ಆಖೈರಾಗಿ ಶೂನ್ಯವಿರಬೇಕು ಎನ್ನುವುದು ಅಮೆರಿಕದ ಖ್ಯಾತ ಪರಿಸರವಾದಿಯಾಗಿದ್ದ ಗ್ಯಾರೆಟ್ ಹಾರ್ಡಿನ್ ಅವರ ಖಡಕ್ ಅಭಿಪ್ರಾಯವಾಗಿತ್ತು.

ಶಿಕ್ಷಣದ ಕೊರತೆ, ಅನಕ್ಷರತೆ, ಲೈಂಗಿಕ ಮಾರ್ಗದರ್ಶನದ ಅಪವ್ಯಾಖ್ಯಾನ ಮತ್ತು ಮೌಢ್ಯವು ಜನನ ಪ್ರಮಾಣದ ನಿಯಂತ್ರಣಕ್ಕೆ ಎದುರಾಗುವ ಸವಾಲುಗಳು. ಜನನ ಪ್ರಮಾಣದ ಏರಿಕೆಯಿಂದ ಜನಸಂಖ್ಯೆ ಹೆಚ್ಚಳ ಎನ್ನುವುದು ಸಾಮಾನ್ಯ ವಿವರಣೆ. ಆದರೆ ಅದಕ್ಕೂ ಭಿನ್ನವಾಗಿ ಮರಣ ಪ್ರಮಾಣದ ಇಳಿಕೆ, ಸಂಪನ್ಮೂಲಗಳ ಅಭಾವ, ಧಾವಂತದ ವಲಸೆ ಜನಸಂಖ್ಯಾ ವರ್ಧನೆಗೆ ಮುಖ್ಯ ಕೊಡುಗೆಗಳಾಗುತ್ತವೆ.

ಜನಸಂಖ್ಯಾ ವೃದ್ಧಿಯಿಂದ ಬಾಧಕಗಳು ಒಂದೇ? ಎರಡೇ? ವಾಯುಗುಣ ಬದಲಾವಣೆ, ಶುದ್ಧ ನೀರಿನ ಕೊರತೆ, ಸಾಗರಗಳಲ್ಲಿ ಮೀನುಗಳ ವಿರಳತೆ, ಅರಣ್ಯ ನಾಶ, ವಾಯು ಮತ್ತು ಜಲ ಮಾಲಿನ್ಯ! ಸಂಪನ್ಮೂಲಗಳ ಅಭಾವವೇನಿಲ್ಲ, ಆದರೆ ಯಾವ್ಯಾವ ಬಗೆಗಳನ್ನು ಯಾವ್ಯಾವ ರೀತಿಯಲ್ಲಿ ಸಮರ್ಥವಾಗಿ ಉಪಯೋಗಿಸಬೇಕೆಂಬ ಕೌಶಲದ್ದೇ ಪ್ರಶ್ನೆಯೆಂದು ದಶಕಗಳ ಹಿಂದೆ ಗ್ರಹಿಸಲಾಗಿತ್ತು. ಆದರೆ, ಈಗ ಜನಸಂಖ್ಯೆ ಏರಿಕೆಯನ್ನು ಹಾಗೆ ಸಮರ್ಥಿಸಿಕೊಳ್ಳಲಾಗದು. ವೈದ್ಯಕೀಯ ಸೌಲಭ್ಯದ ಕೊರತೆಯಿಂದ ಅಸುನೀಗುವವರ ಸಂಖ್ಯೆ ಅತ್ಯಲ್ಪ. ಹತ್ತೊಂಬತ್ತನೆಯ ಶತಮಾನದ ಆದಿಯಲ್ಲಿ ವಿಶ್ವದ ಜನಸಂಖ್ಯೆ 100 ಕೋಟಿ. 2010ರ ವೇಳೆಗೆ ಅದು 700 ಕೋಟಿ ಮುಟ್ಟಿತು. ಈ ನಾಟಕೀಯ ಬೆಳವಣಿಗೆಗೆ ಕೈಗಾರಿಕಾ ಕ್ರಾಂತಿಯೇ ಕಾರಣ. ಆಹಾರ ಉತ್ಪಾದನೆಯಲ್ಲಿ ಹೆಚ್ಚಳ, ವೈದ್ಯಕೀಯ ಚಿಕಿತ್ಸೆಯಲ್ಲಿ ಗಣನೀಯ ಸುಧಾರಣೆ, ಶೌಚಾಲಯ ವ್ಯವಸ್ಥೆಯ ಮಾರ್ಪಾಟು... ಒಟ್ಟಾರೆ ಆಯುರ್ನಿರೀಕ್ಷೆಯ (ಲೈಫ್ ಎಕ್ಸ್‌ಪೆಕ್ಟೆನ್ಸಿ) ಏರಿಕೆ. ಇವೆಲ್ಲ ನಿಸ್ಸಂದೇಹವಾಗಿ ಅಭಿವೃದ್ಧಿಯ ಹೆಜ್ಜೆಗಳೇ. ಆದರೆ ಜನಸಂಖ್ಯಾ ಸ್ಫೋಟವೆಂಬ ಕಡಿವಾಣವಿಲ್ಲದ ಕುದುರೆಯನ್ನು ಅವು ಎಗ್ಗಿಲ್ಲದೇ ಪೋಷಿಸಿದ್ದು ಮಾತ್ರ ವಿಪರ್ಯಾಸ.

ಆರಂಭದಲ್ಲಿ ಸಾಧಾರಣ ಅಂಕಿ, ಅಂಶಗಳು, ದೀರ್ಘಾವಧಿಯಲ್ಲಿ ಘಾತಾಂಕದ ರೂಪ. ಇದು ಜನಸಂಖ್ಯೆ ಹೆಚ್ಚಳದ ರುದ್ರ ನರ್ತನ! ಸಾರಾಂಶವಿಷ್ಟೆ: ಭೂಮಿ ಸೀಮಿತ, ಜನಸಂಖ್ಯೆಯೂ ಇರಲಿ ಸೀಮಿತ, ಅದೇ ಹಿತ.

## ವಾಚಕರ ವಾಣಿ

### ಕಳವಳಕಾರಿ ಬೆಳವಣಿಗೆಯ ಮುನ್ಸೂಚನೆ

‘ತಮಿಳುನಾಡಿಗೆ ರಾಜ್ಯಪಾಲ ಆರ್.ಎನ್.ರವಿ ಅವರೇ ಬೆದರಿಕೆ’ ಎಂದು ಅಲ್ಲಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪತ್ರ ಬರೆದಿರುವುದಾಗಿ ವರದಿಯಾಗಿದೆ (ಪ್ರ.ವಾ., ಜುಲೈ 10). ‘ರಾಜ್ಯಪಾಲರು ಕೋಮುದ್ವೇಷ ಪ್ರಚೋದನೆಯಲ್ಲಿ ತೊಡಗಿದ್ದಾರೆ. ರಾಜ್ಯದ ಶಾಂತಿಗೆ ಬೆದರಿಕೆ ಒಡ್ಡಿದ್ದಾರೆ. ಸಚಿವರನ್ನು ಏಕಾಏಕಿ ವಜಾಗೊಳಿಸಿ ನಂತರ ಆದೇಶ ಹಿಂಪಡೆಯುವಂತಹ ರಾಜ್ಯಪಾಲರ ನಡವಳಿಕೆ ಪಕ್ಷಪಾತ ಧೋರಣೆಯಿಂದ ಕೂಡಿದೆ’ ಎಂಬ ಗಂಭೀರ ಆರೋಪಗಳನ್ನು ಒಳಗೊಂಡಿರುವ ಈ ಪತ್ರವು ಒಕ್ಕೂಟ ವ್ಯವಸ್ಥೆಗೆ ಒದಗಿರುವ ಕಳವಳಕಾರಿ ಬೆಳವಣಿಗೆಯ ಮುನ್ಸೂಚನೆಯಾಗಿದೆ. ರಾಜ್ಯಪಾಲರ ಸ್ಥಾನದಲ್ಲಿರುವ ಯಾವುದೇ ವ್ಯಕ್ತಿ ಪಕ್ಷಾತೀತವಾಗಿ ನಡೆದುಕೊಳ್ಳಬೇಕು. ರಾಜ್ಯದಲ್ಲಿ ಸುಗಮ ಆಡಳಿತ ನಡೆಯಲು ಅಗತ್ಯ ಸಲಹೆ, ಸೂಚನೆ ನೀಡಬೇಕಾದುದು ರಾಜ್ಯಪಾಲರ ಸಾಂವಿಧಾನಿಕ ಹಾಗೂ ನೈತಿಕ ಹೊಣೆಗಾರಿಕೆ ಆಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ರಾಜ್ಯಪಾಲರು ಹಾಗೂ ರಾಜಭವನವು ವಿವಾದಗಳ ಕೇಂದ್ರ ಆಗುತ್ತಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಗುತ್ತಿರುವ ಅನಪೇಕ್ಷಿತ ಬೆಳವಣಿಗೆ ಎಂದೇ ಭಾವಿಸಬೇಕಿದೆ.

ಸಂವಿಧಾನದ ಆಶಯಗಳನ್ನು ಗಾಳಿಗೆ ತೂರಿ, ಕೇಂದ್ರ ಸರ್ಕಾರದ ಕೈಗೊಂಬೆಯಂತೆ ವರ್ತಿಸುವ ರಾಜ್ಯಪಾಲರ ನಡವಳಿಕೆಯನ್ನು ಸಂವಿಧಾನ ವ್ಯವಸ್ಥೆಯಲ್ಲಿ ನಂಬಿಕೆ ಹೊಂದಿರುವ ಯಾರೂ ಸಮರ್ಥಿಸಿಕೊಳ್ಳಲು ಸಾಧ್ಯವೇ ಇಲ್ಲ. ಕೆಲವು ರಾಜ್ಯಗಳಲ್ಲಿ ವಿಶ್ವವಿದ್ಯಾಲಯಗಳ ಕುಲಪತಿಗಳ ನೇಮಕದಲ್ಲಿ ಕೂಡ ರಾಜ್ಯಪಾಲರ ಹೆಸರಿಗೆ ಕಪ್ಪುಮಸಿ ಮೆತ್ತಿಕೊಳ್ಳುತ್ತಿರುವುದು, ಆ ಸ್ಥಾನ ಅಲಂಕರಿಸುವ ವ್ಯಕ್ತಿಗಳ ವೈಯಕ್ತಿಕ ನಡವಳಿಕೆಯನ್ನು ಪ್ರಶ್ನಿಸುವಂತೆ ಆಗಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಘನತೆ ತರುವಂತಹ ಸಂಗತಿ ಅಲ್ಲ ಎಂಬುದು ವಿಷಾದನೀಯ ಸಂಗತಿ.

**ಪ್ರೊ. ಎಂ.ಜಿ.ರಂಗಸ್ವಾಮಿ,** ಹಿರಿಯೂರು

### ನಾಗರಿಕ ಸಂಹಿತೆ: ನಡೆಯಲಿ ವ್ಯಾಪಕ ಅಧ್ಯಯನ

ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತರುವಲ್ಲಿ ಎದುರಾಗುವ ಸಮಸ್ಯೆಗಳು, ತೊಡಕುಗಳು ಮತ್ತು ಸವಾಲುಗಳನ್ನು ಪ್ರೊ. ಸಿ.ಎನ್.ರಾಮಚಂದ್ರನ್ ಚೆನ್ನಾಗಿ ವಿಶ್ಲೇಷಿಸಿದ್ದಾರೆ (ಪ್ರ.ವಾ., ಜುಲೈ 10). ಅದರೊಟ್ಟಿಗೆ ಈ ಕೆಲವು ಅಂಶಗಳನ್ನೂ ಪರಿಗಣಿಸಿದಾಗ ಈ ಸಮಸ್ಯೆಯ ಸಾಧಕ- ಬಾಧಕಗಳ ಸಂಪೂರ್ಣ ಚಿತ್ರ ಕಣ್ಮುಂದೆ ನಿಲ್ಲುತ್ತದೆ. ಭಾರತವೇನೋ ಬಹುಧರ್ಮ, ಬಹುಸಂಸ್ಕೃತಿ ಹಾಗೂ ಬಹುಭಾಷೆಗಳ ರಾಷ್ಟ್ರವೆಂಬುದು ಜಗತ್ಪ್ರಸಿದ್ಧ. ಆದರೆ ಇಂಗ್ಲೆಂಡ್, ಅಮೆರಿಕ, ಚೀನಾ, ರಷ್ಯಾದಂತಹ ರಾಷ್ಟ್ರಗಳೂ ಈಗೇನೂ ಏಕಧರ್ಮೀಯ, ಏಕ ಸಂಸ್ಕೃತಿಯ ನಾಡುಗಳಾಗಿ ಉಳಿದಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವಂಥದ್ದೇ. ಆ ದೇಶಗಳಲ್ಲಿ ಅದರಲ್ಲೂ ಮುಖ್ಯವಾಗಿ ಪ್ರಜಾಪ್ರಭುತ್ವವನ್ನೇ ಅನುಸರಿಸುತ್ತಿರುವ ಇಂಗ್ಲೆಂಡ್, ಅಮೆರಿಕದಲ್ಲಿ ಅಲ್ಲಿನ ಪೌರತ್ವವನ್ನು ಒಪ್ಪಿಕೊಂಡು, ಹಲವಾರು ವರ್ಷಗಳಿಂದ ನೆಲೆ ನಿಂತಿರುವ ಲಕ್ಷಾಂತರ ಹಿಂದೂಗಳು, ಮುಸ್ಲಿಮರು ಇರುವುದೂ ನಮಗೆಲ್ಲಾ ಗೊತ್ತೇ ಇದೆ. ಕಡಿಮೆ ಸಂಖ್ಯೆಯಲ್ಲಾದರೂ ಪಾರ್ಸಿಗಳು, ಬೌದ್ಧರು ಇದ್ದೇ ಇದ್ದಾರೆ. ಜಪಾನ್, ಚೀನಾ, ಮ್ಯಾನ್ಮಾರ್‌ನಲ್ಲಂತೂ ಬೌದ್ಧರು ಅಲ್ಲಿಯ ಸಂಜಾತರೇ ಆಗಿರುತ್ತಾರೆ. ಮುಸ್ಲಿಮರ ಸಂಖ್ಯೆ ಕೂಡ ಬಹಳಷ್ಟಿದೆ.

ಇಂಗ್ಲೆಂಡ್, ಅಮೆರಿಕದ ಪೌರರಾಗಿರುವ ಹಿಂದೂ, ಮುಸ್ಲಿಂ, ಪಾರ್ಸಿಗಳಿಗೆ ವಿವಾಹ, ಉತ್ತರಾಧಿಕಾರ ಮತ್ತು ಆರ್ಥಿಕ ಹಕ್ಕುಗಳಿಗೆ ಸಂಬಂಧಿಸಿದಂತೆ ಆ ದೇಶದ ನಾಗರಿಕ ಸಂಹಿತೆ ಅನ್ವಯವಾಗುತ್ತದೋ ಇಲ್ಲ ಅವರವರ ಧಾರ್ಮಿಕ ಕಟ್ಟುಪಾಡುಗಳು ಮಾತ್ರ ಅನ್ವಯವಾಗುತ್ತವೋ ಎಂಬುದರ ಮಾಹಿತಿಯನ್ನೂ ತರಿಸಿಕೊಂಡು ವ್ಯಾಪಕವಾಗಿ ಅಧ್ಯಯನ ಮಾಡಬೇಕಾದ ಅಗತ್ಯವಿದೆ. ಆಗ ಒಂದು ದೇಶದ ಪೌರರಾಗಿರುವ ಯಾವುದೇ ಧರ್ಮದವರಿಗಾದರೂ ಒಂದು ನಾಗರಿಕ ಸಂಹಿತೆ ಅನ್ವಯವಾಗಬೇಕು ಎಂಬುದು ಈ ದೇಶದಲ್ಲಿ ಮಾತ್ರ ಸಮಸ್ಯೆಯಾಗುತ್ತದೆಯೇ ಇಲ್ಲವೇ ಎಂಬುದು ಗೊತ್ತಾಗುತ್ತದೆ.

**ಡಾ. ಆರ್.ಲಕ್ಷ್ಮೀನಾರಾಯಣ,** ಬೆಂಗಳೂರು

### ಮುನಿ ಹತ್ಯೆ: ನಿಷ್ಪಕ್ಷಪಾತ ತನಿಖೆ ಅಗತ್ಯ

ಅಹಿಂಸೆಯನ್ನು ಪ್ರಮುಖ ತತ್ವವನ್ನಾಗಿ ಅಳವಡಿಸಿಕೊಂಡು, ಅಹಿಂಸಾತ್ಮಕ ಬದುಕನ್ನು ಜೀವಿತಾವಧಿಯ ಉದ್ದಕ್ಕೂ ಪಾಲನೆ ಮಾಡುವ ಜೈನ ಧರ್ಮದ ಒಬ್ಬ ಮುನಿಯನ್ನು ಭೀಕರವಾಗಿ ಹತ್ಯೆ ಮಾಡಿರುವುದು ನಿಜಕ್ಕೂ ಮಾನವ ಕುಲಕ್ಕೇ ಅವಮಾನ ಆಗುವಂಥದ್ದು. ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯ ನಂದಿಪರ್ವತ ಆಶ್ರಮದ ಜೈನ ಮುನಿ ಕಾಮಕುಮಾರ ನಂದಿ ಮಹಾರಾಜರಿಗೆ ವಿದ್ಯುತ್ ಶಾಕ್ ನೀಡಿ ಕೊಲೆ ಮಾಡಿ, ದೇಹವನ್ನು ತುಂಡು ತುಂಡಾಗಿ ಕತ್ತರಿಸಿ ಬಿಸಾಡಿರುವುದು ಮಾನವ ಜಗತ್ತು ಎಂದಿಗೂ ಕ್ಷಮಿಸಲಾರದ ಕೃತ್ಯವಾಗಿದೆ.

ಈ ಹತ್ಯೆಯಲ್ಲಿ ಭಾಗಿಯಾದ ಪಾತಕಿಗಳ ಬಗ್ಗೆ ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ, ಆದಷ್ಟು ಬೇಗ ಕಠಿಣ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು. ಅದು ಇಂತಹ ಕೃತ್ಯ ಎಸಗುವವರಿಗೆ ಎಚ್ಚರಿಕೆಯ ಸಂದೇಶವಾಗಿ, ನಂದಿ ಮಹಾರಾಜ ಮುನಿಗಳ ಆತ್ಮಕ್ಕೆ ಶಾಂತಿ ಸಿಗುವಂತೆ ಆಗಲಿ.

**ಪವನ್ ಜಯರಾಂ,** ಸಿದ್ಧಯ್ಯನಪುರ, ಚಾಮರಾಜನಗರ

### ಮತ್ತೊಮ್ಮೆ ತಪ್ಪು ನಡೆ ಬೇಡ

ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಈಗಿನ ಸರ್ಕಾರ ರಚನೆಯಾಗಿ ಎರಡು ತಿಂಗಳಾಗುತ್ತಾ ಬಂದಿದೆ. ನೂತನ ವಿಧಾನಸಭೆಯ ಬಜೆಟ್ ಕಲಾಪ ಆರಂಭವಾಗಿ ವಾರವಾಗುತ್ತಾ ಬಂದಿದೆ. ಹೀಗಿದ್ದರೂ ವಿಧಾನಸಭೆಯ ವಿರೋಧಪಕ್ಷದ ನಾಯಕನ ಆಯ್ಕೆ ಆಗದಿರುವುದು ಬಿಜೆಪಿಯ ವೈಫಲ್ಯ ಹಾಗೂ ಪಕ್ಷದಲ್ಲಿ ಒಗ್ಗಟ್ಟು ಇಲ್ಲದಿರುವಿಕೆಯನ್ನು ತೋರಿಸುತ್ತದೆ. ಚುನಾಯಿತ ಸರ್ಕಾರ ಸರಿಯಾದ ದಿಕ್ಕಿನಲ್ಲಿ ಸಾಗಬೇಕಾದರೆ ಮುಖ್ಯಮಂತ್ರಿ, ಮಂತ್ರಿಮಂಡಲ ಎಷ್ಟು ಮುಖ್ಯವೋ ವಿರೋಧಪಕ್ಷದ ನಾಯಕನ ಸ್ಥಾನವೂ ಅಷ್ಟೇ ಮುಖ್ಯ.

ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ರಾಷ್ಟ್ರೀಯ ಪಕ್ಷವಾದ ಬಿಜೆಪಿಯವರು ಯಾರನ್ನೂ ಆಯ್ಕೆ ಮಾಡದಿರುವುದರಿಂದ ಜನರಿಗೆ ಯಾವ ಸಂದೇಶ ಹೋಗುತ್ತದೆ ಎಂಬುದನ್ನು ಆ ಪಕ್ಷದ ಮುಖಂಡರು ಯೋಚಿಸಬೇಕು. ಈಗಾಗಲೇ ತಪ್ಪು ನಡೆ, ನಿರ್ಧಾರಗಳಿಂದ ಚುನಾವಣೆಯಲ್ಲಿ ಸೋಲು ಕಂಡಿರುವ ಬಿಜೆಪಿ, ಇನ್ನಾದರೂ ವಿರೋಧಪಕ್ಷದ ನಾಯಕನ ಸ್ಥಾನಕ್ಕೆ ಸೂಕ್ತ, ಸಮರ್ಥ ನಾಯಕನನ್ನು ಆಯ್ಕೆ ಮಾಡಬೇಕು. ಇಲ್ಲವಾದಲ್ಲಿ ಜನರಿಗೆ ಆ ಪಕ್ಷದ ಬಗ್ಗೆ ಇರುವ ಅಭಿಪ್ರಾಯಗಳು ಮತ್ತಷ್ಟು ಜಟಿಲಗೊಳ್ಳುತ್ತವೆ.

**ಪ್ರಸಾದ್ ಜಿ.ಎಂ.,** ಮೈಸೂರು

Printed and published by B A Ravi on behalf of The Printers (Mysore ) Private Ltd., at The Printers (Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

# ವೈಯಕ್ತಿಕ ಕಾನೂನುಗಳಿಗೆ ವಿಶೇಷ ವಿವಾಹ ಕಾಯ್ದೆ ಪರ್ಯಾಯವೇ?

ಪ್ರಜಾವಾಣಿ ವಾರ್ತೆ

ದೇಶದ ಎಲ್ಲಾ ಜನರಿಗೆ, ಅಂದರೆ ಎಲ್ಲಾ ಜಾತಿಯ ಮತ್ತು ಧರ್ಮದ ಜನರಿಗೆ ಏಕಪ್ರಕಾರವಾಗಿ ಅನ್ವಯವಾಗುವ ಕಾನೂನಿನ ಅವಶ್ಯಕತೆ ಇದೆ ಎಂದೇ ಏಕರೂಪ ನಾಗರಿಕ ಸಂಹಿತೆ ಜಾರಿಗೆ ಆಗ್ರಹಿಸಲಾಗುತ್ತಿದೆ. ಏಕರೂಪ ನಾಗರಿಕ ಸಂಹಿತೆಯ ವ್ಯಾಪ್ತಿಯು ವಿವಾಹ, ಆಸ್ತಿ ಮತ್ತು ಉತ್ತರಾಧಿಕಾರದ ಹಕ್ಕು, ಪಾಲಕತ್ವವನ್ನು ಒಳಗೊಳ್ಳುತ್ತದೆ. ಈ ವಿಷಯಗಳನ್ನು ಬಿಟ್ಟರೆ ಬೇರೆ ವಿಷಯಗಳಿಗೆ ಸಂಬಂಧಿಸಿದ ಕಾನೂನುಗಳು ದೇಶದ ಎಲ್ಲಾ ನಾಗರಿಕರಿಗೆ (ಈಶಾನ್ಯ ಭಾರತದ ರಾಜ್ಯಗಳ ಸ್ವಾಯತ್ತ ಜಿಲ್ಲೆಗಳಿಗೆ ಅನ್ವಯವಾಗುವುದಿಲ್ಲ) ಏಕಪ್ರಕಾರವಾಗಿ ಅನ್ವಯವಾಗುತ್ತವೆ. ವಿವಾಹ, ಆಸ್ತಿ ಮತ್ತು ಉತ್ತರಾಧಿಕಾರಕ್ಕೆ ಸಂಬಂಧಿಸಿದಂತೆ ದೇಶದಲ್ಲಿ ಹಲವು ವೈಯಕ್ತಿಕ ಕಾನೂನುಗಳು ಇವೆ. ಆದರೆ, ಈ ಎಲ್ಲಾ ವೈಯಕ್ತಿಕ ಕಾನೂನುಗಳಿಗೆ ಸಮಾನಾಂತರವಾಗಿ ದೇಶದ ಎಲ್ಲಾ ಜನರಿಗೂ ಏಕಪ್ರಕಾರವಾಗಿ ಅನ್ವಯವಾಗುವ ವೈವಾಹಿಕ ಕಾನೂನುಗಳು ದೇಶದಲ್ಲಿ ಈಗಾಗಲೇ ಜಾರಿಯಲ್ಲಿವೆ.

ದೇಶದಲ್ಲಿ ಈಗಾಗಲೇ ಜಾರಿಯಲ್ಲಿರುವ ವಿಶೇಷ ವಿವಾಹ ಕಾಯ್ದೆ–1956 ದೇಶದ ಎಲ್ಲಾ ಜನರಿಗೆ ಏಕ ಪ್ರಕಾರವಾಗಿ ಅನ್ವಯವಾಗುತ್ತದೆ. ದೇಶದ ಜನರು ಜಾತಿ ಮತ್ತು ಧರ್ಮದ ಪರಿಗಣನೆ ಇಲ್ಲದೆಯೇ ವಿಶೇಷ ವಿವಾಹ ಕಾಯ್ದೆಯ ಅಡಿಯಲ್ಲಿ ಮದುವೆಯಾಗಬಹುದು. ಆಗ ಅವರು ಈ ಕಾಯ್ದೆಗೆ ಬದ್ಧವಾಗಿರಬೇಕಾಗುತ್ತದೆ ಮತ್ತು ಕಾಯ್ದೆಯು ಅವರ ಹಕ್ಕುಗಳನ್ನು ರಕ್ಷಿಸುತ್ತದೆ.

‘ಭಾರತದಲ್ಲಿ ಈ ಸಂದರ್ಭಕ್ಕೆ ಏಕರೂಪ ನಾಗರಿಕ ಸಂಹಿತೆ ಎಂಬುದು ಸ್ವಯಂಪ್ರೇರಿತ ಸ್ವರೂಪದ್ದಾಗಿರಬೇಕು’ ಎಂದು ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಭೆಯ ಚರ್ಚೆಯ ವೇಳೆ ಹೇಳಿದ್ದರು. 1948ರ ಡಿಸೆಂಬರ್ ಮೂರರಂದು ನಡೆದಿದ್ದ ಚರ್ಚೆಯ ವೇಳೆ ಅಂಬೇಡ್ಕರ್ ಅವರು, ‘ಆರಂಭದಲ್ಲಿ, ಏಕರೂಪ ನಾಗರಿಕ ಸಂಹಿತೆಗೆ ನಾವು ಬದ್ಧರಾಗಿರುತ್ತೇವೆ ಎಂದು ಸ್ವಯಂಪ್ರೇರಿತವಾಗಿ ಘೋಷಿಸಿಕೊಳ್ಳುವವರಿಗೆ ಮಾತ್ರ ಅನ್ವಯವಾಗುವಂತೆ ಸಂಸತ್ತು ಅವಕಾಶ ಮಾಡಿಕೊಡಬೇಕು’ ಎಂದು ಅವರು ಹೇಳಿದ್ದರು. ಈಗ ಜಾರಿಯಲ್ಲಿರುವ ವಿಶೇಷ ವಿವಾಹ ಕಾಯ್ದೆಯು ಅನ್ವಯದ ವಿಚಾರದಲ್ಲಿ ಸ್ವಯಂಪ್ರೇರಿತ ಸ್ವರೂಪದಲ್ಲಿಯೇ ಇದೆ. ಅಂದರೆ, ವಿವಾಹದ ವೇಳೆ ಈ ಕಾಯ್ದೆಯನ್ನು ಸ್ವಯಂಪ್ರೇರಿತವಾಗಿ ಆಯ್ಕೆ ಮಾಡಿಕೊಳ್ಳುವವರಿಗಷ್ಟೇ ಇದು ಅನ್ವಯವಾಗುತ್ತದೆ. ಕೇಂದ್ರ ಸರ್ಕಾರದ ಸೂಚನೆಯ ಮೇರೆಗೆ 2018ರಲ್ಲಿ ಈ ಬಗ್ಗೆ ಸಿದ್ಧಪಡಿಸಿದ ವರದಿಯಲ್ಲಿ ಕಾನೂನು ಆಯೋಗವೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.

**ಏಕರೂಪ ನಾಗರಿಕ ಸಂಹಿತೆ**

ಏಕರೂಪ ನಾಗರಿಕ ಸಂಹಿತೆಯ ಅನುಪಸ್ಥಿತಿಯಲ್ಲಿ ವಿಶೇಷ ವಿವಾಹ ಕಾಯ್ದೆಯು ಆ ಸ್ಥಾನವನ್ನು ತುಂಬಬಲ್ಲದು ಎಂಬ ಅಭಿಪ್ರಾಯವು ಹಲವು ಅಧ್ಯಯನ ವರದಿಗಳಲ್ಲಿ ಉಲ್ಲೇಖಿಸಲಾಗಿದೆ. ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಲಾ ಮ್ಯಾನೇಜ್‌ಮೆಂಟ್ ಆ್ಯಂಡ್ ಹ್ಯುಮಾನಿಟೀಸ್ ನಿಯತಕಾಲಿಕದ 2021ರ ಮೂರನೇ ಸಂಚಿಕೆಯಲ್ಲಿ ‘ಸ್ಪೆಷಲ್ ಮ್ಯಾರೇಜ್ ಆ್ಯಕ್ಟ್ ಇನ್ ಆಬ್ಸೆನ್ಸ್ ಆಫ್ ಯುನಿಫಾರ್ಮ್ ಸಿವಿಲ್ ಕೋಡ್’ ಎಂಬ ಅಧ್ಯಯನ ವರದಿ ಪ್ರಕಟವಾಗಿದೆ. ‘ಸಿ.ಸಿ.ಬಿಸ್ವಾಸ್ ಅವರು ಲೋಕಸಭೆಯಲ್ಲಿ ವಿಶೇಷ ವಿವಾಹ ಮಸೂದೆಯನ್ನು ಮಂಡಿಸುವಾಗ, ‘ಈ ಮಸೂದೆಯು ದೇಶದ ಎಲ್ಲಾ ಜನರಿಗೆ ವಿವಾಹಕ್ಕೆ ಸಂಬಂಧಿಸಿದಂತೆ ಏಕಪ್ರಕಾರವಾಗಿ ಅನ್ವಯವಾಗುವ, ಏಕರೂಪದ ಕಾನೂನಿಗೆ ಅಡಿಪಾಯ ಹಾಕಲಿದೆ ಎಂದು ಹೇಳಿದ್ದರು. ಈ ಪ್ರಕಾರವಾಗಿ ವಿವಾಹಕ್ಕೆ ಸಂಬಂಧಿಸಿದಂತೆ ದೇಶದಲ್ಲಿ ಜಾರಿಯಲ್ಲಿರುವ ವೈಯಕ್ತಿಕ ಕಾನೂನುಗಳಿಗೆ ವಿಶೇಷ ವಿವಾಹ ಕಾಯ್ದೆಯು ಪರ್ಯಾಯವಾಗಲಿದೆ’ ಎಂದು ವರದಿಯಲ್ಲಿ ಹೇಳಲಾಗಿದೆ.

ಧರ್ಮ, ಜಾತಿ ಮತ್ತು ಲಿಂಗ ಭೇದವಿಲ್ಲದೆ ವಿಶೇಷ ವಿವಾಹ ಕಾಯ್ದೆಯು ದೇಶದ ಎಲ್ಲ ನಾಗರಿಕರನ್ನೂ ಒಳಗೊಳ್ಳುತ್ತದೆ ಎಂಬುದರತ್ತ ಸುಪ್ರೀಂ ಕೋರ್ಟ್ ಇತ್ತೀಚೆಗೆ ಬೆಳಕು ಚೆಲ್ಲಿತ್ತು. ಸಲಿಂಗ ವಿವಾಹವನ್ನು ಕಾನೂನುಬದ್ಧಗೊಳಿಸುವುದರ ಸಂಬಂಧ ಸುಪ್ರೀಂ ಕೋರ್ಟ್‌ನಲ್ಲಿ ನಡೆಯುತ್ತಿರುವ ಅರ್ಜಿಯ ವಿಚಾರಣೆ ವೇಳೆ ಕೇಂದ್ರ ಸರ್ಕಾರವು ನಮ್ಮ ಸಂಸ್ಕೃತಿಗಳಲ್ಲಿ ಮತ್ತು ವಿವಾಹಕ್ಕೆ ಸಂಬಂಧಿಸಿದ ವೈಯಕ್ತಿಕ ಕಾನೂನುಗಳಲ್ಲಿ ಇಂತಹ ವಿವಾಹಕ್ಕೆ ಅವಕಾಶವಿಲ್ಲ ಎಂದು ಹೇಳಿತ್ತು. ಅದಕ್ಕೆ ಪ್ರತಿಕ್ರಿಯೆ ನೀಡಿದ್ದ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರು, ಸಲಿಂಗ ವಿವಾಹದ ವಿಚಾರವನ್ನು ನಾವು ವೈಯಕ್ತಿಕ ಕಾನೂನುಗಳ ಅಡಿಯಲ್ಲಿ ಪರಿಶೀಲಿಸುವುದಿಲ್ಲ. ಬದಲಿಗೆ ವಿಶೇಷ ವಿವಾಹ ಕಾಯ್ದೆಯ ಅಡಿಯಲ್ಲಿ ಈ ಅರ್ಜಿಯನ್ನು ಪರಿಶೀಲಿಸುತ್ತೇವೆ ಎಂದು ಹೇಳಿದ್ದರು. ಇದು ವಿಶೇಷ ವಿವಾಹ ಕಾಯ್ದೆಯ ಸಾರ್ವತ್ರಿಕ ಸ್ವರೂಪವನ್ನು ವಿವರಿಸುತ್ತದೆ.

## ವಿಶೇಷ ವಿವಾಹ ಕಾಯ್ದೆಯಲ್ಲಿ ಏಕರೂಪತೆ

ಹಿಂದೂ ವಿವಾಹ ಕಾಯ್ದೆ, ಮುಸ್ಲಿಂ ವಿವಾಹ ಕಾಯ್ದೆ, ಭಾರತೀಯ ಕ್ರೈಸ್ತ ವಿವಾಹ ಕಾಯ್ದೆ, ಪಾರ್ಸಿ ವಿವಾಹ ಕಾಯ್ದೆಗಳಲ್ಲಿ ಇರುವ ಸಾಂಸ್ಕೃತಿಕ ಭಿನ್ನತೆಗಳು ವಿಶೇಷ ವಿವಾಹ ಕಾಯ್ದೆಯಲ್ಲಿ ಅನ್ವಯವಾಗುವುದಿಲ್ಲ

### ಮದುವೆಯ ವಯಸ್ಸು

ಮುಸ್ಲಿಂ ವಿವಾಹ ಕಾಯ್ದೆಯ ಪ್ರಕಾರ ಬಾಲಕನಿಗೆ 15 ವರ್ಷ ತುಂಬಿದಾಗ ಆತ ವಿವಾಹವಾಗಲು ಅರ್ಹನಾಗುತ್ತಾನೆ. ಬಾಲಕಿಯು ಋತುಮತಿಯಾದಾಗ ವಿವಾಹವಾಗಲು ಅರ್ಹತೆ ಪಡೆಯುತ್ತಾಳೆ. ಹಿಂದೂ ವಿವಾಹ ಕಾಯ್ದೆಯ ಪ್ರಕಾರ ಮದುವೆಯಾಗಲು ಯುವಕನಿಗೆ ಕನಿಷ್ಠ 21 ವರ್ಷ ವಯಸ್ಸಾಗಿರಬೇಕು ಮತ್ತು ಯುವತಿಗೆ ಕನಿಷ್ಠ 18 ವರ್ಷ ವಯಸ್ಸಾಗಿರಬೇಕು. ಭಾರತೀಯ ಕ್ರೈಸ್ತ ವಿವಾಹ ಕಾಯ್ದೆಯ ಪ್ರಕಾರ ಯುವಕ ಮತ್ತು ಯುವತಿಯ ವಿವಾಹದ ಕನಿಷ್ಠ ವಯಸ್ಸು 21 ವರ್ಷ. 21 ವರ್ಷಕ್ಕಿಂತ ಕಡಿಮೆ ವಯಸ್ಸಿನವರನ್ನು ಈ ಕಾಯ್ದೆಯು ‘ಅಪ್ರಾಪ್ತ ವಯಸ್ಸಿನವರು’ ಎಂದೇ ಪರಿಗಣಿಸುತ್ತದೆ. ಪಾರ್ಸಿ ವಿವಾಹ ಕಾಯ್ದೆಯಲ್ಲಿ ಗಂಡಿನ ವಯಸ್ಸು ಕನಿಷ್ಠ 21 ವರ್ಷ ಮತ್ತು ಹೆಣ್ಣಿನ ವಯಸ್ಸು ಕನಿಷ್ಠ 18 ವರ್ಷವಾಗಿರಬೇಕು ಎಂದು ಹೇಳಲಾಗಿದೆ. ಕೆಲವು ಕಾಯ್ದೆಗಳಲ್ಲಿ ಹೆಣ್ಣು ಅಥವಾ ಗಂಡಿಗೆ ವಿವಾಹದ ವಯಸ್ಸು ಆಗಿಲ್ಲದಿದ್ದರೂ ಹಿರಿಯರು, ಜನಪ್ರತಿನಿಧಿಯೊಬ್ಬರ ಸಮ್ಮತಿಯ ಮೇರೆಗೆ ವಿವಾಹವಾಗಲು ಅವಕಾಶವಿದೆ. ಹೀಗೆ ಈ ಎಲ್ಲಾ ಕಾಯ್ದೆಗಳಲ್ಲಿ ವಿವಾಹದ ವಯಸ್ಸಿಗೆ ಸಂಬಂಧಿಸಿದಂತೆ ಸಾಕಷ್ಟು ಭಿನ್ನತೆಗಳು ಇದೆ.

ಆದರೆ, ವಿಶೇಷ ವಿವಾಹ ಕಾಯ್ದೆಯು ಈ ಯಾವುದೇ ಭಿನ್ನತೆಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಈ ಕಾಯ್ದೆಯ ಪ್ರಕಾರ ಮದುವೆಯಾಗಲು ಗಂಡಿಗೆ ಕನಿಷ್ಠ 21 ವರ್ಷ ಮತ್ತು ಹೆಣ್ಣಿಗೆ ಕನಿಷ್ಠ 18 ವರ್ಷ ವಯಸ್ಸಾಗಿರಬೇಕು. ಇದು ಅವರು ಯಾವುದೇ ಧರ್ಮ ಮತ್ತು ಜಾತಿಗೆ ಸೇರಿದವರಾಗಿದ್ದರೂ ಅನ್ವಯವಾಗುತ್ತದೆ. ವಿವಾಹದ ಅರ್ಹತೆ ಇಲ್ಲದಿದ್ದರೂ ಮದುವೆಯಾಗಿದ್ದರೆ, ಈ ಕಾಯ್ದೆಯ ಅಡಿಯಲ್ಲಿ ಎಲ್ಲಾ ಧರ್ಮ ಮತ್ತು ಜಾತಿಯ ನಾಗರಿಕರಿಗೆ ಏಕಪ್ರಕಾರವಾಗಿ ಶಿಕ್ಷೆಯಾಗಲಿದೆ.

### ಬಹುಪತ್ನಿತ್ವ

ಹಿಂದೂ ವಿವಾಹ ಕಾಯ್ದೆಯಲ್ಲಿ ದ್ವಿಪತ್ನಿತ್ವ ಮತ್ತು ಬಹುಪತ್ನಿತ್ವಕ್ಕೆ ಅವಕಾಶವಿಲ್ಲ. ಭಾರತೀಯ ಕ್ರೈಸ್ತ ವಿವಾಹ ಕಾಯ್ದೆಯಲ್ಲೂ ದ್ವಿಪತ್ನಿತ್ವಕ್ಕೆ ಅವಕಾಶವಿಲ್ಲ. ಪಾರ್ಸಿ ವಿವಾಹ ಕಾಯ್ದೆಗೂ ಇದೇ ಷರತ್ತು ಅನ್ವಯವಾಗುತ್ತದೆ. ಯಾವುದೇ ವ್ಯಕ್ತಿಯು ಕಾನೂನುಬದ್ಧವಾಗಿ ವಿಚ್ಛೇದನ ಪಡೆಯದೇ ಬೇರೊಂದು ವಿವಾಹವಾಗುವಂತಿಲ್ಲ. ದ್ವಿಪತಿತ್ವ ಮತ್ತು ಬಹುಪತಿತ್ವಕ್ಕೂ ಇದೇ ನಿರ್ಬಂಧಗಳು ಅನ್ವಯವಾಗುತ್ತವೆ. ಆದರೆ, ಮುಸ್ಲಿಂ ವಿವಾಹ ಕಾಯ್ದೆಯಲ್ಲಿ ದ್ವಿಪತ್ನಿತ್ವ ಮತ್ತು ಬಹುಪತ್ನಿತ್ವಕ್ಕೆ ಅವಕಾಶವಿದೆ. ಈಶಾನ್ಯ ಭಾರತದ ಹಲವು ಬುಡಕಟ್ಟು ಸಮುದಾಯಗಳಲ್ಲಿ ಬಹುಪತ್ನಿತ್ವಕ್ಕೆ ಅವಕಾಶವಿದೆ. ಉತ್ತರಾಖಂಡದ ಜೌನ್ಸಾರ್–ಬವಾಡ್ ಬುಡಕಟ್ಟು ಸಮುದಾಯದಲ್ಲಿ ಬಹುಪತಿತ್ವಕ್ಕೆ ಅವಕಾಶವಿದೆ. ಹೀಗೆ ಒಬ್ಬರಿಗಿಂತ ಹೆಚ್ಚು ವೈವಾಹಿಕ ಸಂಗಾತಿಯನ್ನು ಹೊಂದುವುದಕ್ಕೆ ಈ ಎಲ್ಲಾ ವೈಯಕ್ತಿಕ ಕಾನೂನುಗಳು ಭಿನ್ನ ಸ್ವರೂಪದ ಷರತ್ತುಗಳನ್ನು ವಿಧಿಸುತ್ತವೆ.

ಆದರೆ, ವಿಶೇಷ ವಿವಾಹ ಕಾಯ್ದೆಯಲ್ಲಿ ದ್ವಿಪತ್ನಿತ್ವ ಮತ್ತು ದ್ವಿಪತಿತ್ವ, ಬಹುಪತ್ನಿತ್ವ ಮತ್ತು ಬಹುಪತಿತ್ವಕ್ಕೆ ಅವಕಾಶವಿಲ್ಲ. ಯಾವುದೇ ವ್ಯಕ್ತಿ ಹೆಣ್ಣಾಗಲೀ ಅಥವಾ ಗಂಡಾಗಲಿ ಈ ಕಾಯ್ದೆಯ ಅಡಿಯಲ್ಲಿ ಮದುವೆಯಾಗುವಾಗ, ‘ಅವರು ಈಗಾಗಲೇ ಬೇರೊಂದು ವೈವಾಹಿಕ ಸಂಬಂಧದಲ್ಲಿ ಇರಬಾರದು’ ಎಂದು ಕಾಯ್ದೆ ಹೇಳುತ್ತದೆ. ಮರುಮದುವೆಯ ಸಂದರ್ಭದಲ್ಲಿ ಕಾನೂನುಬದ್ಧವಾಗಿ ವಿಚ್ಛೇದನ ಪಡೆದಿರಬೇಕು ಅಥವಾ ವಿದುರ/ವಿಧವೆಯಾಗಿರಬೇಕು ಎಂದು ಕಾಯ್ದೆಯು ಹೇಳುತ್ತದೆ. ಎಲ್ಲಾ ಧರ್ಮ ಮತ್ತು ಜಾತಿಯ ಜನರಿಗೆ ಈ ಷರತ್ತುಗಳು ಏಕಪ್ರಕಾರವಾಗಿ ಅನ್ವಯವಾಗುತ್ತವೆ. ಇದನ್ನು ಉಲ್ಲಂಘಿಸುವವರಿಗೆ ನೀಡಲಾಗುವ ಶಿಕ್ಷೆಯೂ ಏಕಪ್ರಕಾರವಾಗಿಯೇ ಅನ್ವಯವಾಗುತ್ತದೆ.

### ವಿಚ್ಛೇದನ

ಹಿಂದೂ ವಿವಾಹ ಕಾಯ್ದೆ, ಭಾರತೀಯ ಕ್ರೈಸ್ತ ವಿವಾಹ ಕಾಯ್ದೆ, ಪಾರ್ಸಿ ವಿವಾಹ ಕಾಯ್ದೆ ಮತ್ತು ಮುಸ್ಲಿಂ ವಿವಾಹ ಕಾಯ್ದೆಗಳು ವಿಚ್ಛೇದನವನ್ನು ಭಿನ್ನವಾಗಿ ಪರಿಗಣಿಸುತ್ತವೆ. ವಿಚ್ಛೇದನ ಪಡೆಯಲು ಅರ್ಹವಾದ ಕಾರಣಗಳ ಬಗ್ಗೆ ಈ ಎಲ್ಲಾ ಕಾಯ್ದೆಗಳದ್ದೂ ಭಿನ್ನ ನಿಲುವು. ಮಾನಸಿಕ ಸ್ವಾಸ್ಥ್ಯ ಇಲ್ಲದಿರುವುದು, ಹೊಂದಾಣಿಕೆ ಸಮಸ್ಯೆ, ಗಂಭೀರ ಆರೋಗ್ಯದ ಸಮಸ್ಯೆ, ವಿವಾಹಕ್ಕೆ ಹೊರತಾದ ಸಂಬಂಧ ಮೊದಲಾದ ವಿಚಾರಗಳು ವಿಚ್ಛೇದನಕ್ಕೆ ಅರ್ಹವಾದ ಕಾರಣಗಳು ಎಂದು ಈ ಕಾಯ್ದೆಗಳು ಹೇಳುತ್ತವೆ. ಆದರೆ ಈ ಎಲ್ಲಾ ಕಾಯ್ದೆಗಳು, ಈ ಕಾರಣಗಳಿಗೆ ನೀಡುವ ತೂಕದಲ್ಲಿ ವ್ಯತ್ಯಾಸವಿದೆ. ಹೀಗಾಗಿ ಒಂದು ಧರ್ಮದವರು ವಿಚ್ಛೇದನ ಪಡೆಯಲು ಅರ್ಹವಾದ ಕಾರಣವು ಬೇರೊಂದು ಧರ್ಮದಲ್ಲಿ ವಿಚ್ಛೇದನಕ್ಕೆ ಅರ್ಹತೆ ಅಲ್ಲದೇ ಇರುವ ಸ್ಥಿತಿ ಇದೆ.

ಆದರೆ, ವಿಶೇಷ ವಿವಾಹ ಕಾಯ್ದೆಯು ಈ ಭಿನ್ನತೆಯನ್ನು ಹೋಗಲಾಡಿಸುತ್ತದೆ. ಈ ಕಾಯ್ದೆಯ ಅಡಿಯಲ್ಲಿ ವಿವಾಹವಾದ ದಂಪತಿಯು ವಿಚ್ಛೇದನ ಪಡೆಯಲು ನೀಡಲಾಗಿರುವ ಕಾರಣಗಳು ಎಲ್ಲಾ ಧರ್ಮ ಮತ್ತು ಜಾತಿಯ ನಾಗರಿಕರಿಗೆ ಏಕಪ್ರಕಾರವಾಗಿ ಅನ್ವಯವಾಗುತ್ತವೆ. ವಿಚ್ಛೇದನದ ವಿಚಾರದಲ್ಲೂ ಈ ಕಾಯ್ದೆಯು ದೇಶದ ಎಲ್ಲಾ ನಾಗರಿಕರನ್ನು ಸಮಾನವಾಗಿ ಕಾಣುತ್ತದೆ.

ಆಧಾರ: ಸಂವಿಧಾನ ಸಭೆಯ ಚರ್ಚೆಗಳು: ಸಂಪುಟ ಮೂರು, ಕಾನೂನು ಆಯೋಗದ ‘ಕೌಟುಂಬಿಕ ಕಾನೂನುಗಳ ಸುಧಾರಣೆ’ ಸಮಾಲೋಚನಾ ವರದಿ, ಹಿಂದೂ ವಿವಾಹ ಕಾಯ್ದೆ, ಭಾರತೀಯ ಕ್ರೈಸ್ತ ವಿವಾಹ ಕಾಯ್ದೆ, ಮುಸ್ಲಿಂ ವಿವಾಹ ಕಾಯ್ದೆ, ಪಾರ್ಸಿ ವಿವಾಹ ಕಾಯ್ದೆ, ಪಿಟಿಐ

## ಸಿನಿ ಬಿಟ್ಸ್

### ಇದೋ ಬಂತು ‘ಸಿಂಗಲ್ ಸೇವಂತಿ’

**ರಾಘವೇಂದ್ರ ರಾಜ್‌ಕುಮಾರ್**, ಶ್ರುತಿ ಮುಖ್ಯ-ಭೂಮಿಕೆಯಲ್ಲಿರುವ ‘13’ ಚಿತ್ರದ ‘ಸಿಂಗಲ್ ಸೇವಂತಿ’ ಎಂಬ ಐಟಂ ಸಾಂಗ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಈ ಹಿಂದೆ ‘ಪಲ್ಲಕ್ಕಿ’ ಸಿನಿಮಾ ನಿರ್ದೇಶನ ಮಾಡಿದ್ದ ಕೆ.ನರೇಂದ್ರ ಬಾಬು ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್–ಕಟ್ ಹೇಳಿದ್ದಾರೆ.

‘ಈ ಚಿತ್ರದ ಕಥೆ, ಶೀರ್ಷಿಕೆ ನನಗೆ ತುಂಬಾ ಖುಷಿ ಕೊಟ್ಟಿದೆ. ಕುತೂಹಲ ಹೊಂದಿರುವ ಚಿತ್ರವಾಗಿದ್ದು, ಚಿತ್ರೀಕರಣದ ಅನುಭವ ಭಿನ್ನವಾಗಿತ್ತು. 25 ವರ್ಷಗಳ ನಂತರ ಶ್ರುತಿ ಅವರ ಜೊತೆ ನಟಿಸಿದ್ದೇನೆ’ ಎಂದು ರಾಘವೇಂದ್ರ ರಾಜ್‌ಕುಮಾರ್ ಹೇಳಿದರು.

‘ಭಾವೈಕ್ಯದ ಸಾಮಾಜಿಕ ಸಂದೇಶವಿರುವ ಕಥೆ. ಮನರಂಜನೆಯ ಜೊತೆಗೆ ಸಸ್ಪೆನ್ಸ್, ಥ್ರಿಲ್ಲರ್ ಅಂಶಗಳಿವೆ. ರಾಘವೇಂದ್ರ ರಾಜ್‌ಕುಮಾರ್ ಅವರು ಮೋಹನ್ ಎಂಬ ಪಾತ್ರ ಮಾಡಿದ್ದು, ಶ್ರುತಿ ಮುಸ್ಲಿಂ ಮಹಿಳೆಯಾಗಿ ಕಾಣಿಸಿಕೊಂಡಿದ್ದಾರೆ. ಐಟಂ ಸಾಂಗ್‌ಗೆ ರಾಘವೇಂದ್ರ ರಾಜ್‌ಕುಮಾರ್ ಕೂಡ ಹೆಜ್ಜೆ ಹಾಕಿರುವುದು ವಿಶೇಷ’ ಎಂದರು ಕೆ. ನರೇಂದ್ರ ಬಾಬು.

ಶ್ರುತಿ, ರಾಘವೇಂದ್ರ ರಾಜ್‌ಕುಮಾರ್

### ‘ದೇವರ ಕನಸಿಗೆ’ ಅಶ್ವಿನಿ ಪುನೀತ್ ಸಾಥ್

**ಈಗಾಗಲೇ** ಹಲವು ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶನವಾಗಿರುವ ಮಕ್ಕಳ ಚಿತ್ರ ‘ದೇವರ ಕನಸು’ ಜುಲೈ 21ರಂದು ತೆರೆಗೆ ಬರಲಿದೆ. ಸುರೇಶ್ ಲಕ್ಕೂರ್ ನಿರ್ದೇಶಿಸಿರುವ ಚಿತ್ರದ ಟ್ರೇಲರ್ ಅನ್ನು ಇತ್ತೀಚೆಗಷ್ಟೇ ಅಶ್ವಿನಿ ಪುನೀತ್ ರಾಜಕುಮಾರ್ ಬಿಡುಗಡೆಗೊಳಿಸಿದರು. ಅಶ್ವಿನಿ ಪುನೀತ್ ಒಡೆತನದ ಪಿ.ಆರ್.ಕೆ ಸಂಸ್ಥೆ ಚಿತ್ರದ ಆಡಿಯೋ ಹಕ್ಕುಗಳನ್ನು ಪಡೆದುಕೊಂಡಿದೆ. ಜಯ್ ಕುಮಾರ್, ಶೇಖರ್ ಚಿತ್ರದ ನಿರ್ಮಾಪಕರು.

‘ನ್ಯೂಯಾರ್ಕ್ ಫಿಲ್ಮ್ ಅಕಾಡೆಮಿಯಲ್ಲಿ ಅಧ್ಯಯನ ಮಾಡಿದ್ದೇನೆ. ‘ದೇವ’ ಈ ಚಿತ್ರದ ಮುಖ್ಯ ಪಾತ್ರಧಾರಿಯ ಹೆಸರು. ಈ ಪಾತ್ರದಲ್ಲಿ ಮಾಸ್ಟರ್ ದೀಪಕ್ ಅಭಿನಯಿಸಿದ್ದಾರೆ. ಈ ಹುಡುಗ ಕಾಣುವ ಕನಸು ಈಡೇರುತ್ತದೆಯೋ ಅಥವಾ ಇಲ್ಲವೋ? ಎಂಬುದು ಕಥಾಹಂದರ’ ಎಂದರು ಸುರೇಶ್ ಲಕ್ಕೂರ್.

ದೀಪಕ್, ಅಮೂಲ್ಯ, ಅರುಷಿ ವೇದಿಕ ಹಾಗೂ ಮಾಕ್ ಮಣಿ ಚಿತ್ರದ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಸ್ಯಾಂಡಿ ಸಂಗೀತ ನಿರ್ದೇಶನ ಚಿತ್ರಕ್ಕಿದೆ.

ಚಿತ್ರತಂಡದೊಂದಿಗೆ ಅಶ್ವಿನಿ ಪುನೀತ್ ರಾಜ್‌ಕುಮಾರ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ಕೊಟ್ಟ ಹಣವನ್ನು ವಾಪಸ್ ಕೇಳಿದ್ದಕ್ಕೆ ಮುಸ್ಲಿಂ ವ್ಯಕ್ತಿಗಳಿಂದ ಒಬ್ಬ ಜೈನ ಮುನಿಯನ್ನು ಬರ್ಬರವಾಗಿ ಹತ್ಯೆ ಮಾಡಿದ್ದಾರೆ...’ ಎಂಬ ವಿವರ ಇರುವ ಪೋಸ್ಟರ್ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ‘ಹುಸೇನ್ ಎನ್ನುವವರು ಜೈನ ಮುನಿಗಳ ಹತ್ಯೆ ಮಾಡಿದ್ದಾರೆ’ ಎಂದು ಕೆಲವರು ಟ್ವೀಟ್ ಮಾಡಿದ್ದಾರೆ. ‘ಕರ್ನಾಟಕದ ಕಾಂಗ್ರೆಸ್ ಸರ್ಕಾರವು ‘ಉಚಿತ’ಗಳನ್ನು ಜನರಿಗೆ ನೀಡುತ್ತಿದೆ. ಇದರ ಪರಿಣಾಮವೇ ಇದು’ ಎಂದು ಕೆಲವರು ಟ್ವೀಟ್ ಮಾಡಿದ್ದಾರೆ. ಆದರೆ, ಇದು ತಿರುಚಲಾದ ಸುದ್ದಿ.




‘ಆಶ್ರಮದಲ್ಲಿಯೇ ಕೆಲಸ ಮಾಡುತ್ತಿದ್ದ ನಾರಾಯಣ ಮಾಳಿ ಎಂಬವರು ಮುನಿಗಳ ಹತ್ಯೆ ಮಾಡಿದ್ದಾರೆ. ಹೆಣವನ್ನು ಸಾಗಿಸಲು ಹಸನ್ ದಲಾಯತ್ ಅವರಿಂದ ಸಹಾಯ ಪಡೆದುಕೊಂಡಿದ್ದಾರೆ. ಈ ಬಗ್ಗೆ ನಾರಾಯಣ ಮಾಳಿ ಅವರು ತನಿಖೆಯಲ್ಲಿ ತಪ್ಪೊಪ್ಪಿಕೊಂಡಿದ್ದಾರೆ’ ಎಂದು ಬೆಳಗಾವಿ ಎಸ್‌ಪಿ ಡಾ. ಸಂಜೀವ್ ಪಾಟೀಲ್ ಅವರು ಸ್ಪಷ್ಟನೆ ನೀಡಿದ್ದಾರೆ. ಈ ಬಗ್ಗೆ ದಿ ಹಿಂದೂ, ಡೆಕ್ಕನ್ ಕ್ರಾನಿಕಲ್‌ನಲ್ಲಿ ವರದಿಗಳು ಬಂದಿವೆ. ‘ಹತ್ಯೆಯು ಹಣಕಾಸಿನ ವ್ಯವಹಾರದ ಸಂಬಂಧ ನಡೆದಿದೆ ಎಂದು ಪ್ರಾಥಮಿಕ ತನಿಖೆಯಿಂದ ಗೊತ್ತಾಗುತ್ತಿದೆ’ ಎಂದು ತನಿಖಾಧಿಕಾರಿಗಳು ಹೇಳಿದ್ದಾರೆ ಎಂಬುದನ್ನು ನ್ಯೂಸ್‌ಚೆಕರ್ ಫ್ಯಾಕ್ಟ್‌ಚೆಕ್ ಮಾಡಿದೆ.

## ಗುಂಡಣ್ಣ




## ಬೆರಗಿನ ಬೆಳಕು

ಗುರುರಾಜ ಕರಜಗಿ

### ವ್ಯರ್ಥ ಬದುಕು-ಸೌದೆ

ಮನೆಯ ಮಾಳಿಗೆಗಲ್ಲ, ಮುಡಿಯ ಕೊಪ್ಪಿಗೆಗಲ್ಲ |
ಇನಿವಣ್ಣು ತನಿಯ ಕಾಳೆಂಬುದೇನಿಲ್ಲ ||
ಬಣಗು ಕುರಿಚಲು ಗಿಡದ ಬಾಳೇನು? ನೀನಂತು |
ಒಣಗಿದೊಡೆ ಸವುದೆ ಸರಿ – ಮಂಕುತಿಮ್ಮ || **924**

**ಪದ-ಅರ್ಥ:** ಮಾಳಿಗೆಗಲ್ಲ = ಮಾಳಿಗೆಗೆ + ಅಲ್ಲ, ಕೊಪ್ಪಿಗೆಯಲ್ಲ = ಕೊಪ್ಪಿಗೆಗೆ (ತುರುಬಿಗೆ) + ಅಲ್ಲ, ಇನಿವಣ್ಣು = ಸಿಹಿಯಾದ ಹಣ್ಣು, ತನಿಯ = ರಸತುಂಬಿದ, ಕಾಳೆಂಬುದೇನಲ್ಲ = ಕಾಳೆಂಬುದು + ಏನಿಲ್ಲ, ಬಣಗು = ಅಲ್ಪ, ಹೀನ, ನೀನಂತು = ನೀನು + ಅಂತು, ಸವುದೆ = ಸೌದೆ.

**ವಾಚ್ಯಾರ್ಥ:** ಮನುಷ್ಯನ ಬದುಕು ಯಾವುದಕ್ಕೆ ಪ್ರಯೋಜನ? ಮನೆಯ ಮಾಳಿಗೆಗೆ ಹಲಗೆಯಲ್ಲ, ತಲೆಯ ತುರುಬಿಗೆ ಹೂವಲ್ಲ, ರಸಪೂರಿತ ಹಣ್ಣಲ್ಲ, ರಸತುಂಬಿದ ಕಾಳಲ್ಲ. ಅಲ್ಪವಾದ ಕುರುಚಲು ಗಿಡದ ಬಾಳಿಗೇನು ಅರ್ಥ? ನೀನೂ ಹಾಗೆಯೇ. ಚೈತನ್ಯದ ಸತ್ವ ಅಡಗಿದೊಡೆ ಸೌದೆಯೆ.

**ವಿವರಣೆ:** ಕವಿ ಎಸ್ ಜಿ. ನರಸಿಂಹಾಚಾರ್ಯರು ಬರೆದ “ನೀನಾರಿಗಾದೆಯೋ ಎಲೆ ಮಾನವಾ” ಎಂಬ ಕವನ ಮನುಷ್ಯನ ಬದುಕನ್ನು ಗೋವಿನ ಜೀವನಕ್ಕೆ ಹೋಲಿಸಿ, ಈ ಮಾನವ ಜನ್ಮದಿಂದ ಏನು ಪ್ರಯೋಜನ? ಗೋವು ಮನುಷ್ಯನಿಗಿಂತ ಹೆಚ್ಚು ಪ್ರಯೋಜನಕಾರಿ ಎಂಬುದನ್ನು ತಿಳಿಸುವ ಪ್ರಯತ್ನ ಮಾಡುತ್ತದೆ. ಇದು ಎಲ್ಲ ಮನುಷ್ಯರ ಬಗ್ಗೆ ಬರೆದದ್ದಲ್ಲ. ಯಾರು ತಮ್ಮ ಬದುಕಿನ ಸಾರ್ಥಕತೆಯನ್ನು ಗುರುತಿಸಿಕೊಳ್ಳದೆ ಜಂಜಡಗಳಲ್ಲಿ ಕಳೆದು ಹೋಗಿ ಹೋಗಿಬಿಡುತ್ತಾರೋ ಅವರನ್ನು ಉದ್ದೇಶಿಸಿದ್ದು. ನಮ್ಮ ಸುತ್ತಮುತ್ತ ಕಣ್ಣಾಡಿಸಿದರೆ ಬಹಳಷ್ಟು ಜನರಿಗೆ ಜೀವನದ ಸಾರ್ಥಕತೆಯ ಚಿಂತೆ ಇದ್ದಂತೆ ತೋರುವುದಿಲ್ಲ. ಎರಡು ಹೊತ್ತಿನ ಊಟ, ರಾತ್ರಿಯ ನಿದ್ದೆ, ಅಂದಂದಿನ ದುಡಿತದ ಚಾಕರಿ, ಮನೆಮಂದಿಯ ಆರೈಕೆ, ಇವುಗಳಲ್ಲಿಯೇ ಜೀವನ ಕರಗಿ ಹೋಗುತ್ತದೆ. ಹೀಗೆ ಗಾಣದ ಎತ್ತಿನಂತೆ ಕಣ್ಣುಮುಚ್ಚಿಕೊಂಡು ತಿರುತಿರುಗಿ, ತುಳಿದ ದಾರಿಯನ್ನೇ ಮರಮರಳಿ ತುಳಿಯುವಂತೆ ಕಳೆದ ಜೀವನ ಒಂದು ಜೀವನವೆ? ಅಂಥ ಬದುಕಿನಿಂದ ಏನು ಪ್ರಯೋಜನ? ದೊಡ್ಡ ಮರದ ಹಲಗೆ ಮನೆಯ ಮಾಳಿಗೆಗೆ ಪ್ರಯೋಜನವಾಗುತ್ತದೆ. ಒಂದೇ ದಿನ ಬಾಳುವ ಹೂವು ಮುಡಿಗೆ ಅಲಂಕಾರವಾಗಿ ಸಂತೋಷ ನೀಡುತ್ತದೆ. ಸವಿಯಾದ ಹಣ್ಣು, ರಸತುಂಬಿದ ಕಾಳು ಜೀವಕ್ಕೆ ಸುಖ ನೀಡುತ್ತವೆ. ಆದರೆ ಅಲ್ಪವಾದ ಕುರುಚಲು ಗಿಡದಿಂದ ಏನು ಪ್ರಯೋಜನ? ಅದು ಎಲ್ಲಿಯೂ ಸಲ್ಲದು. ಜೀವನದ ಅರ್ಥವನ್ನು ತಿಳಿಯದ ಮನುಷ್ಯನ ಬದುಕೂ ಹಾಗೆಯೇ. ದೇಹಗಳಲ್ಲಿ ಜೀವನೆನಿಸುವ ಚೇತನಾಂಶ ದೇವನದೇ! ದೀಪ ಬಂಗಾರದ್ದಾಗಿರಲಿ, ಮಣ್ಣಿನದಾಗಿರಲಿ ಒಳಗಿನ ದೀಪ ಅವನದೇ. ಅದಕ್ಕೇ ಭಗವದ್ಗೀತೆ “ಮಮೈವಾಂಶೋ ಜೀವಲೋಕೇ ಜೀವಭೂತ ಸನಾತನ:” ಎನ್ನುತ್ತದೆ. ಎಲ್ಲ ಜೀವಿಗಳಲ್ಲಿಯ ಚೇತನಾಂಶ ಭಗವಂತನದೇ. ಆ ಚೇತನ ದೇಹದಿಂದ ಹೊರಟು ಹೋದರೆ ಉಳಿಯುವುದು ಸೌದೆಯೇ. ಅದಕ್ಕೆ ಸೌದೆಗಿರುವ ಪ್ರಯೋಜನವೂ ಇಲ್ಲ. ಕಗ್ಗ ಹೇಳುತ್ತದೆ, ಒಳಗಿನ ಸತ್ವ ಒಣಗಿದೊಡೆ ಅದೊಂದು ಸೌದೆಯೇ.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಜುಲೈ 11, 2023

**ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ:** ಆಷಾಢ ಕೃಷ್ಣ ನವಮಿ ಗಂ. 18-05 ನಕ್ಷತ್ರ: ಅಶ್ವಿನಿ ಗಂ. 19-05 ಯೋಗ: ಸುಕರ್ಮ ಗಂ. 10-52 ಕರಣ: ತೈತಿಲ ಗಂ. 06-21, ಮಿಥುನ ಮಾಸದ 26 ನೇ ದಿನ, ಮಳೆನಕ್ಷತ್ರ: ಪುನರ್ವಸು 2. ರಾಹುಕಾಲ : ಸಾಯಂಕಾಲ 03-00 - 04-30
ಸೂರ್ಯೋದಯ : 06-14 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 22 ಜುಲ್‌ಹಿಜಾ, ದಿನ ವಿಶೇಷ : ಖೇರ್ ಪೂಜಾ (ತ್ರಿಪುರ)
ಅದೃಷ್ಟ ಸಂಖ್ಯೆ : 3, 6

**ಮೇಷ:** ಕುಟುಂಬದವರ ಮಾತುಗಳಿಗೆ ಬೆಲೆ ಕೊಡುವುದು ಮತ್ತು ಎಲ್ಲರಲ್ಲೂ ಸಹನೆಯಿಂದ ವರ್ತಿಸುವುದನ್ನು ರೂಢಿಸಿಕೊಳ್ಳುವುದು ಉತ್ತಮ. ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾಗಲಿದೆ. ನೀಲಿ ಬಣ್ಣ ಶುಭ ತರಲಿದೆ.

**ವೃಷಭ:** ಕೆಲಸ ಕಾರ್ಯಗಳು ಕೈಗೂಡಲೆಂದು ದೇವರಲ್ಲಿ ಹರಕೆ ಹೊತ್ತಿರುವ ವಿಚಾರವನ್ನು ತೀರಿಸುವ ಬಗ್ಗೆ ಹೆಚ್ಚಿನ ಪ್ರಯತ್ನ ಇರಲಿ. ಯುವ ಕೃಷಿಕರು ಕೃಷಿ ಕ್ಷೇತ್ರದಲ್ಲಿ ಉತ್ತಮ ಸಾಧನೆ ತೋರುವಿರಿ.

**ಮಿಥುನ:** ಸಾಮಾಜಿಕ ಕ್ಷೇತ್ರದಲ್ಲಿ ಮನ್ನಣೆ ಹೆಚ್ಚಲಿದೆ. ದೈವಾನುಗ್ರಹದಿಂದ ಸಾಂಸಾರಿಕವಾಗಿ ಮತ್ತು ಆರ್ಥಿಕವಾಗಿಯೂ ಇಷ್ಟಾರ್ಥ ಸಿದ್ಧಿಸುವುದು. ಬಯಸಿದ ಕೆಲಸಗಳನ್ನು ತ್ವರಿತವಾಗಿ ಮಾಡಿ ಮುಗಿಸುತ್ತೀರಿ.

**ಕರ್ಕಾಟಕ:** ಕಾರ್ಯಕ್ಷೇತ್ರದಲ್ಲಿ ಹೆಚ್ಚಿನ ಒತ್ತಡ ತೋರಿಬಂದರೂ ಅಭಿವೃದ್ಧಿದಾಯಕವಾದ ಬೆಳವಣಿಗೆ ಹರ್ಷವನ್ನು ತರುವುದು. ಇಂದಿನಿಂದ ಮತ್ತೊಬ್ಬರ ಅವಲಂಬನೆ ಬೇಡವೆನಿಸುತ್ತದೆ. ದ್ವಿಚಕ್ರ ವಾಹನ ಕೊಳ್ಳುವ ಯೋಗವಿದೆ.

**ಸಿಂಹ:** ಸಹೋದ್ಯೋಗಿಗಳ ಸಹಕಾರದಿಂದ ಕೆಲಸ ಕಾರ್ಯಗಳಲ್ಲಿ ಜಯ ದೊರೆತು ಮನಸ್ಸು ಉಲ್ಲಾಸದಿಂದ ಇರುವುದು. ದಾಖಲೆ ಅಥವಾ ಒಪ್ಪಂದಗಳಿಗೆ ಎಚ್ಚರ ವಹಿಸಿ ಸಹಿ ಮಾಡಿರಿ. ಈ ವಿಚಾರದಲ್ಲಿ ಕಳವಳ ಬೇಡ.

**ಕನ್ಯಾ:** ವ್ಯಾಪಾರ ವ್ಯವಹಾರದಲ್ಲಿ ಲಾಭ, ನಷ್ಟ ಏನೇ ಆದರೂ ಅದನ್ನು ಮುಕ್ತವಾಗಿ ಸ್ವೀಕರಿಸುವ ಭಾವನೆ ಇರಲಿ. ರಬ್ಬರ್ ಮತ್ತು ಪ್ಲಾಸ್ಟಿಕ್ ವ್ಯಾಪಾರಗಳಿಂದ ಲಾಭವಿದೆ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಪ್ರಗತಿ ಕಾಣುವುದು.

**ತುಲಾ:** ತಾಂತ್ರಿಕ ಪರಿಣತರಿಗೆ ಉನ್ನತ ಸಂಸ್ಥೆಗಳಲ್ಲಿ ಉದ್ಯೋಗ ಸಿಗಲಿದೆ. ತಾಂತ್ರಿಕ ವಿದ್ಯಾಭ್ಯಾಸದಲ್ಲಿ ಉನ್ನತ ಯಶಸ್ಸು ದೊರೆತು ಆನಂದವಾಗುತ್ತದೆ. ವೈಯಕ್ತಿಕ ಜೀವನದ ಸಮಸ್ಯೆ ಬಗೆಹರಿದು ಮನಸ್ಸಿಗೆ ನೆಮ್ಮದಿಮೂಡಲಿದೆ.

**ವೃಶ್ಚಿಕ:** ಕೆಲಸದಲ್ಲಿ ಹೆಚ್ಚಿನ ಸ್ವಾತಂತ್ರ್ಯ ಸಿಕ್ಕಿ ಉತ್ತಮ ಚಟುವಟಿಕೆಗಳು ಇರುವುದು. ನಿಮ್ಮ ಅಭಿಪ್ರಾಯಗಳಿಗೆ ಮನ್ನಣೆ ಇರುವುದು. ನೂತನ ವ್ಯಾಪಾರಿಗಳು ವ್ಯಾಪಾರದಲ್ಲಿ ಪ್ರಬುದ್ಧತೆಯಿಂದ ವ್ಯವಹರಿಸಿ.

**ಧನು:** ಮುಖಂಡತ್ವದ ಸಾಮಾಜಿಕ ಕಾರ್ಯಕ್ಕೆ ಗ್ರಾಮಸ್ಥರಿಂದ ನಿರೀಕ್ಷೆಗೂ ಮೀರಿ ಸಹಾಯ ಸೌಹಾರ್ದಗಳು ದೊರೆಯುವುದು. ಷೇರು ವ್ಯವಹಾರಗಳಿಂದ ಹೆಚ್ಚಿನ ಲಾಭಾಂಶವನ್ನು ಪಡೆದುಕೊಳ್ಳುವಿರಿ.

**ಮಕರ:** ಕೆಲಸ ಮಾಡುತ್ತಿರುವ ಜಾಗದಲ್ಲಿ ತೊಂದರೆ ಕಾಣಿಸಿಕೊಳ್ಳಲಿದೆ, ಕೂಡಲೇ ಬಗೆಹರಿಸಿಕೊಳ್ಳಿರಿ. ಮಹತ್ವದ್ದೆನಿಸಿದ ಕೆಲಸಗಳ ಬಗ್ಗೆ ಸುದೀರ್ಘ ಸಮಾಲೋಚನೆ ನಡೆಸ ಬೇಕಾಗುವುದು.

**ಕುಂಭ:** ಕಲಾ ಸೇವೆ ಗುರುತಿಸಿ ಪ್ರಶಂಸೆ ಹಾಗೂ ಸನ್ಮಾನ ದೊರೆಯಲಿದೆ. ಕೆಲವರ ಸಂಬಂಧವು ಕೊನೆಗೊಳ್ಳುವಂಥ ಪರಿಸ್ಥಿತಿ ಎದುರಾಗಬಹುದು. ವಾಹನ ಬಿಡಿಭಾಗಗಳ ಮಾರಾಟಗಾರರಿಗೆ ಆದಾಯದ ದಿನ.

**ಮೀನ:** ಆಡುವ ಸುಳ್ಳು ಮಾತಿನ ಫಲವನ್ನು ತಕ್ಷಣದಲ್ಲಿ ಅನುಭವಿಸುವಂತಾಗುವುದು. ಆರೋಗ್ಯಕ್ಕಾಗಿ ವ್ಯಾಯಾಮ ಮಾಡುವುದನ್ನು ಅಭ್ಯಾಸ ಮಾಡಿ. ದವಸ ಧಾನ್ಯಗಳ ದಾಸ್ತಾನಿಗಾಗಿ ಬಂಡವಾಳ ಹೂಡುವುದು ಸರಿಯಲ್ಲ.

## ಪದಬಂಧ 5376

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1. ಹಾಡಿನ ಪುನರಾವರ್ತನೆಗೊಳ್ಳುವ ಭಾಗ (3)
3. ವಾಪಾಸಾಗುವಾಗ ಊಟ ಮಾಡದಿರುವುದು! (4)
5. ಕಠೋರವಾಗಿರುವ ಕೈ! (2)
6. ಒಪ್ಪವಾಗಿ ಮತಿ ಇಟ್ಟುಕೊಂಡು ನೀಡಿದ ಒಪ್ಪಿಗೆ (4)
8. ಕೊಡು ಕೊಡು ಎನ್ನುತ್ತಿರುವ ಅಜ್ಜ (2)
9. ಉಮೇದುವಾರನಿಗಿರುವ ಹುರುಪು (3)
10. ವರನ ಜೊತೆಗಿರುವ ಮದುವೆ ಹೆಣ್ಣು (2)
11. ಕಾಡಿನಲ್ಲಿನ ವಾಸ (4)
12. ಮಂಗಳ ಕಾರ್ಯದಲ್ಲಿ ಬಂದಿತೇ ಈ ಕೋತಿ? (2)
14. ಹೊಳೆಯ ದಂಡೆ (4)
15. ರಸಗಳನ್ನು ಬಲ್ಲವನು (3)

**ಮೇಲಿಂದ ಕೆಳಕ್ಕೆ**
1. ಪತಿಯ ಜೊತೆಯಿರುವ ಹೆಂಡತಿ (2)
2. ಹೆಂಡತಿಯನ್ನು ಕಳೆದುಕೊಂಡವನು (3)
4. ಸತಿಗೆ ಸಿಕ್ಕಿದ್ದು ಒಳ್ಳೆಯ ಗತಿ! (3)
5. ಚಪ್ಪಾಳೆಯನ್ನು ಹೀಗನ್ನಿ (5)
6. ಆ ಮದುವೆಗೆ ತರಿಸಿಕೊಂಡ ವಸ್ತು! (3)
7. ಮದುವೆಮಾಡಿಕೊಳ್ಳುತ್ತಿರುವವನು (5)
9. ಸಂತೋಷ ಹೀಗೆ ಬಂದಿದೆ (3)
11. ದನದ ಕಡೆ ತಿರುಗಿಸಿದ ಮುಖವಿದು (3)
12. ಮಂದಿ ಹೊಕ್ಕಿರುವ ಗುಡಿ (3)
13. ಹೋಮ ಅಥವಾ ಯಾಗ (2)

| | | | | | | | | |
|---|---|---|---|---|---|---|---|---|
| 1 | | 2 | ■ | ■ | 3 | | | 4 |
| | ■ | | ■ | ■ | ■ | ■ | ■ | |
| ■ | 5 | | ■ | ■ | 6 | | 7 | |
| ■ | | ■ | ■ | ■ | | ■ | | ■ |
| 8 | | ■ | 9 | | | ■ | 10 | |
| ■ | | ■ | | ■ | ■ | ■ | | ■ |
| 11 | | | | ■ | ■ | 12 | | ■ |
| | ■ | ■ | ■ | ■ | ■ | | ■ | 13 |
| 14 | | | | ■ | ■ | 15 | | |

### 5375ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಬಹಿಷ್ಕಾರ 3.ನರುಗಂಪು
5.ಸದರ 7.ಪರ
9.ಗುರು 12.ಕ್ಷರ
13.ಕವಿ 15.ಅಂಬಾರಿ
17.ತೆಗಳಿಕೆ 18.ಸದಾಶಯ

**ಮೇಲಿಂದ ಕೆಳಕ್ಕೆ:**
1.ಬಳಪ 2.ರಸ 3.ನರ
4.ಪುಕಾರು 6.ದಮಡಿ
8.ರಕ್ತಸಂಚಾರ 9.ಗುಣವಾಚಕ
11.ಕಲಬಾ 12.ಕ್ಷಮತೆ
14.ವಿನಯ 15.ಅಂಕೆ
16.ರಿಸ

## ಸುಡೊಕು 5762

| | | | | | | | | |
|---|---|---|---|---|---|---|---|---|
| 7 | 5 | | | 1 | 6 | | 8 | |
| | | 6 | | | 9 | | | 7 |
| 4 | | | 7 | | | | 9 | |
| | 7 | | | 2 | 1 | | | 8 |
| | 6 | 4 | 9 | | 8 | | 7 | |
| 8 | | 1 | | | | 9 | | 4 |
| | 8 | | | 9 | | | | |
| 1 | | 2 | | | | 7 | | 3 |
| | 4 | | 1 | | 7 | | 2 | |

**ಆಡುವುದು ಹೇಗೆ?**

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5761ಸುಡೊಕು

| | | | | | | | | |
|---|---|---|---|---|---|---|---|---|
| 5 | 2 | 1 | 4 | 7 | 3 | 9 | 6 | 8 |
| 7 | 9 | 8 | 6 | 1 | 2 | 3 | 4 | 5 |
| 4 | 6 | 3 | 5 | 9 | 8 | 7 | 2 | 1 |
| 1 | 4 | 9 | 2 | 3 | 5 | 6 | 8 | 7 |
| 2 | 3 | 7 | 1 | 8 | 6 | 4 | 5 | 9 |
| 8 | 5 | 6 | 7 | 4 | 9 | 2 | 1 | 3 |
| 6 | 7 | 5 | 9 | 2 | 1 | 8 | 3 | 4 |
| 3 | 1 | 4 | 8 | 6 | 7 | 5 | 9 | 2 |
| 9 | 8 | 2 | 3 | 5 | 4 | 1 | 7 | 6 |

**ಷೇರುಪೇಟೆ ವಹಿವಾಟು** 64




**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 19,332 |
| ಇಂದಿನ ಅಂತ್ಯ | 19,356 |
| | 24 |
| ದಿನದ ಗರಿಷ್ಠ | 19,435 |

**ಕೊಬ್ಬರಿ ಧಾರಣೆ** (ಕ್ವಿಂಟಲ್‌ಗೆ)

| | |
|---|---|
| ಗುಬ್ಬಿ | ₹8000-8000 |
| ತುಮಕೂರು | --- |
| ತುರುವೇಕೆರೆ | ₹8000-8350 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹460 |
| 12 ಮೊಟ್ಟೆಗೆ | ₹65 |
| ಮೈಸೂರು | |
| 100 ಮೊಟ್ಟೆಗೆ | ₹460 |

**ಖಾದ್ಯ ತೈಲ ಮುಂಬೈ** (10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1720 (1720) |
| ಸೋಯಾ (ರಿಫೈನ್ಡ್) | ₹945 (950) |
| ಸೂರ್ಯಕಾಂತಿ (ರಿಫೈನ್ಡ್) | ₹940 (950) |
| ಪಾಮೋಲಿನ್ | ₹865 (860) |

**ಎನ್.ಆರ್.ಪುರ ರಬ್ಬರ್**

| | |
|---|---|
| ಆರ್‌ಎಸ್‌ಎಸ್-4 | ₹153 |
| ಆರ್‌ಎಸ್‌ಎಸ್-5 | ₹148 |
| ಗುಡ್ ಲಾಟ್ | ₹131 |

(ಪ್ರತಿ ಕೆ.ಜಿಗೆ)

**ರಾಮನಗರ ರೇಷ್ಮೆಗೂಡು ಧಾರಣೆ**

| | |
|---|---|
| ಮಿಶ್ರತಳಿ (ಸಿ.ಬಿ) | ₹242-420 |
| ದ್ವಿತಳಿ (ಬಿ.ವಿ) | ₹285-579 |

**ಮುದ್ರೆಮನೆ ಕಾಫಿ** (50 ಕೆಜಿಗೆ)

| | |
|---|---|
| ಎಪಿ | ₹14400 |
| ಎಸಿ | ₹7280 |
| ಆರ್‌ಪಿ | ₹10100 |
| ಆರ್‌ಸಿ | ₹5960 |

**ಮುಂಬೈ ಧಾರಣೆ**

**ಶೇಂಗಾ**

10-7-2023

| | |
|---|---|
| ಜಾವಾ 70/80(ಹೊಸ) | 11300-11350 |
| ಜಾವಾ 80/90(ಹೊಸ) | 10700-10750 |
| ದಪ್ಪ ಮಧ್ಯಪ್ರದೇಶ(ಹೊಸ) | 11200-11300 |
| ದಪ್ಪ ಗುಜರಾತ್(ಹೊಸ) | 12100-12200 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆಗೆದ ಬೀಜ) | 1730 (1730) |
| ಒಂದು ಬಾರಿ ಶೋಧಿಸಿದ | 1725 (1725) |
| ಸೋಯಾ ಕಚ್ಚಾ | 890 (892) |
| ಹಾಮ್ ವಾರದ ಶೋಧಿಸಿದ | 863 (858) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 850 (860) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ

58,500 (58,550)

ಬೆಳ್ಳಿ ಕೆಜಿ 70,700 (70,500)

ಆವರಣದಲ್ಲಿ ಶನಿವಾರದ ಧಾರಣೆ


ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com or Scan QR code to access booking form



**3ನೇ ವರ್ಷದ ಪುಣ್ಯಸ್ಮರಣೆ**

ಶ್ರೀಮತಿ ಮತ್ತೂರಿ ರಂಗನಾಯಕಮ್ಮ

ಜನನ: 02-10-1962 – ನಿಧನ: 11-07-2020


## ದೇಶಿ ಷೇರುಪೇಟೆಗಳ ವಹಿವಾಟು ಏರಿಕೆ • ಎಸ್‌ಐಪಿ ಮೂಲಕ ಹೂಡಿಕೆ ಹೆಚ್ಚಳ

# ಈಕ್ವಿಟಿ ಎಂಎಫ್ ಹೂಡಿಕೆ 3 ತಿಂಗಳ ಗರಿಷ್ಠ

**ನವದೆಹಲಿ (ಪಿಟಿಐ):** ಈಕ್ವಿಟಿ ಮ್ಯೂಚುವಲ್ ಫಂಡ್‌ಗಳು ಜೂನ್ ತಿಂಗಳಲ್ಲಿ ₹8,637 ಕೋಟಿ ಬಂಡವಾಳ ಆಕರ್ಷಿಸಿವೆ. ಮೂರು ತಿಂಗಳಲ್ಲಿ ಆಗಿರುವ ಗರಿಷ್ಠ ಮೊತ್ತದ ಹೂಡಿಕೆ ಇದು.

ದೇಶದ ಷೇರುಪೇಟೆಗಳಲ್ಲಿ ನಡೆಯುತ್ತಿರುವ ಏರುಮುಖ ವಹಿವಾಟು ಹಾಗೂ ವ್ಯವಸ್ಥಿತ ಹೂಡಿಕೆ ಯೋಜನೆಗಳ (ಎಸ್‌ಐಪಿ) ಮೂಲಕ ಹೂಡಿಕೆ ಹೆಚ್ಚಾಗುತ್ತಿರುವ ಕಾರಣಗಳಿಂದಾಗಿ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಈ ಪ್ರಮಾಣದ ಬಂಡವಾಳ ಹೂಡಿಕೆ ಆಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಮಾಹಿತಿ ನೀಡಿದೆ.

ಒಂದಿಷ್ಟು ಲಾಭ ಗಳಿಕೆಯ ವಹಿವಾಟು ನಡೆಯುವುದನ್ನು ಅಲ್ಲಗಳೆಯಲು ಆಗದು. ಹೀಗಿದ್ದರೂ ಹೂಡಿಕೆದಾರರು ಎಸ್‌ಐಪಿ ಮತ್ತು ವ್ಯವಸ್ಥಿತ ವರ್ಗಾವಣೆ ಯೋಜನೆಗಳ ಮೂಲಕ ಬಂಡವಾಳ ತೊಡಗಿಸುವುದನ್ನು ಮುಂದುವರಿಸಿದ್ದಾರೆ ಎಂದು ಕೋಟಕ್ ಮಹೀಂದ್ರ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿಯ ರಾಷ್ಟ್ರೀಯ ಮುಖ್ಯಸ್ಥ ಮನೀಶ್ ಮೆಹ್ತಾ ಹೇಳಿದ್ದಾರೆ.

**ಮುಖ್ಯಾಂಶಗಳು**
- ಡೆಟ್ ಯೋಜನೆಗಳಿಂದ ಜೂನ್‌ನಲ್ಲಿ ಬಂಡವಾಳ ಹೊರಹರಿವು
- ಹೊಸ ನಿಧಿಗಳಲ್ಲಿ ಬಂಡವಾಳ ಹೂಡಿಕೆ ಹೆಚ್ಚಳ
- ಮ್ಯೂಚುವಲ್ ಫಂಡ್ ಉದ್ಯಮದ ನಿರ್ವಹಣಾ ಸಂಪತ್ತು ಏರಿಕೆ

ಹೂಡಿಕೆದಾರರು ತಮ್ಮ ಒಟ್ಟು ಹೂಡಿಕೆಯಲ್ಲಿ ಹೆಚ್ಚಿನ ಪಾಲನ್ನು ಸ್ಮಾಲ್ ಕ್ಯಾಪ್ ನಿಧಿಗಳಲ್ಲಿ (₹5,472 ಕೋಟಿ) ಹೂಡಿಕೆ ಮಾಡಿದ್ದಾರೆ. ನಂತರ ಲಾರ್ಜ್ ಕ್ಯಾಪ್ ಫಂಡ್ (₹2,239 ಕೋಟಿ) ಹಾಗೂ ಮಿಡ್ ಕ್ಯಾಪ್ ಫಂಡ್‌ಗಳಲ್ಲಿ (₹1,749 ಕೋಟಿ) ಹೂಡಿಕೆ ಮಾಡಿದ್ದಾರೆ.

ಉದ್ಯಮದ ನಿರ್ವಹಣಾ ಸಂಪತ್ತು ಮೌಲ್ಯವು ಮೇ ತಿಂಗಳ ಅಂತ್ಯದಲ್ಲಿ ₹42.9 ಲಕ್ಷ ಕೋಟಿ ಇದ್ದದ್ದು ಜೂನ್ ತಿಂಗಳ ಅಂತ್ಯಕ್ಕೆ ₹44.8 ಲಕ್ಷ ಕೋಟಿಗೆ ಏರಿಕೆ ಕಂಡಿದೆ.

ಈಕ್ವಿಟಿ ಎಂಎಫ್‌ಗಳಲ್ಲಿ ಬಂಡವಾಳ ಒಳಹರಿವು ಹೆಚ್ಚಾಗಲು ಹೊಸದಾಗಿ ಬಿಡುಗಡೆ ಆಗಿರುವ ಆರು ನಿಧಿಗಳ ಕೊಡುಗೆ ಮುಖ್ಯವಾಗಿದೆ. ಈ ನಿಧಿಗಳಲ್ಲಿ ಒಟ್ಟು ₹3,038 ಕೋಟಿ ಹೂಡಿಕೆ ಆಗಿದೆ ಎಂದು ಮಾರ್ನಿಂಗ್‌ಸ್ಟಾರ್ ಇಂಡಿಯಾದ ವಿಶ್ಲೇಷಕ ಮೆಲ್ವಿನ್ ಸಾಂಟಾರಿಟಾ ಹೇಳಿದ್ದಾರೆ.

ಓಪನ್ ಎಂಡೆಡ್ ವಿಭಾಗದಲ್ಲಿ ಒಟ್ಟು 11 ಯೋಜನೆಗಳನ್ನು ಬಿಡುಗಡೆ ಮಾಡಲಾಗಿದೆ. ಈ ಯೋಜನೆಗಳು ಒಟ್ಟು ₹3,228 ಕೋಟಿಯನ್ನು ಜೂನ್‌ನಲ್ಲಿ ಆಕರ್ಷಿಸಿವೆ.

ಡೆಟ್ ಆಧಾರಿತ ಯೋಜನೆಗಳಿಂದ ಜೂನ್‌ನಲ್ಲಿ ₹14,135 ಕೋಟಿ ಬಂಡವಾಳ ಹೊರಹೋಗಿದೆ. ಮೇ ತಿಂಗಳಲ್ಲಿ ₹45,959 ಕೋಟಿ ಹೂಡಿಕೆ ಆಗಿತ್ತು. ಡೆಟ್ ಫಂಡ್‌ಗಳಲ್ಲಿ ಲಿಕ್ವಿಡ್ ಮತ್ತು ಅಲ್ಟ್ರಾ ಶಾರ್ಟ್ ಡ್ಯುರೇಷನ್ ಫಂಡ್‌ಗಳಿಂದಲೇ ಹೆಚ್ಚಿನ ಹೊರಹರಿವು ಕಂಡುಬಂದಿದೆ.

## ಜಿಎಸ್‌ಟಿ ಮಂಡಳಿ ಸಭೆ ಇಂದು

**ನವದೆಹಲಿ (ಪಿಟಿಐ):** ಜಿಎಸ್‌ಟಿ ಮಂಡಳಿಯು ಮಂಗಳವಾರ ಸಭೆ ಸೇರಲಿದ್ದು, ಆನ್‌ಲೈನ್ ಆಟಗಳಿಗೆ ತೆರಿಗೆ ಪ್ರಮಾಣ, ಏಟಿಸಿ ಸಂಬಂಧಿಸಿದ ನಿಯಮಗಳನ್ನು ಬಿಗಿಗೊಳಿಸುವುದು ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚೆ ನಡೆಸುವ ಸಾಧ್ಯತೆ ಇದೆ.

ಮಲ್ಟಿಪ್ಲೆಕ್ಸ್‌ಗಳಲ್ಲಿ ಮಾರಾಟ ಆಗುವ ತಿನಿಸುಗಳು ಮತ್ತು ತಂಪುಪಾನೀಯಗಳ ಮೇಲಿನ ತೆರಿಗೆ ದರಗಳ ಕುರಿತಾಗಿಯೂ ಮಂಡಳಿಯು ಸ್ಪಷ್ಟನೆ ನೀಡುವ ಸಾಧ್ಯತೆ ಇದೆ. ಅಲ್ಲದೆ, ಕ್ಯಾನ್ಸರ್ ಔಷಧ ಆಮದು ಮಾಡಿಕೊಳ್ಳುವುದನ್ನು ತೆರಿಗೆ ವ್ಯಾಪ್ತಿಯಿಂದ

ಹೊರಗಿಡುವ ಕುರಿತು ನಿರ್ಧಾರ ತೆಗೆದುಕೊಳ್ಳುವ ನಿರೀಕ್ಷೆ ಇದೆ.

ಮೇಲ್ಮನವಿ ಪ್ರಾಧಿಕಾರ ರಚನೆ ಮಾಡುವ ಕುರಿತಾಗಿಯೂ ಅಂತಿಮ ನಿರ್ಧಾರ ಹೊರಬೀಳುವ ನಿರೀಕ್ಷೆ ಮಾಡಲಾಗಿದೆ.

**ದೇಶದಾದ್ಯಂತ ಮಾರುಕಟ್ಟೆ ಧಾರಣೆ**

| | | | | | |
|---|---|---|---|---|---|
| **ಅಡಿಕೆ** | | ಚನ್ನ | 29099-32989 | ಬೆಟ್ಟೆ | 40999-47389 |
| **ಬಂಟ್ವಾಳ** | | ಕೋಕ | 21619-33699 | ಬಿಳೇಗೋಟು | 23899-34609 |
| ಕೋಕ | 12500-25000 | ಫ್ಯಾಕ್ಟರಿ | 14029-22702 | ಚಾಲಿ | 36809-40108 |
| ಹೊಸತು | 27500-41500 | ಹಳೆಚಾಲಿ | 37509-40988 | ಕೆಂಪುಗೋಟು | |
| ಹಳತು | 46000-49000 | ಹೊಸಚಾಲಿ | 37109-39029 | | 28699-37901 |
| **ಕುಮಟಾ** | | ಶಿರಸಿ | | ರಾಶಿ | 46898-52808 |

## ‘ಪಂಚ್’ಗೆ ಪೈಪೋಟಿ ನೀಡಲು ‘ಎಕ್ಸ್‌ಟರ್’

**ನವದೆಹಲಿ (ಪಿಟಿಐ):** ಹುಂಡೈ ಮೋಟರ್ ಇಂಡಿಯಾ ಕಂಪನಿಯು ಆರಂಭಿಕ ಶ್ರೇಣಿಯ ಎಸ್‌ಯುವಿ ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ. ಕಂಪನಿಯು ಸೋಮವಾರ ‘ಎಕ್ಸ್‌ಟರ್’ ವಾಹನವನ್ನು ಬಿಡುಗಡೆ ಮಾಡಿದೆ. ಇದರ ಪರಿಚಯಾತ್ಮಕ ಬೆಲೆಯು ₹5.99 ಲಕ್ಷದಿಂದ ಆರಂಭವಾಗುತ್ತದೆ.

ಈ ಮಾದರಿಯು ಟಾಟಾ ಮೋಟರ್ಸ್‌ನ ‘ಪಂಚ್’ ಮಾದರಿಗೆ ಪೈಪೋಟಿ ನೀಡಲಿದೆ.

‘ಎಕ್ಸ್‌ಟರ್’ನಲ್ಲಿ 1.2 ಲೀಟರ್ ಸಾಮರ್ಥ್ಯದ ಪೆಟ್ರೋಲ್ ಎಂಜಿನ್ ಇದೆ. ಮ್ಯಾನುವಲ್ ಟ್ರಾನ್ಸ್‌ಮಿಷನ್ ಹಾಗೂ ಆಟೊಮ್ಯಾಟಿಕ್ ಟ್ರಾನ್ಸ್‌ಮಿಷನ್ ಆಯ್ಕೆಗಳಲ್ಲಿ ಇದು ಲಭ್ಯವಿದೆ.

ಮ್ಯಾನುವಲ್ ಟ್ರಾನ್ಸ್‌ಮಿಷನ್ ಮಾದರಿಯು ಲೀಟರ್‌ಗೆ 19.4 ಕಿ.ಮೀ., ಆಟೊಮ್ಯಾಟಿಕ್ ಟ್ರಾನ್ಸ್‌ಮಿಷನ್ ಮಾದರಿಯು 19.2 ಕಿ.ಮೀ. ಇಂಧನ ದಕ್ಷತೆಯನ್ನು ನೀಡುತ್ತದೆ.

‘ಎಕ್ಸ್‌ಟರ್’ ಮಾದರಿಯ ಬಿಡುಗಡೆ ಕಾರ್ಯಕ್ರಮದಲ್ಲಿ ಹುಂಡೈ ಮೋಟರ್ ಇಂಡಿಯಾ ಕಂಪನಿಯ ಎಂ.ಡಿ. ಹಾಗೂ ಸಿಇಒ ಉನ್‌ಸೂ ಕಿಮ್, ಕಂಪನಿಯ ಸಿಒಒ ತರುಣ್ ಗರ್ಗ್ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಸಿಎನ್‌ಜಿ ಮಾದರಿಯು ಪ್ರತಿ ಕೆ.ಜಿ.ಗೆ 27.1 ಕಿ.ಮೀ. ದಕ್ಷತೆಯನ್ನು ಹೊಂದಿದ್ದು, ಇದಕ್ಕೆ ₹8.23 ಲಕ್ಷ ಬೆಲೆ ಇದೆ.

## ಗೋ ಫಸ್ಟ್ ಖರೀದಿ: ಅರ್ಜಿ ಸಲ್ಲಿಕೆಗೆ ಆಗಸ್ಟ್ 9ರ ಗಡುವು

**ನವದೆಹಲಿ (ಪಿಟಿಐ):** ದಿವಾಳಿ ಪ್ರಕ್ರಿಯೆಯಲ್ಲಿ ಇರುವ ಗೋ ಫಸ್ಟ್ ವಿಮಾನಯಾನ ಕಂಪನಿಯನ್ನು ಖರೀದಿಸಲು ಆಸಕ್ತಿ ಸೂಚಿಸಿ ಬಿಡ್ ಸಲ್ಲಿಸಲು ಆಗಸ್ಟ್ 9ರ ಗಡುವು ನೀಡಲಾಗಿದೆ.

ಈ ಸಂಬಂಧ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ (ಎನ್‌ಸಿಎಲ್‌ಟಿ) ನೇಮಿಸಿರುವ ಅಧಿಕಾರಿಯು (ಆರ್‌ಪಿ) ಖರೀದಿ ಆಸಕ್ತ ವ್ಯಕ್ತಪಡಿಸಲು ಹೂಡಿಕೆದಾರರಿಗೆ ಆಹ್ವಾನ ನೀಡಿದ್ದಾರೆ.

ಅರ್ಹ ಹೂಡಿಕೆದಾರರ ಪಟ್ಟಿಯನ್ನು ಆಗಸ್ಟ್ 19ರಂದು ಘೋಷಿಸಲಾಗುವುದು. ಆಕ್ಷೇಪಣೆ ಸಲ್ಲಿಸಲು ಆಗಸ್ಟ್ 24ರವರೆಗೆ ಕಾಲಾವಕಾಶ ಇರಲಿದೆ ಎಂದು ಆರ್‌ಪಿ ಶೈಲೇಂದ್ರ ಅಜ್ಮೇರ್ ಅವರು ಸಾರ್ವಜನಿಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮುರಿದುಬಿದ್ದ ಪಾಲುದಾರಿಕೆ

**ಒಂದನೇ ಪುಟದಿಂದ**

ಯುರೋಪ್ ಮೂಲದ ಎಸ್‌ಟಿ ಮೈಕ್ರೊಎಲೆಕ್ಟ್ರಾನಿಕ್ಸ್ ಕಂಪನಿಯನ್ನು ತಂತ್ರಜ್ಞಾನ ಪಾಲುದಾರನಾಗಿ ಸೇರಿಸಿಕೊಳ್ಳಲು ಪ್ರಯತ್ನ ನಡೆದಿತ್ತು. ಆದರೆ ಈ ಕುರಿತ ಮಾತುಕತೆಯಲ್ಲಿ ಪ್ರಗತಿ ಕಂಡುಬಂದಿರಲಿಲ್ಲ.

ಜಗತ್ತಿನಲ್ಲಿ ಬಳಕೆಯಾಗುವ ಸೆಮಿಕಂಡಕ್ಟರ್‌ಗಳಲ್ಲಿ ಹೆಚ್ಚಿನ ಪಾಲು ಕೆಲವೇ ಕೆಲವು ದೇಶಗಳಲ್ಲಿ ತಯಾರಾಗುತ್ತವೆ. 2026ರ ವೇಳೆಗೆ ಭಾರತದಲ್ಲಿ ಸೆಮಿಕಂಡಕ್ಟರ್ ಮಾರುಕಟ್ಟೆಯು ₹5.20 ಲಕ್ಷ ಕೋಟಿ ಗಾತ್ರಕ್ಕೆ ಬೆಳೆಯುವ ನಿರೀಕ್ಷೆ ಇದೆ.

**ಸುದ್ದಿ 2 ನಿಮಿಷ**

## ಬೈಡನ್– ರಿಷಿ ಸುನಕ್ ಭೇಟಿ: ಉಕ್ರೇನ್‌ಗೆ ಬೆಂಬಲ ಕುರಿತು ಚರ್ಚೆ

**ಲಂಡನ್ (ಪಿಟಿಐ):** ಅಮೆರಿಕ ಅಧ್ಯಕ್ಷ ಜೋ ಬೈಡನ್ ಮತ್ತು ಬ್ರಿಟನ್ ಪ್ರಧಾನಿ ರಿಷಿ ಸುನಕ್ ಸೋಮವಾರ ಭೇಟಿಯಾಗಿ, ‘ಇಂಡೊ–ಪೆಸಿಫಿಕ್ ವಲಯ ಮತ್ತು ಉಕ್ರೇನ್–ರಷ್ಯಾ ಯುದ್ಧ ಕುರಿತು ಚರ್ಚಿಸಿದರು.

ಲಿಥುವೇನಿಯಾದಲ್ಲಿ ನಡೆಯಲಿರುವ ನ್ಯಾಟೊ ಶೃಂಗಸಭೆಯಲ್ಲಿ ಭಾಗವಹಿಸಲು ಬೈಡನ್ ಆಗಮಿಸಿದ್ದು, ರಾಜ 3ನೇ ಚಾರ್ಲ್ಸ್ ಅವರು ವಿಂಡ್ಸರ್ ಕ್ಯಾಸಲ್‌ನಲ್ಲಿ

ಬರಮಾಡಿಕೊಂಡರು. ಅಮೆರಿಕ–ಬ್ರಿಟನ್ ಬಾಂಧವ್ಯ ಬಂಡೆಯಂತೆ ದೃಢವಾಗಿದೆ ಎಂದು ರಾಜ ಶ್ಲಾಘಿಸಿದರು.

ಉಕ್ರೇನ್‌ನ ಬೆಂಬಲ ನೀಡುವುದು ಮತ್ತು ಅಮೆರಿಕ–ಬ್ರಿಟನ್ ಬಾಂಧವ್ಯ ಬಲಪಡಿಸಲು ಉಭಯ ಮುಖಂಡರು ಒಪ್ಪಿದ್ದಾರೆ ಎಂದು ಡೌನಿಂಗ್ ಸ್ಟ್ರೀಟ್ ವಕ್ತಾರರು ತಿಳಿಸಿದರು.

‘ರಕ್ಷಣಾತ್ಮಕ ಕ್ರಮಗಳು ಹಾಗೂ ಅಂತರರಾಷ್ಟ್ರೀಯ ಭಾಗಿದಾರರ ಜೊತೆಗೆ ದೀರ್ಘಾವಧಿಯಲ್ಲಿ ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿ ಪಾಲುದಾರಿಕೆ ಹೊಂದುವುದು ಅಗತ್ಯ. ಯುದ್ಧದಲ್ಲಿ ಜಯಗಳಿಸಲು ಉಕ್ರೇನ್‌ಗೆ ಬೆಂಬಲ ಅಗತ್ಯವಾದದ್ದು ಎಂದು ಬೈಡನ್ ಪ್ರತಿಪಾದಿಸಿದರು.

‘ಇದಾಗ್ಯೂ ಸಂಬಂಧಿಸಿ ಇಂಡೊ–ಪೆಸಿಫಿಕ್ ವಲಯದ ಭೌಗೋಳಿಕ, ರಾಜಕೀಯ ಸ್ಥಿತಿ ಕುರಿತು ಉಭಯ ಮುಖಂಡರು ಚರ್ಚಿಸಿದರು’ ಎಂದು ತಿಳಿಸಿದರು.

## ಬಿಬಿಸಿ ಮಾನ್ಯತೆ ರದ್ದು ಮಾಡಿದ ಸಿರಿಯಾ

**ಬೈರೂತ್ (ಎಪಿ):** ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್ (ಬಿಬಿಸಿ) ಪಕ್ಷಪಾತ ಮತ್ತು ಸುಳ್ಳು ಸುದ್ದಿಗಳನ್ನು ಬಿತ್ತರಿಸುತ್ತಿದೆ ಎಂದು ಆರೋಪಿಸಿ ಸುದ್ದಿಸಂಸ್ಥೆಯ ಮಾನ್ಯತೆಯನ್ನು ಸಿರಿಯಾ ವಾರ್ತಾ ಮತ್ತು ಪ್ರಸಾರ ಸಚಿವಾಲಯ ರದ್ದು ಮಾಡಿದೆ.

ಸಿರಿಯಾದಲ್ಲಿನ ಮಾದಕವಸ್ತುಗಳ ಅಕ್ರಮ ವ್ಯವಹಾರದ ಬಗ್ಗೆ ಬಿಬಿಸಿ ಅರೇಬಿಕ್ ತನಿಖಾ ಸಾಕ್ಷ್ಯಚಿತ್ರ ಬಿಡುಗಡೆ ಮಾಡಿದ ಮರುದಿನವೇ ಈ ಘೋಷಣೆ ಹೊರಬಿದ್ದಿದೆ. ಬಿಲಿಯನ್‌ಗಟ್ಟಲೆ ಡಾಲರ್ ಉದ್ಯಮವಾಗಿರುವ ಮಾದಕ ವಸ್ತುಗಳ ಕಳ್ಳ ಸಾಗಣೆಯಲ್ಲಿ ಸಿರಿಯಾ ಸರ್ಕಾರ ಹಾಗೂ ಅಧ್ಯಕ್ಷ ಬಶರ್ ಅಸ್ಸಾದ್ ಕುಟುಂಬಸ್ಥರು ಭಾಗಿಯಾಗಿದ್ದಾರೆ ಎಂದು ಸಾಕ್ಷ್ಯಚಿತ್ರದಲ್ಲಿ ಹೇಳಲಾಗಿತ್ತು.

‘ದೇಶಕ್ಕೆ ಮಾರಕವಾಗಿರುವ ಭಯೋತ್ಪಾದಕ ಸಂಘಟನೆಗಳು ನೀಡುವ ಹೇಳಿಕೆಗಳ ಆಧಾರದಲ್ಲಿ ದಾರಿತಪ್ಪಿಸುವ ಸುದ್ದಿಗಳನ್ನು ಬಿತ್ತರಿಸುತ್ತಿದ್ದ ಸುದ್ದಿಸಂಸ್ಥೆಗೆ ಹಲವು ಬಾರಿ ಎಚ್ಚರಿಕೆ ನೀಡಲಾಗಿತ್ತು. ಆದಾಗ್ಯೂ ತನ್ನ ಪ್ರವೃತ್ತಿ ಮುಂದುವರಿಸಿರುವ ಕಾರಣ ಬಿಬಿಸಿ ರೇಡಿಯೊ, ಟಿ.ವಿ ಮತ್ತು ವಿಡಿಯೊಗ್ರಾಫಿಗೆ ನೀಡಿದ್ದ ಮಾನ್ಯತೆ ರದ್ದು ಮಾಡಲಾಗಿದೆ’ ಎಂದು ಸಚಿವಾಲಯ ಅಧಿಸೂಚನೆಯಲ್ಲಿ ತಿಳಿಸಿದೆ.

ಸಿರಿಯಾದ ಕ್ರಮ ಕುರಿತು ಪ್ರತಿಕ್ರಿಯಿಸಿರುವ ಬಿಬಿಸಿ ಅರೇಬಿಕ್, ‘ವಾಸ್ತವವನ್ನು ತಿಳಿಸಲು ರಾಜಕೀಯದ ಎಲ್ಲಾ ಆಯಾಮಗಳಲ್ಲಿ ವರದಿ ಮಾಡಿದ್ದೇವೆ. ಸಾರ್ವಜನಿಕರ ಅಭಿಪ್ರಾಯವನ್ನೂ ಸಂಗ್ರಹಿಸಿದ್ದೇವೆ. ಸ್ವತಂತ್ರ ಹಾಗೂ ನಿಷ್ಪಕ್ಷಪಾತ ಪತ್ರಿಕೋದ್ಯಮ ನಮ್ಮ ಧ್ಯೇಯ. ಅರೇಬಿಕ್ ಮಾತನಾಡುವ ಪ್ರದೇಶಗಳಲ್ಲಿ ಪಕ್ಷಪಾತ ರಹಿತ ಸುದ್ದಿ ಹಾಗೂ ಮಾಹಿತಿ ನೀಡುವುದನ್ನು ಮುಂದುವರಿಸುತ್ತೇವೆ’ ಎಂದು ತಿಳಿಸಿದೆ.

## ಶಾಲೆ ಮೇಲೆ ರಷ್ಯಾ ದಾಳಿ; ನಾಲ್ವರ ಸಾವು

# ರಷ್ಯಾದಿಂದ 14 ಚದರ ಕಿ.ಮೀ ಪ್ರದೇಶ ಮರುವಶಕ್ಕೆ: ಉಕ್ರೇನ್

**ಕೀವ್ (ಉಕ್ರೇನ್) (ಎಎಫ್‌ಪಿ):** ರಷ್ಯಾ ಅತಿಕ್ರಮಣ ಮಾಡಿದ್ದ 14 ಚದರ ಕಿಲೋ ಮೀಟರ್ ಪ್ರದೇಶವನ್ನು ಮರುವಶಕ್ಕೆ ಪಡೆಯಲಾಗಿದೆ ಎಂದು ಉಕ್ರೇನ್ ಸೋಮವಾರ ಹೇಳಿಕೊಂಡಿದೆ.

ಕಳೆದ ವಾರ ಉಕ್ರೇನ್ ಸೇನಾ ಪಡೆಯು ಬಖ್‌ಮತ್ ಸೆಕ್ಟರ್‌ನಲ್ಲಿ ನಾಲ್ಕು ಚದರ ಕಿಲೋಮೀಟರ್ ಪ್ರದೇಶ ಸೇರಿದಂತೆ ಹತ್ತಕ್ಕೂ ಹೆಚ್ಚು ಚದರ ಕಿಲೋಮೀಟರ್ ಪ್ರದೇಶವನ್ನು ರಷ್ಯಾದ ಅತಿಕ್ರಮಣದಿಂದ ಸ್ವತಂತ್ರಗೊಳಿಸಿದೆ ಎಂದು ಸೇನಾ ವಕ್ತಾರ ಆಂಡ್ರಿಯ್ ಕೊವಲ್ಯೋವ್ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ.

ಉಕ್ರೇನ್‌ನ ಕ್ರಮತೊರ್‌ಸ್ಕ್ ನಗರದಲ್ಲಿ ಮಿಸೈಲ್ ದಾಳಿಯಿಂದಾಗಿ ಕಟ್ಟಡಗಳು ಭಾಗಶಃ ಧ್ವಂಸಗೊಂಡಿವೆ –ಎಎಫ್‌ಪಿ ಚಿತ್ರ

ರಷ್ಯಾ ಪಡೆಗಳು ಮೇಲುಗೈ ಪಡೆದಿದ್ದ ಬಖ್‌ಮತ್ ಪ್ರದೇಶದಲ್ಲಿ ಉಭಯ ದೇಶಗಳ ಸೇನಾಪಡೆಗಳ ಮಧ್ಯೆ ತೀವ್ರ ಹೋರಾಟ ನಡೆಯುತ್ತಿದೆ ಎಂದೂ ತಿಳಿಸಿದ್ದಾರೆ. ಇದರೊಂದಿಗೆ ಉಕ್ರೇನ್ ಕಳೆದ ತಿಂಗಳಿಂದ ಈಚೆಗೆ 193 ಚದರ ಕಿ.ಮೀ. ಪ್ರದೇಶವನ್ನು ಮರುವಶಕ್ಕೆ ಪಡೆದಂತಾಗಿದೆ.

**ಶಾಲೆ ಮೇಲೆ ರಷ್ಯಾ ವಾಯುದಾಳಿ:** ದಕ್ಷಿಣ ಉಕ್ರೇನ್‌ನಲ್ಲಿನ ಶಾಲೆಯೊಂದರ ಮೇಲೆ ರಷ್ಯಾ ವಾಯುದಾಳಿ ನಡೆಸಿದ್ದು, ಮೂವರು ಮಹಿಳೆಯರು ಸೇರಿದಂತೆ ನಾಲ್ವರು ಮೃತಪಟ್ಟಿದ್ದಾರೆ. 11ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಮಾನವೀಯ ನೆರವು ಪಡೆಯಲು ಜನರು ಶಾಲೆಗೆ ತೆರಳಿದ್ದ ಸಂದರ್ಭದಲ್ಲಿ ದಾಳಿ ನಡೆದಿದೆ ಎಂದು ಝಪೊರಿಝಿಯಾ ಪ್ರದೇಶದ ಗವರ್ನರ್ ತಿಳಿಸಿದ್ದಾರೆ. ದಾಳಿಯನ್ನು ‘ಯುದ್ಧ ಅಪರಾಧ’ ಎಂದು ಟೀಕಿಸಿದ್ದಾರೆ.

## ಯೆವ್ಗೆನಿ ಪ್ರಿಗೋಷಿನ್‌ಗೆ ಪುಟಿನ್ ಆತಿಥ್ಯ

**ಮಾಸ್ಕೊ (ಎಪಿ):** ಸರ್ಕಾರದ ವಿರುದ್ಧ ಈಚೆಗೆ ಬಂಡಾಯವೆದ್ದಿದ್ದ ಖಾಸಗಿ ಸೇನೆಯ ಮುಖ್ಯಸ್ಥ ಯೆವ್ಗೆನಿ ಪ್ರಿಗೋಷಿನ್ ಅವರಿಗೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಆತಿಥ್ಯ ನೀಡಿದ್ದಾರೆ. ಇದು ಉಭಯತ್ರರು ಹೊಂದಿರುವ ಪ್ರಭಾವ, ಅಧಿಕಾರ ಕುರಿತು ಹಲವು ಪ್ರಶ್ನೆ ಹುಟ್ಟುಹಾಕಿದೆ.

ಉಭಯ ನಾಯಕರ ಭೇಟಿ ಜೂನ್ 29ರಂದು ನಡೆದಿದ್ದು, ಮೂರು ಗಂಟೆ ಚರ್ಚಿಸಿದ್ದಾರೆ. ಭೇಟಿ ಸಂದರ್ಭದಲ್ಲಿ ಪ್ರಿಗೋಷಿನ್ ನೇತೃತ್ವದ ‘ವ್ಯಾಗ್ನರ್’ ಸೇನೆಯ ಕಮಾಂಡರ್‌ಗಳು ಇದ್ದರು ಎಂದು ಸರ್ಕಾರದ ವಕ್ತಾರ ಡಿಮಿಟ್ರಿ ಪೆಸ್ಕೊವ್ ತಿಳಿಸಿದ್ದಾರೆ.

ರಕ್ಷಣಾ ಸಚಿವರ ಪದಚ್ಯುತಿಗೆ ಒತ್ತಾಯಿಸಿ ಈಚೆಗೆ ಪ್ರಿಗೋಷಿನ್ ಅವರು ಸರ್ಕಾರದ ವಿರುದ್ಧ ಬಂಡಾಯ ಎದ್ದಿದ್ದರು. ಆಗ ಪುಟಿನ್ ಅವರು ಕಠಿಣ ಕ್ರಮದ ಎಚ್ಚರಿಕೆಯನ್ನು ನೀಡಿದ್ದರು. ಉಭಯತ್ರರ ಭೇಟಿಯಲ್ಲಿ ಸಂಧಾನಕ್ಕೆ ಬರಲಾಗಿದೆ ಎಂದು ಹೇಳಲಾಗಿದೆ. ಭೇಟಿ ನಡೆದಿದ್ದು ಸತ್ಯ, ಪ್ರಿಗೋಷಿನ್ ಅವರು ಎಲ್ಲಿದ್ದಾರೆ ಎಂಬುದು ನಿಖರವಾಗಿ ತಮಗೆ ಮಾಹಿತಿ ಇಲ್ಲ ಎಂದು ಪೆಸ್ಕೊವ್ ಪ್ರತಿಕ್ರಿಯಿಸಿದರು.

## ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅಭಿಮತ

# ‘ನ್ಯಾಟೊ ಸೇರ್ಪಡೆಗೆ ಉಕ್ರೇನ್ ಸಿದ್ಧವಿಲ್ಲ’

**ವಾಷಿಂಗ್ಟನ್:** ‘ನ್ಯಾಟೊ ಸದಸ್ಯತ್ವ ಪಡೆಯಲು ಉಕ್ರೇನ್ ಇನ್ನೂ ಸಿದ್ಧವಾಗಿಲ್ಲ. ಯುದ್ಧ ನಡೆಯುತ್ತಿರುವ ಈ ಸಂದರ್ಭದಲ್ಲಿ ನ್ಯಾಟೊಗೆ ಉಕ್ರೇನ್ ಸೇರ್ಪಡೆಗೊಳಿಸುವ ಪ್ರಕ್ರಿಯೆ ಆರಂಭಿಸಲು ಸೂಕ್ತವಲ್ಲ’ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ.

‘ನನ್ನ ನ್ಯಾಟೊ ಒಳಗೆ ಉಕ್ರೇನ್ ಸೇರ್ಪಡೆ ಕುರಿತಂತೆ ಸದಸ್ಯ ರಾಷ್ಟ್ರಗಳಲ್ಲಿ ಸಹಮತ ಇದೆ ಎಂದು ನಾನು ಭಾವಿಸುವುದಿಲ್ಲ’ ಎಂದು ಸಿಎನ್‌ಎನ್ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ’ ಎಂದು ‘ನ್ಯೂಯಾರ್ಕ್ ಟೈಮ್ಸ್’ ವರದಿ ಮಾಡಿದೆ.

‘ರಷ್ಯಾ ಜೊತೆಗೆ ಶಾಂತಿ ಒಪ್ಪಂದದ ನಂತರವೇ ಈ ಪ್ರಕ್ರಿಯೆ ಆರಂಭವಾಗಬಹುದು. ಈಗ ರಷ್ಯಾದ ಜೊತೆಗೆ ಯುದ್ಧ ನಡೆದಿದೆ. ನಾವೆಲ್ಲರೂ ಅದರ ಭಾಗವಾಗಿದ್ದೇವೆ. ಈ ಸಂದರ್ಭದಲ್ಲಿ ಪ್ರವಾಹದಲ್ಲಿ ಉಳಿಸುವುದು ಸೇರಿದಂತೆ ಇತರ ಅಂಶಗಳನ್ನು ಪರಿಗಣಿಸಬೇಕಿದೆ’ ಎಂದರು. ಬೈಡನ್ ಈಗ ಯುರೋಪ್ ಪ್ರವಾಸದಲ್ಲಿದ್ದು, ಲಿಥುವೇನಿಯಾದಲ್ಲಿ ನಡೆಯುವ ನ್ಯಾಟೊ ಶೃಂಗಸಭೆಯಲ್ಲಿ ಭಾಗವಹಿಸುವರು. ಉಕ್ರೇನ್–ರಷ್ಯಾ ಯುದ್ಧ, ಉಕ್ರೇನ್‌ಗೆ ಶಸ್ತ್ರಾಸ್ತ್ರ

### ನ್ಯಾಟೊ ಸೇರ್ಪಡೆಗೆ ಶೃಂಗಸಭೆ ಸಮ್ಮತಿ: ಝೆಲೆನ್‌ಸ್ಕಿ ವಿಶ್ವಾಸ

**ಕೀವ್ (ಎಎಫ್‌ಪಿ):** ನ್ಯಾಟೊ ಶೃಂಗಸಭೆಯಲ್ಲಿ ಅತ್ಯುತ್ತಮ ಫಲಿತಾಂಶ ಹೊರಬೀಳಲಿದೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ನ್ಯಾಟೊಗೆ ಉಕ್ರೇನ್ ಸೇರ್ಪಡೆಗೆ ಶೃಂಗಸಭೆ ಸಮ್ಮತಿಸಲಿದೆ ಎಂದು ಉಕ್ರೇನ್ ನಿರೀಕ್ಷಿಸಿದೆ.

ಪೋಲೆಂಡ್ ಅಧ್ಯಕ್ಷ ಆಂದ್ರೆಜ್ ದುಡ ಅವರೊಂದಿಗೆ ಭೇಟಿಯ ಬಳಿಕ ಸುದ್ದಿಗಾರರ ಜೊತೆಗೆ ಮಾತನಾಡಿದ ಝೆಲೆನ್‌ಸ್ಕಿ ಅವರು, ‘ಉಕ್ರೇನ್‌ಗೆ ಅತ್ಯುತ್ತಮ ಫಲಿತಾಂಶ ಪಡೆಯಲು ಒಟ್ಟುಗೂಡಿ ಕಾರ್ಯ ನಿರ್ವಹಿಸಲು ಸಿದ್ಧವಿದ್ದೇವೆ’ ಎಂದು ಹೇಳಿದರು.

ಪೂರೈಸಲು ಅಮೆರಿಕ ಕೈಗೊಂಡಿರುವ ನಿರ್ಧಾರ ಈ ಸಭೆಯಲ್ಲಿ ಪ್ರಮುಖವಾಗಿ ಚರ್ಚೆಯಾಗುವ ಸಂಭವವಿದೆ.

ರಷ್ಯಾಕ್ಕೆ ಹೆಚ್ಚು ಹತ್ತಿರ ಆಗುತ್ತಿರುವುದಕ್ಕೆ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರಿಗೆ ಎಚ್ಚರಿಕೆ ನೀಡಲಾಗಿದೆ ಎಂದು ಬೈಡನ್ ಹೇಳಿದರು. ಮಾರ್ಚ್‌ನಲ್ಲಿ ಷಿ ಜಿನ್‌ಪಿಂಗ್ ಮತ್ತು ರಷ್ಯಾ ಅಧ್ಯಕ್ಷ ಪುಟಿನ್ ಭೇಟಿಯಾಗಿದ್ದರು. ಅದರ ನಂತರ ಜಿನ್‌ಪಿಂಗ್ ಅವರೊಂದಿಗೆ ಈ ಕುರಿತಂತೆ ಬೈಡನ್ ಚರ್ಚಿಸಿದ್ದರು.

**ಸ್ವೀಡನ್ ಸೇರ್ಪಡೆಗೆ ಟರ್ಕಿ ಷರತ್ತು (ಎಪಿ):** ಐರೋಪ್ಯ ಒಕ್ಕೂಟ ಸೇರಲು ಟರ್ಕಿಗೆ ಮಾರ್ಗ ಸುಗಮಗೊಳಿಸಿದರೆ, ಸ್ವೀಡನ್ ನ್ಯಾಟೊ ಸದಸ್ಯತ್ವ ಪಡೆಯಲು ಟರ್ಕಿ ಸಮ್ಮತಿಸಲಿದೆ ಎಂದು ಟರ್ಕಿ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೊಗನ್ ಹೇಳಿದ್ದಾರೆ. ಸ್ವೀಡನ್ ಸೇರ್ಪಡೆಗೆ ಟರ್ಕಿ ಅಂತಿಮ ಒಪ್ಪಿಗೆ ನೀಡಿಲ್ಲ ಎಂದು ಲಿಥುವೇನಿಯಾದಲ್ಲಿ ನಡೆಯಲಿರುವ ನ್ಯಾಟೊ ಶೃಂಗಸಭೆಗೆ ಮೊದಲು ಅವರು ಹೇಳಿದ್ದಾರೆ.

## 3 ದೋಣಿಗಳಲ್ಲಿ ತೆರಳುತ್ತಿದ್ದ 300 ವಲಸಿಗರು ನಾಪತ್ತೆ

**ಡಾಕರ್ (ಎಪಿ):** ಪಶ್ಚಿಮ ಆಫ್ರಿಕಾದ ಸೆನೆಗಲ್‌ನಿಂದ ಸ್ಪೇನ್‌ಗೆ ಮೂರು ದೋಣಿಗಳಲ್ಲಿ ತೆರಳುತ್ತಿದ್ದ ಸುಮಾರು 300 ಮಂದಿ ವಲಸಿಗರು ನಾಪತ್ತೆಯಾಗಿದ್ದಾರೆ ಎಂದು ವಲಸಿಗರ ರಕ್ಷಣಾ ಪಡೆಯ ಅಧಿಕಾರಿಗಳು ತಿಳಿಸಿದ್ದಾರೆ.

100 ಪ್ರಯಾಣಿಕರಿದ್ದ ಎರಡು ದೋಣಿಗಳ ಹೌಸ್ ನಗರದಿಂದ ಜೂನ್ 23ರಂದು ಹಾಗೂ 200 ಪ್ರಯಾಣಿಕರಿದ್ದ 3ನೇ ದೋಣಿ ಕಫೌಂಟೈನ್ ಪಟ್ಟಣದಿಂದ ಜೂನ್ 27ರಂದು ನಿರ್ಗಮಿಸಿತ್ತು ಎಂದು ಅಧಿಕಾರಿ ಹೆಲೆನಾ ಮಲೆನೊ ಗಾರ್ಜನ್ ಅವರು ತಿಳಿಸಿದ್ದಾರೆ.

‘ಹಲವರು ಸಮುದ್ರದಲ್ಲಿ ನಾಪತ್ತೆಯಾಗಿದ್ದಾರೆ. ಇದರ ಪತ್ತೆ ಕಾರ್ಯ ಮುಖ್ಯವಾಗಿದೆ. ಇದಕ್ಕಾಗಿ ಶೋಧ ಕಾರ್ಯಕ್ಕಾಗಿ ನಮಗೆ ಹೆಚ್ಚಿನ ವಿಮಾನಗಳ ಅಗತ್ಯವಿದೆ’ ಎಂದು ಅವರು ಸುದ್ದಿಸಂಸ್ಥೆಗೆ ತಿಳಿಸಿದರು.

ಪ್ರಯಾಣ ಆರಂಭಿಸಿದ ನಂತರ ಈ ದೋಣಿಗಳ ಜೊತೆಗಿನ ಸಂಪರ್ಕ ಕಡಿತಗೊಂಡಿದೆ. ಈ ಬೆಳವಣಿಗೆ ಸಂಬಂಧಿಸಿದಂತೆ ಸ್ಪೇನ್ ಮತ್ತು ಸೆನೆಗಲ್ ಆಡಳಿತ ತಕ್ಷಣ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.


ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560

Jerry : 9731810277 | Tanveer : 9886213331

Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.



ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

**ಪ್ರವಾಸ**

**Travel**

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 30.08.2023 ರಿಂದ 13 ದಿನಗಳ ಯುರೋಪ್ ಪ್ರವಾಸ. 23.07.2023 28.08.2023 ರಿಂದ 7/11 ದಿನಗಳ ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್. 24.09.2023 ರಿಂದ 5 ದಿನಗಳ ದುಬೈ,ಅಬುದಾಬಿ,ಶಾರ್ಜಾ (ಅಭ್ಯರ್ ದರಗಳಲ್ಲಿ) 28.07.2023 ರಿಂದ 11 ದಿನಗಳ ಗುಜರಾತ್,ಉಜ್ಜಯಿನಿ. 03.09.2023 20.09.2023 ರಿಂದ 8/11/12 ದಿನಗಳ ಕಾಶಿ,ಗಯಾ/ನೇಪಾಳ. 20.09.2023 06.10.2023 ರಿಂದ 15 ದಿನಗಳ ಚಾರ್‌ಧಾಮ್ ಯಾತ್ರೆ. 04.10.2023 16.10.2023 ರಿಂದ 12 ದಿನಗಳ ಕಾಶ್ಮೀರ್,ವೈಷ್ಣೋದೇವಿ ಹಾಗೂ ಇತರ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

19.09.2023 17.11.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 04.11.2023 22.11.2023 08.12.2023 ದುಬೈ,ಅಬುದಾಬಿ 5 ದಿನಗಳು. 11.10.2023 29.11.2023 ನೇಪಾಳ 9 ದಿನಗಳು. 11.09.2023 09.10.2023 17.11.2023 ಶ್ರೀಲಂಕಾ 6 ದಿನಗಳು. 19.09.2023 06.10.2023 ಕಾಶಿ,ಗಯಾ,ಅಯೋಧ್ಯ 8 ದಿನಗಳು. 11.09.2023 09.10.2023 ಗುಜರಾತ್ 8 ದಿನಗಳು. 13.10.2023 25.11.2023 ರಾಜಸ್ಥಾನ್ 9 ದಿನಗಳು. 07.10.2023 11.11.2023 ದೆಹಲಿ,ಆಗ್ರಾ,ಜೈಪುರ್ 6 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವಲ್ಸ್, ಮಲ್ಲೇಶ್ವರ, ಬೆಂಗಳೂರು-03. 9448402248 7022547922

ಭಾರತದರ್ಶನ ದರ್ಶನ 25.7.2023 7ದಿನ ರಾಮೇಶ್ವರಂ ಸಮುದ್ರಸ್ನಾನ ತಮಿಳುನಾಡು. 2.9.2023, 22.9.2023 14ದಿನ ಚಾರ್‌ಧಾಮ್ ಯಾತ್ರೆ. 11ದಿನ ಗುಜರಾತ್ 9448792891.

**ಉದ್ಯೋಗಾವಕಾಶ**

**Part-Time Jobs**

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ, ತಿಂಗಳಿಗೆ,15,000-20,000/ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

WORK FROM HOME & ಪಾರ್ಟ್ ಟೈಮ್ ಗಳಿಗೆ ಕೆಲಸಗಾರರು ಬೇಕಾಗಿದ್ದಾರೆ. ಯಾವುದೇ ವಿದ್ಯಾರ್ಹತೆ ಪರವಾಗಿಲ್ಲ. ಸಂಪರ್ಕಿಸಿ: 8722155842, 8722155787

**ಉದ್ಯೋಗಕ್ಕೆ** ನಿಮ್ಮ ಜಾಹೀರಾತು ನೀಡಲು ಸಂಪರ್ಕಿಸಿ: 9886213331

**General**

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಆಫೀಸ್ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು ನೋಡಿಕೊಳ್ಳಲು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು, ಅಡುಗೆ ಮಾಡಲು ಬೇಕಾಗಿದ್ದಾರೆ. ಅಡುಗೆ ಇರುವುದು ಅಥವಾ ಇಲ್ಲದಿರುವುದು. ಊಟ ವಸತಿ ಸಂಬಳ 12,000/- ರಿಂದ 15,000/- ಬೆಂಗಳೂರು- 56.ಸಂಪರ್ಕಿಸಿ: 9606523337, 9606385001

ತಕ್ಷಣ ಬೇಕಾಗಿದ್ದಾರೆ ಟರ್ನರ್, ಫಿಟ್ಟರ್, ಟ್ಯಾಬ್ಲೆಟ್‌ಮೇಕರ್, ಲ್ಯಾಬ್ ಕೆಮಿಸ್ಟ್, ಬ್ರೊಯಿಲರ್, ಟಿ.ಐ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITI ಅವರುಗಳು 16,600- 65,000/- (ವಿದ್ಯಾರ್ಹತೆಯುಳ್ಳವರಿಗೂ) ಅವಕಾಶ. 7259552930

**Wanted**

ತಕ್ಷಣ ಬೇಕಾಗಿದ್ದಾರೆ: 7th, 8th, 10th, PUC, ITI ವಿದ್ಯಾರ್ಹತೆ ಯಾವುದೇ ಪದವಿ ಪಾಸ್/ಫೇಲ್, ಹುದ್ದೆಗೆ ನೇರ ನೇಮಕಾತಿ. ಕೂಡಲೇ ಸಂಪರ್ಕಿಸಿ: 8747949797, 8747909797

**ಸಾರ್ವಜನಿಕ ಪ್ರಕಟಣೆ**

**ಪ್ರಕಟಣೆ**

ಮೊಬೈಲ್ ಸಂಖ್ಯೆ: 9731758008

ನಂ. 3249, ತಾಲ್ಲೂಕು ಕಛೇರಿ ವೃತ್ತ, ದೊಡ್ಡಬಳ್ಳಾಪುರ-561203

**ಓದುಗರ ಗಮನಕ್ಕೆ**

Book Your Classifieds Ads Online Log in to dhclassifieds.com

Contact : 9845114560 : 9731810277 9901641752 : 9886213331 080 - 45557163 / 164

## ಸಂಕ್ಷಿಪ್ತ ಸುದ್ದಿ

### ‘ಹಿಂಸಾಚಾರ ಜನತಂತ್ರಕ್ಕೆ ಮಾರಕ’

**ಭೋಪಾಲ್ (ಪಿಟಿಐ):** ಪಶ್ಚಿಮ ಬಂಗಾಳದ ಪಂಚಾಯಿತಿ ಚುನಾವಣೆಯಲ್ಲಿ ನಡೆದ ಹಿಂಸಾಚಾರವು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕವಾಗಿದೆ ಎಂದು ಕಾಂಗ್ರೆಸ್ ನಾಯಕ ದಿಗ್ವಿಜಯ್ ಸಿಂಗ್ ಆತಂಕ ವ್ಯಕ್ತಪಡಿಸಿದ್ದಾರೆ.

‘ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಅಚಲ ಧೈರ್ಯ ಮತ್ತು ದೃಢ ನಿರ್ಧಾರದ ಬಗ್ಗೆ ನನಗೆ ಹೆಮ್ಮೆ ಇದೆ. ಆದರೆ, ಅವರ ಕಣ್ಗಾವಲಿನಲ್ಲಿಯೇ ನಡೆದ ಹಿಂಸಾಚಾರ ಭಯಾನಕ. ಇದು ಅಕ್ಷಮ್ಯ ಅಪರಾಧವೂ ಹೌದು’ ಎಂದು ಸೋಮವಾರ ಟ್ವೀಟ್ ಮಾಡಿದ್ದಾರೆ.

ಸಿಪಿಎಂ ಅಧಿಕಾರಾವಧಿಯಲ್ಲಿಯೂ ಇಂಥದ್ದೇ ಹಿಂಸಾಚಾರವಾಗಿತ್ತು. ಆಗ ಮಮತಾ ಧೈರ್ಯವಾಗಿ ಎದುರಿಸಿದ್ದರು. ಈ ಸಂಘರ್ಷವು ಜನತಂತ್ರ ವ್ಯವಸ್ಥೆಗೆ ಅಪಾಯಕಾರಿಯಾಗಿದೆ ಎಂದಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಶನಿವಾರ ನಡೆದ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗೆ 61 ಸಾವಿರ ಮತಗಟ್ಟೆಗಳನ್ನು ಸ್ಥಾಪಿಸಲಾಗಿತ್ತು. ಹಲವೆಡೆ ಮತ ಪೆಟ್ಟಿಗೆಗಳನ್ನೇ ದುಷ್ಕರ್ಮಿಗಳು ಹೊತ್ತೊಯ್ದಿದ್ದರು. ಕೆಲವೆಡೆ ಬೆಂಕಿ ಹಚ್ಚಿದ್ದರೆ, ಕೆರೆಗಳಿಗೂ ಎಸೆದಿದ್ದರು.

### ‘ಲೋಕಮಾನ್ಯ ತಿಲಕ್’ ಪ್ರಶಸ್ತಿ ಪ್ರದಾನ

**ಪುಣೆ (ಪಿಟಿಐ):** ನಾಗರಿಕರಲ್ಲಿ ದೇಶಭಕ್ತಿಯ ಭಾವನೆಯನ್ನು ಜಾಗೃತಗೊಳಿಸಿದ್ದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಆಗಸ್ಟ್ 1ರಂದು ‘ಲೋಕಮಾನ್ಯ ತಿಲಕ್’ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ತಿಲಕ್ ಸ್ಮಾರಕ ಮಂದಿರ ಟ್ರಸ್ಟ್ (ಹಿಂದ್ ಸ್ವರಾಜ್ ಸಂಘ್) ಸೋಮವಾರ ಹೇಳಿದೆ.

ಲೋಕಮಾನ್ಯ ತಿಲಕ್ ಅವರ 103ನೇ ಪುಣ್ಯತಿಥಿಯಂದು ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುತ್ತಿದೆ ಎಂದು ಟ್ರಸ್ಟ್‌ನ ಅಧ್ಯಕ್ಷ ದೀಪಕ್ ತಿಲಕ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮೋದಿ ಅವರ ಸರ್ವೋಚ್ಚ ನಾಯಕತ್ವ ಮತ್ತು ಆತ್ಮನಿರ್ಭರ ಭಾರತ ಪರಿಕಲ್ಪನೆಯಲ್ಲಿ ದೇಶವು ಅಭಿವೃದ್ಧಿಯ ಮೆಟ್ಟಿಲುಗಳನ್ನು ಏರುತ್ತಿದೆ ಎಂದಿದ್ದಾರೆ.

ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸಿದ್ದೇವೆ ಎಂದೂ ಹೇಳಿದ್ದಾರೆ.

ಮಹಾರಾಷ್ಟ್ರ ರಾಜ್ಯಪಾಲ ರಮೇಶ್ ಬೈಸ್, ಮುಖ್ಯಮಂತ್ರಿ ಏಕನಾಥ ಶಿಂದೆ, ಉಪ ಮುಖ್ಯಮಂತ್ರಿಗಳಾದ ದೇವೇಂದ್ರ ಫಡಣವೀಸ್ ಮತ್ತು ಅಜಿತ್ ಪವಾರ್ ಅವರನ್ನೂ ಆಹ್ವಾನಿಸಲಾಗಿದೆ ಎಂದು ವಿವರಿಸಿದ್ದಾರೆ.

### ಸುಗ್ರೀವಾಜ್ಞೆ: ಮಧ್ಯಂತರ ತಡೆಗೆ ‘ಸುಪ್ರೀಂ’ ನಕಾರ

**ನವದೆಹಲಿ(ಪಿಟಿಐ):** ದೆಹಲಿಯ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣ ಕುರಿತು ಕೇಂದ್ರ ಸರ್ಕಾರವು ಹೊರಡಿಸಿರುವ ಸುಗ್ರೀವಾಜ್ಞೆಗೆ ಮಧ್ಯಂತರ ತಡೆಯಾಜ್ಞೆ ನೀಡಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

ದೆಹಲಿ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಕೈಗೆತ್ತಿಕೊಂಡ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರಿದ್ದ ಪೀಠವು, ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿ ಜುಲೈ 17ಕ್ಕೆ ವಿಚಾರಣೆ ಮುಂದೂಡಿತು.

‘ಲೆಫ್ಟಿನೆಂಟ್ ಗವರ್ನರ್ ಕೈಗೊಂಡಿರುವ ಕ್ರಮ ಪ್ರಶ್ನಿಸಿ ಸರ್ಕಾರ ಸಲ್ಲಿಸುವ ಅರ್ಜಿಯ ವಿಚಾರಣೆ ನಡೆಸಲಾಗುವುದು’ ಎಂದು ಪೀಠ ಸ್ಪಷ್ಟಪಡಿಸಿದೆ.

### ಗುಂಡಿನ ದಾಳಿ: ಯುವಕ ಸಾವು

**ಗುವಾಹಟಿ:** ಮಣಿಪುರದ ಇಂಫಾಲ್ ಪೂರ್ವ ಮತ್ತು ಕಾಂಗ್ಪೋಕ್ಪಿ ಜಿಲ್ಲೆಯ ಗಡಿ ಭಾಗಕ್ಕೆ ಹೊಂದಿಕೊಂಡಿರುವ ಹಳ್ಳಿಯಲ್ಲಿ ಸೋಮವಾರ ಅಪರಿಚಿತ ದುಷ್ಕರ್ಮಿಗಳು ನಡೆಸಿದ ಗುಂಡಿನ ದಾಳಿಗೆ ಯುವಕ ಮೃತಪಟ್ಟಿದ್ದು, ಹತ್ತು ಮಂದಿ ಗಾಯಗೊಂಡಿದ್ದಾರೆ.

ಸೈಖೋಮ್ ಸುಬಾನ್ ಸಿಂಗ್(26) ಎಂಬುವರು ಮೃತಪಟ್ಟಿದ್ದು, ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಭದ್ರತಾ ಪಡೆ ಮೂಲಗಳು ತಿಳಿಸಿವೆ.

ಅಸ್ಸಾಂ ರೈಫಲ್ ಪಡೆಯು ಹೆಚ್ಚಿನ ಅನಾಹುತ ಸಂಭವಿಸದಂತೆ ಮುಂಜಾಗ್ರತಾ ಕ್ರಮಕೈಗೊಂಡಿದೆ. ಇಂಫಾಲ್ ಪೂರ್ವ, ಕಾಂಗ್ಪೋಕ್ಪಿ ಹಾಗೂ ಚುರಚಂದಪುರ ಜಿಲ್ಲೆಯಲ್ಲಿ ಭದ್ರತೆಯನ್ನು ಬಿಗಿಗೊಳಿಸಲಾಗಿದೆ ಎಂದು ತಿಳಿಸಿವೆ.

ಹಲವು ಹಳ್ಳಿಗಳಲ್ಲಿ ಮೈತೇಯಿ ಮತ್ತು ಕುಕಿ ಸಮುದಾಯದವರು ಗುಂಡಿನ ದಾಳಿಯಿಂದ ರಕ್ಷಿಸಿಕೊಳ್ಳಲು ಅಕ್ರಮವಾಗಿ ನಿರ್ಮಿಸಿಕೊಂಡಿದ್ದ ಬಂಕರ್‌ಗಳನ್ನು ಯೋಧರು ತೆರವುಗೊಳಿಸಿದ್ದಾರೆ.

---

ಉತ್ತರ ಭಾರತದಾದ್ಯಂತ ಇಂದೂ ಮಳೆ ಸಾಧ್ಯತೆ • ಪ್ರವಾಹ ಸ್ಥಿತಿ ನಿರ್ವಹಣೆಗೆ ಸಜ್ಜಾಗಿರುವ ರಾಜ್ಯ ಸರ್ಕಾರಗಳು

# ಉಕ್ಕಿ ಹರಿದ ನದಿಗಳು, ರಸ್ತೆಗಳೇ ಮಾಯ

**ನವದೆಹಲಿ (ಪಿಟಿಐ):** ಮಳೆ ಆರ್ಭಟದಿಂದ ಉತ್ತರ ಭಾರತದಲ್ಲಿ ಮೃತರಾದವರ ಸಂಖ್ಯೆ 29ಕ್ಕೆ ಏರಿದೆ. ಅಧಿಕ ಮಳೆಯಿಂದಾಗಿ ಹಿಮಾಚಲ ಪ್ರದೇಶದಲ್ಲಿ ಭೂಕುಸಿತ ಉಂಟಾಗುತ್ತಿದ್ದು, ನಾಲ್ವರು ಮೃತಪಟ್ಟಿದ್ದು, 300ಕ್ಕೂ ಹೆಚ್ಚು ಜನ ನಿರಾಶ್ರಿತರಾಗಿದ್ದಾರೆ.

ಭೂಕುಸಿತದ ಪರಿಣಾಮವಾಗಿ ಶಿಮ್ಲಾ-ಕಲ್ಕಾ ಹೆದ್ದಾರಿಯನ್ನು, ರೈಲು ಮಾರ್ಗವನ್ನೂ ನಿರ್ಬಂಧಿಸಲಾಗಿದೆ. ಕಳೆದ ಮೂರು ದಿನಗಳಲ್ಲಿ ರಾಜ್ಯದಲ್ಲಿ ಮಳೆ ಸಂಬಂಧಿತ ಅವಘಡಗಳಲ್ಲಿ 20 ಮಂದಿ ಮೃತಪಟ್ಟಿದ್ದಾರೆ ಎಂದು ಹಿಮಾಚಲ ಪ್ರದೇಶದ ರಾಜ್ಯದ ವಿಪತ್ತು ನಿರ್ವಹಣಾ ಪಡೆಯ ಹಿರಿಯ ಅಧಿಕಾರಿ ಓಂಕಾರ್ ಶರ್ಮಾ ಹೇಳಿದ್ದಾರೆ. ಪ್ರವಾಸಿ ತಾಣ ಮನಾಲಿಯಲ್ಲಿ ಸಿಲುಕಿದ್ದ 20 ಜನರನ್ನು ರಕ್ಷಿಸಲಾಗಿದೆಯಾದರೂ, ಇತರೆಡೆಗಳಲ್ಲಿ 300ಕ್ಕೂ ಹೆಚ್ಚು ಜನರು ಸಂಕಷ್ಟದಲ್ಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶಿಮ್ಲಾದಲ್ಲಿ 120ಕ್ಕೂ ಹೆಚ್ಚು ರಸ್ತೆಗಳು ಬಂದ್ ಆಗಿದ್ದು, 484 ನೀರು ಸರಬರಾಜು ವ್ಯವಸ್ಥೆಗಳಿಗೆ ತೊಂದರೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಳೆ ಅನಾಹುತಗಳ ಹಿನ್ನೆಲೆಯಲ್ಲಿ ಸೋಮವಾರ ಬೆಳಿಗ್ಗೆ ವಿಡಿಯೊ ಸಂದೇಶ ಬಿಡುಗಡೆ ಮಾಡಿದ ಹಿಮಾಚಲ ಪ್ರದೇಶ ಸಿಎಂ ಸುಖ್ವಿಂದರ್ ಸಿಂಗ್ ಸುಖು, ‘ಜನರು ಮಳೆಯಲ್ಲಿ, ನದಿಗಳ ಬಳಿ ಹೋಗಬಾರದು ಎಂದು ಮನವಿ ಮಾಡಿಕೊಂಡರು. ಮುಂದಿನ 24 ಗಂಟೆಗಳ ಕಾಲ ಜಾಗರೂಕರಾಗಿರಿ’ ಎಂದೂ ಕೋರಿದರು. ಮಳೆ ಮಂಗಳವಾರವೂ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಸಿದೆ. ಈ ಸಂಕಷ್ಟದ ಸಮಯದಲ್ಲಿ ಎಲ್ಲಾ ಶಾಸಕರು ತಮ್ಮ ಕ್ಷೇತ್ರಗಳಲ್ಲಿಯೇ ಉಳಿದು ಜನರಿಗೆ ಸಹಾಯ ಮಾಡುವಂತೆಯೂ ಅವರು ಕೇಳಿಕೊಂಡರು.

**ಅಪಾಯದ ಮಟ್ಟಕ್ಕೆ ಯಮುನೆ:** ದೆಹಲಿಯಲ್ಲಿ ಯಮುನಾ ನದಿಯೂ ಸೇರಿದಂತೆ ಉತ್ತರ ಭಾರತದ ಹಲವಾರು ನದಿಗಳು ಉಕ್ಕಿ ಹರಿಯುತ್ತಿವೆ. ಬಹುತೇಕ ಮಂಗಳವಾರ ಯಮುನೆ ಅಪಾಯದ ಮಟ್ಟ ಮೀರಬಹುದು ಎಂದು ಅಂದಾಜಿಸಲಾಗಿದೆ.

ಹರಿಯಾಣದ ಹತ್ನಿಕುಂಡ್ ಬ್ಯಾರೇಜ್‌ನಿಂದ ಯುಮುನಾ ನದಿಗೆ ಹೆಚ್ಚಿನ ನೀರು ಬಿಡುಗಡೆ ಮಾಡಲಾಗಿದ್ದು, ನವದೆಹಲಿಯಲ್ಲಿ ಯಮುನೆ 205.33 ಮೀಟರ್ ಮಟ್ಟದಲ್ಲಿ ಹರಿಯುತ್ತಿದೆ.

ಈ ಹಿನ್ನೆಲೆಯಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸೋಮವಾರ ಉನ್ನತ ಮಟ್ಟದ ಸಭೆ ನಡೆಸಿದರು.

ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಕೇಜ್ರಿವಾಲ್, ಯಮುನಾ ನದಿಯ ನೀರಿನ ಮಟ್ಟ 206 ಮೀಟರ್ ಸಮೀಪಿಸುತ್ತಿದೆ. ನದಿಯ ಸುತ್ತಮುತ್ತಲ ಪ್ರದೇಶಗಳಿಂದ ಜನರನ್ನು ಸ್ಥಳಾಂತರಿಸುವ ಕಾರ್ಯ ಆರಂಭಿಸಲಾಗುವುದು. ರಾಷ್ಟ್ರರಾಜಧಾನಿಯಲ್ಲಿ ಪ್ರವಾಹ ಸ್ಥಿತಿ ಎದುರಾಗದು ಎಂದು ಹವಾಮಾನ ತಜ್ಞರು ಹೇಳಿದ್ದಾರೆ ಎಂದು ಜನರಿಗೆ ಭರವಸೆ ನೀಡಿದರು.

**ಪಂಜಾಬ್, ಹರಿಯಾಣ ತತ್ತರ:** ಪಂಜಾಬ್ ಮತ್ತು ಹರಿಯಾಣಗಳಲ್ಲೂ ಮಳೆಯಿಂದಾಗಿ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದ್ದು, ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲು ಸ್ಥಳಿಯಾಡಳಿತಗಳು ಹರಸಾಹಸಪಡುತ್ತಿವೆ. ಪಂಜಾಬ್ ಸರ್ಕಾರವು ಜುಲೈ 13 ರವರೆಗೆ ರಾಜ್ಯದ ಶಾಲೆಗಳನ್ನು ಮುಚ್ಚಲು ಆದೇಶಿಸಿದೆ.

ಮಳೆ ಹಾನಿ ಹಿನ್ನೆಲೆಯಲ್ಲಿ ಹರಿಯಾಣ ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಅವರು ಸೋಮವಾರ ಪೂರ್ವ ನಿಗದಿತ ಕಾರ್ಯಕ್ರಮಗಳನ್ನು ರದ್ದುಗೊಳಿಸಿದರು. ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳೊಂದಿಗೆ ತುರ್ತು ಸಭೆ ನಡೆಸಿದರು.

**ಉತ್ತರ ಪ್ರದೇಶದಲ್ಲೂ ಕಟ್ಟೆಚ್ಚರ:** ಉತ್ತರಾಖಂಡ ಮತ್ತು ಹಿಮಾಚಲ ಪ್ರದೇಶದಲ್ಲಿ ನದಿಗಳು ಉಕ್ಕಿ ಹರಿಯುವ ಸಾಧ್ಯತೆಯಿರುವುದರಿಂದ ಎಚ್ಚರಿಕೆಯಿಂದ ಇರುವಂತೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಎಲ್ಲಾ ಇಲಾಖೆಗಳಿಗೆ ಸೂಚನೆ ನೀಡಿದ್ದಾರೆ.

ಪಂಚಕುಲದಲ್ಲಿ ಸೋಮವಾರ ಭಾರೀ ಮಳೆಯಿಂದಾಗಿ ರಸ್ತೆಯ ಒಂದು ಭಾಗ ಕೊಚ್ಚಿ ಹೋಗಿದೆ — ಪಿಟಿಐ ಚಿತ್ರ

> **ಉತ್ತರ ಭಾರತದ ರಾಜ್ಯಗಳಲ್ಲಿ ಭಾರೀ ಮಳೆ ಮತ್ತು ಭೂಕುಸಿತದಿಂದ ಆದ ಜೀವಹಾನಿ ಅತ್ಯಂತ ದುಃಖಕರ. ವಿಕೋಪದ ಈ ಕಠಿಣ ಸವಾಲನ್ನು ಒಟ್ಟಾಗಿ ಎದುರಿಸಬೇಕಾಗಿದೆ.**
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

### ಮಳೆ: ಇಳಿಯದ ಟೊಮೆಟೊ ಬೆಲೆ

ಉತ್ತರ ಭಾರತವೂ ಸೇರಿದಂತೆ ಹಲವು ರಾಜ್ಯಗಳಲ್ಲಿ ಮಳೆ ಅಬ್ಬರಿಸುತ್ತಿರುವುದು ದೇಶದಲ್ಲಿ ಟೊಮೆಟೊ ಸರಬರಾಜಿಗೆ ಅಡಚಣೆಯುಂಟು ಮಾಡಿದೆ. ಹೀಗಾಗಿ ಟೊಮೆಟೊ ಚಿಲ್ಲರೆ ಮಾರಾಟ ಬೆಲೆ ₹200ಗೆ ತಲುಪಿದೆ. ಇತರ ತರಕಾರಿಗಳ ಬೆಲೆಯಲ್ಲೂ ಏರಿಕೆ ಕಂಡಿದೆ. ಮಳೆಯಿಂದಾಗಿ ಟೊಮೆಟೊ, ಶುಂಠಿ, ಈರುಳ್ಳಿ ಬೆಳೆಗಳು ಹಾನಿಗೀಡಾಗಿವೆ ಎಂದು ವರ್ತಕರು ತಿಳಿಸಿದ್ದಾರೆ. ದೇಶದಲ್ಲಿ ಸೋಮವಾರ ಟೊಮೆಟೊ ಬೆಲೆ ಸರಾಸರಿ ₹104.38 ಇತ್ತಾದರೂ, ರಾಜಸ್ಥಾನದ ಸವಾಯ್ ಮಾದೋಪುರದಲ್ಲಿ ಗರಿಷ್ಠ ₹200 ತಲುಪಿತ್ತು. ಚುರು ಜಿಲ್ಲೆಯಲ್ಲಿ ಕನಿಷ್ಠ ₹31 ಇತ್ತು.

### ದೆಹಲಿಯಲ್ಲಿ ಸಮಸ್ಯೆ: ಎಎಪಿ ವಿರುದ್ಧ ಬಿಜೆಪಿ ಪ್ರತಿಭಟನೆ

**ನವದೆಹಲಿ (ಪಿಟಿಐ):** ದಾಖಲೆ ಮಳೆಗೆ ಸಾಕ್ಷಿಯಾಗಿರುವ ದೆಹಲಿಯಲ್ಲಿ ಸದ್ಯ ರಸ್ತೆ, ತಗ್ಗು ಪ್ರದೇಶಗಳಲ್ಲಿ ನೀರು ನಿಂತಿದೆ. ಎಎಪಿಯನ್ನು ಹಣಿಯಲು ಬಿಜೆಪಿ ಈ ವಿಚಾರವನ್ನು ರಾಜಕೀಯ ಅಸ್ತ್ರವಾಗಿ ಬಳಸಿಕೊಂಡಿದೆ.

ಮಳೆ ನೀರು ನಿಂತಿರುವುದರಿಂದ ಜನರಿಗೆ ಉಂಟಾದ ಸಮಸ್ಯೆಯನ್ನು ಮುಂದಿಟ್ಟುಕೊಂಡು ದೆಹಲಿ ಬಿಜೆಪಿ ಸೋಮವಾರ ಡಿಡಿಯು ಮಾರ್ಗ್‌ನಲ್ಲಿರುವ ಎಎಪಿ ಕಚೇರಿ ಬಳಿ ಸೋಮವಾರ ಪ್ರತಿಭಟನೆ ನಡೆಸಿತು.

‘ಜನವಸತಿ ಪ್ರದೇಶ, ರಸ್ತೆಗಳಲ್ಲಿ ನೀರು ನಿಂತಿದೆ. ಸಂಚಾರ ದಟ್ಟಣೆ ಉಂಟಾಗಿದೆ. ಜನರಿಗೆ ಈ ಸಮಸ್ಯೆ ತಂದೊಡ್ಡಿದ್ದಕ್ಕಾಗಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರಿಗೆ ನಾಚಿಕೆಯಾಗಬೇಕು. ದೆಹಲಿಯಲ್ಲಿ ಇಂತಹ ಅವ್ಯವಸ್ಥೆಯನ್ನು ನಾನು ಹಿಂದೆ ನೋಡಿರಲಿಲ್ಲ’ ಎಂದು ದೆಹಲಿಯ ಬಿಜೆಪಿ ಅಧ್ಯಕ್ಷ ವೀರೇಂದ್ರ ಸಚ್‌ದೇವ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಭಾನುವಾರ ದೆಹಲಿಯಲ್ಲಿ 15.3 ಸೆಂ.ಮೀ ಮಳೆಯಾಗಿತ್ತು. ಇದು 1982ರಿಂದ ಈ ವರೆಗೆ ಜುಲೈನಲ್ಲಿ ಒಂದೇ ದಿನದಲ್ಲಿ ಸುರಿದ ಅಧಿಕ ಪ್ರಮಾಣದ ಮಳೆ ಎನಿಸಿದೆ.

### ರಾಜಸ್ಥಾನದಲ್ಲಿ ಜನಜೀವನ ಸ್ತಬ್ಧ

**ಜೈಪುರ(ಪಿಟಿಐ):** ಥಾರ್ ಮರುಭೂಮಿಯನ್ನು ಒಡಲಲ್ಲಿಟ್ಟುಕೊಂಡಿರುವ ರಾಜಸ್ಥಾನದಲ್ಲೂ ಕಳೆದ ಎರಡು ದಿನಗಳಿಂದ ಮಳೆ ಅಬ್ಬರಿಸುತ್ತಿದೆ. ಹೀಗಾಗಿ ಜನಜೀವನ ಸ್ತಬ್ಧಗೊಂಡಿದೆ.

ಸಿರೋಹಿ ಜಿಲ್ಲೆಯ ಮೌಂಟ್ ಅಬುವಿನಲ್ಲಿ ಸೋಮವಾರ ಬೆಳಿಗ್ಗೆ ಅಂತ್ಯಗೊಂಡ 24 ಗಂಟೆಗಳಲ್ಲಿ ದಾಖಲೆಯ 23.1 ಸೆಂ.ಮೀ ಮಳೆ ಸರಿದಿದೆ. ಸಿರೋಹಿ, ಅಜ್ಮೇರ್, ಪಾಲಿ, ಕರೌಲಿ, ಜೈಪುರ, ಜಲೋರ್, ಟೋಂಕ್ ಮತ್ತು ಸಿಕರ್‌ನ ಹಲವಾರು ಸ್ಥಳಗಳು ಜಲಾವೃತವಾಗಿವೆ. ಜೈಪುರದಲ್ಲಿ, ಸೋಮವಾರ ಬೆಳಿಗ್ಗೆಯಿಂದಲೂ ನಿರಂತರ ಮಳೆಯಾಗಿದ್ದು, ಹಲವು ಪ್ರದೇಶಗಳಲ್ಲಿ ನೀರು ನಿಂತಿತ್ತು. ಸಂಚಾರ ದಟ್ಟಣೆ ಸಮಸ್ಯೆಯೂ ಎದುರಾಯಿತು.

ಸಿರೋಹಿಯ ಅಬು ರಸ್ತೆಯಲ್ಲಿ 16ಸೆಂ.ಮೀ, ಅಜ್ಮೇರ್‌ನಲ್ಲಿ 13.7 ಸೆಂ.ಮೀ, ಪಾಲಿಯ ಬನಿವಾಸ್‌ನಲ್ಲಿ 12.8 ಸೆಂ.ಮೀ ಮತ್ತು ಕರೌಲಿಯ ಮಸಾಲ್‌ಪುರದಲ್ಲಿ 12ಸೆಂ.ಮೀ ಮಳೆಯಾಗಿದೆ. ಜೈಪುರದ ಸಂಭಾರ್, ಜಲೋರ್‌ನ ಬಾಗೋಡಾದಲ್ಲಿ ತಲಾ 9.9 ಸೆಂ.ಮೀ ಮತ್ತು ಟೋಂಕ್‌ನಲ್ಲಿ 9.8 ಸೆಂ.ಮೀ ಮಳೆಯಾಗಿದೆ.

## ಯುಸಿಸಿ: ಅನೌಪಚಾರಿಕ ಚರ್ಚೆ

**ನವದೆಹಲಿ (ಪಿಟಿಐ):** ವಿರೋಧ ಪಕ್ಷಗಳು ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಬಗ್ಗೆ ಅನೌಪಚಾರಿಕ ಚರ್ಚೆ ನಡೆಸುತ್ತಿವೆ ಮತ್ತು ಕರಡು ಕಾನೂನು ಹೊರಬಂದ ನಂತರ ಸೂಕ್ಷ್ಮವಾಗಿ ಗಮನ ಹರಿಸಲಾಗುವುದು ಎಂದು ರಾಜ್ಯಸಭಾ ಸಂಸದ ಮನೋಜ್ ಝಾ ಸೋಮವಾರ ಹೇಳಿದ್ದಾರೆ.

ಮುಂಬರುವ ಸಾರ್ವತ್ರಿಕ ಚುನಾವಣೆಗಾಗಿ ಸಾಮಾನ್ಯ ಕಾರ್ಯಸೂಚಿ ಚರ್ಚಿಸಲು ಜುಲೈ 17 ಮತ್ತು 18ರಂದು ಬೆಂಗಳೂರಿನಲ್ಲಿ ಸಭೆ ನಡೆಸಲು ವಿರೋಧ ಪಕ್ಷಗಳು ಸಿದ್ಧತೆ ನಡೆಸುತ್ತಿರುವ ಸಂದರ್ಭದಲ್ಲಿಯೇ ಯುಸಿಸಿ ಕರಡು ಬಗ್ಗೆಯೂ ಚರ್ಚಿಸುವ ಸಾಧ್ಯತೆ ಇದೆ.

ಏಕರೂಪದ ವೈಯಕ್ತಿಕ ಕಾನೂನು ತರುವ ಸರ್ಕಾರದ ಉದ್ದೇಶ ಪ್ರಶ್ನಿಸಿರುವ ಝಾ, ನಾಗರಿಕರ ಆರ್ಥಿಕ ಕಲ್ಯಾಣ ರಕ್ಷಿಸಲು ಮತ್ತು ಉತ್ತೇಜಿಸಲು ನಿರ್ದೇಶಿಸುವ ಸಂವಿಧಾನದ 39ನೇ ವಿಧಿಯತ್ತ ಸರ್ಕಾರ ಗಮನ ಹರಿಸುತ್ತಿಲ್ಲ. ಆದರೂ ಯುಸಿಸಿ ಅನ್ನು ಸಂವಿಧಾನದ 44 ನೇ ವಿಧಿಯಡಿ ತರಲಾಗುತ್ತಿದೆ ಎಂದು ರಾಷ್ಟ್ರೀಯ ಜನತಾ ದಳ ನಾಯಕ ಝಾ ಹೇಳಿದರು.

ಮತದಾರರನ್ನು ವಿಭಜಿಸುವುದು ಮತ್ತು ಧ್ರುವೀಕರಣಗೊಳಿಸುವುದು ಈ ಕರಡು ಹಿಂದಿನ ಉದ್ದೇಶವಾಗಿದೆ ಎಂದು ಝಾ ಹೇಳಿದರು.

‘ಅನೌಪಚಾರಿಕ ಚರ್ಚೆಗಳು ನಡೆಯುತ್ತಿವೆ. ಯುಸಿಸಿ ಕುರಿತ ಒಂದು ಪ್ಯಾರಾ ಓದದವರು ಇದರ ಬಗ್ಗೆ ಮಾತನಾಡುತ್ತಿರುವುದು ನನಗೆ ಅಚ್ಚರಿ ಉಂಟು ಮಾಡಿದೆ. ಹಿಂದಿನ ಕಾನೂನು ಆಯೋಗ ಏನು ಹೇಳಿದೆ ಅಥವಾ 1948 ಸಂವಿಧಾನ ಸಭೆಯಲ್ಲಿ ಬಿ. ಆರ್. ಅಂಬೇಡ್ಕರ್ ಅವರ ಹೇಳಿಕೆ ಏನು ಎಂಬುದು ಅವರಿಗೆ ತಿಳಿದಿಲ್ಲ’ ಎಂದು ಹೇಳಿದ್ದಾರೆ.

ಸುಪ್ರೀಂ ಕೋರ್ಟ್ ಮಾಜಿ ನ್ಯಾಯಮೂರ್ತಿ ಬಲಬೀರ್ ಸಿಂಗ್ ಅಧ್ಯಕ್ಷತೆಯಲ್ಲಿ 2015ರಿಂದ 2018ರ ಅವಧಿಯಲ್ಲಿ ಕಾರ್ಯನಿರ್ವಹಿಸಿದ 21ನೇ ಕಾನೂನು ಆಯೋಗ, ಯುಸಿಸಿ ಅನಗತ್ಯ ಮತ್ತು ಅಪೇಕ್ಷಣೀಯವಲ್ಲ ಎಂದು ಹೇಳಿದೆ.

ಗಂಗಾ ಜಲ...

ಹರಿದ್ವಾರದ ಹರ್ ಕಿ ಪೌರಿ ಘಾಟ್ ನಲ್ಲಿ ಶಿವನ ಭಕ್ತರು ಶ್ರಾವಣ ಮಾಸದ ವಿಶೇಷ ಪೂಜೆಗೆ ಗಂಗಾ ಜಲ ಸಂಗ್ರಹಿಸಲು ಸೇರಿರುವ ದೃಶ್ಯ – ಪಿಟಿಐ ಚಿತ್ರ

## ಮಣಿಪುರ: ಅರ್ಜಿದಾರರಿಗೆ ‘ಸುಪ್ರೀಂ’ ತಪರಾಕಿ

**ನವದೆಹಲಿ (ಪಿಟಿಐ):** ‘ಮೈತೇಯಿ ಮತ್ತು ಕುಕಿ ಬುಡಕಟ್ಟು ಸಮುದಾಯದ ನಡುವಣ ಹಿಂಸಾಚಾರದಿಂದ ನಲುಗಿರುವ ಮಣಿಪುರದಲ್ಲಿ ಮತ್ತಷ್ಟು ಹಿಂಸೆ ಉಲ್ಬಣಗೊಳಿಸಲು ನಮ್ಮನ್ನು ವೇದಿಕೆಯಾಗಿ ಬಳಸಿಕೊಳ್ಳಬೇಡಿ. ರಚನಾತ್ಮಕ ಸಲಹೆಗಳನ್ನಷ್ಟೇ ನ್ಯಾಯಾಲಯದ ಮುಂದೆ ಮಂಡಿಸಬೇಕು’ ಎಂದು ಸುಪ್ರೀಂ ಕೋರ್ಟ್ ಸೋಮವಾರ ತಾಕೀತು ಮಾಡಿದೆ.

ಕಣಿವೆ ರಾಜ್ಯದ ಪರಿಸ್ಥಿತಿಗೆ ಸಂಬಂಧಿಸಿದಂತೆ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರಿದ್ದ ವಿಭಾಗೀಯ ಪೀಠವು, ನ್ಯಾಯಾಲಯದ ಸಮಯವನ್ನು ವ್ಯರ್ಥಗೊಳಿಸಲು ಯತ್ನಿಸಿದ ಅರ್ಜಿದಾರರಿಗೆ ತಪರಾಕಿ ನೀಡಿತು.

ಮಣಿಪುರ ಬುಡಕಟ್ಟು ವೇದಿಕೆ, ಮಣಿಪುರ ಹೈಕೋರ್ಟ್ ಬಾರ್ ಅಸೋಸಿಯೇಷನ್ ಸೇರಿದಂತೆ ವಿವಿಧ ಸಂಘಟನೆಗಳು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ ಪೀಠವು, ಸಂಘರ್ಷ ನಿಯಂತ್ರಣಕ್ಕೆ ಪೂರಕವಾಗಿರುವ ಸಲಹೆಗಳನ್ನು ನೀಡುವಂತೆ ಹಾಜರಿದ್ದ ವಕೀಲರಿಗೆ ಸೂಚಿಸಿತು. ಬಳಿಕ ಮಂಗಳವಾರಕ್ಕೆ ವಿಚಾರಣೆಯನ್ನು ಮುಂದೂಡಿತು.

**ಜನರ ರಕ್ಷಣೆ ಸರ್ಕಾರದ ಹೊಣೆ:** ಹಿಂಸಾಚಾರ ನಿಯಂತ್ರಣಕ್ಕೆ ಸುಪ್ರೀಂ ಕೋರ್ಟ್ ಕಾನೂನು ಮತ್ತು ಸುವ್ಯವಸ್ಥೆಯನ್ನು ಕೈಗೆತ್ತಿಕೊಳ್ಳುವುದಿಲ್ಲ. ಅದು ಕೇಂದ್ರ ಮತ್ತು ಮಣಿಪುರ ಸರ್ಕಾರದ ಹೊಣೆಗಾರಿಕೆಯಾಗಿದೆ ಎಂದು ಪೀಠವು ಒತ್ತಿ ಹೇಳಿತು.

‘ಸಂಘರ್ಷ ತಡೆ ಮತ್ತು ಅಲ್ಲಿನ ಸಮಸ್ಯೆಗಳಿಗೆ ಸಂಬಂಧಿಸಿದಂತೆ ನಮ್ಮನ್ನು ಬಳಸಿಕೊಳ್ಳಬೇಡಿ. ನಾವು ಕಾನೂನನ್ನು ಕೈಗೆತ್ತಿಕೊಳ್ಳುವುದಿಲ್ಲ. ಸಂಘರ್ಷವು ಮಾನವೀಯ ನೆಲೆಗಟ್ಟಿನಲ್ಲಿ ಬಗೆಹರಿಸಬಹುದಾದ ವಿಷಯವಾಗಿದೆ. ಇದರ ಜವಾಬ್ದಾರಿಯನ್ನು ಸರ್ಕಾರಗಳೇ ಹೊರಬೇಕಿದೆ’ ಎಂದು ಪ್ರತಿಪಾದಿಸಿತು.

‘ರಾಜ್ಯದಲ್ಲಿ ಎಲ್ಲರೂ ಕುಕಿ ಬುಡಕಟ್ಟು ಜನರ ವಿರುದ್ಧವಾಗಿದ್ದಾರೆ’ ಎಂಬ ಮಣಿಪುರ ಬುಡಕಟ್ಟು ವೇದಿಕೆ ಪರ ಹಾಜರಿದ್ದ ಹಿರಿಯ ವಕೀಲ ಕಾಲಿನ್ ಗೊನ್ಸಾಲ್ವಿಸ್ ಅವರ ವಾದಕ್ಕೆ ಅರ್ಧದಲ್ಲೇ ತಡೆ ಹಾಕಿದ ಪೀಠವು, ‘ನಿಮ್ಮ ಈ ಶಂಕಾಸ್ಪದ ಮಾಹಿತಿಯಿಂದ ನಾವು ಕಾನೂನು ಕೈಗೆತ್ತಿಕೊಳ್ಳಲು ಆಗುವುದಿಲ್ಲ’ ಎಂದು ಚಾಟಿ ಬೀಸಿತು.

ಮಣಿಪುರ ಸರ್ಕಾರದ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ‘ಕೇಂದ್ರ ಮತ್ತು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳಿಂದ ಸಂಘರ್ಷ ನಿಯಂತ್ರಣಕ್ಕೆ ಬರುತ್ತಿದೆ’ ಎಂದು ತಿಳಿಸಿದರು.

ಸಂಘರ್ಷ ಪೀಡಿತ ನೆಲಕ್ಕೆ ರಾಷ್ಟ್ರೀಯ ಹೆದ್ದಾರಿ ಮೂಲಕವೇ ಅಗತ್ಯ ವಸ್ತುಗಳ ಪೂರೈಕೆಯಾಗಬೇಕಿದೆ. ಹಾಗಾಗಿ, ಹೆದ್ದಾರಿಯಲ್ಲಿ ಯಾವುದೇ ಅಡೆತಡೆ, ಪ್ರತಿಭಟನೆಗಳು ನಡೆಯದಂತೆ ಕಡಿವಾಣ ಹಾಕಬೇಕಿದೆ ಎಂದು ಬಾರ್ ಅಸೋಸಿಯೇಷನ್ ನೀಡಿದ ಸಲಹೆಯನ್ನು ಪೀಠವು ಪುರಸ್ಕರಿಸಿತು.

**ಜನರ ರಕ್ಷಣೆಗೆ ಕ್ರಮ:** ಬುಡಕಟ್ಟು ಜನರು ಸೇರಿದಂತೆ ಎಲ್ಲಾ ಜಾತಿ, ಧರ್ಮದವರ ಹಕ್ಕುಗಳ ರಕ್ಷಣೆ ಮತ್ತು ಭದ್ರತೆಗೆ ಸರ್ಕಾರ ಅಗತ್ಯ ಕ್ರಮಕೈಗೊಂಡಿದೆ ಎಂದು ಮಣಿಪುರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ವರದಿ ಸಲ್ಲಿಸಿದೆ.

ಒಟ್ಟು 5,995 ಎಫ್‌ಐಆರ್ ದಾಖಲಾಗಿವೆ. ಆರು ಪ್ರಮುಖ ಪ್ರಕರಣಗಳ ತನಿಖೆಯ ಹೊಣೆಯನ್ನು ಸಿಬಿಐಗೆ ವರ್ಗಾಯಿಸಲಾಗಿದೆ ಎಂದು ರಾಜ್ಯ ಮುಖ್ಯ ಕಾರ್ಯದರ್ಶಿ ಸಲ್ಲಿಸಿರುವ ವರದಿಯಲ್ಲಿ ಹೇಳಲಾಗಿದೆ.

### ಪಿಯು: 20 ಆಂತರಿಕ ಅಂಕ ಕಡ್ಡಾಯ

**ಬೆಂಗಳೂರು:** ಪಿಯು ಪರೀಕ್ಷೆಯಲ್ಲೂ 20 ಆಂತರಿಕ ಅಂಕಗಳನ್ನು ನಿಗದಿ ಮಾಡಿ ಪದವಿಪೂರ್ವ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ. ಈ ನಿಯಮ ಪ್ರಸಕ್ತ ಶೈಕ್ಷಣಿಕ ಸಾಲಿನಿಂದಲೇ (2023–24) ಅನ್ವಯವಾಗಲಿದೆ.

ಆಂತರಿಕ ಅಂಕಗಳನ್ನು ಆಯಾ ವಿಷಯಗಳ ಉಪನ್ಯಾಸಕರು ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡಿ ದಾಖಲಿಸಬೇಕು. ಕಿರು ಪರೀಕ್ಷೆಗಳಲ್ಲಿ ಗಳಿಸಿದ ಅಂಕಗಳ ಆಧಾರದಲ್ಲಿ 10 ಹಾಗೂ ಪ್ರಾಜೆಕ್ಟ್ ವರ್ಕ್ ಹಾಗೂ ಅಸೈನ್‌ಮೆಂಟ್ ಆಧಾರದಲ್ಲಿ 10 ಅಂಕಗಳನ್ನು ನಿಗದಿ ಮಾಡಬೇಕು ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಭೌತವಿಜ್ಞಾನ, ರಸಾಯನವಿಜ್ಞಾನ, ಸಂಗೀತ, ಗೃಹ ವಿಜ್ಞಾನ ಮೊದಲಾದ ವಿಷಯಗಳಲ್ಲಿ ಆಂತರಿಕ ಮೌಲ್ಯಮಾಪನ ಇರುವುದಿಲ್ಲ. ಅಂತಹ ವಿಷಯಗಳಲ್ಲಿ ಯಥಾಸ್ಥಿತಿ ಮುಂದುವರಿಸಲಾಗುತ್ತದೆ. ಭಾಷಾ ಹಾಗೂ ಐಚ್ಛಿಕ ವಿಷಯಗಳಲ್ಲಿ ಆಂತರಿಕ ಅಂಕ ಕಡ್ಡಾಯಗೊಳಿಸಲಾಗಿದೆ. ಉಳಿದ 80 ಅಂಕಗಳಿಗೆ ಪರೀಕ್ಷೆ ನಡೆಸಬೇಕು. ತೇರ್ಗಡೆಯಾಗಲು ವಿದ್ಯಾರ್ಥಿಗಳು ಕನಿಷ್ಠ 24 ಅಂಕಗಳನ್ನು ಪಡೆಯಬೇಕು. ಆಂತರಿಕ ಅಂಕಗಳನ್ನು ಪೋರ್ಟಲ್‌ಗೆ ಅಪ್‌ಲೋಡ್ ಮಾಡಬೇಕು ಎಂದು ಸೂಚಿಸಲಾಗಿದೆ.

### ರಾಹುಲ್ ನಡೆಸುತ್ತಿರುವುದು ‘ದ್ವೇಷದ ಬೃಹತ್ ಮಾಲ್’: ನಡ್ಡಾ ಆರೋಪ

**ಗೋಧ್ರಾ (ಪಿಟಿಐ):** ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ‘ಮೊಹಬ್ಬತ್ ಕಿ ದುಕಾನ್’ ಘೋಷಣೆಯನ್ನು ಕಟುವಾಗಿ ಟೀಕಿಸಿರುವ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ಕಾಂಗ್ರೆಸ್ ನಾಯಕ ನಿಜವಾಗಿಯೂ ನಡೆಸುತ್ತಿರುವುದು ‘ದ್ವೇಷದ ಬೃಹತ್ ಮಾಲ್’ ಅನ್ನು ಎಂದು ಸೋಮವಾರ ದೂರಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ವಿರುದ್ಧ ದ್ವೇಷಕಾರುವ ರಾಹುಲ್ ಗಾಂಧಿ ಮತ್ತು ಇತರ ಕಾಂಗ್ರೆಸ್ ನಾಯಕರ ವಿರುದ್ಧ ನಡ್ಡಾ ವಾಗ್ದಾಳಿ ನಡೆಸಿದ್ದಾರೆ.

ಮೋದಿ ಸರ್ಕಾರ ಒಂಬತ್ತು ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಗುಜರಾತಿನ ಪಂಚಮಹಲ್ ಜಿಲ್ಲೆಯ ಗೋಧ್ರಾ ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ಕುಟುಂಬ ಕೇಂದ್ರಿತ ಪಕ್ಷಗಳಾಗಿ ಬದಲಾಗಿರುವ ವಿರೋಧ ಪಕ್ಷಗಳಿಗೆ, ಜನ ಸಾಮಾನ್ಯರ ಕಲ್ಯಾಣದ ಕುರಿತು ಯಾವುದೇ ಕಾಳಜಿ ಇಲ್ಲ’ ಎಂದು ಆರೋಪಿಸಿದರು.

‘ಜಾಗತಿಕ ಮಟ್ಟದಲ್ಲಿ ಮೋದಿ ಅವರಿಗೆ ಪುರಸ್ಕಾರಗಳು ದೊರೆತಾಗ ವಿಚಲಿತರಾಗುವ ಕಾಂಗ್ರೆಸ್ ನಾಯಕರು, ದೇಶವನ್ನೇ ವಿರೋಧಿಸಲು ಆರಂಭಿಸುತ್ತಾರೆ’ ಎಂದು ಕಿಡಿಕಾರಿದರು.

‘ಬ್ರಿಟನ್‌ಗೆ ಹೋಗಿದ್ದ ರಾಹುಲ್ ಗಾಂಧಿ ಅವರು ದೇಶದಲ್ಲಿ ಪ್ರಜಾಪ್ರಭುತ್ವ ಅಪಾಯದಲ್ಲಿದೆ ಎಂದು ಹೇಳಿದರು. ಆದರೆ ಅವರ ಅಜ್ಜಿಯವರೇ (ದಿವಂಗತ ಇಂದಿರಾ ಗಾಂಧಿ) ಪ್ರಧಾನಿ ಆಗಿದ್ದಾಗ 1975ರಲ್ಲಿ ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿ, 1.5 ಲಕ್ಷ ಜನರನ್ನು ಜೈಲಿಗಟ್ಟಿದ್ದರು. ಈಗ ರಾಹುಲ್ ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತಿದ್ದಾರೆ’ ಎಂದು ಜರಿದರು.

ಪ್ರಧಾನಿ ಮೋದಿ ಅವರು ದೇಶದ 140 ಕೋಟಿ ಜನರಿಗೆ ಸೇವೆ ಸಲ್ಲಿಸುವುದರಲ್ಲಿ ತೊಡಗಿದ್ದರೆ, ವಿರೋಧ ಪಕ್ಷಗಳು ತಮ್ಮ ಕುಟುಂಬಗಳ ರಕ್ಷಣೆಯಲ್ಲಿ ತೊಡಗಿವೆ. ಮೋದಿ ಅವರನ್ನು ‘ನೀಚ’, ‘ಚೇಳು’, ‘ಹಾವು’ ಮತ್ತು ‘ಚಾಯ್‌ವಾಲಾ’ ಎಂದೆಲ್ಲಾ ಅವಮಾನಿಸಿರುವ ಕಾಂಗ್ರೆಸ್ ನಾಯಕರು ಕೀಳುಮಟ್ಟದ ರಾಜಕೀಯ ನಡೆಸುತ್ತಿದ್ದಾರೆ ಎಂದು ನಡ್ಡಾ ಆರೋಪಿಸಿದರು.

### ಸೀಮಾ ನಿರ್ಣಯ ಆಯೋಗ: ಕಾಂಬ್ಳೆ ನೇಮಕ

**ಬೆಂಗಳೂರು:** ಕರ್ನಾಟಕ ಪಂಚಾಯತ್‌ರಾಜ್ ಸೀಮಾ ನಿರ್ಣಯ ಆಯೋಗಕ್ಕೆ ನಿವೃತ್ತ ಐಎಎಸ್ ಅಧಿಕಾರಿ ಎಂ.ಆರ್. ಕಾಂಬ್ಳೆ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಿ ರಾಜ್ಯ ಸರ್ಕಾರ ಸೋಮವಾರ ಆದೇಶ ಹೊರಡಿಸಿದೆ.

ನಿವೃತ್ತ ಐಎಎಸ್ ಅಧಿಕಾರಿ ಕೆ.ಆರ್. ನಿರಂಜನ್ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ನಿವೃತ್ತ ನಿರ್ದೇಶಕ ಪಿ. ಶಿವಶಂಕರ್ ಅವರನ್ನು ಆಯೋಗದ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ.

ಸೀಮಾ ನಿರ್ಣಯ ಕಾರ್ಯವನ್ನು ನಾಲ್ಕು ವಾರಗಳ ಒಳಗೆ ಪೂರ್ಣಗೊಳಿಸಿ ಸರ್ಕಾರಕ್ಕೆ ವರದಿ ಸಲ್ಲಿಸಬೇಕು ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

ಈ ಹಿಂದಿನ ಸರ್ಕಾರ ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಂ. ಲಕ್ಷ್ಮಿನಾರಾಯಣ ಅವರ ಅಧ್ಯಕ್ಷತೆಯಲ್ಲಿ ಸೀಮಾ ನಿರ್ಣಯ ಆಯೋಗವನ್ನು ರಚಿಸಿತ್ತು. ಸಿವಿಲ್ ನ್ಯಾಯಾಲಯದ ಅಧಿಕಾರ ಹೊಂದಿರುವ ಈ ಆಯೋಗವು, ಈ ಹಿಂದಿನ ಜನಗಣತಿ ಆಧರಿಸಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಗಡಿಯನ್ನು ನಿರ್ಧರಿಸುವ ಜೊತೆಗೆ, ಚುನಾಯಿಸಬೇಕಾದ ಒಟ್ಟು ಸದಸ್ಯರ ಸಂಖ್ಯೆಯನ್ನು ನಿಗದಿಪಡಿಸಲು ಸರ್ಕಾರಕ್ಕೆ ಶಿಫಾರಸು ಮಾಡಬೇಕು.

ಪಿಎಸ್‌ಐ ನೇಮಕಾತಿಯಲ್ಲಿ ಅಕ್ರಮ

## 3 ದಿನಗಳಲ್ಲಿ ಭಾರಿ ಭಾನಗಡಿ...!

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಹಗರಣದ 35ನೇ ಆರೋಪಿಯಾದ ಐಪಿಎಸ್ ಅಧಿಕಾರಿ ಅಮ್ರಿತ್ ಪೌಲ್ ತಮ್ಮ ವಶದಲ್ಲಿದ್ದ ಉತ್ತರ ಪತ್ರಿಕೆಗಳನ್ನು ತಿದ್ದಲು ಹೇಗೆ ಕಾರಣವಾಗಿದ್ದಾರೆ ಎಂಬುದರ ಸಂಕ್ಷಿಪ್ತ ಚಿತ್ರಣವನ್ನು ಪ್ರಾಸಿಕ್ಯೂಷನ್ ಹೈಕೋರ್ಟ್‌ಗೆ ಕ್ಲುಪ್ತ ಪ್ರಾತ್ಯಕ್ಷಿಕೆ ಮೂಲಕ ವಿವರಿಸಿತು.

ಸದ್ಯ ನ್ಯಾಯಾಂಗ ಬಂಧನದಲ್ಲಿರುವ ಅಮೃತ್ ಪೌಲ್ ಜಾಮೀನು ಕೋರಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಪಿ.ಎಂ.ನವಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರಾಸಿಕ್ಯೂಷನ್ ಪರ ವಕೀಲ ಪಿ.ಪ್ರಸನ್ನ ಕುಮಾರ್, ಹಗರಣದ ನಡೆದ ವೇಳೆ ಅಮ್ರಿತ್ ಪೌಲ್ ನೇಮಕಾತಿ ವಿಭಾಗದ ಎಡಿಜಿಪಿ ಆಗಿದ್ದರು ಮತ್ತು ಆ ಸಮಯದಲ್ಲಿ ಅವರು ಸುಳ್ಳು ದಾಖಲೆಗಳ ಮೂಲಕ ಕಚೇರಿಗೆ ವೈದ್ಯಕೀಯ ರಜೆ ಹಾಕಿ ಸಂಚು ಸಾಕಾರಗೊಳ್ಳಲು ಕಾರಣವಾಗಿದ್ದು, ಯಾರಿಂದ ಹೇಗೆ ಹಣ ಪಡೆದು ಅಭ್ಯರ್ಥಿಗಳಿಗೆ ಸಹಾಯ ಮಾಡಿದರು ಎಂಬುದನ್ನು ಸವಿವರವಾಗಿ ಬಿಡಿಸಿಟ್ಟರು.

‘ಉತ್ತರ ಪತ್ರಿಕೆಗಳನ್ನು ತಿದ್ದಿದ 2021ರ ಅಕ್ಟೋಬರ್ 7, 8 ಮತ್ತು 16ರಂದು ಆರೋಪಿಯು ವೈದ್ಯಕೀಯ ರಜೆಯಲ್ಲಿ ಇದ್ದುದಾಗಿ ಹೇಳಿ ಪ್ರಮಾಣ ಪತ್ರ ನೀಡಿದ್ದಾರೆ. ಆದರೆ, ಅವರು ಆ ದಿನಗಳಂದು ತಮ್ಮ ಪ್ರಮಾಣ ಪತ್ರದಲ್ಲಿ ಹೇಳಿರುವ ಯಲಹಂಕ ನ್ಯೂ ಟೌನ್‌ನಲ್ಲಿರುವ ನವಚೇತನ ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆ ಪಡೆದಿಲ್ಲ. ಆಸ್ಪತ್ರೆಯ ದಾಖಲೆಗಳನ್ನು ಪರಿಶೀಲನೆ ಮಾಡಿದಾಗ ಇದು ತಿಳಿದು ಬಂದಿದೆ. ಅಂತೆಯೇ, ಆ ದಿನಗಳಲ್ಲಿ ಸ್ಟ್ರಾಂಗ್ ರೂಮಿನ ಚಾವಿಗಳನ್ನು ತಮ್ಮ ವೈಯಕ್ತಿಕ ಛೇಂಬರ್‌ನಲ್ಲಿರುವ ಅಲ್ಮೇರಾದಲ್ಲಿ ಇರಿಸಿಕೊಂಡಿದ್ದು ಅವುಗಳನ್ನು ಬೇರೆಯವರಿಗೆ ಹಸ್ತಾಂತರ ಮಾಡಿದ್ದಾರೆ’ ಎಂದು ವಿವರಿಸಿದರು.

‘ಸ್ಟ್ರಾಂಗ್ ರೂಮಿನ ನಿಗಾಕ್ಕೆ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿತ್ತು ಮತ್ತು ಬೆರಳಚ್ಚು ಮೂಲಕವಷ್ಟೇ ಅಲ್ಲಿಗೆ ಪ್ರವೇಶ ಸಾಧ್ಯವಿತ್ತು. ಆದರೆ, ಈ ಕಟ್ಟಳೆಗಳನ್ನು ದಾಟಿ ಭಾನಗಡಿ ನಡೆಸಲಾಗಿದೆ. ಅಂತೆಯೇ, ಇವರಿಂದ ಶಂಭುಲಿಂಗಯ್ಯ ಎಂಬ ಖಾಸಗಿ ವ್ಯಕ್ತಿ ₹ 1.99 ಕೋಟಿ ಸಂಗ್ರಹಿಸಿ ಇರಿಸಿಕೊಂಡಿದ್ದಾರೆ. ಇವರು ಕೊಡುತ್ತಿದ್ದ ಲಕ್ಷಗಳ ಮೊತ್ತವನ್ನು ಶಂಭುಲಿಂಗಯ್ಯ ಎರಡು ಸೊನ್ನೆಗಳನ್ನು ಕಡಿಮೆ ಮಾಡಿ ಸಾವಿರದ ಲೆಕ್ಕದಲ್ಲಿ ಆ ಹಣವನ್ನು ನಮೂದು ಮಾಡಿ ಇರಿಸಿಕೊಂಡಿದ್ದಾರೆ’ ಎಂದು ವಿವರಿಸಿದರು.

ಕೋರ್ಟ್ ಕಲಾಪದ ಅವಧಿ ಮೀರಿದ ಕಾರಣ ನ್ಯಾಯಪೀಠವು ವಿಚಾರಣೆಯನ್ನು ಇದೇ 19ಕ್ಕೆ ಮುಂದೂಡಿತು. ಅಮ್ರಿತ್ ಪೌಲ್ 2022ರ ಜುಲೈ 4ರಿಂದ ನ್ಯಾಯಾಂಗ ಬಂಧನದಲ್ಲಿದ್ದಾರೆ.

### ಪಿಎಸ್‌ಐ ಹಗರಣ: ವಿವರ ಸಲ್ಲಿಕೆ

**ಬೆಂಗಳೂರು:** ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳ (ಪಿಎಸ್‌ಐ) ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಆರೋಪಿಗಳ ವಿರುದ್ಧ ಯಾವ್ಯಾವ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ ಮತ್ತು ಅವುಗಳ ಸ್ಥಿತಿಗತಿ ಏನಿದೆ ಎಂಬುದರ ಕುರಿತಂತೆ ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದೆ.

‘ಕಳಂಕಿತ ಮತ್ತು ಕಳಂಕರಹಿತ ಅಭ್ಯರ್ಥಿಗಳನ್ನು ಪ್ರತ್ಯೇಕಿಸಿ, ನೇಮಕಾತಿ ಆದೇಶ ನೀಡಲು ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿ ಆಯ್ಕೆಯಾದ ನೂರಕ್ಕೂ ಹೆಚ್ಚು ಅಭ್ಯರ್ಥಿಗಳು ಸಲ್ಲಿಸಿರುವ ಅರ್ಜಿಗಳನ್ನು, ನ್ಯಾಯಮೂರ್ತಿ ಜಿ.ನರೇಂದರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಹೆಚ್ಚುವರಿ ಅಡ್ವೊಕೇಟ್ ಜನರಲ್ ರೂಬೆನ್ ಜಾಕಬ್, ಪರೀಕ್ಷೆಯಲ್ಲಿ ಆಯ್ಕೆಯಾಗಿರುವ ಮತ್ತು ಯಾವುದೇ ಆರೋಪಕ್ಕೆ ಗುರಿಯಾಗದೇ ಇರುವ ಅಭ್ಯರ್ಥಿಗಳಿಗೆ ಮತ್ತೊಂದು ಪರೀಕ್ಷೆ ನಡೆಸದಿರಲು ಸರ್ಕಾರ ಕೈಗೊಂಡಿರುವ ನಿರ್ಧಾರಕ್ಕೆ ಸಂಬಂಧಿಸಿದ ಮಾಹಿತಿಯನ್ನು ನ್ಯಾಯಪೀಠಕ್ಕೆ ಒದಗಿಸಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, ‘ಉಭಯ ಪಕ್ಷಕಾರರರು ಸಲ್ಲಿಸಿರುವ ದಾಖಲೆಗಳನ್ನು ಪರಸ್ಪರ ಹಂಚಿಕೊಳ್ಳಬೇಕು’ ಎಂದು ನಿರ್ದೇಶಿಸಿ ವಿಚಾರಣೆಯನ್ನು ಇದೇ 12ಕ್ಕೆ ಮುಂದೂಡಿತು.

ಪಕ್ಷದ ಹೆಸರು ಬದಲಾವಣೆ ಅಧಿಕಾರ ಚುನಾವಣಾ ಆಯೋಗಕ್ಕೆ ಇಲ್ಲ: ಉದ್ಧವ್ ಠಾಕ್ರೆ

## ಶಿವಸೇನಾ ನನ್ನಜ್ಜನ ಸ್ವತ್ತು: ಉದ್ಧವ್

**ಮುಂಬೈ (ಪಿಟಿಐ):** ‘ಶಿವಸೇನಾ ನನ್ನಜ್ಜನ ಸ್ವತ್ತು. ಅದನ್ನು ಕದಿಯಲು ಯಾರೊಬ್ಬರಿಗೂ ನಾನು ಅವಕಾಶ ನೀಡುವುದಿಲ್ಲ. ರಾಜಕೀಯ ಪಕ್ಷಗಳಿಗೆ ಚಿಹ್ನೆ ಹಂಚಿಕೆಯ ಅಧಿಕಾರವಷ್ಟೇ ಚುನಾವಣಾ ಆಯೋಗಕ್ಕಿದೆ. ಪಕ್ಷದ ಹೆಸರು ಬದಲಾಯಿಸುವ ಹಕ್ಕು ಅದಕ್ಕಿಲ್ಲ’

–ಹೀಗೆಂದು ಶಿವಸೇನಾ ಪಕ್ಷದ ಹೆಸರು ಮತ್ತು ಮೂಲ ಚಿಹ್ನೆಯಾದ ‘ಬಿಲ್ಲು ಮತ್ತು ಬಾಣ’ದ ಗುರುತನ್ನು ದಕ್ಕಿಸಿಕೊಳ್ಳಲು ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರಿರುವ ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಗುಡುಗಿದ್ದಾರೆ.

ವಿದರ್ಭ ಪ್ರವಾಸದ ಎರಡನೇ ದಿನವಾದ ಸೋಮವಾರ ಅಮರಾವತಿ ಜಿಲ್ಲೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಪಕ್ಷಕ್ಕೆ ಶಿವಸೇನಾ ಎಂದು ಹೆಸರಿಟ್ಟಿದ್ದು, ನನ್ನ ತಾತ ಕೇಶವ್ ಠಾಕ್ರೆ. ಅದರ ಕಳ್ಳತನಕ್ಕೆ ನಾನು ಬಿಡುವುದಿಲ್ಲ’ ಎಂದು ಮುಖ್ಯಮಂತ್ರಿ ಏಕನಾಥ ಶಿಂದೆ ಅವರ ಹೆಸರು ಪ್ರಸ್ತಾಪಿಸದೆ ವಾಗ್ದಾಳಿ ನಡೆಸಿದರು.

ಉದ್ಧವ್ ಅವರು ಮಹಾರಾಷ್ಟ್ರದಲ್ಲಿ ಎನ್‌ಸಿಪಿ, ಕಾಂಗ್ರೆಸ್ ಸಹಕಾರದಡಿ ಸರ್ಕಾರ ರಚಿಸಿದ್ದರು. ಬಳಿಕ ಬಂಡಾಯ ಬಾವುಟ ಹಾರಿಸಿದ್ದ ಶಿಂದೆ, ಬಿಜೆಪಿ ಜೊತೆಗೆ ಮೈತ್ರಿ ಸಾಧಿಸಿ ಸರ್ಕಾರ ರಚಿಸಿದ್ದಾರೆ. ಶಾಸಕರ ಪೈಕಿ ಹೆಚ್ಚಿನವರು ಶಿಂದೆಯನ್ನು ಬೆಂಬಲಿಸಿದ್ದರು. ಹಾಗಾಗಿ, ಶಿಂದೆ ಬಣವನ್ನೇ ನಿಜವಾದ ಶಿವಸೇನಾ ಎಂದು ಚುನಾವಣಾ ಆಯೋಗ ಘೋಷಿಸಿತ್ತು. ಜೊತೆಗೆ, ಪಕ್ಷದ ಮೂಲ ಚಿಹ್ನೆಯನ್ನೂ ನೀಡಿತ್ತು. ಉದ್ಧವ್ ಬಣಕ್ಕೆ ಶಿವಸೇನಾ(ಯುಬಿಟಿ) ಎಂಬ ಹೆಸರು ನೀಡಿ, ‘ಪಂಜು’ (ಉರಿಯುತ್ತಿರುವ ಟಾರ್ಚ್) ಚಿಹ್ನೆ ನೀಡಿತ್ತು.

### ವಿಚಾರಣೆಗೆ ‘ಸುಪ್ರೀಂ’ ಅಸ್ತು

**ನವದೆಹಲಿ (ಪಿಟಿಐ):** ಚುನಾವಣಾ ಆಯೋಗವು ಶಿಂದೆ ಬಣಕ್ಕೆ ಶಿವಸೇನಾ ಪಕ್ಷದ ಹೆಸರು ಮತ್ತು ಮೂಲ ಚಿಹ್ನೆ ನೀಡಿರುವುದಕ್ಕೆ ಆಕ್ಷೇಪಿಸಿ ಉದ್ಧವ್ ಠಾಕ್ರೆ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಸೋಮವಾರ ಒಪ್ಪಿಗೆ ಸೂಚಿಸಿದೆ. ತ್ವರಿತವಾಗಿ ವಿಚಾರಣೆ ಕೈಗೆತ್ತಿಕೊಳ್ಳುವಂತೆ ಅಮಿತ್ ಆನಂದ್ ತಿವಾರಿ ಅವರು, ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರಿದ್ದ ವಿಭಾಗೀಯ ಪೀಠಕ್ಕೆ ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ಪೀಠವು, ‘ಜುಲೈ 31ರಂದು ವಿಚಾರಣೆ ಆರಂಭಿಸಲಾಗುವುದು’ ಎಂದು ಹೇಳಿತು.

**ಉದ್ಧವ್ ವಾದವೇನು?:** ಶಿಂದೆ ಬಣದ ಶಾಸಕರ ಅನರ್ಹತೆ ಅರ್ಜಿ ಕುರಿತಂತೆ ಸ್ಪೀಕರ್ ಅವರೇ ನಿಗದಿತ ಅವಧಿಯೊಳಗೆ ನಿರ್ಧಾರ ಕೈಗೊಳ್ಳಬೇಕು ಎಂದು ಈಗಾಗಲೇ ಸುಪ್ರೀಂ ಕೋರ್ಟ್‌ನ ಸಾಂವಿಧಾನಿಕ ಪೀಠ ಸ್ಪಷ್ಟಪಡಿಸಿದೆ. ಹಾಗಾಗಿ, ತ್ವರಿತವಾಗಿ ವಿಚಾರಣೆ ಪೂರ್ಣಗೊಳಿಸಬೇಕು ಎಂದು ಅರ್ಜಿಯಲ್ಲಿ ಕೋರಿದ್ದಾರೆ.

‘ಅಲ್ಲದೇ, ವಿಧಾನಸಭೆಗೆ ಚುನಾವಣೆ ಸನ್ನಿಹಿತವಾಗಿದೆ. ಹಾಗಾಗಿ, ಶಿಂಧೆ ಅವರು ಪಕ್ಷದ ಹೆಸರು ಮತ್ತು ಚಿಹ್ನೆಯನ್ನು ದುರ್ಬಳಕೆ ಮಾಡಿಕೊಳ್ಳಬಹುದು’ ಎಂದು ಹೇಳಿದ್ದಾರೆ.

ಬ್ಯಾಡ್ಮಿಂಟನ್: ಚೀನಾದ ಫೆಂಗ್ ವಿರುದ್ಧ ಗೆದ್ದ ಭಾರತದ ಯುವತಾರೆ

# ಮರಳಿ ಅರಳಿದ ಲಕ್ಷ್ಯ ಸೇನ್

ಕ್ಯಾಲ್ಗರಿ, ಕೆನಡಾ (ಪಿಟಿಐ):'ಈ ಟೂರ್ನಿಯ ಫೈನಲ್ ಗೆಲುವು ನನ್ನ ಪಾಲಿಗೆ ಅವಿಸ್ಮರಣೀಯ. ಏಕೆಂದರೆ ಇದು ನಾನು ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್‌ನಲ್ಲಿ ಮರಳಿ ಅರಳುವ ಪ್ರಯತ್ನಕ್ಕೆ ಸಿಕ್ಕ ಮೊದಲ ಗೆಲುವು'–

ಭಾನುವಾರ ತಡರಾತ್ರಿ (ಭಾರತೀಯ ಕಾಲಮಾನ) ಕೆನಡಾ ಓಪನ್ ಸೂಪರ್ 500 ಪ್ರಶಸ್ತಿ ಗೆದ್ದುಕೊಂಡ ಭಾರತದ ಲಕ್ಷ್ಯ ಸೇನ್ ಅವರ ಸಂತಸದ ನುಡಿಗಳಿವು.

ಬೆಂಗಳೂರಿನಲ್ಲಿ ತರಬೇತಿ ಪಡೆಯುತ್ತಿರುವ ಲಕ್ಷ್ಯ ನಡೆದ ರೋಚಕ ಫೈನಲ್ ಪಂದ್ಯದಲ್ಲಿ 21–18, 22–20ರಿಂದ ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್, ಚೀನಾದ ಲೀ ಶೀ ಫೆಂಗ್ ವಿರುದ್ಧ ಗೆದ್ದರು.

ಹೋದ ವರ್ಷ ಅವರು ಮೂಗಿನ ಶಸ್ತ್ರಚಿಕಿತ್ಸೆಗೊಳಗಾಗಿದ್ದರು. ಸಂಪೂರ್ಣವಾಗಿ ಚೇತರಿಸಿಕೊಳ್ಳಲು ಅವರಿಗೆ ಎಂಟು ತಿಂಗಳುಗಳು ಬೇಕಾದವು. ಇದು ಅವರ ಸಾಮರ್ಥ್ಯದ ಮೇಲೆ ಕೆಟ್ಟ ಪರಿಣಾಮ ಬೀರಿತ್ತು. ನಾಲ್ಕು ಟೂರ್ನಿಗಳಲ್ಲಿ ಅವರು ನಿರಾಶೆ ಅನುಭವಿಸಿದರು. ಪ್ರಸಕ್ತ ಋತುವಿನಲ್ಲಿಯೂ ಅವರಿಗೆ ಗೆಲುವು ಒಲಿದಿರಲಿಲ್ಲ. ಅವರ ವಿಶ್ವ ರ‍್ಯಾಂಕಿಂಗ್ ಕೂಡ ಆರರಿಂದ 25ಕ್ಕೆ ಕುಸಿದಿತ್ತು.

'ಶಸ್ತ್ರಚಿಕಿತ್ಸೆಯ ನಂತರವೂ ನನ್ನ ತರಬೇತಿ ಚೆನ್ನಾಗಿ ನಡೆದಿತ್ತು. ಆದರೆ ರೋಗ ಪ್ರತಿರೋಧಕ ಶಕ್ತಿ ಕಡಿಮೆಯಾಗಿದ್ದ ಕಾರಣ ಆಗಾಗ ಅನಾರೋಗ್ಯಕ್ಕೆ ತುತ್ತಾಗಿದ್ದೆ. ಆದ್ದರಿಂದಾಗಿ ಶೇ 100ರಷ್ಟು ಸಾಮರ್ಥ್ಯ ವಿನಿಯೋಗ ಮಾಡಲು ಸಾಧ್ಯವಾಗಲಿರಲಿಲ್ಲ' ಎಂದು ಸೇನ್ ಹೇಳಿದ್ದಾರೆ.

ಸೇನ್ ಅವರ ಕೋಚ್ ಆಗಿದ್ದ, ಕೊರಿಯಾದ ಯಾಂಗ್ ಸಂಗ್ ಯೂ ಹೋದ ವರ್ಷದ ಅಂತ್ಯದಲ್ಲಿ ಕೂಡ ತಮ್ಮ ದೇಶಕ್ಕೆ ಮರಳಿದ್ದರು. ಅವರ ನಂತರ ಬೆಂಗಳೂರಿನ ಅನೂಪ್ ಶ್ರೀಧರ್ ಮತ್ತು ಕ್ರೀಡೆ ಮತ್ತು ವ್ಯಾಯಾಮ ವಿಜ್ಞಾನ ಪರಿಣತ ಡೆಕ್ಲೈನ್ ಲೀಟಾವೊ ಅವರ ಮಾರ್ಗದರ್ಶನ ನೀಡುತ್ತಿದ್ದಾರೆ.

ಈ ಎಲ್ಲ ಸವಾಲುಗಳನ್ನೂ ಮೀರಿರುವ ಲಕ್ಷ್ಯ ಈಗ ಜಯದ ಹಾದಿಗೆ ಮರಳಿದ್ದಾರೆ. ಈ ವರ್ಷ ಸಿಂಗಲ್ಸ್ ಪ್ರಶಸ್ತಿ ಜಯಿಸಿದ ಭಾರತದ ಎರಡನೇ ಆಟಗಾರನಾಗಿದ್ದಾರೆ. ಕಳೆದ ಮೇ ತಿಂಗಳಿನಲ್ಲಿ ಎಚ್.ಎಸ್. ಪ್ರಣಯ್ ಅವರು ಮಲೇಷ್ಯಾ ಮಾಸ್ಟರ್ಸ್ ಪ್ರಶಸ್ತಿ ಗೆದ್ದಿದ್ದರು.

ಫೈನಲ್ ಪಂದ್ಯದ ಎರಡನೇ ಗೇಮ್‌ನಲ್ಲಿ ಅವರು ನಾಲ್ಕು ಪಾಯಿಂಟ್‌ಗಳನ್ನು ಉಳಿಸಿಕೊಳ್ಳುವುದರ ಮೂಲಕ ಜಯಸಾಧಿಸಿದರು. ಸ್ಮ್ಯಾಷ್ ಮೂಲಕ ವಿಜಯದ ಪಾಯಿಂಟ್ ಗಳಿಸಿದರು.

ಈ ಪಂದ್ಯದಲ್ಲಿ ಸೇನ್ ತಮ್ಮ ತಾಳ್ಮೆಯನ್ನು ಕಳೆದುಕೊಳ್ಳದೇ ಆಡಿದರು. ವೇಗದ ಮತ್ತು ನಿಖರವಾದ ರ‍್ಯಾಲಿಗಳನ್ನು ಆಡಿದರು. ನೆಟ್ ಸಮೀಪದ ಆಟದಲ್ಲಿ ಉತ್ತಮ ಪದಚಲನೆ ಮತ್ತು ಚುರುಕಾದ ಆಟ ಪ್ರದರ್ಶಿಸಿದರು.

ಚೀನಾದ ಫೆಂಗ್ ವಿರುದ್ಧ ಲಕ್ಷ್ಯ ಆಡಿದ ಏಳನೇ ಪಂದ್ಯ ಇದಾಗಿದ್ದು, ಐದನೇ ಜಯ ಸಾಧಿಸಿದರು.

ಎರಡೂ ಗೇಮ್‌ಗಳಲ್ಲಿ ಬಹುತೇಕ ಅವಧಿಯು ಇಬ್ಬರ ನಡುವೆ ಸಮಬಲದ ಪೈಪೋಟಿ ಕಂಡುಬಂದಿತು. ಚೀನಾದ ಅನುಭವಿ ಆಟಗಾರನ ಚುರುಕು ಹೊಡೆತಗಳಿಗೆ ತಕ್ಕ ಉತ್ತರ ಕೊಡುವಲ್ಲಿ ಲಕ್ಷ್ಯ ಯಶಸ್ವಿಯಾದರು. ಅವರ ದೈಹಿಕ ಕ್ಷಮತೆ ಕೂಡ ಸುಧಾರಣೆಯಾಗಿರುವುದು ಇಲ್ಲಿ ನಿಚ್ಚಳವಾಯಿತು.

ಲಕ್ಷ್ಯ ಅವರು 2021ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಜಯಿಸಿದ್ದರು.

ಕೆನಡಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಚಾಂಪಿಯನ್ ಆದ ಲಕ್ಷ್ಯ ಸೇನ್

## ಅಮೆರಿಕ ಓಪನ್ ಇಂದಿನಿಂದ

ಕೌನ್ಸಿಲ್ ಬ್ಲಫ್ಸ್, ಅಮೆರಿಕ (ಪಿಟಿಐ): ಕೆನಡಾ ಓಪನ್ ಪ್ರಶಸ್ತಿ ವಿಜೇತ ಲಕ್ಷ್ಯ ಸೇನ್ ಮತ್ತು ಒಲಿಂಪಿಯನ್ ಪಿ.ವಿ. ಸಿಂಧು ಅವರು ಮಂಗಳವಾರ ಆರಂಭವಾಗಲಿರುವ ಅಮೆರಿಕ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿಯುವರು.

ಸೇನ್ ಅವರು ಪುರುಷರ ಸಿಂಗಲ್ಸ್‌ನಲ್ಲಿ ಫಿನ್ಲೆಂಡ್‌ನ ಕೆಲಿ ಕಾಲ್ಜೊನೆನ್ ಅವರನ್ನು ಎದುರಿಸಲಿದ್ದಾರೆ.

ಒಲಿಂಪಿಯನ್ ಆಟಗಾರ ಬಿ. ಸಾಯಿಪ್ರಣೀತ್ ಅವರು ಕೂಡ ಇಲ್ಲಿ ಕಣಕ್ಕಿಳಿಯುವರು. ಕಳೆದ ಕೆಲವು ಟೂರ್ನಿಗಳಲ್ಲಿ ಅಪಾರ ನಿರಾಸೆ ಅನುಭವಿಸಿರುವ ಅವರಿಗೆ ಇಲ್ಲಿ ಮೊದಲ ಸುತ್ತಿನಲ್ಲಿಯೇ ಕಠಿಣ ಪೈಪೋಟಿ ಎದುರಾಗಲಿದೆ.

ಚೀನಾದ ಫೆಂಗ್ ಅವರನ್ನು ಸಾಯಿಪ್ರಣೀತ್ ಎದುರಿಸಲಿದ್ದಾರೆ.

ಮಹಿಳೆಯರ ಸಿಂಗಲ್ಸ್‌ನಲ್ಲಿ ಮೂರನೇ ಶ್ರೇಯಾಂಕದ ಆಟಗಾರ್ತಿ ಪಿ.ವಿ. ಸಿಂಧು ತಮ್ಮ ಅಭಿಯಾನ ಆರಂಭಿಸುವರು. ಪ್ರಸಕ್ತ ಋತುವಿನಲ್ಲಿ ಅವರು ಇನ್ನೂ ಒಂದು ಪ್ರಶಸ್ತಿ ಗೆದ್ದಿಲ್ಲ.

## ಐಸಿಸಿ: ಉಸ್ಮಾನಿ, ಬಜ್ವಾ ಪುನರಾಯ್ಕೆ

ಡರ್ಬನ್ (ಪಿಟಿಐ): ಕ್ರಿಕೆಟ್ ಕೆನಡಾದ ರಶ್‌ಪಾಲ್ ಬಜ್ವಾ ಮತ್ತು ಎಮಿರೇಟ್ಸ್ ಕ್ರಿಕೆಟ್ ಮಂಡಳಿಯ ಮುಬಾಶಿರ್ ಉಸ್ಮಾನಿ ಅವರನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಸಹಸದಸ್ಯ ಪ್ರತಿನಿಧಿಗಳನ್ನಾಗಿ ಮರು ಆಯ್ಕೆ ಮಾಡಲಾಗಿದೆ

ಸೋಮವಾರ ನಡೆದ ಐಸಿಸಿ ವಾರ್ಷಿಕ ಸಮ್ಮೇಳನದಲ್ಲಿ ಆಯೋಜಿಸಲಾಗಿದ್ದ ಮುಖ್ಯ ಕಾರ್ಯನಿರ್ವಾಹಕರ ಸಮಿತಿ (ಸಿಇಸಿ) ಸಭೆಯಲ್ಲಿ ಇಬ್ಬರ ಪುನರಾಯ್ಕೆಗೆ ಮತದಾನ ನಡೆಯಿತು.

ಬಜ್ವಾ ಮತ್ತು ಉಸ್ಮಾನಿ ಅವರು ಮುಂದಿನ ಎರಡು ವರ್ಷ ಕಾರ್ಯನಿರ್ವಹಿಸುವರು. ಡ್ಯಾನಿಷ್ ಕ್ರಿಕೆಟ್ ಸಂಸ್ಥೆಯ ಉಮೇರ್ ಭಟ್ ಅವರು ಮೊದಲ ಬಾರಿಗೆ ಆಯ್ಕೆಯಾದರು.

ಈ ಮೂವರು ಅಭ್ಯರ್ಥಿಗಳೂ ಅತಿ ಹೆಚ್ಚು ಮತಗಳನ್ನು ಗಳಿಸಿದರು.

## ಕಳಂಕಿತ ಕ್ರೀಡಾವೈದ್ಯ ಲ್ಯಾರಿಗೆ ಇರಿತ

ವಾಷಿಂಗ್ಟನ್ (ಎಪಿ): ಒಲಿಂಪಿಕ್ ಪದಕವಿಜೇತ ಮಹಿಳಾ ಜಿಮ್ನಾಸ್ಟ್‌ಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ ಜೈಲು ಸೇರಿರುವ ಕ್ರೀಡಾ ವೈದ್ಯ ಲ್ಯಾರಿ ನಾಸರ್ ಅವರನ್ನು ಸಹಕೈದಿಯೊಬ್ಬ ಚೂರಿಯಿಂದ ಇರಿದ್ದಾನೆ.

ಫ್ಲಾರಿಡಾದ ಫೆಡರಲ್ ಜೈಲಿನಲ್ಲಿ ಭಾನುವಾರ ಈ ಘಟನೆ ನಡೆದಿದೆ. ಲ್ಯಾರಿ ಮತ್ತು ಸಹಕೈದಿಯೊಬ್ಬನ ನಡುವೆ ಜಟಾಪಟಿ ನಡೆಯಿತು. ಅದರ ನಂತರ ಸಹಕೈದಿಯು ಲ್ಯಾರಿಯನ್ನು ಹಲವು ಬಾರಿ ಇರಿದನೆಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಲ್ಯಾರಿಯ ಬೆನ್ನು ಮತ್ತು ಎದೆಗೆ ಇರಿದಿದ್ದರಿಂದ ಗಾಯಗಳಾಗಿವೆ. ಲ್ಯಾರಿ ಆರೋಗ್ಯ ಸ್ಥಿರವಾಗಿದೆ ಎಂದೂ ಹೇಳಾಗುತ್ತಿದೆ.

ದಶಕದ ಹಿಂದೆ ಮಿಚಿಗನ್ ಸ್ಟೇಟ್ ವಿಶ್ವವಿದ್ಯಾಲಯದಲ್ಲಿ, ಲ್ಯಾರಿ ರಾಷ್ಟ್ರೀಯ ಮಹಿಳಾ ಜಿಮ್ನಾಸ್ಟಿಕ್ಸ್ ತಂಡದ 100ಕ್ಕೂ ಹೆಚ್ಚು ಹುಡುಗಿಯರಿಗೆ ಲೈಂಗಿಕ ಕಿರುಕುಳ ನೀಡಿದ್ದನ್ನು ಕೋರ್ಟ್‌ನಲ್ಲಿ ಒಪ್ಪಿಕೊಂಡಿದ್ದ. ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಜಿಮ್ನಾಸ್ಟ್ ಸಿಮೊನ್ ಬೈಲ್ಸ್ ಸೇರಿದಂತೆ ಹಲವು ಜಿಮ್ನಾಸ್ಟ್‌ಗಳು ಲ್ಯಾರಿ ವಿರುದ್ಧ ದೂರು ನೀಡಿದ್ದರು.

# ಕ್ವಾರ್ಟರ್‌ಗೆ ಜೊಕೊವಿಚ್

ವಿಂಬಲ್ಡನ್: ಸಿಟ್ಸಿಪಾಸ್‌ಗೆ ಆಘಾತ ನೀಡಿದ ಯೂಬ್ಯಾಂಕ್ಸ್

ಲಂಡನ್ (ರಾಯಿಟರ್ಸ್/ ಎಎಫ್‌ಪಿ): ಹ್ಯೂಬರ್ಟ್ ಹರ್ಕೆಝ್ ಅವರ ವೇಗದ ಸರ್ವ್‌ಗಳು ಒಡ್ಡಿದ ಸವಾಲನ್ನು ಬದಿಗೊತ್ತಿದ ಹಾಲಿ ಚಾಂಪಿಯನ್ ನೊವಾಕ್ ಜೊಕೊವಿಚ್, ವಿಂಬಲ್ಡನ್ ಟೆನಿಸ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಆಲ್ ಇಂಗ್ಲೆಂಡ್‌ನ ಕ್ಲಬ್‌ನಲ್ಲಿ ನಡೆದ ಪಂದ್ಯವನ್ನು ಜೊಕೊವಿಚ್ 7–6, 7–6, 5–7, 6–4 ರಿಂದ ಗೆದ್ದರು. ಭಾನುವಾರ ಅರ್ಧಕ್ಕೆ ನಿಂತಿದ್ದ ಈ ಪಂದ್ಯ ಸೋಮವಾರ ಪೂರ್ಣಗೊಂಡಿತು.

36 ವರ್ಷದ ಜೊಕೊವಿಚ್ ಬುಧವಾರ ನಡೆಯಲಿರುವ ಎಂಟರಘಟ್ಟದ ಪಂದ್ಯದಲ್ಲಿ ಏಳನೇ ಶ್ರೇಯಾಂಕದ ಆಟಗಾರ ರಷ್ಯಾದ ಆ್ಯಂಡ್ರೆ ರುಬ್ಲೆವ್ ವಿರುದ್ಧ ಹಣಾಹಣಿ ನಡೆಸುವರು.

ಸರ್ಬಿಯದ ಆಟಗಾರ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ 56ನೇ ಬಾರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ ಸಾಧನೆ ಮಾಡಿದರು. ಅತಿಹೆಚ್ಚು ಬಾರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ ದಾಖಲೆ ರೋಜರ್ ಫೆಡರರ್ (58 ಬಾರಿ) ಹೆಸರಿನಲ್ಲಿದೆ.

ವಿಂಬಲ್ಡನ್‌ನಲ್ಲಿ ಅವರಿಗೆ ಇದು 14ನೇ ಕ್ವಾರ್ಟರ್ ಫೈನಲ್ ಆಗಿದೆ. ಸರ್ಬಿಯದ ಆಟಗಾರನಿಗೆ ಇಲ್ಲಿ ಇದು 100ನೇ ಪಂದ್ಯ ಆಗಿತ್ತು. 100 ರಲ್ಲಿ ಅವರು 90 ಪಂದ್ಯಗಳನ್ನು ಗೆದ್ದಿದ್ದಾರೆ.

ಮೂರನೇ ಶ್ರೇಯಾಂಕದ ಆಟಗಾರ ರಷ್ಯಾದ ಡೇನಿಯಲ್ ಮೆಡ್ವೆಡೇವ್ ಅವರೂ ಎಂಟರಘಟ್ಟ ಪ್ರವೇಶಿಸಿದರು. ನಾಲ್ಕನೇ ಸುತ್ತಿನ ಪಂದ್ಯದಲ್ಲಿ ಮೆಡ್ವೆಡೆವ್ 6–4, 6–2 ರಲ್ಲಿ ಮುನ್ನಡೆ ಸಾಧಿಸಿದ್ದಾಗ ಎದುರಾಳಿ, ಜೆಕ್ ರಿಪಬ್ಲಿಕ್‌ನ ಜಿರಿ ಲೆಹೆಕಾ ಅವರು ಹಿಂದೆ ಸರಿದರು.

**ಸಿಟ್ಸಿಪಾಸ್‌ಗೆ ಆಘಾತ:** ಐದನೇ ಶ್ರೇಯಾಂಕದ ಆಟಗಾರ ಗ್ರೀಸ್‌ನ ಸ್ಟೆಫಾನೊಸ್ ಸಿಟ್ಸಿಪಾಸ್ ಅವರು ನಾಲ್ಕನೇ ಸುತ್ತಿನಲ್ಲಿ ಆಘಾತ ಅನುಭವಿಸಿದರು. ಶ್ರೇಯಾಂಕರಹಿತ ಆಟಗಾರ ಅಮೆರಿಕದ ಕ್ರಿಸ್ಟೋಫರ್ ಯೂಬ್ಯಾಂಕ್ಸ್ 3-6, 7-6, 3-6, 6-4, 6-4 ರಿಂದ ಸಿಟ್ಸಿಪಾಸ್ ವಿರುದ್ಧ ಗೆದ್ದು ಅಚ್ಚರಿ ಮೂಡಿಸಿದರು.

**ಎಂಟರಘಟ್ಟಕ್ಕೆ ಶ್ವಾಂಟೆಕ್:** ಮಹಿಳೆಯರ ವಿಭಾಗದಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ್ತಿ ಇಗಾ ಶ್ವಾಂಟೆಕ್ ಭಾನುವಾರ ನಡೆದ ಪಂದ್ಯದಲ್ಲಿ ಮೊದಲ ಸೆಟ್‌ನಲ್ಲಿ ಸೋತರೂ ಪುಟಿದೆದ್ದು ನಿಂತು 6–7, 7–6, 6–3 ರಿಂದ 14ನೇ ಶ್ರೇಯಾಂಕದ ಆಟಗಾರ್ತಿ ಬೆಲಿಂಡ ಬೆನ್ಸಿಚ್ ಅವರನ್ನು ಮಣಿಸಿ ಎಂಟರ ಘಟ್ಟ ಪ್ರವೇಶಿಸಿದರು.

ವಿಶ್ವದ ಎರಡನೇ ರ‍್ಯಾಂಕ್‌ನ ಆಟಗಾರ್ತಿ ಅರಿನಾ ಸಬಲೆಂಕಾ 6-4, 6-0 ರಿಂದ ರಷ್ಯಾದ ಎಕ್ತರಿನಾ ಅಲೆಕ್ಸಾಂಡ್ರೊವಾ ವಿರುದ್ಧ ಗೆದ್ದರು. ಅವರ ಕ್ವಾರ್ಟರ್ ಫೈನಲ್ ಎದುರಾಳಿ ಅಮೆರಿಕದ ಮ್ಯಾಡಿಸನ್ ಕೀಸ್. ನಾಲ್ಕರಘಟ್ಟದ ಪಂದ್ಯದಲ್ಲಿ ಕೀಸ್ 3-6, 7-6, 6-2 ರಲ್ಲಿ ಮಿರಾ ಆ್ಯಂಡ್ರೀವಾ ಅವರನ್ನು ಮಣಿಸಿದರು.

ನೊವಾಕ್ ಜೊಕೊವಿಚ್ ಗೆಲುವಿನ ಸಂಭ್ರಮ –ಎಎಫ್‌ಪಿ ಚಿತ್ರ

## ಪ್ರಿ ಕ್ವಾರ್ಟರ್‌ಗೆ ಬೋಪಣ್ಣ– ಎಬ್ಡೆನ್

ಭಾರತದ ರೋಹನ್ ಬೋಪಣ್ಣ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಜೋಡಿ 7–5, 6–3 ರಲ್ಲಿ ಯೊಹಾನಸ್ ಮಂಡೇ– ಜೇಕಬ್ ಫರ್ನೆಲಿ ಅವರನ್ನು ಮಣಿಸಿ ಪುರುಷರ ಡಬಲ್ಸ್ ವಿಭಾಗದ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು. ಮಿಶ್ರ ಡಬಲ್ಸ್‌ನಲ್ಲಿ ಬೋಪಣ್ಣ– ಗ್ಯಾಬ್ರಿಯೆಲಾ ದೆಬ್ರೊವ್‌ಸ್ಕಿ ಜೋಡಿ ಮೊದಲ ಸುತ್ತಿನಲ್ಲೇ ನಿರಾಸೆ ಅನುಭವಿಸಿತು.

ಕ್ರಿಕೆಟ್: ಭಾರತ–ಬಾಂಗ್ಲಾದೇಶ ಮಹಿಳಾ ಟಿ20 ಇಂದು

# ಸರಣಿ ಕೈವಶದತ್ತ ಹರ್ಮನ್ ಪಡೆ ಚಿತ್ತ

ಮೀರ್‌ಪುರ (ಪಿಟಿಐ): ಉತ್ತಮ ಲಯದಲ್ಲಿರುವ ಹರ್ಮನ್‌ಪ್ರೀತ್ ಕೌರ್ ಅವರ ನಾಯಕತ್ವದ ಭಾರತ ಮಹಿಳಾ ಕ್ರಿಕೆಟ್ ತಂಡವು ಮಂಗಳವಾರ ಇಲ್ಲಿ ನಡೆಯಲಿರುವ ಬಾಂಗ್ಲಾದೇಶ ಎದುರಿನ ಎರಡನೇ ಟಿ20 ಕ್ರಿಕೆಟ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿರುವ ಭಾರತ ತಂಡವು ಆತ್ಮವಿಶ್ವಾಸದಲ್ಲಿದೆ. ಹರ್ಮನ್‌ಪ್ರೀತ್ ಕೌರ್ ಅವರು 35 ಎಸೆತಗಳಲ್ಲಿ 54 ರನ್ ಗಳಿಸಿದ್ದರು. ಅದರೊಂದಿಗೆ ಭಾರತ ತಂಡಕ್ಕೆ ಸುಲಭ ಜಯದ ಕಾಣಿಕೆ ನೀಡಿದ್ದರು.

ಆರಂಭಿಕ ಬ್ಯಾಟರ್ ಸ್ಮೃತಿ ಮಂದಾನ ಕೂಡ ಉತ್ತಮ ಲಯದಲ್ಲಿದ್ದಾರೆ. ಕಳೆದ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದ ಬೌಲರ್‌ಗಳಾದ ಅನುಷಾ ಬರೆಡಡಿ ಮತ್ತು ಮಿನು ಮಣಿ ಕೂಡ ಭರವಸೆ ಮೂಡಿಸಿದ್ದಾರೆ. ಅನುಭವಿ ಆಫ್‌ಸ್ಪಿನ್ನರ್ ದೀಪ್ತಿ ಶರ್ಮಾ ಎದುರಾಳಿ ಬ್ಯಾಟರ್‌ಗಳಿಗೆ ಸವಾಲೊಡ್ಡುವ ಸಮರ್ಥರು. ಕೈಬೆರಳಿನ ಗಾಯದ ನೋವಿನಲ್ಲಿ ಆಡಿದ್ದ ಆರಂಭಿಕ ಬ್ಯಾಟರ್ ಶಫಾಲಿ ವರ್ಮಾ ಉತ್ತಮ ಲಯದಲ್ಲಿ ಇಲ್ಲ. ಅವರು ಕಳೆದ ಪಂದ್ಯದಲ್ಲಿ ಸೊನ್ನೆ ಸುತ್ತಿದ್ದರು. ಮಧ್ಯಮವೇಗಿಗಳ ಮುಂದೆ ಅವರ ಪಾದಚಲನೆಯೂ ಉತ್ತಮವಾಗಿಲ್ಲ.

57 ಅಂತರರಾಷ್ಟ್ರೀಯ ಟಿ20 ಪಂದ್ಯಗಳನ್ನು ಆಡಿರುವ 20 ವರ್ಷದ ಶಫಾಲಿ ಅವರು ಲಯಕ್ಕೆ ಮರಳುವ ಭರವಸೆ ಇದೆ.

ತಂಡದ ಬೌಲಿಂಗ್ ಮತ್ತು ಬ್ಯಾಟಿಂಗ್ ವಿಭಾಗಗಳಲ್ಲಿರುವ ಲೋಪಗಳನ್ನು ಸರಿಪಡಿಸಲು ಮುಖ್ಯ ಕೋಚ್ ಅಮೋಲ್ ಮುಜುಂದಾರ್ ಮಾಡಿರುವ ಪ್ರಯತ್ನಗಳ ಫಲ ಕಳೆದ ಪಂದ್ಯದಲ್ಲಿ ಕಂಡಿದೆ.

ಆತಿಥೇಯ ಬಾಂಗ್ಲಾದೇಶ ತಂಡಕ್ಕೆ ಸರಣಿ ಜಯದ ಕನಸು ಜೀವಂತವಾಗುಳಿಯಬೇಕಾದರೆ ಈ ಪಂದ್ಯದಲ್ಲಿ ಜಯಿಸಲೇಬೇಕು. ನಾಯಕಿ ನಿಜಾರ್ ಸುಲ್ತಾನಾ, ಶೋಭನಾ ಮೊಸ್ತರಿ, ಸುಲ್ತಾನ ಖಾತೂನ್ ಮತ್ತು ಮರೂಫಾ ಅಕ್ತರ್ ಅವರು ಉತ್ತಮ ಲಯದಲ್ಲಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 1.30

ಸ್ಮೃತಿ ಮಂದಾನ ಮತ್ತು ಹರ್ಮನ್‌ಪ್ರೀತ್ ಕೌರ್–ಪಿಟಿಐ ಚಿತ್ರ

# ಆರ್ಚರಿ: ಪಾರ್ಥ್‌ಗೆ ಚಿನ್ನ

ಲಿಮ್‌ರಿಕ್, ಐರ್ಲೆಂಡ್ (ಪಿಟಿಐ): ಪಾರ್ಥ್ ಸಾಳುಂಕೆ ಅವರು ವಿಶ್ವ ಯೂತ್ ಆರ್ಚರಿ ಚಾಂಪಿಯನ್‌ಷಿಪ್‌ನ ರಿಕರ್ವ್ ವಿಭಾಗದಲ್ಲಿ ಚಿನ್ನ ಗೆದ್ದ ಭಾರತದ ಮೊದಲ ಸ್ಪರ್ಧಿ ಎನಿಸಿಕೊಂಡರು.

ಮಹಾರಾಷ್ಟ್ರದ 19 ವರ್ಷದ ಪಾರ್ಥ್ ಅವರು ಭಾನುವಾರ ನಡೆದ 21 ವರ್ಷದೊಳಗಿನ ಪುರುಷರ ರಿಕರ್ವ್ ವೈಯಕ್ತಿಕ ವಿಭಾಗದ ಫೈನಲ್‌ನಲ್ಲಿ 7-3 ರಿಂದ (26-26, 25-28, 28-26, 29-26, 28-26) ಕೊರಿಯಾದ ಸಾಂಗ್ ಇಂಜುನ್ ಅವರನ್ನು ಮಣಿಸಿದರು. ಪಾರ್ಥ್, ಇದಕ್ಕೂ ಮುನ್ನ ರ‍್ಯಾಂಕಿಂಗ್ ರೌಂಡ್‌ನಲ್ಲಿ ಅಗ್ರಸ್ಥಾನ ಪಡೆದುಕೊಂಡಿದ್ದರು.

21 ವರ್ಷದೊಳಗಿನ ಮಹಿಳೆಯರ ರಿಕರ್ವ್ ವಿಭಾಗದಲ್ಲಿ ಭಾರತದ ಭಾಜಾ ಕೌರ್ ಕಂಚು ಗೆದ್ದರು. ಮೂರನೇ ಸ್ಥಾನಕ್ಕಾಗಿ ಪಡೆದ ಪೈಪೋಟಿಯಲ್ಲಿ ಅವರು 7-1 ರಿಂದ (28-25, 27-27, 29-25, 30-26) ಚೀನಾ ತೈಪೆಯ ಸು ಸಿನ್ ಯು ವಿರುದ್ಧ ಜಯಿಸಿದರು.

ಭಾರತ ತಂಡ ಆರು ಚಿನ್ನ, ಒಂದು ಬೆಳ್ಳಿ ಮತ್ತು ನಾಲ್ಕು ಕಂಚು ಸೇರಿದಂತೆ ಒಟ್ಟು 11 ಪದಕ ಗೆದ್ದುಕೊಂಡಿತು. ಅತಿಹೆಚ್ಚು ಪದಕ ಭಾರತಕ್ಕೆ ಲಭಿಸಿತು. ಆದರೆ ರ‍್ಯಾಂಕಿಂಗ್‌ನಲ್ಲಿ ಭಾರತ ತಂಡ, ಕೊರಿಯಾ ಬಳಿಕ ಎರಡನೇ ಸ್ಥಾನ ಗಳಿಸಿತು. ಕೊರಿಯಾ ತಂಡ ಆರು ಚಿನ್ನ, ನಾಲ್ಕು ಬೆಳ್ಳಿ ಗೆದ್ದುಕೊಂಡಿತು.

ಪಾರ್ಥ್ ಸಾಳುಂಕೆ

## 'ರಾಯಚೂರು ವಲಯಕ್ಕೆ ಪ್ರತ್ಯೇಕ ರಣಜಿ ತಂಡ ರಚಿಸಿ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು(ಕೆಎಸ್‌ಸಿಎ) ಆಟಗಾರರ ನೇಮಕ, ಅಂಪೈರ್‌ಗಳ ನಿಯೋಜನೆ, ಸದಸ್ಯತ್ವ ನೀಡಿಕೆಯಲ್ಲಿ ರಾಯಚೂರ ವಲಯವನ್ನು ಕಡೆಗಣಿಸುತ್ತಿದ್ದು, ರಾಯಚೂರು ವಲಯಕ್ಕೆ ಪ್ರತ್ಯೇಕ ರಣಜಿ ತಂಡದ ಮಾನ್ಯತೆ ಕೊಡಬೇಕು' ಎಂದು ಕಾಸ್ಮೊಸ್ ಕ್ರಿಕೆಟ್ ಕ್ಲಬ್ ಅಧ್ಯಕ್ಷ ರಾಜಶೇಖರ ಪಾಟೀಲ ಕೋರಿದರು.

'ರಾಯಚೂರು, ಬೀದರ್, ಕಲಬುರಗಿ, ಕೊಪ್ಪಳ, ಯಾದಗಿರಿ, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳು ಒಳಗೊಂಡ ರಾಯಚೂರು ವಲಯದಿಂದ ಕೆಎಸ್‌ಸಿಎ ಕೇವಲ 21 ಸದಸ್ಯರನ್ನು ನೇಮಿಸಿದೆ. ಬೆಂಗಳೂರು ವಲಯದಲ್ಲಿ 1,680 ಸದಸ್ಯರಿದ್ದು, ಕ್ರಿಕೆಟ್‌ನ ಪ್ರತಿ ವಿಷಯದಲ್ಲಿ ರಾಯಚೂರು ವಲಯವನ್ನು ಕಡೆಗಣಿಸುತ್ತಿದ್ದಾರೆ' ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ದೂರಿದರು.

# ಉದ್ದೀಪನ ಮದ್ದು: ಸಿಕ್ಕಿಬಿದ್ದ ಇನ್ನಿಬ್ಬರು ಅಥ್ಲೀಟ್‌ಗಳು

ನವದೆಹಲಿ (ಪಿಟಿಐ): ಬ್ಯಾಂಕಾಕ್‌ನಲ್ಲಿ ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಆರಂಭವಾಗಲು ಇನ್ನೆರಡು ದಿನಗಳು ಬಾಕಿ ಇವೆ. ಈ ಕೂಟದಲ್ಲಿ ಸ್ಪರ್ಧಿಸಲಿರುವ ಭಾರತ ತಂಡದ ಇಬ್ಬರು ಪ್ರಮುಖ ಅಥ್ಲೀಟ್‌ಗಳು ಉದ್ದೀಪನ ಮದ್ದು ಸೇವನೆ ಮಾಡಿರುವುದು ದೃಢಪಟ್ಟಿದೆ ಎನ್ನಲಾಗಿದೆ.

ಇದರಿಂದಾಗಿ ಅವರಿಬ್ಬರನ್ನೂ ತಂಡದಿಂದ ಹೊರಹಾಕಲಾಗಿದೆ ಎಂದು ತಿಳಿದುಬಂದಿದೆ. ಈ ಕುರಿತು ಅಧಿಕೃತ ಮಾಹಿತಿ ಲಭಿಸಿಲ್ಲ. ಅದರಲ್ಲಿ ಒಬ್ಬರು ಮಹಿಳೆ ಮತ್ತು ಒಬ್ಬ ಪುರುಷ ಅಥ್ಲೀಟ್ ಇದ್ದಾರೆನ್ನಲಾಗಿದೆ.

ಈ ಕುರಿತು ಪ್ರತಿಕ್ರಿಯಿಸಿದ ಭಾರತ ಅಥ್ಲೆಟಿಕ್ ಫೆಡರೇಷನ್ (ಎಎಫ್‌ಐ) ಅಧ್ಯಕ್ಷ ಆದಿಲೆ ಸುಮರಿವಾಲಾ, 'ನಾಡಾದಲ್ಲಿ (ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕ) ಕೇಳಿ' ಎಂದರು.

ಅವರು ಸದ್ಯ ಬ್ಯಾಂಕಾಕ್‌ನಲ್ಲಿ ನಡೆಯಲಿರುವ ಫೆಡರೇಷನ್ ಚುನಾವಣೆ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಳ್ಳಲು ತೆರಳಿದ್ದಾರೆ.

ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಲು ಭಾರತದ 54 ಅಥ್ಲೀಟ್‌ಗಳ ತಂಡವನ್ನು ಆಯ್ಕೆ ಮಾಡಲಾಗಿತ್ತು. ಹೋದ ಶನಿವಾರ ಶಾಟ್‌ಪಟ್ ಅಥ್ಲೀಟ್ ಕರಣವೀರ್ ಸಿಂಗ್ ಅವರು ಉದ್ದೀಪನ ಮದ್ದು ಸೇವನೆ ಮಾಡಿದ್ದು ಖಚಿತವಾಗಿತ್ತು. ಆದ್ದರಿಂದ ಅವರು ತಂಡದಿಂದ ಹೊರಬಿದ್ದಿದ್ದರು. ಇದೀಗ ಇನ್ನಿಬ್ಬರು ಪ್ರಮುಖ ಅಥ್ಲೀಟ್‌ಗಳು ಹೊರಬೀಳಲಿದ್ದಾರೆಂದು ಅಧಿಕಾರಿಯೊಬ್ಬರು ಹೇಳಿದ್ದಾರೆ. ಅವರ ಹೆಸರುಗಳನ್ನು ಬಹಿರಂಗಪಡಿಸಿಲ್ಲ.

ಲಾಂಗ್ ಜಂಪ್ ಅಥ್ಲೀಟ್ ಜೆಸ್ವಿನ್ ಆಲ್ಡ್ರಿನ್, ಟ್ರಿಪಲ್ ಜಂಪ್ ಅಥ್ಲೀಟ್ ಪ್ರವೀಣ ಚಿತ್ರವೇಲ್ ಮತ್ತು ಜಾವೆಲಿನ್ ಥ್ರೋ ಪಟು ರೋಹಿತ್ ಯಾದವ್ ಅವರು ಗಾಯದ ಕಾರಣ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳದಿರಲು ನಿರ್ಧರಿಸಿದ್ದರು.

### ಸಂಕ್ಷಿಪ್ತ ಸುದ್ದಿ

## ಚೆಸ್: ಗುಕೇಶ್‌ಗೆ 5ನೇ ಸ್ಥಾನ

ಗುಕೇಶ್

ಜಗ್ರೆಬ್, ಕ್ರೊವೇಷ್ಯ (ಪಿಟಿಐ): ಭಾರತದ ಯುವ ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್ ಅವರು ಸೂಪರ್ ಯುನೈಟೆಡ್ ರ‍್ಯಾಪಿಡ್ ಮತ್ತು ಬ್ಲಿಟ್ಜ್ ಚೆಸ್ ಟೂರ್ನಿಯಲ್ಲಿ 5ನೇ ಸ್ಥಾನ ಪಡೆದರು. ವಿಶ್ವನಾಥನ್ ಆನಂದ್ ಜಂಟಿ 7ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡರು.

ಬ್ಲಿಟ್ಜ್ ಸ್ಪರ್ಧೆಯ ಮೊದಲ ದಿನ ಸಾಧಾರಣ ಪ್ರದರ್ಶನ ನೀಡಿದ್ದ ಗುಕೇಶ್, ಎರಡನೇ ದಿನ ಲಯ ಕಂಡುಕೊಂಡರಲ್ಲದೆ 6.5 ಪಾಯಿಂಟ್ಸ್ ಸಂಗ್ರಹಿಸಿದರು. ಆನಂದ್, ಫ್ಯಾಬಿಯಾನೊ ಕರುವಾನ ಮತ್ತು ಯಾನ್ ಕ್ರಿಸ್ಟೋಫ್ ದೂಡಾ ಅವರಂತಹ ಪ್ರಮುಖ ಆಟಗಾರರನ್ನು ಮಣಿಸುವಲ್ಲಿ ಯಶಸ್ವಿಯಾದರು. ಅವರು ಒಟ್ಟು 19.5 ಪಾಯಿಂಟ್ಸ್ (ರ‍್ಯಾಪಿಡ್ + ಬ್ಲಿಟ್ಜ್) ಕಲೆಹಾಕಿದರು.

ಆನಂದ್ ಅವರು ಬ್ಲಿಟ್ಜ್ ಸ್ಪರ್ಧೆಯ ಮೊದಲ ದಿನ 3 ಪಾಯಿಂಟ್ಸ್ ಹಾಗೂ ಎರಡನೇ ದಿನ 3.5 ಪಾಯಿಂಟ್ಸ್ ಕಲೆಹಾಕಿದರು. ರ‍್ಯಾಪಿಡ್ ಮತ್ತು ಬ್ಲಿಟ್ಜ್ ವಿಭಾಗದಲ್ಲಿ ಒಟ್ಟು 16.5 ಪಾಯಿಂಟ್ಸ್ ಗಳಿಸಿದರು.

ವಿಶ್ವದ ಅಗ್ರಮಾನ್ಯ ಆಟಗಾರ ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಅವರು ಸಾಧ್ಯವಿರುವ 36 ಪಾಯಿಂಟ್ಸ್‌ಗಳಲ್ಲಿ 26 ಪಾಯಿಂಟ್ಸ್ ಗಳಿಸಿ ಚಾಂಪಿಯನ್ ಆದರು. ₹ 33 ಲಕ್ಷ ನಗದು ಬಹುಮಾನ ಅವರಿಗೆ ಲಭಿಸಿತು.

ನೆಪೊಮ್‌ನಿಷಿ (22.5 ಪಾಯಿಂಟ್ಸ್), ಕರುವಾನ (21.5) ಮತ್ತು ಅಲಿರೆಜಾ ಫಿರೋಜಾ (21) ಅವರು ಕ್ರಮವಾಗಿ ಎರಡು, ಮೂರು ಹಾಗೂ ನಾಲ್ಕನೇ ಸ್ಥಾನ ಪಡೆದುಕೊಂಡರು.

## ಪ್ಯಾರಾ ಶೂಟಿಂಗ್: ರುದ್ರಾಂಶ್ ದಾಖಲೆ

ಒಸೈಜೆಕ್, ಕ್ರೊವೇಷ್ಯಾ (ಪಿಟಿಐ): ಭಾರತದ ಪ್ಯಾರಾ ಶೂಟರ್‌ಗಳಾದ ರುದ್ರಾಂಶ್ ಖಂಡೇಲ್‌ವಾಲ್ ಮತ್ತು ನಿಹಾಲ್ ಸಿಂಗ್ ಅವರು ಇಲ್ಲಿ ನಡೆಯುತ್ತಿರುವ ವಿಶ್ವಕಪ್ ಪ್ಯಾರಾ ಶೂಟಿಂಗ್‌ನಲ್ಲಿ ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಜಯಿಸಿದರು.

ಸೋಮವಾರ ನಡೆದ ಸ್ಪರ್ಧೆಯಲ್ಲಿ 16 ವರ್ಷದ ರುದ್ರಾಂಶ್ ಅವರು ಪಿ4 50 ಮೀ. ಪಿಸ್ತೂಲ್ ಫೈನಲ್‌ನಲ್ಲಿ 231.1 ಪಾಯಿಂಟ್ಸ್ ಗಳಿಸಿ ವಿಶ್ವದಾಖಲೆಯನ್ನೂ ಸ್ಥಾಪಿಸಿದರು. ನಿಹಾಲ್ 222.2 ಪಾಯಿಂಟ್ಸ್‌ಗಳೊಂದಿಗೆ ಎರಡನೇ ಸ್ಥಾನ ಪಡೆದರು.

## ಕುಸ್ತಿ ಟ್ರಯಲ್ಸ್: ಇನ್ನೂ ನಿಗದಿಯಾಗದ ದಿನಾಂಕ

ನವದೆಹಲಿ (ಪಿಟಿಐ): ಏಷ್ಯನ್ ಗೇಮ್ಸ್‌ಗೆ ಭಾರತ ಕುಸ್ತಿ ತಂಡದ ಆಯ್ಕೆಗೆ ನಿಗದಿಪಡಿಸಿರುವ ಗಡುವು ಕೊನೆಗೊಳ್ಳಲು ಇನ್ನು 10 ದಿನಗಳು ಮಾತ್ರ ಉಳಿದುಕೊಂಡಿವೆ. ಆದರೂ ಐಒಎ ಅಡ್‌ಹಾಕ್ ಸಮಿತಿಯು ಆಯ್ಕೆ ಟ್ರಯಲ್ಸ್‌ಗೆ ಇನ್ನೂ ದಿನ ನಿಗದಿಪಡಿಸಿಲ್ಲ.

ಏಷ್ಯನ್ ಗೇಮ್ಸ್‌ಗೆ ಇತರ ಎಲ್ಲ ಫೆಡರೇಷನ್‌ಗಳು ಜುಲೈ 15ರ ಒಳಗಾಗಿ ತಂಡವನ್ನು ಪ್ರಕಟಿಸಬೇಕು. ಕುಸ್ತಿ ತಂಡದ ಆಯ್ಕೆಗೆ ಜುಲೈ 22ರ ಗಡುವು ನೀಡಲಾಗಿದೆ.

ಅಡ್‌ಹಾಕ್ ಸಮಿತಿ ಸದಸ್ಯರು ಸೋಮವಾರ ಸುದೀರ್ಘ ಸಭೆ ನಡೆಸಿದರೂ, ಟ್ರಯಲ್ಸ್‌ಗೆ ದಿನಾಂಕ ನಿಗದಿಪಡಿಸಲು ಸಾಧ್ಯವಾಗಿಲ್ಲ. ಅದರ ಬದಲು, ಗಡುವನ್ನು ಇನ್ನಷ್ಟು ವಿಸ್ತರಿಸುವ ಪ್ರಯತ್ನಕ್ಕೆ ಮುಂದಾಗಲು ನಿರ್ಧರಿಸಿದೆ.

'ಜುಲೈ 22ರ ಗಡುವನ್ನು ಇನ್ನಷ್ಟು ವಿಸ್ತರಿಸುವಂತೆ ಏಷ್ಯಾ ಒಲಿಂಪಿಕ್ ಕೌನ್ಸಿಲ್‌ಗೆ (ಒಸಿಎ) ಮನವಿ ಮಾಡುವಂತೆ ಐಒಎ ಅಧ್ಯಕ್ಷರಾದ ಪಿ.ಟಿ.ಉಷಾ ಅವರನ್ನು ಕೋರಲಾಗಿದೆ' ಎಂದು ಅಡ್‌ಹಾಕ್ ಸಮಿತಿ ಸದಸ್ಯ ಅಶೋಕ್ ಗಾರ್ಗ್ ಸಭೆಯ ಬಳಿಕ ತಿಳಿಸಿದರು.

'ಸಭೆಯಲ್ಲಿ ಬೇರೆ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ' ಎಂದು ಅವರು ಹೇಳಿದರು.

# ಕಿಲಿಮಂಜಾರೊ ಏರಿದ 8ರ ಬಾಲಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಂಟು ವರ್ಷದ ಬಾಲಕಿ ಆದ್ಯ ಬೆಣ್ಣೂರ್ ಅವರು ಆಫ್ರಿಕಾದ ಅತ್ಯಂತ ಎತ್ತರದ ಶಿಖರ ಕಿಲಿಮಂಜಾರೊ ಏರುವ ಮೂಲಕ, ದಾಖಲೆ ಮಾಡಿದ್ದಾರೆ.

ಜಕ್ಕೂರಿನ ಗ್ರೀನ್‌ಫೀಲ್ಡ್ ಪಬ್ಲಿಕ್ ಶಾಲೆಯಲ್ಲಿ 4ನೇ ತರಗತಿಯಲ್ಲಿ ಕಲಿಯುತ್ತಿರುವ ಆದ್ಯ, ಈ ಸಾಧನೆ ಮಾಡಿದ ದೇಶದ ಅತಿ ಕಿರಿಯ ಬಾಲಕಿ ಎಂಬ ಗೌರವಕ್ಕೂ ಪಾತ್ರರಾಗಿದ್ದಾರೆ.

ತಮ್ಮ ತಂದೆ ಹರ್ಷ ಬೆಣ್ಣೂರ್ ಅವರೊಂದಿಗೆ ಈ ಸಾಹಸಯಾತ್ರೆ ಕೈಗೊಂಡ ಆದ್ಯ, ಜೂನ್ 20 ರಂದು ಶಿಖರದ ತುದಿ ತಲುಪಿದ್ದಾರೆ. 19,340 ಅಡಿ ಎತ್ತರದ ಈ ಪರ್ವತ ತಾಂಜಾನಿಯಾ ದೇಶದಲ್ಲಿದೆ. ಪರ್ವತವನ್ನು ಹತ್ತಿ ಇಳಿಯಲು ಏಳೂವರೆ ದಿನ ತೆಗೆದುಕೊಂಡಿದ್ದಾರೆ. ಪ್ರತಿದಿನ ಸರಾಸರಿ 12 ಗಂಟೆ ಚಾರಣ ಮಾಡಿದ್ದಾರೆ.

'ನನ್ನ ತಂದೆ ಈ ಹಿಂದೆಯೇ ಕಿಲಿಮಂಜಾರೊ ಪರ್ವತವನ್ನೇರಿದ್ದು, ನನಗೂ ಅದೇ ಸಾಹಸ ಮಾಡಬೇಕೆಂದು ಅನಿಸಿತು. ಸೈಕ್ಲಿಂಗ್, ಈಜು, ಓಟ ಸೇರಿದಂತೆ ವಿವಿಧ ರೀತಿಯ ದೈಹಿಕ ಚಟುವಟಿಕೆಗಳಲ್ಲಿ ತೊಡಗಿಸಿ, ತಂದೆಯವರು ನನ್ನನ್ನು ಪರ್ವತಾರೋಹಣಕ್ಕೆ ಸಜ್ಜುಗೊಳಿಸಿದ್ದರು. ತಾಯಿ ಮಂಗಳಾ ಅವರು ಪ್ರೇರಕ ಶಕ್ತಿಯಾದರು' ಎಂದು ಆದ್ಯ ಹೇಳಿದರು.

'ಈ ಹಿಂದೆ ಎವರೆಸ್ಟ್ ಬೇಸ್‌ಕ್ಯಾಂಪ್‌ಗೆ ಹೋಗಿದ್ದೆ. ಆಗ ದೊರೆತಿದ್ದ ಅನುಭವ ಈ ಚಾರಣದ ವೇಳೆ ನೆರವು ನೀಡಿತು. ಕಠಿಣ ಪರಿಸ್ಥಿತಿಯಲ್ಲೂ ಮಾನಸಿಕವಾಗಿ ಸದೃಢವಾಗಿರಲು ಸಾಧ್ಯವಾಯಿತು' ಎಂದು ಅನುಭವ ಹಂಚಿಕೊಂಡರು.

'ನಾನು 2018 ರಲ್ಲಿ ಮೊದಲ ಬಾರಿ ಕಿಲಿಮಂಜಾರೊ ಹತ್ತಿದ್ದೆ. ಅದು ಮಗಳಿಗೆ ಪ್ರೇರಣೆ ನೀಡಿತು. ಪರ್ವತಾರೋಹಣದ ವೇಳೆ ಎದುರಾಗುವ ಸವಾಲುಗಳನ್ನು ನಿಭಾಯಿಸಲು ಮಗಳನ್ನು ಸಜ್ಜುಗೊಳಿಸಿದ್ದೆ. ಪರ್ವತದ ಮೇಲಕ್ಕೇರಿದಂತೆ ಆಮ್ಲಜನಕದ ಪ್ರಮಾಣ ಕಡಿಮೆಯಾಗಿ, ಉಸಿರಾಟ ಕಷ್ಟವಾಗುತ್ತಿತ್ತು. ನಾವು ತುತ್ತತುದಿ ತಲುಪಿದ ದಿನ ತಾಪಮಾನ ಮೈನಸ್ 20 ಡಿಗ್ರಿ ಸೆಲ್ಸಿಯಸ್‌ನಷ್ಟಿತ್ತು' ಎಂದು ನಗರದಲ್ಲಿ ಐಟಿ ಕಂಪನಿಯೊಂದರಲ್ಲಿ ಉದ್ಯೋಗಿಯಾಗಿರುವ ಹರ್ಷ ಬೆಣ್ಣೂರ್ 'ಪ್ರಜಾವಾಣಿ'ಗೆ ತಿಳಿಸಿದರು.

ಕಿಲಿಮಂಜಾರೊ ಪರ್ವತವೇರಿದ ಆದ್ಯ